ಬುಧವಾರ, ಮಾರ್ಚ್ 11, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಜೀವನಯಾನ
ಛತ್ತೀಸಗಢದ ಬಸ್ತಾರ್‌ನಲ್ಲಿ ಮಹಿಳೆಯೊಬ್ಬರು ಮಗುವನ್ನು ಎತ್ತಿಕೊಂಡು ಮನೆಗೆ ನೀರು ಕೊಂಡೊಯ್ಯುತ್ತಿದ್ದ ದೃಶ್ಯ



ಜೊಕೊವಿಚ್ ಮುನ್ನಡೆ
ಐದು ಬಾರಿಯ ಚಾಂಪಿಯನ್, ಸರ್ಬಿಯಾದ ಆಟಗಾರ ನೊವಾಕ್ ಜೊಕೊವಿಚ್ ಅವರು ಮಂಗಳವಾರ ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಸುತ್ತು ತಲುಪಿದರು

ರಾಜ್ಯಕ್ಕೆ ₹2.88 ಲಕ್ಷ ಕೋಟಿ ನಷ್ಟ

ತೆರಿಗೆ ವರಮಾನದ ಪಾಲು, ಅನುದಾನದಲ್ಲಿ ಕಡಿತ ಮಾಡಿದ ಕೇಂದ್ರ: ಹಣಕಾಸು ಆಯೋಗದ ವರದಿ

• ಜಯಸಿಂಹ ಆರ್.

ಬೆಂಗಳೂರು: ಕೇಂದ್ರ ಸರ್ಕಾರವು ತೆರಿಗೆ ವರಮಾನವನ್ನು ಸರಿಯಾಗಿ ಹಂಚಿಕೆ ಮಾಡದೇ ಇರುವುದು ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಹಣ ಬಿಡುಗಡೆ ಮಾಡದೇ ಇರುವುದರಿಂದ 2017–18ರಿಂದ ಈವರೆಗೆ ರಾಜ್ಯಕ್ಕೆ ₹2.88 ಲಕ್ಷ ಕೋಟಿ ನಷ್ಟವಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಿಗೆ ಕೇಂದ್ರ ಸರ್ಕಾರವು ಅನುದಾನ ಬಿಡುಗಡೆ ಮಾಡದೇ ಇರುವುದು ಮತ್ತು ಯೋಜನೆಗಳನ್ನು ಪರಿಷ್ಕರಿಸದೇ ಇರುವುದರಿಂದ ರಾಜ್ಯ ಸರ್ಕಾರದ ಮೇಲೆ ವಿಪರೀತ ಹೊರೆ ಬೀಳುತ್ತಿದೆ ಎಂಬ ವಿವರ 2026–2030ರ ಮಧ್ಯಮಾವಧಿ ವಿತ್ತೀಯ ಮುನ್ನಂದಾಜು, 2025–26ನೇ ಸಾಲಿನ ಆರ್ಥಿಕ ಸಮೀಕ್ಷೆ ಮತ್ತು 5ನೇ ರಾಜ್ಯ ಹಣಕಾಸು ಆಯೋಗದ ವರದಿಗಳಲ್ಲಿದೆ.

ಕೇಂದ್ರ ಪುರಸ್ಕೃತ ಯೋಜನೆಗಳ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರ ಗೌರವ ಧನದಂತಹ ಏಕಾಂಶ ವೆಚ್ಚವನ್ನು ಕೇಂದ್ರ ಸರ್ಕಾರವು ಹಲವು ವರ್ಷಗಳಿಂದ ಪರಿಷ್ಕರಿಸಿಯೇ ಇಲ್ಲ. ಈ ಯೋಜನೆಗಳನ್ನು ಮುಂದುವರೆಸುವ ಸಲುವಾಗಿ ರಾಜ್ಯ ಸರ್ಕಾರವೇ ಹೆಚ್ಚುವರಿ ಅನುದಾನವನ್ನು ಮೀಸಲಿಡುತ್ತಾ ಬಂದಿದೆ. ಇದೂ ಸಹ ರಾಜ್ಯ ಸರ್ಕಾರದ ಹೊರೆಯನ್ನು ಹೆಚ್ಚಿಸಿದೆ.

ಜಲ ಜೀವನ ಮಿಷನ್ ಅಡಿ ಕೇಂದ್ರವು ಅನುದಾನ ನೀಡದೇ ಇರುವುದರಿಂದ ರಾಜ್ಯಕ್ಕೆ ₹13,000 ಕೋಟಿಯಷ್ಟು ಹೆಚ್ಚುವರಿ ಹೊರೆ ಬಿದ್ದಿದೆ. ರಾಷ್ಟ್ರೀಯ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆ ಅಡಿ ಕೇಂದ್ರವು ರಾಜ್ಯದ 14 ಲಕ್ಷ ಜನರಿಗಷ್ಟೇ ಅನುದಾನ ಒದಗಿಸುತ್ತಿದೆ. ರಾಜ್ಯವು ಹೆಚ್ಚುವರಿಯಾಗಿ 85 ಲಕ್ಷ ಮಂದಿಗೆ ಪಿಂಚಣಿ ನೀಡುತ್ತಿದೆ. ಇದರಿಂದ ರಾಜ್ಯಕ್ಕೆ ವಾರ್ಷಿಕ ₹10,000 ಕೋಟಿಯಷ್ಟು ಹೊರೆಯಾಗುತ್ತಿದೆ ಎಂಬ ಹಲವು ಯೋಜನೆಗಳನ್ನು ಈ ವರದಿಗಳಲ್ಲಿ ಉದಾಹರಿಸಲಾಗಿದೆ.

ಕೇಂದ್ರ ಸರ್ಕಾರವು ಇಂತಹ ಯೋಜನೆಗಳನ್ನು ಏಕಪಕ್ಷೀಯವಾಗಿ ರಾಜ್ಯಗಳ ಮೇಲೆ ಹೇರುತ್ತಿದೆ. ಇದರಿಂದ ರಾಜ್ಯದ ಮೇಲೆ ಹೆಚ್ಚುವರಿ ಆರ್ಥಿಕ ಸಂಕಷ್ಟ ಉಂಟಾಗಿದ್ದು, ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಹಂಚಿಕೆ ಕಷ್ಟವಾಗಿದೆ ಎನ್ನುತ್ತದೆ ವಿತ್ತೀಯ ಮುನ್ನಂದಾಜು.


₹2.53 ಲಕ್ಷ ಕೋಟಿ
ಜಿಎಸ್‌ಟಿ ಜಾರಿಯಿಂದ ಉಂಟಾದ ನಷ್ಟ ಮತ್ತು 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಅನುದಾನ ನೀಡದ್ದರಿಂದ ರಾಜ್ಯಕ್ಕಾದ ನಷ್ಟ

₹12,000 ಕೋಟಿ
15ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯದ ಪಾಲನ್ನು ಶೇ 3.64ಕ್ಕೆ ಇಳಿಸಿದ ಕಾರಣದಿಂದ ರಾಜ್ಯಕ್ಕಾದ ನಷ್ಟ

₹23,402 ಕೋಟಿ
ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರವು ಹಣ ಬಿಡುಗಡೆ ಮಾಡದೇ ಇರುವುದರಿಂದ ರಾಜ್ಯಕ್ಕಾದ ಹೆಚ್ಚುವರಿ ಹೊರೆ

ಕುಸಿತದ ಹಾದಿಯಲ್ಲಿ ಕೇಂದ್ರದ ವರ್ಗಾವಣೆ

ಕೇಂದ್ರ ಸರ್ಕಾರದ ತೆರಿಗೆ ಆದಾಯದಲ್ಲಿ ರಾಜ್ಯದ ಪಾಲು ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನವನ್ನು ಆರ್ಥಿಕ ವ್ಯವಸ್ಥೆಯ ಪರಿಭಾಷೆಯಲ್ಲಿ 'ಕೇಂದ್ರದ ವರ್ಗಾವಣೆ' ಎನ್ನಲಾಗುತ್ತದೆ. ಜಿಎಸ್‌ಟಿ ಜಾರಿಯಾದ ವರ್ಷದಿಂದಲೂ ರಾಜ್ಯಕ್ಕೆ ಕೇಂದ್ರದ ವರ್ಗಾವಣೆ ಕುಸಿತವಾಗಿದೆ



ಕೇಂದ್ರದ ತೆರಿಗೆ ಪಾಲು ಕುಸಿದಿರುವುದು ಒಂದು ಪ್ರಮುಖ ಮತ್ತು ಗಂಭೀರ ಸವಾಲು. ಇದರಿಂದ ರಾಜ್ಯವು ಮುಂಬರುವ ವರ್ಷಗಳಲ್ಲಿ ತೀವ್ರ ಸವಾಲನ್ನು ಎದುರಿಸಬೇಕಾಗಿದೆ
ಕರ್ನಾಟಕ ಆರ್ಥಿಕ ಸಮೀಕ್ಷೆ: 2025–26

ತೆರಿಗೆ ಪಾಲಿನಲ್ಲಿನ ನಷ್ಟ ಮತ್ತು ಅನುದಾನ ಕಡಿತದ ಮಧ್ಯೆಯೇ ರಾಜ್ಯ ಸರ್ಕಾರವು ಆರ್ಥಿಕ ಶಿಸ್ತನ್ನು ಕಾಯ್ದುಕೊಂಡಿದೆ. ಆದರೆ ಮುಂದಿನ ವರ್ಷಗಳಲ್ಲಿ ಆರ್ಥಿಕ ಶಿಸ್ತು ನಿರ್ವಹಣೆ ಸವಾಲಾಗಲಿದೆ
ಮಧ್ಯಮಾವಧಿ ವಿತ್ತೀಯ ಮುನ್ನಂದಾಜು: 2026–30

ಕೇಂದ್ರದ ತೆರಿಗೆ ಪಾಲು ಮತ್ತು ಯೋಜನಾ ಅನುದಾನಗಳ ಕಡಿತವು, ರಾಜ್ಯದ ವಿತ್ತೀಯ ಕೊರತೆಯ ಪ್ರಮುಖ ಕಾರಣಗಳಲ್ಲಿ ಒಂದು. ಇದು ರಾಜ್ಯದ ಹಣಕಾಸು ಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಿದೆ
5ನೇ ರಾಜ್ಯ ಹಣಕಾಸು ಆಯೋಗ

ಸುದ್ದಿ 2 ನಿಮಿಷ


ಆದಾಯ ಕುಸಿತ–ಸಾಲದ ಸುಳಿಗೆ ಸಿಲುಕಿದ ಸರ್ಕಾರ: ಆರೋಪ

ಬೆಂಗಳೂರು: ಆದಾಯ ಸಂಗ್ರಹದಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರ ಸಾಲದ ಎತ್ತುವಳಿಗೆ ಇಳಿದಿದೆ. ಆ ಮೂಲಕ ಜನರನ್ನೂ ಸಾಲದ ಸುಳಿಗೆ ಸಿಲುಕಿಸುತ್ತಿದೆ ಎಂದು ಬಿಜೆಪಿಯ ಕೆ.ಎಸ್.ನವೀನ್ ದೂರಿದರು.

ವಿಧಾನಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, 'ಕಳೆದ ಸಾಲಿನಲ್ಲಿ ನಿರೀಕ್ಷಿತ ವರಮಾನಕ್ಕಿಂತ ಕಡಿಮೆ ಸಂಗ್ರಹವಾಗಿದೆ. ಇದು 2026–27ನೇ ಸಾಲಿನ ಬಜೆಟ್ ಮೇಲೂ ಪರಿಣಾಮ ಬೀರಿದೆ. ಸಾಲದ ಭಾರ, ಅಸಲು–ಬಡ್ಡಿ ಪಾವತಿ ಅಧಿಕವಾಗಿದೆ. ವಿತ್ತೀಯ ಕೊರತೆ ಹೆಚ್ಚಾಗಿದೆ. ಜನರು ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕರ್ನಾಟಕ ಮತ್ತೊಂದು ಶ್ರೀಲಂಕಾ ಆಗಲಿದೆ ಎಂದರು.

ಒಳಮೀಸಲಾತಿ ಗೊಂದಲದ ಕಾರಣಕ್ಕಾಗಿ ನೇಮಕಾತಿಗಳು ನನೆಗುದಿಗೆ ಬಿದ್ದಿದ್ದವು. ಯುವಕರು ಬೀದಿಗಿಳಿದು ಹೋರಾಟ ಮಾಡುವ ಸ್ಥಿತಿ ಎದುರಾಗಿದೆ. ಧಾರವಾಡದಲ್ಲಿ ನಿರುದ್ಯೋಗಿಗಳು ನಡೆಸಿದ ಹೋರಾಟದ ನಂತರ 56,432 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಾಗಿ ಸರ್ಕಾರ ಹೇಳಿದೆ. ಆದರೆ, ನೇಮಕಾತಿಗೆ ಅಗತ್ಯವಾದ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಟ್ಟಿಲ್ಲ. ಯುವಕರ ಭವಿಷ್ಯದ ಬಗ್ಗೆ ನಿಜವಾದ ಬದ್ಧತೆ ಇಲ್ಲ. ಹಲವು ಇಲಾಖೆಗಳ ಸಿಬ್ಬಂದಿಗೆ ಸರಿಯಾಗಿ ವೇತನವೇ ಸಿಗುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್‌ನ ಐವನ್ ಡಿಸೋಜ ಮಾತನಾಡಿ, ಜನ ಸಾಮಾನ್ಯರಿಗೆ ನೆರವಾಗುವ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಜತೆಗೆ ಹತ್ತುಹಲವು ಅಭಿವೃದ್ಧಿ ಯೋಜನೆಗಳಿಗೂ ಅನುದಾನ ಹಂಚಿಕೆ ಮಾಡಲಾಗಿದೆ. ಶಿಕ್ಷಣ, ಆರೋಗ್ಯ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಅಗತ್ಯ ಅನುದಾನ ಹಂಚಿಕೆ ಮಾಡಲಾಗಿದೆ.



ಮಹಿಳೆಯರು, ಮಕ್ಕಳು, ಕಾರ್ಮಿಕರು, ಪರಿಶಿಷ್ಟರು, ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೂ ಆದ್ಯತೆ ನೀಡಲಾಗಿದೆ ಎಂದು ಶ್ಲಾಘಿಸಿದರು.

ಸಿ.ಎಂ ಆಸನಕ್ಕೆ ಉದಯ್ ಲಗ್ಗೆ !

ಬೆಂಗಳೂರು: ಮುಖ್ಯಮಂತ್ರಿಗೆ ಮೀಸಲಾದ ಆಸನದಲ್ಲಿ ಕುಳಿತುಕೊಳ್ಳಲು ಬಿಜೆಪಿಯ ಉದಯ ಗರುಡಾಚಾರ್ ಮುಂದಾಗುತ್ತಿದ್ದಂತೆ, ಕೈ ಅಡ್ಡ ಇಟ್ಟು ತಡೆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅವರನ್ನು ಪಕ್ಕಕ್ಕೆ ಎಳೆದ ಪ್ರಸಂಗ ವಿಧಾನಸಭೆಯಲ್ಲಿ ಮಂಗಳವಾರ ನಡೆಯಿತು.

ಶಿವಕುಮಾರ್ ಜೊತೆ ಮಾತನಾಡಲು ಆಡಳಿತ ಪಕ್ಷದ ಸಾಲಿಗೆ ತೆರಳಿದ ಉದಯ್ ಗರುಡಾಚಾರ್, ಶಿವಕುಮಾರ್ ಅವರ ಎಡಭಾಗದಲ್ಲಿನ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳಲು ಮುಂದಾದರು. ತಕ್ಷಣ ಎಚ್ಚೆತ್ತ ಶಿವಕುಮಾರ್, ಅವರ ಕೈ ಹಿಡಿದು ತಮ್ಮ ಬಲಭಾಗದಲ್ಲಿದ್ದ ಖಾಲಿ ಆಸನದಲ್ಲಿ ಕುಳಿತುಕೊಳ್ಳುವಂತೆ ಸೂಚಿಸಿದರು.

ತಮ್ಮ ತಪ್ಪು ಅರಿವಿಗೆ ಬರುತ್ತಿದ್ದಂತೆ ತಲೆ ಚಚ್ಚಿಕೊಂಡ ಉದಯ್ ಗರುಡಾಚಾರ್, ವಿರೋಧ ಪಕ್ಷದ ಸದಸ್ಯರ ಕಡೆಗೆ ನೋಡಿ, ಏನೂ ಮಾತನಾಡಬೇಡಿ ಶ್...! ಶ್...! ಎಂದು ಬಾಯಿ ಮೇಲೆ ಬೆರಳಿಟ್ಟುಕೊಂಡು ಸನ್ನೆ ಮಾಡಿದರು.

ಆದರೂ ಬಿಜೆಪಿಯ ಸುನಿಲ್ ಕುಮಾರ್, 'ಯಾರೊ ಕೂರಬೇಕು ಎಂದುಕೊಂಡಿರುವ ಕುರ್ಚಿಯಲ್ಲಿ ಹೋಗಿ ನೀವು ಕೂರುತ್ತಿದ್ದೀರಲ್ಲಾ?' ಎಂದು ಉದಯ್ ಮತ್ತು ಶಿವಕುಮಾರ್ ಇಬ್ಬರನ್ನೂ ಕಿಚಾಯಿಸಿದರು.

ಬಳಿಕ ವಿರೋಧ ಪಕ್ಷದ ಸಾಲಿನತ್ತ ಬಂದ ಉದಯ್ ಗರುಡಾಚಾರ್ ಅವರಿಗೆ ಬುದ್ಧಿವಾದ ಹೇಳಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ನೀವು ಆ ಸಾಲಿಗೆ ಹೋಗಿದ್ದೇ ತಪ್ಪು. ಹೋಗಿ ಆ ರೀತಿ ಮಾಡೋದಾ?' ಎಂದರು.

'ನೂರು ಕುರಿ ಲೆಕ್ಕವಿಡಲು ಬರದವನು ಅರ್ಥ ಸಚಿವನಾದದ್ದು...'

ಬೆಂಗಳೂರು: 'ನೂರು ಕುರಿ ಎಣಿಸಲಾಗದವನು, ಬಜೆಟ್ ಲೆಕ್ಕ ಹಾಕ್ತಾನಾ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಹಿಂದೆ ಕೇಳಿಬಂದಿದ್ದ ಟೀಕೆಯನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಸ್ತಾಪಿಸಿದ್ದು ವಿಧಾನಸಭೆಯಲ್ಲಿ ಸ್ವಾರಸ್ಯಕರ ಚರ್ಚೆಗೆ ಕಾರಣವಾಯಿತು.

ಬಜೆಟ್ ಮೇಲೆ ಮಾತನಾಡಿದ ಅಶೋಕ, 1995-96ನೇ ಸಾಲಿನಲ್ಲಿ ಹಣಕಾಸು ಸಚಿವರಾಗಿದ್ದಾಗ ಸಿದ್ದರಾಮಯ್ಯ ಮಂಡಿಸಿದ್ದ ಬಜೆಟ್ ಪುಸ್ತಕ ಮತ್ತು 2026-27ನೇ ಸಾಲಿನ ಬಜೆಟ್ ಪ್ರತಿ ತೋರಿಸಿ, 'ವರ್ಷಗಳು ಕಳೆದಿರುವುದರಿಂದ ಹಳೆಯ ಬಜೆಟ್ ಪುಸ್ತಕ ಹರಿದುಹೋಗಿದೆ. ಆದರೆ, ಅದನ್ನು ನಾನು 'ಹರಕಲು ಬಜೆಟ್' ಎಂದು ಕರೆಯುವುದಿಲ್ಲ. ಸಿದ್ದರಾಮಯ್ಯ ಪ್ರಸ್ತುತ ಮಂಡಿಸಿದ ಬಜೆಟ್ ಹರಕಲು ಬಜೆಟ್ ಎಂದು ಟೀಕಿಸಿದರು.

ಆಗ ಮಧ್ಯಪ್ರವೇಶಿಸಿದ ಸಿದ್ದರಾಮಯ್ಯ, ತಾವು ಹಣಕಾಸು ಸಚಿವರಾಗಿದ್ದ ಸಂದರ್ಭವನ್ನು ನೆನಪಿಸಿಕೊಂಡರು.

'ದೇವೇಗೌಡರು ಮುಖ್ಯಮಂತ್ರಿ ಆಗಿದ್ದರು. ಸಚಿವ ಸ್ಥಾನಕ್ಕೆ ಆಯ್ಕೆ ನಡೆದಿದ್ದು ಜಾಲಪ್ಪ ಅವರ ಕಚೇರಿಯಲ್ಲಿ. ನಾನು ರೆವಿನ್ಯೂ ಕೇಳಿದೆ. ಜಾಲಪ್ಪ ಅವರೂ ಅದನ್ನೇ ಕೇಳಿದ್ರು. ಕೊನೆಗೆ ಜಾಲಪ್ಪನವರಿಗೇ ರೆವಿನ್ಯೂ ಕೊಟ್ಟರು. ದೇವೇಗೌಡರು ತಮಗೆ ನಂಬಿಕಸ್ಥ ಬೇಕು ಎಂದು ನನಗೆ ಹಣಕಾಸು ಕೊಟ್ಟರು. ನನಗೆ ಎಕಾನಾಮಿಕ್ಸ್ ಗೊತ್ತಿಲ್ಲ ಎಂದರೂ ಬಲವಂತ ಮಾಡಿ ಹಣಕಾಸು ಖಾತೆ ಕೊಟ್ಟರು' ಎಂದು ಸಿದ್ದರಾಮಯ್ಯ ಹೇಳಿದರು. ಆಗ ಅಶೋಕ, 'ಅಂದು ಕೊಟ್ಟಿದ್ದಕ್ಕೆ ಈ ಸ್ಥಾನಕ್ಕೆ ಬಂದಿದ್ದೀರಿ. ಇಷ್ಟು ದಾಖಲೆ ಬಜೆಟ್ ಮಾಡಿದ್ದೀರಿ. ಅಂದು ಆಗದಿದ್ರೆ ಎಂದೂ ಆಗ್ತಿರಲಿಲ್ಲ. ದೇವೇಗೌಡರಿಗೆ ಧನ್ಯವಾದ ಹೇಳಿ, ನನಗೆ ಬೇಡ' ಎಂದು ಕಾಲೆಳೆದರು.

ಕಾರ್ಕಳ ಮಸ್ತಕಾಭಿಷೇಕಕ್ಕೆ ₹77 ಕೋಟಿ

ಬೆಂಗಳೂರು: ಮುಂದಿನ ವರ್ಷದ ಫೆಬ್ರುವರಿಯಲ್ಲಿ ಕಾರ್ಕಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಕಾರ್ಯಕ್ರಮಕ್ಕೆ ₹77 ಕೋಟಿ ಅನುದಾನ ಬೇಕಾಗಬಹುದು. ಈ ಕಾರ್ಯಕ್ರಮದ ಸಂಪೂರ್ಣ ವ್ಯವಸ್ಥೆಗೆ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ವಿ. ಸುನಿಲ್‌ಕುಮಾರ್ ಅವರ ಗಮನ ಸೆಳೆಯುವ ಸೂಚನೆಗೆ ಮುಖ್ಯಮಂತ್ರಿ ಅವರ ಪರವಾಗಿ ಪ್ರಿಯಾಂಕ್ ಮಾಹಿತಿ ನೀಡಿದರು.

'ಈ ಕಾರ್ಯಕ್ರಮಕ್ಕೆ ಈಗಿನಿಂದಲೇ ಸಿದ್ಧತೆ ನಡೆಸಲಾಗುವುದು. ಎಲ್ಲವನ್ನೂ ಅಚ್ಚುಕಟ್ಟಾಗಿ ನಡೆಸಲು ಬೇಕಾಗುವ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳಲಿದೆ' ಎಂದು ಹೇಳಿದರು.

'ಸಿಎಂ ಆರ್ಥಿಕ ಶಿಸ್ತು: ಪುಸ್ತಕದ ಬದನೇಕಾಯಿ'

ಕೆಟ್ಟ ನೀತಿ– ಅವೈಜ್ಞಾನಿಕ ಗ್ಯಾರಂಟಿಯಿಂದ ಆರ್ಥಿಕ ದಿವಾಳಿಯತ್ತ ರಾಜ್ಯ: ಆರ್. ಅಶೋಕ ಟೀಕಾ ಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯ ಅಂಚಿಗೆ ಹೋಗಿದ್ದು, ಮುಖ್ಯಮಂತ್ರಿ ಹೇಳುವ ಆರ್ಥಿಕ ಶಿಸ್ತು ಕೇವಲ ಪುಸಕ್ತದ ಬದನೇಕಾಯಿ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹರಿಹಾಯ್ದರು.

ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯನ್ನು ಆರಂಭಿಸಿದ ಅವರು, 'ಈ ಬಜೆಟ್ ಬಡ ಮತ್ತು ಮಧ್ಯಮ ವರ್ಗದವರಿಗೆ ಅನ್ಯಾಯ ಮಾಡಿದೆ. ವಿತ್ತೀಯ ಕೊರತೆಯ ಜತೆಗೆ ಕೆಟ್ಟ ಆರ್ಥಿಕ ನೀತಿಗಳ ಪರಿಣಾಮ ರಾಜ್ಯದ ಬೆಳವಣಿಗೆ ದರವೂ ಕುಸಿದಿದೆ. ಅವೈಜ್ಞಾನಿಕ ಗ್ಯಾರಂಟಿಗಳಿಂದಾಗಿ ಆರ್ಥಿಕ ವ್ಯವಸ್ಥೆಯೂ ಹಳಿ ತಪ್ಪಿದೆ. ಹೀಗಾಗಿ ಸಾಲದ ಪ್ರಮಾಣ ಹೆಚ್ಚಾಗಿದೆ' ಎಂದರು.

'ಸಿದ್ದರಾಮಯ್ಯ ಆಡಳಿತದಲ್ಲಿ ಸ್ಮಶಾನಗಳಲ್ಲಿ ಗುಂಡಿ ತೋಡುವವರಿಗೆ 8 ತಿಂಗಳಿನಿಂದ ಸಂಬಳ ಸಿಕ್ಕಿಲ್ಲ. ಚಾಮರಾಜನಗರದಲ್ಲಿ ನೀರುಗಂಟಿಗಳಿಗೆ 21 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಇದರ ಪರಿಣಾಮ ನೀರುಗಂಟಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಬೆಂಗಳೂರಿನ ವ್ಯಕ್ತಿಯೊಬ್ಬರು ಮೃತ ಮಗಳ ನೇತ್ರದಾನ ಮಾಡಲು ಆಂಬುಲೆನ್ಸ್‌ಗೆ ₹3,000 ಲಂಚ ನೀಡಬೇಕಾಯಿತು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 130 ಸಿಬ್ಬಂದಿಗೆ ಮೂರು ತಿಂಗಳಿನಿಂದ ಸಂಬಳ ಸಿಕ್ಕಿಲ್ಲ. ಕೋವಿಡ್ ವೇಳೆ ತಂದೆ–ತಾಯಿ ಕಳೆದುಕೊಂಡು ಅನಾಥರಾದ 26 ಸಾವಿರ ಮಕ್ಕಳಿಗೆ ಏಳು ತಿಂಗಳಿನಿಂದ ₹73 ಕೋಟಿ ಹಣ ಪಾವತಿಸಿಲ್ಲ. ಇವರೆಲ್ಲ ಅನ್ನಕ್ಕೆ ಪರದಾಡುವ ಸ್ಥಿತಿ ಇದೆ' ಎಂದು ಹೇಳಿದರು.



ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಆರ್.ಅಶೋಕ, ಉಪನಾಯಕ ಅರವಿಂದ ಬೆಲ್ಲದ ಉಪಸ್ಥಿತರಿದ್ದರು

> ಸಿದ್ದರಾಮಯ್ಯ 'ಸಾಲದ ರಾಮಯ್ಯ' ಆಗಿದ್ದಾರೆ. ಹಿಂದೆ ಮ್ಯಾಜಿಕ್ ಮಾಡುತ್ತಿದ್ದವರು ಈಗ ಬ್ಲ್ಯಾಕ್ ಮ್ಯಾಜಿಕ್ ಮೂಲಕ ಅಂಕಿ ಅಂಶಗಳನ್ನು ತಮ್ಮದೇ ರೀತಿಯಲ್ಲಿ ತೋರಿಸುತ್ತಿದ್ದಾರೆ
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ಸಾಲದ ಸುಳಿಗೆ ರಾಜ್ಯ: ಬಿಜೆಪಿ ಸರ್ಕಾರ ಇದ್ದಾಗ 2019 ರಲ್ಲಿ ₹48,500 ಕೋಟಿ, 2020 ರಲ್ಲಿ ₹69,000 ಕೋಟಿ, 2021 ರಲ್ಲಿ ₹59,000 ಕೋಟಿ ಹಾಗೂ 2022 ರಲ್ಲಿ ₹36,000 ಕೋಟಿ ಸಾಲ ಮಾಡಲಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ 2023 ರಲ್ಲಿ ₹81,000 ಕೋಟಿ, 2024 ರಲ್ಲಿ ₹92,025 ಕೋಟಿ, 2025 ರಲ್ಲಿ ₹1.16 ಲಕ್ಷ ಕೋಟಿ ಸಾಲ ಮಾಡಿದೆ. ಮೂರು ವರ್ಷಗಳಲ್ಲಿ ಸರ್ಕಾರ ₹2,89,025 ಕೋಟಿ ಸಾಲ ಮಾಡಿದೆ ಎಂದು ಅಶೋಕ ಹೇಳಿದರು.

ಕಳೆದ ಮೂರು ವರ್ಷದಲ್ಲಿ ವಿತ್ತೀಯ ಕೊರತೆ ₹54,660 ಕೋಟಿ ಆಗಿದೆ. ಈ ಮೂಲಕ ರಾಜ್ಯದ ಆರ್ಥಿಕ ಹೊಣೆಗಾರಿಕೆ ದಯನೀಯ ಸ್ಥಿತಿಗೆ ಬಂದಿದೆ ಎಂದರು.

ಎಸ್‌ಸಿಎಸ್‌ಪಿ–ಟಿಎಸ್‌ಪಿ: ₹53 ಸಾವಿರ ಕೋಟಿ ವರ್ಗಾವಣೆ

ಎಸ್‌ಸಿಎಸ್‌ಪಿ- ಟಿಎಸ್‌ಪಿ ಹಣದಲ್ಲಿ 2026–27 ನೇ ಸಾಲಿನಲ್ಲಿ ಗೃಹಲಕ್ಷ್ಮಿಗೆ ₹8,296 ಕೋಟಿ, ಶಕ್ತಿಗೆ ₹1,537 ಕೋಟಿ, ಅನ್ನಭಾಗ್ಯಕ್ಕೆ ₹1,612 ಕೋಟಿ, ಗೃಹಜ್ಯೋತಿಗೆ ₹2,591 ಕೋಟಿ, ಯುವನಿಧಿಗೆ ₹1,062 ಕೋಟಿ ಸೇರಿ ಒಟ್ಟು ₹14,198 ಕೋಟಿ ವರ್ಗಾವಣೆ ಮಾಡಲಾಗಿದೆ. ಇದೇ ರೀತಿ 2023ರಲ್ಲಿ ₹11,144 ಕೋಟಿ, 2024 ರಲ್ಲಿ ₹14,282 ಕೋಟಿ, 2025 ರಲ್ಲಿ ₹13,433 ಕೋಟಿ ವರ್ಗಾವಣೆ ಮಾಡಿದ್ದು, ಒಟ್ಟಾರೆ ₹53,059.45 ಕೋಟಿ ಗ್ಯಾರಂಟಿಗೆ ವರ್ಗಾಯಿಸಲಾಗಿದೆ ಎಂದು ಅಶೋಕ ದೂರಿದರು.

ಪ್ರತಿ ಕನ್ನಡಿಗನ ಮೇಲೆ ₹1.12 ಲಕ್ಷ ಸಾಲದ ಹೊರೆ

ರಾಜ್ಯ ಸರ್ಕಾರ ಭಾರಿ ಪ್ರಮಾಣದಲ್ಲಿ ಸಾಲ ಮಾಡಿದ್ದರೂ ನೀರಾವರಿಗೆ ಹೊಸ ಯೋಜನೆ ಸಿಕ್ಕಿಲ್ಲ. ಬ್ರ್ಯಾಂಡ್ ಬೆಂಗಳೂರಿಗೆ ಅನುದಾನ ಸಿಕ್ಕಿಲ್ಲ. ಕಳೆದ ಮೂರು ವರ್ಷಗಳಲ್ಲಿ ₹82,000 ಕೋಟಿ ಸಾಲ ಪಡೆಯಲಾಗಿದೆ. ಪ್ರತಿ ತಿಂಗಳಿಗೆ ₹6,833 ಕೋಟಿ, ದಿನಕ್ಕೆ ₹277 ಕೋಟಿ, ಗಂಟೆಗೆ ₹9.5 ಕೋಟಿ ಸಾಲವಾಗುತ್ತದೆ. ಪ್ರತಿ ದಿನ ₹125 ಕೋಟಿ, ಗಂಟೆಗೆ ₹ 5.2 ಕೋಟಿ ಬಡ್ಡಿ ಪಾವತಿಸಲಾಗುತ್ತಿದೆ. 2013 ರಲ್ಲಿ ಪ್ರತಿ ಕನ್ನಡಿಗನ ಮೇಲೆ ₹19,000 ಸಾಲವಿದ್ದು, 2026 ಮಾರ್ಚ್ ವೇಳೆಗೆ ಆ ಮೊತ್ತ ₹1,12,400 ಕ್ಕೆ ಏರಿದೆ ಎಂದು ಅಶೋಕ ಹೇಳಿದರು.

ಆ್ಯಸಿಡ್ ದಾಳಿ: ಗೃಹ ಸಚಿವ ಜಿ.ಪರಮೇಶ್ವರ ಭರವಸೆ

ಸಂತ್ರಸ್ತೆಯರಿಗೆ ₹ 50 ಸಾವಿರ ಭತ್ಯೆ

ಬೆಂಗಳೂರು: ಆ್ಯಸಿಡ್ ದಾಳಿಗೆ ಒಳಗಾದ ರಾಜ್ಯದಲ್ಲಿನ 169 ಸಂತ್ರಸ್ತೆಯರಿಗೆ ತಿಂಗಳಿಗೆ ₹50 ಸಾವಿರ ಭತ್ಯೆ ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ಕೆ.ಶಿವಕುಮಾರ್ ಅವರ ಗಮನ ಸೆಳೆಯುವ ಸೂಚನೆಗೆ ಪ್ರತಿಕ್ರಿಯಿಸಿದ ಅವರು, ಆ್ಯಸಿಡ್ ದಾಳಿ ಸಂತ್ರಸ್ತರಿಗೆ ನ್ಯಾಯ ಒದಗಿಸಲು, ಅವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡಲು, ಅವರ ಬದುಕನ್ನು ಮತ್ತೆ ಕಟ್ಟಿಕೊಡಲು ಸರ್ಕಾರ ಬದ್ಧವಾಗಿದೆ. ಸುಪ್ರೀಂ ಕೋರ್ಟ್ ಮಾರ್ಗದರ್ಶನದಂತೆ ಆರ್ಥಿಕ ಪರಿಹಾರಗಳನ್ನು ಘೋಷಿಸಲಾಗಿದೆ. ಘಟನೆಯ ತೀವ್ರತೆಯನ್ನು ಆಧರಿಸಿ ತಕ್ಷಣದ ನೆರವು ಮತ್ತು ಮುಂದಿನ ಚಿಕಿತ್ಸೆಗಾಗಿ ಅಗತ್ಯವಿರುವ ಪರಿಹಾರ ಮೊತ್ತವನ್ನು ಸಂತ್ರಸ್ತರ ಕುಟುಂಬಗಳಿಗೆ ನೀಡಲಾಗುತ್ತಿದೆ. ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ಸಂಪೂರ್ಣ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ. ಇದರಲ್ಲಿ ಶಸ್ತ್ರಚಿಕಿತ್ಸೆ, ಔಷಧ ಮತ್ತು ದೀರ್ಘಕಾಲೀನ ಪುನರ್‌ವಸತಿ ವೆಚ್ಚಗಳು ಸೇರಿವೆ ಎಂದರು.

ತ್ವರಿತ ನ್ಯಾಯಾಲಯ: ಡಿಕೆಶಿ ಭರವಸೆ

ಆ್ಯಸಿಡ್ ದಾಳಿ ಪ್ರಕರಣಗಳ ವಿಚಾರಣೆಗೆ ನಿರ್ಭಯ ಕಾನೂನಿನ ಮಾದರಿಯಲ್ಲಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ರಾಜ್ಯದಲ್ಲಿ ನಡೆದ ಆ್ಯಸಿಡ್ ದಾಳಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಕಾನೂನು ಕ್ರಮ ಕೈಗೊಳ್ಳಲಾಗಿದೆ. ಸಂತ್ರಸ್ತರಿಗೆ ತ್ವರಿತ ನ್ಯಾಯ ಒದಗಿಸಲು, ಪ್ರಕರಣಗಳ ವಿಚಾರಣೆಯನ್ನು ತ್ವರಿತಗತಿಯಲ್ಲಿ ನಡೆಸಲು ಅವರಿಗೆ ಉಚಿತ ಕಾನೂನು ನೆರವು ಒದಗಿಸಲಾಗುತ್ತದೆ' ಎಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಕಾರ್ಮಿಕ ಇಲಾಖೆ ಮೂಲಕ ₹2 ಲಕ್ಷ ಪರಿಹಾರ ನೀಡುವ ಭರವಸೆ ನೀಡಿದರು.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸಂತ್ರಸ್ತರಿಗೆ ಸರ್ಕಾರಿ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗ ಒದಗಿಸಲು ನೀತಿ ರೂಪಿಸಲಾಗುತ್ತಿದೆ ಎಂದು ಹೇಳಿದರು.

ಶಿವಕುಮಾರ್ ಮಾತನಾಡಿ, 'ಆ್ಯಸಿಡ್ ದಾಳಿಗೆ ಒಳಗಾದವರಿಗೆ ಬಾಡಿಗೆ ಮನೆಯೂ ಸಿಗುತ್ತಿಲ್ಲ. ಕೊಟ್ಟರೂ ಮನೆ ಬಿಡುವಂತೆ ಪೀಡಿಸಲಾಗುತ್ತಿದೆ. ಹಲವರಿಗೆ ಭತ್ಯೆಯೂ ಸಿಗುತ್ತಿಲ್ಲ, ಈ ಸೌಲಭ್ಯಗಳು ಸಿಗಲು ಯುಡಿಐ ಕಾರ್ಡ್, ಎಫ್‌ಐಆರ್ ಪ್ರತಿ ಮತ್ತಿತರ ದಾಖಲೆಗಳನ್ನು ಒದಗಿಸಲು ಹೇಳಲಾಗುತ್ತಿದೆ. ಅವರ ಜೀವನ ನಿರ್ವಹಣೆಗೆ ಪ್ರಸ್ತುತ ತಿಂಗಳಿಗೆ ₹10 ಸಾವಿರ ಭತ್ಯೆ ನೀಡಲಾಗುತ್ತಿದೆ. ಇದರಿಂದ ಬದುಕು ನಡೆಸುವುದೇ ಅವರಿಗೆ ದುಸ್ತರವಾಗಿದೆ' ಎಂದು ಗಮನ ಸೆಳೆದರು.

ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣ ಸ್ವಾಮಿ, ಬಿಜೆಪಿಯ ಭಾರತಿ ಶೆಟ್ಟಿ, ಹೇಮಲತಾ ನಾಯಕ್, ಕಾಂಗ್ರೆಸ್‌ನ ಉಮಾಶ್ರೀ ಸೇರಿದಂತೆ ಆಡಳಿತ, ವಿರೋಧ ಪಕ್ಷದ ಸದಸ್ಯರು, ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಿ, ನಿವೇಶನ, ಮನೆ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

'ಕೋಳಿ ಸಾಕಣೆ; ದರ ಪರಿಷ್ಕರಣೆಗೆ ಸಮಿತಿ'

ಬೆಂಗಳೂರು: 'ಕೋಳಿ ಸಾಕಣಿಕೆದಾರರಿಂದ ಸಗಟು ಖರೀದಿ ಮಾಡುವ ಕಂಪನಿಗಳು ರೈತರಿಗೆ ನೀಡುತ್ತಿರುವ ದರವನ್ನು ಪ್ರತಿ ಕೆಜಿಗೆ ₹20 ನಿಗದಿ ಮಾಡುವುದೂ ಸೇರಿ ಸಹಾಯಧನವನ್ನು ನೀಡುವ ವಿಚಾರವಾಗಿ ಪರಿಶೀಲನೆ ನಡೆಸಲು ಸಮಿತಿಯನ್ನು ರಚಿಸಲಾಗಿದೆ' ಎಂದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.



ಕೆ.ವೆಂಕಟೇಶ್

ಕಾಂಗ್ರೆಸ್‌ನ ಎಂ.ರೂಪಕಲಾ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, 'ಸರ್ಕಾರ ಯುವ ಜನರು ಮತ್ತು ರೈತರ ಪರವಾಗಿದೆ. ಹೀಗಾಗಿ ಕಂಪನಿಗಳ ಜತೆ ಹಲವು ಬಾರಿ ಸಭೆ ನಡೆಸಲಾಗಿದೆ. ಅದಕ್ಕೆ ಕಂಪನಿಗಳು ಒಪ್ಪಿಕೊಂಡಿಲ್ಲ. ಈ ಕುರಿತು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ವರದಿ ಪಡೆಯಲು ಸಮಿತಿ ರಚಿಸಲಾಗಿದೆ. ವರದಿ ಸಿಕ್ಕಿದ ತಕ್ಷಣ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಪ್ರಶ್ನೆ ಕೇಳಿದವರೇ ಗೈರಾದರೆ ಹೇಗೆ?

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ– ಜಟಾಪಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನೀರಾವರಿ ಇಲಾಖೆ ಸಂಬಂಧಿಸಿ ಪ್ರಶ್ನೆ ಕೇಳಿದ್ದ ಎಚ್.ಡಿ.ರೇವಣ್ಣ
- ಸದನಕ್ಕೆ ಗೈರಾದ ಕುರಿತು ಅಸಮಾಧಾನ

ಬೆಂಗಳೂರು: 'ಪ್ರಶ್ನೆ ಕೇಳಿದ ಸದಸ್ಯರು ನಿರಂತರವಾಗಿ ಮೂರು ಬಾರಿ ಸದನಕ್ಕೆ ಗೈರಾದರೆ, ಅಂತಹ ಸದಸ್ಯರ ಪ್ರಶ್ನೆಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ ಸಲಹೆಯು ವಿಧಾನಸಭೆಯಲ್ಲಿ ಜಟಾಪಟಿಗೆ ಕಾರಣವಾಯಿತು.

ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ ಜೆಡಿಎಸ್‌ನ ಎಚ್.ಡಿ. ರೇವಣ್ಣ ಪ್ರಶ್ನೆಯೊಂದನ್ನು ಕೇಳಿದ್ದರು. ಜಲಸಂಪನ್ಮೂಲ ಸಚಿವರಾದ ಶಿವಕುಮಾರ್ ಉತ್ತರ ಸಹಿತ ಬಂದಿದ್ದರು. ಆದರೆ, ರೇವಣ್ಣ ಸದನದಲ್ಲಿ ಹಾಜರಿರಲಿಲ್ಲ. ಇದನ್ನು ಗಮನಿಸಿದ ಶಿವಕುಮಾರ್ ಈ ಮಾತು ಹೇಳಿದರು.

ಒಂದು ಪ್ರಶ್ನೆಗೆ ಉತ್ತರ ಸಿದ್ಧಪಡಿಸುವ ಹಿಂದಿನ ಶ್ರಮದ ಬಗ್ಗೆ ಪ್ರಸ್ತಾಪಿಸಿದ ಶಿವಕುಮಾರ್, 'ಸದಸ್ಯರು ಕೇಳುವ ಒಂದು ಸಣ್ಣ ಪ್ರಶ್ನೆಗೆ ಸಮರ್ಪಕ ಉತ್ತರ ನೀಡಲು ಇಲಾಖೆಯ ಕೆಳಹಂತದ ಸಿಬ್ಬಂದಿಯಿಂದ ಹಿಡಿದು ಸರ್ಕಾರದ ಉನ್ನತ ಅಧಿಕಾರಿಗಳವರೆಗೆ 100ಕ್ಕೂ ಹೆಚ್ಚು ಜನರು ಕೆಲಸ ಮಾಡಬೇಕಾಗುತ್ತದೆ. ಸಚಿವರಾದ ನಾವೂ ಕೂಡ ಅದರ ಬಗ್ಗೆ ಅಧ್ಯಯನ ನಡೆಸಿ ಸದನಕ್ಕೆ ಬಂದಿರುತ್ತೇವೆ. ಇಷ್ಟೆಲ್ಲಾ ಸಿದ್ಧತೆಯ ನಂತರ ಪ್ರಶ್ನೆ ಕೇಳಿದವರೇ ಇಲ್ಲದಿದ್ದರೆ ಇಡೀ ವ್ಯವಸ್ಥೆಯ ಶ್ರಮ ವ್ಯರ್ಥವಾಗುತ್ತದೆ' ಎಂದರು.


ಶಿವಕುಮಾರ್ ಪ್ರಸ್ತಾಪಕ್ಕೆ ತಕ್ಷಣ ಪ್ರತಿಕ್ರಿಯಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, 'ಈ ನಿಯಮ ಸರ್ಕಾರಕ್ಕೆ ತಿರುಗುಬಾಣ ಆಗಬಹುದು' ಎಂದು ಎಚ್ಚರಿಸಿದರು.

'ಜವಾಬ್ದಾರಿ ಎನ್ನುವುದು ಸದಸ್ಯರಿಗಷ್ಟೇ ಅಲ್ಲ, ಸಚಿವರಿಗೂ ಇರಬೇಕು. ಅನೇಕ ಬಾರಿ ನಾವು ಗಂಭೀರ ಪ್ರಶ್ನೆಗಳನ್ನು ಕೇಳಿರುತ್ತೇವೆ. ಆದರೆ, ಉತ್ತರ ನೀಡಲು ಸಂಬಂಧಪಟ್ಟ ಸಚಿವರೇ ಇರುವುದಿಲ್ಲ. ಸದಸ್ಯರು ಮೂರು ಬಾರಿ ಗೈರಾದರೆ ಕ್ರಮ ಕೈಗೊಳ್ಳಬೇಕು ಎನ್ನುವುದಾದರೆ, ಸಚಿವರು ಮೂರು ಬಾರಿ ಉತ್ತರ ನೀಡಲು ಗೈರಾದರೆ ಅಥವಾ ವಿಳಂಬ ಮಾಡಿದರೆ ಯಾವ ಕ್ರಮ ಕೈಗೊಳ್ಳುತ್ತೀರಾ' ಎಂದು ಪ್ರಶ್ನಿಸಿದರು. ಆಗ, ಶಿವಕುಮಾರ್, 'ಸಚಿವರ ಮೇಲೂ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸಿ ಜಂಟಿ ತೀರ್ಮಾನಕ್ಕೆ ಬರೋಣ' ಎಂದರು.

ಸಭಾಧ್ಯಕ್ಷ ಯು.ಟಿ. ಖಾದರ್, 'ಸದಸ್ಯರ ಪ್ರತಿಯೊಂದು ಪ್ರಶ್ನೆಗೂ ಉತ್ತರ ಒದಗಿಸುವುದು ಸರ್ಕಾರದ ಕರ್ತವ್ಯ. ಒಂದು ವೇಳೆ ಮಾಹಿತಿ ಕಲೆ ಹಾಕಲು ವಿಳಂಬವಾಗಿದ್ದರೆ, ಈ ಅಧಿವೇಶನದ ಅವಧಿಯಲ್ಲೇ ಎಲ್ಲ ಉತ್ತರಗಳನ್ನು ಒದಗಿಸಬೇಕು. ಉತ್ತರ ನೀಡಲು ಅಧಿಕಾರಿ ನಿರ್ಲಕ್ಷ್ಯ ವಹಿಸಿದವರ ಮೇಲೆ ಸಂಬಂಧಪಟ್ಟ ಸಚಿವರು ತಕ್ಷಣ ಶಿಸ್ತು ಕ್ರಮ ತೆಗೆದುಕೊಳ್ಳಬೇಕು' ಎಂದರು.

ಪ್ರಶ್ನೋತ್ತರ


ಒಪ್ಪಂದ 117, ಅನುಷ್ಠಾನ 6



ರಾಜ್ಯದಲ್ಲಿ ಮೂರು ವರ್ಷಗಳಲ್ಲಿ ಒಟ್ಟು ₹6.70 ಲಕ್ಷ ಮೊತ್ತದ 117 ಹೂಡಿಕೆಗಳ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಈ ಯೋಜನೆಗಳಿಂದ ಒಟ್ಟು 2.47 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ. ಈ ಪೈಕಿ ₹79,907 ಕೋಟಿ ಮೊತ್ತದ 57 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಅನುಷ್ಠಾನದ ಹಂತದಲ್ಲಿವೆ. ಇದರಲ್ಲಿ ₹6,900 ಕೋಟಿ ಮೊತ್ತದ ಆರು ಯೋಜನೆಗಳು ಅನುಷ್ಠಾನವಾಗಿದ್ದು, 6,654 ಉದ್ಯೋಗ ಸೃಷ್ಟಿಯಾಗಿದೆ.

ಉತ್ತರ: ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ
ಪ್ರಶ್ನೆ: ಸಿ.ಟಿ.ರವಿ, ಬಿಜೆಪಿ

ನೀರಿನ ಬಾಟಲಿ ಪ್ರದರ್ಶಿಸಿದ ಸೂರಜ್



ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನ ಕೌಶಿಕ ಗ್ರಾಮದ ಕೆರೆ ಮತ್ತು ಇತರ ಜಲಮೂಲಗಳಿಗೆ ಕೈಗಾರಿಕೆಗಳು ಸಂಸ್ಕರಿಸದ ಕೊಳಚೆ ನೀರನ್ನು ಬಿಡುತ್ತಿವೆ. ಹೀಗಾಗಿ ಗ್ರಾಮದ ಎಲ್ಲ ಕೊಳವೆ ಬಾವಿಗಳಲ್ಲಿ ಕಲುಷಿತ ನೀರು ಬರುತ್ತಿದೆ. ಈ ಬಗ್ಗೆ ಎಷ್ಟೇ ದೂರು ನೀಡಿದರೂ ಪರಿಹಾರ ದೊರೆತಿಲ್ಲ ಎಂದು ಜೆಡಿಎಸ್‌ನ ಸೂರಜ್ ರೇವಣ್ಣ ಪ್ರಶ್ನೋತ್ತರದ ವೇಳೆ ವಿಷಯ ಪ್ರಸ್ತಾಪಿಸಿದರು. ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರು, 'ಕ್ರಮ ತೆಗೆದುಕೊಂಡಿದ್ದೇವೆ. ಸಮಸ್ಯೆ ಬಗೆಹರಿದಿದೆ' ಎಂದರು. ಆಗ ಸೂರಜ್ ಅವರು ಕಲುಷಿತ ನೀರು ತುಂಬಿರುವ ನೀರಿನ ಬಾಟಲಿ ಪ್ರದರ್ಶಿಸಿ, 'ಈ ನೀರು ಕುಡಿಯಲು ಯೋಗ್ಯವೇ' ಎಂದು ಪ್ರಶ್ನಿಸಿದರು.

ಬಳ್ಳಾರಿ ವಿಮಾನ ನಿಲ್ದಾಣ: ಚರ್ಚಿಸಿ ನಿರ್ಧಾರ



ಬಳ್ಳಾರಿ ವಿಮಾನ ನಿಲ್ದಾಣ ನಿರ್ಮಾಣದ ಗುತ್ತಿಗೆ ಪಡೆದ ಕಂಪನಿ ಹಲವು ವರ್ಷಗಳ ನಂತರವೂ ಕಾಮಗಾರಿ ಆರಂಭಿಸಿರಲಿಲ್ಲ. ಹೀಗಾಗಿ ಗುತ್ತಿಗೆ ರದ್ದುಪಡಿಸಲಾಗಿದೆ. ಯೋಜನೆ ಅನುಷ್ಠಾನದ ಸಂಬಂಧ ಹೊಸದಾಗಿ, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಆದರೆ ವಿಜಯನಗರ ಮತ್ತು ಕೊಪ್ಪಳದಲ್ಲೂ ವಿಮಾನ ನಿಲ್ದಾಣ ಬೇಕು ಎಂಬ ಬೇಡಿಕೆ ಇದೆ. ಮೂರೂ ಜಿಲ್ಲೆಗಳ ಜನಪ್ರತಿನಿಧಿಗಳ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚರ್ಚೆ ನಡೆಸಲಿದ್ದಾರೆ.

ಉತ್ತರ: ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ
ಪ್ರಶ್ನೆ: ವೈ.ಎಂ.ಸತೀಶ್, ಬಿಜೆಪಿ

ಜವಳಿ ಪಾರ್ಕ್‌ಗೆ ಕೇಂದ್ರವು ಜಮೀನು ನೀಡಲಿ



ಸಿಂಧನೂರಿನಲ್ಲಿ ಜವಳಿ ಪಾರ್ಕ್ ನಿರ್ಮಾಣಕ್ಕೆ 15 ಎಕರೆ ಜಮೀನು ಬೇಕಾಗಿದೆ. ಉದ್ದೇಶಿತ ಸ್ಥಳದಲ್ಲಿ ಒಂದೇ ಕಡೆ 15 ಎಕರೆ ಸರ್ಕಾರಿ ಜಮೀನು ಲಭ್ಯವಿಲ್ಲ. ಕೇಂದ್ರ ಸರ್ಕಾರಿ ಸ್ವಾಮ್ಯದ ಸಿಎಸ್‌ಎಫ್ ಬಳಿ 7,500 ಎಕರೆ ಇದೆ. ಸಿಎಸ್‌ಎಫ್‌ನ ಜಮೀನಿನಲ್ಲೇ 15 ಎಕರೆ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ. ಕೇಂದ್ರವು ಜಮೀನು ಒದಗಿಸಿದರೆ, ತಕ್ಷಣವೇ ಜವಳಿ ಪಾರ್ಕ್ ಕಾಮಗಾರಿ ಆರಂಭಿಸುತ್ತೇವೆ.

ಉತ್ತರ: ಶಿವಾನಂದ ಪಾಟೀಲ, ಜವಳಿ ಸಚಿವ
ಪ್ರಶ್ನೆ: ಬಸನಗೌಡ ಬಾದರ್ಲಿ, ಕಾಂಗ್ರೆಸ್

ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಬಳಕೆ– ಕಾಯ್ದೆ ತಿದ್ದುಪಡಿಗೆ ಮಸೂದೆ

ಇವಿಎಂ ಬದಲು ಇನ್ನು ಮತಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಬದಲು ಮತಪತ್ರಗಳ (ಬ್ಯಾಲೆಟ್) ಬಳಕೆಗೆ ಅವಕಾಶ ಕಲ್ಪಿಸುವ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ' ಸೇರಿ ಒಟ್ಟು ನಾಲ್ಕು ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಮತ ಯಂತ್ರದ ಪಾರದರ್ಶಕತೆ, ವಿಶ್ವಾಸಾರ್ಹತೆ ಕುರಿತು ಅನುಮಾನ ವ್ಯಕ್ತಪಡಿಸುತ್ತಿರುವ ಆಡಳಿತಾರೂಢ ಕಾಂಗ್ರೆಸ್, ಮತಪತ್ರ ಬಳಕೆಗೆ ಆಸಕ್ತಿ ಹೊಂದಿದೆ. ಈ ಕಾರಣಕ್ಕೆ ಕಾಯ್ದೆ ತಿದ್ದುಪಡಿಗೆ ಮುಂದಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಈ ಮಸೂದೆಯನ್ನು ಮಂಡಿಸಿದರು.

ಸಂವಿಧಾನದ 326ನೇ ವಿಧಿ ಅಡಿಯಲ್ಲಿ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಮುಖ್ಯವಾಗಿ, ಮತದಾರರ ಮತಪತ್ರದ ಗೋಪ್ಯತೆ ಖಚಿತವಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸಂರಕ್ಷಿಸುವುದು ಈ ಮಸೂದೆಯ ಉದ್ದೇಶ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆ ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದೂ ತಿದ್ದುಪಡಿ ಮಸೂದೆಯಲ್ಲಿ ವಿವರಿಸಲಾಗಿದೆ.

ಜಿಲ್ಲಾ ಪಂಚಾಯಿತಿಯ ಪ್ರತಿಯೊಂದು ಮತ ಕ್ಷೇತ್ರದಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಮೊದಲು ಆಯುಕ್ತರು ಮತದಾನದ ಪಟ್ಟಿ ಸಿದ್ಧಪಡಿಸಬೇಕಿತ್ತು. ಆ ಹೊಣೆಯನ್ನು ಉಪವಿಭಾಗಾಧಿಕಾರಿಗೆ ನೀಡಲಾಗಿದೆ. ಈ ಸಂಬಂಧ ಮೂಲ ಕಾಯ್ದೆಯ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ.

ಮೂಲ ಕಾಯ್ದೆಯಲ್ಲಿದ್ದ ಜಿಲ್ಲಾ ಪಂಚಾಯಿತಿಯ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯಿತಿಯ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶವನ್ನು ಕೈಬಿಡಲಾಗಿದೆ. ಅಂದರೆ, ಭಾರತೀಯ ಚುನಾವಣಾ ಆಯೋಗ ಸಿದ್ಧಪಡಿಸುವ ವಿಧಾನಸಭೆಯ ಮತದಾರರ ಪಟ್ಟಿಯನ್ನು ಅಳವಡಿಸಿಕೊಳ್ಳಲು ಇರುವ ಅಂಶವನ್ನು ತಿದ್ದುಪಡಿ ಮಸೂದೆಯಲ್ಲಿ ಕೈಬಿಡಲಾಗಿದೆ.

ಇತರ ಮಸೂದೆಗಳು: ರಾಜ್ಯದಲ್ಲಿ ಲಭ್ಯವಿರುವ ಎಲ್ಲ ಬಗೆಯ ಪ್ರಾಚೀನ ಹಸ್ತಪ್ರತಿಗಳ ಮಾಹಿತಿಯನ್ನು ಸಂಗ್ರಹಿಸಿ, ಡಿಜಿಟಲೀಕರಣದ ಮೂಲಕ ಸಂರಕ್ಷಿಸುವ ಉದ್ದೇಶದಿಂದ 'ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿ ಮಸೂದೆ, ಲೋಕಾಯುಕ್ತರ ವೇತನ ಮತ್ತು ಭತ್ಯೆ ಪರಿಷ್ಕರಣೆಗೆ 'ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ಮಸೂದೆ' ಮತ್ತು ದುರ್ನಡತೆ, ನಿರ್ಲಕ್ಷ್ಯ, ಕರ್ತವ್ಯಲೋಪ ಸಂದರ್ಭದಲ್ಲಿ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳುವ ಸಂಬಂಧ 'ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ'ಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

prajavani.net prajavani
ಬುಧವಾರ, ಮಾರ್ಚ್ 11, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 70 | ಪುಟ 18
www.prajavani.net

ಬೆಲೆ ಏರಿಕೆಗೆ ವಿರೋಧ
ಸಮಾಜವಾದಿ ಪಕ್ಷದ ಸಂಸದೆ ಡಿಂಪಲ್ ಯಾದವ್ ಅವರು ಬೆಲೆ ಹೆಚ್ಚಳ ವಿರೋಧಿಸಿ ಸಂಸತ್ತಿಗೆ ಆಲೂಗಡ್ಡೆ ತಂದಿದ್ದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 78,205 | ನಿಫ್ಟಿ 24,261 | $/₹ 91.85

ಪಾಲಿಕೆಗಳಿಗೆ ₹57,000 ಕೋಟಿ ಕೊರತೆ
ಬೆಂಗಳೂರು: ಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸಬೇಕಿರುವ ಐದು ನಗರ ಪಾಲಿಕೆಗಳಿಗೆ, ಮುಂದಿನ ನಾಲ್ಕರಿಂದ ಐದು ವರ್ಷಗಳವರೆಗೆ ₹57 ಸಾವಿರ ಕೋಟಿ ಕೊರತೆಯಾಗಲಿದೆ.
ವಿವರ 3

ಅಡುಗೆ ಅನಿಲಕ್ಕಾಗಿ ಕಾಯ್ದೆ ಪ್ರಯೋಗ

ಪಶ್ಚಿಮ ಏಷ್ಯಾ ಯುದ್ಧದಿಂದಾಗಿ ಪೂರೈಕೆ ವ್ಯತ್ಯಯ • ಎಲ್‌ಪಿಜಿ, ಸಿಎನ್‌ಜಿಗೆ ಆದ್ಯತೆ • ಅಗತ್ಯ ವಸ್ತುಗಳ ಕಾಯ್ದೆಯ ಅಡಿ ಕ್ರಮ ಜರುಗಿಸಿದ ಕೇಂದ್ರ

ನವದೆಹಲಿ (ಪಿಟಿಐ): ನೈಸರ್ಗಿಕ ಅನಿಲ ಬಳಸಿ ಎಲ್‌ಪಿಜಿ, ಸಿಎನ್‌ಜಿ ಉತ್ಪಾದಿಸಲು ಮತ್ತು ಕೊಳವೆ ಮೂಲಕ ಮನೆಗಳಿಗೆ ಪೂರೈಸುವ ಅಡುಗೆ ಅನಿಲ (ಪಿಎನ್‌ಜಿ) ಉತ್ಪಾದಿಸಲು ಆದ್ಯತೆ ನೀಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಹೇಳಿದೆ.

ಮನೆಗಳಲ್ಲಿನ ಅಡುಗೆ ಕೆಲಸಗಳಿಗೆ ಎಲ್‌ಪಿಜಿ ಪೂರೈಕೆ ಖಾತರಿಪಡಿಸಲು ಹಾಗೂ ವಾಹನಗಳಿಗೆ ಸಿಎನ್‌ಜಿ ಲಭ್ಯವಿರುವಂತೆ ನೋಡಿಕೊಳ್ಳಲು ಕೇಂದ್ರವು 'ಅಗತ್ಯ ವಸ್ತುಗಳ ಕಾಯ್ದೆ–1955'ರ ಅಡಿಯಲ್ಲಿ ಈ ಕ್ರಮ ತೆಗೆದುಕೊಂಡಿದೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ಭಾರತಕ್ಕೆ ಪೂರೈಕೆ ಆಗುವ ಅನಿಲದಲ್ಲಿ ಶೇ 30ರಷ್ಟು ಪಾಲಿನ ಮೇಲೆ ಅಡ್ಡ ಪರಿಣಾಮ ಬೀರಿದೆ. ಈ ಸಂದರ್ಭದಲ್ಲಿ ಹೊಸ ಅಧಿಸೂಚನೆಯೊಂದನ್ನು ಹೊರಡಿಸಿರುವ ಪೆಟ್ರೋಲಿಯಂ ಸಚಿವಾಲಯವು, ಲಭ್ಯವಿರುವ ಅನಿಲವನ್ನು ಈ ಆದ್ಯತಾ ವಲಯಗಳಿಗಾಗಿ ಇರಿಸಬೇಕು ಎಂದು ಸೂಚಿಸಿದೆ.

ಭಾರತಕ್ಕೆ ನಿತ್ಯ 191 ಎಂಎಂಎಸ್‌ಸಿಎಂಡಿ (ಮಿಲಿಯನ್ ಮೆಟ್ರಿಕ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ಸ್ ಪರ್ ಡೇ) ಅನಿಲದ ಅಗತ್ಯವಿದೆ. ಇದರಲ್ಲಿ, ಶೇ 50ರಷ್ಟು ಅನಿಲವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಹೊರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚಾರ ಸ್ಥಗಿತಗೊಂಡಿರುವ ಕಾರಣದಿಂದಾಗಿ 60 ಎಂಎಂಎಸ್‌ಸಿಎಂಡಿ ಅನಿಲ ಪೂರೈಕೆಗೆ ಧಕ್ಕೆ ಆಗಿದೆ.

ಲಭ್ಯವಿರುವ ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಮತ್ತು ಪಿಎನ್‌ಜಿ ಉತ್ಪಾದನೆಗೆ ಬರುವ ಪೂರ್ಣ ಪ್ರಮಾಣದ ಬೇಡಿಕೆಗೆ ಸ್ಪಂದಿಸಲು ಬಳಸಬೇಕು. ವಾಣಿಜ್ಯ ಬಳಕೆಯವರ ಶೇ 80ರಷ್ಟು ಅಗತ್ಯಗಳನ್ನು ಪೂರೈಸಲು ಹಾಗೂ ರಸಗೊಬ್ಬರ ಘಟಕಗಳ ಶೇ 70ರಷ್ಟು ಬೇಡಿಕೆಯನ್ನು ಪೂರೈಸಲು ಇದನ್ನು ಬಳಸಬೇಕು ಎಂದು ಕೇಂದ್ರ ಸೂಚಿಸಿದೆ.

'ನಾವು ಪರಿಸ್ಥಿತಿಯನ್ನು ಪ್ರತಿ ನಿಮಿಷವೂ ಅವಲೋಕಿಸುತ್ತಿದ್ದೇವೆ. ಅಗತ್ಯಗಳ ಬಗ್ಗೆ ಅರಿವಿದೆ. ಪ್ರಮುಖ ವಲಯಗಳ ಬೇಡಿಕೆಗೆ ಪೂರ್ಣ ಪ್ರಮಾಣದಲ್ಲಿ ಸ್ಪಂದಿಸುವ ಉದ್ದೇಶದಿಂದ ಅನಿಲದ ಹಂಚಿಕೆಯ ಆದ್ಯತೆಗಳಲ್ಲಿ ನಾವು ಮರಹೊಂದಾಣಿಕೆ ಮಾಡಿಕೊಂಡಿದ್ದೇವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರಮುಖವಾಗಿ ಎಲ್‌ಪಿಜಿ ಪೂರೈಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಆದ್ಯತೆಗಳಲ್ಲಿ ಮರುಹೊಂದಾಣಿಕೆ ಮಾಡಲಾಗಿದೆ. ಯುದ್ಧ ಶುರುವಾದ ನಂತರದಲ್ಲಿ ಪೂರೈಕೆಯ ಮೇಲೆ ಪರಿಣಾಮ ಉಂಟಾಗಿದೆ.

ನೈಸರ್ಗಿಕ ಅನಿಲವನ್ನು ಸಂಸ್ಕರಿಸುವ ಮೂಲಕ ಎಲ್‌ಪಿಜಿ ಉತ್ಪಾದಿಸಲಾಗುತ್ತದೆ. ಅಲ್ಲದೆ, ಕಚ್ಚಾ ತೈಲದ ಸಂಸ್ಕರಣೆಯ ಉಪ ಉತ್ಪನ್ನವಾಗಿಯೂ ಇದು ಲಭ್ಯವಾಗುತ್ತದೆ. ಸೋಮವಾರ ಹೊರಡಿಸಿರುವ ಅಧಿಸೂಚನೆಯು ಎಲ್‌ಎನ್‌ಜಿ ಮಾರಾಟದ ವಿಚಾರವಾಗಿ ಮಾಡಿಕೊಂಡಿರುವ ಎಲ್ಲ ವಾಣಿಜ್ಯ ಒಪ್ಪಂದಗಳನ್ನು ಮೀರಿ ಜಾರಿಗೆ ಬರಲಿದೆ. ▸6



ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಉಂಟಾಗಿದ್ದು, ಬೆಂಗಳೂರಿನಲ್ಲಿ ಸಿಲಿಂಡರ್‌ಗಳನ್ನು ಸಾಗಿಸುವ ವಾಹನಗಳು ರಸ್ತೆಬದಿ ಮಂಗಳವಾರ ನಿಂತಿದ್ದವು – ಪಿಟಿಐ ಚಿತ್ರ

ಯುದ್ಧದ ಸಂದರ್ಭದಲ್ಲಿಯೂ ಸಿಎನ್‌ಜಿ, ಪಿಎನ್‌ಜಿ ಪೂರೈಕೆಯು ದೇಶದ ಗ್ರಾಹಕರಿಗೆ ಶೇ 100ರಷ್ಟು ಇರುವಂತೆ ಮಾಡಲು, ಇತರ ಕೈಗಾರಿಕೆಗಳಿಗೆ ಅವುಗಳ ಅಗತ್ಯದ ಶೇ 70–80ರಷ್ಟು ಸಿಗುವಂತೆ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ
ಹರದೀಪ್ ಸಿಂಗ್ ಪುರಿ, ಕೇಂದ್ರ ಪೆಟ್ರೋಲಿಯಂ ಸಚಿವ

ತಿಂಗಳಿಗೆ ಒಂದೇ ಸಿಲಿಂಡರ್



ಬೆಂಗಳೂರು: ಕರ್ನಾಟಕದಲ್ಲಿ ಒಬ್ಬ ಗ್ರಾಹಕ ಒಂದು ಬಾರಿ ಎಲ್‌ಪಿಜಿ ಖರೀದಿ ಮಾಡಿದ ನಂತರ, ಇನ್ನೊಂದು ಎಲ್‌ಪಿಜಿ ಸಿಲಿಂಡರ್ ಖರೀದಿ ಮಾಡಲು ಒಂದು ತಿಂಗಳು ಕಾಯಬೇಕು ಎಂಬ ನಿಯಮ ಜಾರಿ ಮಾಡಲಾಗಿದೆ.

ದೇಶದಾದ್ಯಂತ ಈ 'ಕಾಯುವಿಕೆ' ಅವಧಿಯನ್ನು 25 ದಿನಕ್ಕೆ ನಿಗದಿಪಡಿಸಲಾಗಿದೆ. ಆದರೆ, ರಾಜ್ಯದಲ್ಲಿ 30 ದಿನ ಕಾಯಬೇಕಿದೆ ಎಂದು ಎಂದು ತೈಲೋತ್ಪನ್ನ ಕಂಪನಿಯ ಅಧಿಕಾರಿಯೊಬ್ಬರು ಹೇಳಿದರು.

ಸಚಿವ ಪುರಿ ಅವರಿಗೆ ಸಿ.ಎಂ ಪತ್ರ

ಬೆಂಗಳೂರು/ನವದೆಹಲಿ: ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಕೇಂದ್ರ ಸರ್ಕಾರವು ತಕ್ಷಣವೇ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್‌ಸಿಂಗ್ ಪುರಿ ಅವರಿಗೆ ಪತ್ರ ಬರೆದಿದ್ದಾರೆ. ▸6

ಸರ್ಕಾರದ ಕ್ರಮದಿಂದ ಏನು ಪರಿಣಾಮ?

ಪರಿಷ್ಕೃತ ನಿಯಮದ ಅನ್ವಯ, ಎಲ್‌ಪಿಜಿ, ಸಿಎನ್‌ಜಿ ಮತ್ತು ಪಿಎನ್‌ಜಿ ಉತ್ಪಾದಕರ ಅಗತ್ಯಗಳಿಗೆ ಆದ್ಯತೆ ನೀಡಲಾಗುತ್ತದೆ. ಅವರಿಗೆ ಅಗತ್ಯವಿರುವ ನೈಸರ್ಗಿಕ ಅನಿಲ ಒದಗಿಸಿದ ನಂತರದಲ್ಲಿ ಇತರ ವಲಯಗಳಿಗೆ ಪೂರೈಕೆ ಮಾಡಲಾಗುತ್ತದೆ. ಕಳೆದ ಆರು ತಿಂಗಳ ಅನಿಲ ಬಳಕೆಯ ಸರಾಸರಿ ಆಧರಿಸಿ, ಅಷ್ಟು ಪ್ರಮಾಣದ ಉತ್ಪಾದನೆಗೆ ಅಗತ್ಯವಿರುವ ನೈಸರ್ಗಿಕ ಅನಿಲವನ್ನು ಒದಗಿಸಲಾಗುತ್ತದೆ.

ರಸಗೊಬ್ಬರ ತಯಾರಿಕಾ ವಲಯವನ್ನು ಎರಡನೆಯ ಆದ್ಯತಾ ವಲಯವನ್ನಾಗಿ ಗುರುತಿಸಲಾಗಿದೆ. ಈ ವಲಯದ ಕಳೆದ ಆರು ತಿಂಗಳ ಸರಾಸರಿ ಬೇಡಿಕೆಯ ಶೇ 70ರಷ್ಟು ನೈಸರ್ಗಿಕ ಅನಿಲವನ್ನು ಪೂರೈಸಲಾಗುತ್ತದೆ.

ಮೂರನೆಯ ಸ್ಥಾನದಲ್ಲಿ ಚಹಾ ಉದ್ಯಮ, ತಯಾರಿಕೆ ಮತ್ತು ಇತರ ಕೈಗಾರಿಕಾ ಗ್ರಾಹಕರು ಇದ್ದಾರೆ. ಇವರಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಶೇ 80ರಷ್ಟು ನೈಸರ್ಗಿಕ ಅನಿಲ ಒದಗಿಸಲಾಗುತ್ತದೆ.

ಕೈಗಾರಿಕೆ ಹಾಗೂ ವಾಣಿಜ್ಯ ಬಳಕೆ ಗ್ರಾಹಕರಿಗೆ ಅನಿಲ ಪೂರೈಸುವ ನಗರ ಅನಿಲ ವಿತರಕರನ್ನು (ಸಿಜಿಡಿ) ಆದ್ಯತಾ ಪಟ್ಟಿಯಲ್ಲಿ ನಾಲ್ಕನೆಯ ಸ್ಥಾನದಲ್ಲಿ ಇರಿಸಲಾಗಿದೆ.

ಪ್ರಧಾನಿ ಸಭೆ

ಸಂಪುಟದ ಹಿರಿಯ ಸಹೋದ್ಯೋಗಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕೆಟ್ಟ ಪರಿಣಾಮವು ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬಳಕೆದಾರರ ಮೇಲೆ ಆಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಕಚ್ಚಾ ತೈಲದ ಬೆಲೆ ಹೆಚ್ಚಳ ಆಗಿದ್ದರೂ, ಅದರ ಪರಿಣಾಮವು ಭಾರತದ ಗ್ರಾಹಕರ ಮೇಲೆ ಬೀಳದಂತೆ ನೋಡಿಕೊಳ್ಳುವ ವಿಚಾರದಲ್ಲಿ ಪ್ರಧಾನಿಯವರು ಮುಂದಾಲೋಚನೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಸಚಿವರು ಸಮನ್ವಯದೊಂದಿಗೆ ಕೆಲಸ ಮಾಡಬೇಕು, ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಎಲ್‌ಪಿಜಿ ಕೊರತೆ ಆಗದಂತೆ ಖಾತರಿಪಡಿಸಿಕೊಳ್ಳಬೇಕು ಎಂದು ಪ್ರಧಾನಿ ಸೂಚನೆ ನೀಡಿದ್ದಾರೆ ಎಂದು ಗೊತ್ತಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಪ್ರಧಾನಿ ನಡೆಸಿದ ಸಭೆಯಲ್ಲಿ ಭಾಗಿಯಾಗಿದ್ದರು.

ಕೋವಿಡ್: ದೋಷರಹಿತ ಪರಿಹಾರ ನೀತಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧದ ಲಸಿಕೆಯಿಂದಾದ ಗಂಭೀರ ಪ್ರತಿಕೂಲ ಪರಿಣಾಮಗಳಿಗೆ ಸಂಬಂಧಿಸಿದಂತೆ ದೋಷರಹಿತ ಪರಿಹಾರ ನೀತಿಯೊಂದನ್ನು ರೂಪಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಮಂಗಳವಾರ ಸೂಚನೆ ನೀಡಿದೆ.
ವಿವರ 12

ಚಿನಕುರುಳಿ ಪ್ರಕಾಶ್ ಶೆಟ್ಟಿ



'ಶರಾವತಿ: ಕಾಮಗಾರಿ ಬೇಡ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ₹10 ಸಾವಿರ ಕೋಟಿ ವೆಚ್ಚದ 'ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆ' ಕಾಮಗಾರಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಸಾಗರದ ಅಖಿಲೇಶ್ ಚಿಪ್ಪಳಿ, ಉಡುಪಿಯ ರವೀಂದ್ರನಾಥ ಶಾನುಭಾಗ್ ಮತ್ತು ಶಿವಮೊಗ್ಗದ ಸಿ.ಬಿ. ಮನೋಹರ ಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, 'ಯೋಜನೆಗೆ ಕೇಂದ್ರ ವನ್ಯಜೀವಿ ಮಂಡಳಿಯಿಂದ ಅನುಮೋದನೆ ಸಿಕ್ಕಿಲ್ಲ. ಯೋಜನೆ ಬಗೆಗಿನ ಆತಂಕಗಳ ಪರಿಶೀಲಿಸಲಾಗುತ್ತಿದೆ' ಎಂದರು.

ಇದಕ್ಕೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಯಾವುದೇ ಮಧ್ಯಂತರ ತಡೆ ನೀಡದಂತೆ ಮನವಿ ಮಾಡಿದರು. ಕಾಮಗಾರಿಗೆ ಮಧ್ಯಂತರ ತಡೆ ನೀಡಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲೆ ಬಿ.ವಿ. ವಿದ್ಯುಲ್ಲತಾ ವಕಾಲತ್ತು ವಹಿಸಿದ್ದಾರೆ.

ಅರ್ಜಿಯಲ್ಲಿ ಏನಿದೆ?: 'ವನ್ಯಜೀವಿಗಳ ಪ್ರಯೋಜನಕ್ಕಾಗಿ ಮತ್ತು ಬೇಡದ ಉದ್ದೇಶಗಳಿಗಾಗಿ ವನ್ಯಜೀವಿ ಅಭಯಾರಣ್ಯ ಪ್ರದೇಶ ಬಳಕೆಗೆ ಅನುಮೋದನೆ ನೀಡುವ ಅಧಿಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಗೆ ಇಲ್ಲ. ಹೀಗಾಗಿ, ಶರಾವತಿ ಕಣಿವೆಯ ಅಭಯಾರಣ್ಯ ಮತ್ತು ಅದರ ಪರಿಸರ ಸೂಕ್ಷ್ಮ ವಲಯದಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ಯೋಜನೆಗೆ ಯಾವುದೇ ಅನುಮೋದನೆ ನೀಡಬಾರದು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಮುಷ್ಕರ ವಾಪಸ್ ಪಡೆದ ವೈದ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ, ಮುಂಬಡ್ತಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಸರ್ಕಾರ ಒಪ್ಪಿದ ಕಾರಣ, ವೈದ್ಯರು ಇದೇ 11ರಿಂದ ಹಮ್ಮಿಕೊಂಡಿದ್ದ ಮುಷ್ಕರವನ್ನು ತಾತ್ಕಾಲಿಕವಾಗಿ ವಾಪಸ್ ಪಡೆದಿದ್ದಾರೆ.



ಕರ್ತವ್ಯದ ಬಳಿಕ ಖಾಸಗಿ ವ್ಯವಸ್ಥೆಯಡಿ ಒಳರೋಗಿ ಚಿಕಿತ್ಸೆಗೆ ಅವಕಾಶ ಸೇರಿ 14 ಬೇಡಿಕೆಗಳ ಈಡೇರಿಕೆಗೆ ಮಾರ್ಚ್ 10ರ ಗಡುವು ನೀಡಿದ್ದರು. ▸7

ವೈದ್ಯಾಧಿಕಾರಿಗಳ ಜತೆಗೆ ನಡೆಸಿದ ಸಭೆ ಯಶಸ್ವಿಯಾಗಿದ್ದು, ಬಹುತೇಕ ಎಲ್ಲ ಬೇಡಿಕೆಗಳ ಈಡೇರಿಕೆಗೆ ಒಪ್ಪಿಗೆ ಸೂಚಿಸಿದ್ದೇವೆ
ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಷರೀಯತ್‌ನಲ್ಲಿ ಮಹಿಳೆಯರ ಹಕ್ಕುಗಳು ಪುರುಷರ ಅರ್ಧದಷ್ಟು: ಪ್ರಶಾಂತ್ ಭೂಷಣ್

'ಯುಸಿಸಿಯಿಂದ ಸಮಾನ ಹಕ್ಕು'

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಎಲ್ಲ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತರಿಪಡಿಸುವ ಏಕೈಕ ಮಾರ್ಗವೆಂದರೆ, ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸುವುದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಮುಸ್ಲಿಂ ವೈಯಕ್ತಿಕ ಕಾನೂನು (ಷರೀಯತ್) ಅಡಿಯಲ್ಲಿ ಉತ್ತರಾಧಿಕಾರದ ನಿಬಂಧನೆಗಳನ್ನು ಪ್ರಶ್ನಿಸುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಮುಸ್ಲಿಂ ಸಮುದಾಯದ ಒಂದು ದೊಡ್ಡ ಭಾಗವು ಪಿತ್ರಾರ್ಜಿತ ಹಕ್ಕುಗಳಿಂದ ವಂಚಿತವಾಗಿದೆ ಎಂಬುದು ನಿಜ. ಆದರೆ, ಷರೀಯತ್‌ನ ಉತ್ತರಾಧಿಕಾರದ ನಿಬಂಧನೆಯನ್ನು ರದ್ದುಗೊಳಿಸಿದರೆ, ಯಾವ ಕಾನೂನು ಉತ್ತರಾಧಿಕಾರವನ್ನು ನಿಯಂತ್ರಿಸಬೇಕು? ಈ ಪ್ರಶ್ನೆಗೆ ನಿಖರವಾದ ಉತ್ತರ... ಯುಸಿಸಿ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಆರ್. ಮಹಾದೇವನ್ ಹಾಗೂ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ನ್ಯಾಯಪೀಠ ಹೇಳಿದೆ.

ಮುಸ್ಲಿಂ ಮಹಿಳೆಯರಿಗೆ ಸಮಾನ ಉತ್ತರಾಧಿಕಾರದ ಹಕ್ಕು ನೀಡುವಂತೆ ಕೋರಿ ಪೌಲೋಮಿ ಪವಿನಿ ಶುಕ್ಲಾ ಮತ್ತು ಇತರರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಾಲಯವು ಪರಿಗಣಿಸಿತು.

ಶಾಸಕಾಂಗದ ವಿವೇಚನೆಗೆ ಯುಸಿಸಿ

ಷರೀಯತ್ ಅನೂರ್ಜಿತ ಎಂದು ಘೋಷಿಸುವ ಮತ್ತು ಕಾನೂನಿನ ನಿರ್ವಾತವನ್ನು ಸೃಷ್ಟಿಸುವ ಬದಲು, ಅದನ್ನು ಶಾಸಕಾಂಗದ ವಿವೇಚನೆಗೆ ಉಲ್ಲೇಖಿಸುವುದು ಉತ್ತಮ. ಇದರಿಂದ ಶಾಸಕಾಂಗವು ಏಕರೂಪ ನಾಗರಿಕ ಸಂಹಿತೆಯ ಮೇಲೆ ಕಾನೂನು ಜಾರಿಗೊಳಿಸಲಿದೆ. ಈ ಹಿಂದೆಯೂ ನ್ಯಾಯಾಲಯವು ಏಕರೂಪ ನಾಗರಿಕ ಸಂಹಿತೆಯನ್ನು ಶಿಫಾರಸು ಮಾಡಿತ್ತು
ಸುಪ್ರೀಂ ಕೋರ್ಟ್ ನ್ಯಾಯಪೀಠ

ಬುಡಕಟ್ಟು ಜನಾಂಗಗಳು ಸೇರಿ ವಿವಿಧ ಸಮುದಾಯಗಳಲ್ಲಿ ಅನೇಕ ಅಸಮಾನತೆಗಳಿವೆ ಎಂಬುದನ್ನು ಗಮನಿಸಿದ ಪೀಠವು, ಇವುಗಳನ್ನು ನ್ಯಾಯಾಲಯವು ತಳ್ಳಿಹಾಕಬಹುದೇ ಎಂದು ಅರ್ಜಿದಾರರನ್ನು ಪ್ರಶ್ನಿಸಿತು.

ಒಬ್ಬ ಪುರುಷ– ಒಬ್ಬ ಮಹಿಳೆ, ಅಂದರೆ ಏಕಪತ್ನಿತ್ವದ ವಿವಾಹವು ಸಮಾನತೆಯ ಗುರಿ ಸಾಧಿಸಿದೆಯೇ ಎಂದು ಕೇಳಿತು.

'ದೇಶದ ಎಲ್ಲ ಬಹುಪತ್ನಿತ್ವ ವಿವಾಹಗಳನ್ನು ಈ ನ್ಯಾಯಾಲಯವು ರದ್ದುಗೊಳಿಸಬಹುದೇ' ಎಂದೂ ನ್ಯಾಯಪೀಠ ಪ್ರಶ್ನಿಸಿತು.

'ಷರೀಯತ್, ಮಹಿಳೆಯರಿಗೆ ಪುರುಷರ ಅರ್ಧದಷ್ಟು ಹಕ್ಕನ್ನಷ್ಟೇ ಕೊಟ್ಟಿದೆ' ಎಂದು ಅರ್ಜಿದಾರರ ಪರ ಹಾಜರಾದ ವಕೀಲ ಪ್ರಶಾಂತ್ ಭೂಷಣ್ ಪೀಠಕ್ಕೆ ತಿಳಿಸಿದರು.

'ತ್ರಿವಳಿ ತಲಾಖ್ ಕೂಡ ಷರೀಯತ್‌ನ ಭಾಗವಾಗಿದೆ. ಆದರೆ, ಶಾಯರಾ ಬಾನೊ (ತ್ರಿವಳಿ ತಲಾಖ್) ಪ್ರಕರಣದಲ್ಲಿ ಈ ನ್ಯಾಯಾಲಯವು, 'ಇದೊಂದು (ತ್ರಿವಳಿ ತಲಾಖ್) ಸ್ವೇಚ್ಛಾಚಾರ. ಅಲ್ಲದೆ, ಸಾರ್ವಜನಿಕ ನೀತಿಯ ವಿರುದ್ಧವಾಗಿದ್ದು, ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುತ್ತದೆ' ಎಂಬ ಅಭಿಪ್ರಾಯದೊಂದಿಗೆ ಅದನ್ನು ರದ್ದುಗೊಳಿಸಿದೆ' ಎಂದು ನ್ಯಾಯಾಲಯಕ್ಕೆ ವಿವರಿಸಿದರು. ▸5

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ


ಪ್ರತಿಭಾ ಪುರಸ್ಕಾರಕ್ಕೆ ಶ್ರೀವೈಷ್ಣವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರೇಹಳ್ಳಿ ಶ್ರೀಲಕ್ಷ್ಮೀನರಸಿಂಹ ಸ್ವಾಮಿ ಕೈಂಕರ್ಯ ಸಭಾದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಡಿಪ್ಲೊಮಾ, ವೈದ್ಯಕೀಯ/ತಾಂತ್ರಿಕ ಪದವಿಗಳಲ್ಲಿ ಉತ್ತಮ ಅಂಕ ಗಳಿಸಿರುವ ಶ್ರೀವೈಷ್ಣವ (ಅಯ್ಯಂಗಾರ್) ವಿದ್ಯಾರ್ಥಿಗಳು ಮಾರ್ಚ್ 25ರೊಳಗೆ ಅರ್ಜಿ ಸಲ್ಲಿಸಬಹುದು.

ವಿಳಾಸ: ಮಾರೇಹಳ್ಳಿ ಶ್ರೀಲಕ್ಷ್ಮೀನರಸಿಂಹ ಸ್ವಾಮಿ ಕೈಂಕರ್ಯ ಸಭಾ, ನಂ.15, ಏಳನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಮಲ್ಲೇಶ್ವರ, ಬೆಂಗಳೂರು-560 003. ಮಾಹಿತಿಗೆ ಸಂಪರ್ಕ ಸಂಖ್ಯೆ: 94499 05340.



ಕನ್ನಡ ಪುಸ್ತಕ ಪ್ರಾಧಿಕಾರದ ಸಮಾರಂಭದಲ್ಲಿ ಮಾನಸ, ವಿಮರ್ಶಕ ಹಂಪ ನಾಗರಾಜಯ್ಯ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಕವಿ ಸತೀಶ್ ಕುಲಕರ್ಣಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

'ಪ್ರಶ್ನೆ, ಪ್ರತಿಭಟನೆಗಳೇ ಲೇಖಕನ ಮೂಲ ದ್ರವ್ಯ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 49 ಯುವ ಬರಹಗಾರರ ಮೊದಲ ಕೃತಿಗಳ ಜನಾರ್ಪಣೆ
- ಪುಸ್ತಕ ಓದುವ, ಸಾಹಿತ್ಯ ರಚನೆಯ ಹವ್ಯಾಸ ರೂಢಿಸಿಕೊಳ್ಳಲು ಸಲಹೆ

ಬೆಂಗಳೂರು: 'ಮನುಷ್ಯನಲ್ಲಿ ಮೂಡುವ ಪ್ರಶ್ನೆ ಮತ್ತು ಪ್ರತಿಭಟಿಸುವ ಆತನ ಮನೋಧರ್ಮಗಳೇ ಒಬ್ಬ ಲೇಖಕನ ಮೂಲ ದ್ರವ್ಯ. ಅವುಗಳಿಂದಲೇ ಬರಹ ಹೊಮ್ಮುತ್ತದೆ, ಸಾಹಿತ್ಯ ಗಟ್ಟಿಗೊಳ್ಳುತ್ತದೆ' ಎಂದು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಆಯೋಜಿಸಿದ್ದ 49 ಯುವ ಬರಹಗಾರರ ಮೊದಲ ಕೃತಿಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, 'ಹೊಸ ಬರಹಗಾರರು ಏನೇ ಬರೆದರೂ ಅದನ್ನು ಜಾಲತಾಣದಲ್ಲಿ ಮೊದಲು ಹಾಕುವ ಹವ್ಯಾಸ ಹೊಂದಿದ್ದಾರೆ. ಆದರೆ, ಒಬ್ಬ ಲೇಖಕನ ಮೊದಲ ಬರಹ ಪುಸ್ತಕ ರೂಪದಲ್ಲಿ ಬಂದಾಗ ಸಿಗುವ ಸಂತೋಷ ಬೇರೆಯದ್ದೇ ಆಗಿರುತ್ತದೆ. ಆದ್ದರಿಂದ ಪುಸ್ತಕ ಬರೆಯುವ, ಪುಸ್ತಕ ಓದುವ ಹವ್ಯಾಸವನ್ನು ಯುವಪೀಳಿಗೆ ರೂಢಿಸಿಕೊಳ್ಳಬೇಕು' ಎಂದರು.

'ಕಥೆ ಬರೆಯುವ, ತಲ್ಲಣ ಸೃಷ್ಟಿಸುವ ಅನುಭವಗಳೇ ಒಬ್ಬ ಲೇಖಕನ ಮನೋಧರ್ಮವನ್ನು ರೂಪಿಸುತ್ತವೆ. ಕನ್ನಡ ಸಾಹಿತ್ಯ ಲೋಕ ಅತ್ಯಂತ ಸಮೃದ್ಧವಾದದ್ದು. ಅದನ್ನು ಓದಿದಾಗ ಮಾತ್ರವೇ ಅಲ್ಲಿನ ಅನುಭವಗಳನ್ನು ಗ್ರಹಿಸಲು ಸಾಧ್ಯ. ಹಾಗಾಗಿ ಪುಸ್ತಕ ಲೋಕ ಕಟ್ಟಿಕೊಡಬಲ್ಲ ಅನುಭವ ಬೇರೆ ಯಾವುದೇ ಮಾಧ್ಯಮ ನೀಡಲು ಸಾಧ್ಯವಿಲ್ಲ' ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾತನಾಡಿ, ಪುಸ್ತಕ ಪ್ರಾಧಿಕಾರ ನಿರಂತರವಾಗಿ ಯುವ ಲೇಖಕರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ ಎಂದರು.

ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಪ್ರಾಸ್ತಾವಿಕವಾಗಿ ಮಾತನಾಡಿ, 'ಪ್ರಾಧಿಕಾರಕ್ಕೆ ಒಟ್ಟು 156 ಹಸ್ತಪ್ರತಿಗಳು ಬಂದಿದ್ದವು. ಅದರಲ್ಲಿ 51 ಹಸ್ತಪ್ರತಿಗಳನ್ನು ಪ್ರೋತ್ಸಾಹಧನಕ್ಕಾಗಿ ಆಯ್ಕೆ ಮಾಡಲಾಯಿತು. ಇಬ್ಬರು ಪುಸ್ತಕಗಳನ್ನು ಸಲ್ಲಿಸದ ಕಾರಣ, 49 ಯುವ ಬರಹಗಾರರ ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತಿದೆ' ಎಂದರು.

ಸಾಹಿತಿ ಸತೀಶ್ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ ಉಪಸ್ಥಿತರಿದ್ದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವಾರ್ಡ್‌ವಾರು ಮೀಸಲಾತಿ

ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಮೀಸಲಾತಿ
ಕೆ.ಆರ್. ಪುರ ವಿಧಾನಸಭಾ ಕ್ಷೇತ್ರ		
ವಾರ್ಡ್ 1	ಕೆ. ನಾರಾಯಣಪುರ	ಸಾಮಾನ್ಯ (ಮಹಿಳೆ)
ವಾರ್ಡ್ 2	ಹೊರಮಾವು	ಹಿಂದುಳಿದ ವರ್ಗ ಎ
ವಾರ್ಡ್ 3	ಚೆಲ್ಲಕೆರೆ	ಸಾಮಾನ್ಯ
ವಾರ್ಡ್ 4	ಬಾಬುಸಾಬ್ ಪಾಳ್ಯ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 5	ಹೊಯ್ಸಳ ನಗರ ಪೂರ್ವ	ಸಾಮಾನ್ಯ (ಮಹಿಳೆ)
ವಾರ್ಡ್ 6	ಕಲ್ಕೆರೆ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 7	ಕೆ. ಚನ್ನಸಂದ್ರ	ಪರಿಶಿಷ್ಟ ಪಂಗಡ
ವಾರ್ಡ್ 8	ಆನಂದಪುರ	ಸಾಮಾನ್ಯ
ವಾರ್ಡ್ 9	ಭಟ್ಟರಹಳ್ಳಿ	ಸಾಮಾನ್ಯ
ವಾರ್ಡ್ 10	ಬಸವನಪುರ	ಹಿಂದುಳಿದ ವರ್ಗ ಬಿ
ವಾರ್ಡ್ 11	ಕೃಷ್ಣನಗರ	ಸಾಮಾನ್ಯ
ವಾರ್ಡ್ 12	ದೇವಸಂದ್ರ	ಸಾಮಾನ್ಯ
ವಾರ್ಡ್ 13	ರಾಜರಾಜೇಶ್ವರಿ ದೇವಸ್ಥಾನ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 14	ಕೆ.ಆರ್. ಪುರ	ಹಿಂದುಳಿದ ವರ್ಗ ಎ
ವಾರ್ಡ್ 15	ರಾಮಮೂರ್ತಿ ನಗರ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 16	ಕೊತ್ತನೂರು	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 17	ವಿಜಿನಾಪುರ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 18	ದೂರವಾಣಿನಗರ	ಸಾಮಾನ್ಯ
ವಾರ್ಡ್ 19	ಕೆ.ಎಸ್. ನಿಸಾರ್ ಅಹಮದ್ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 20	ಎ. ನಾರಾಯಣಪುರ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 21	ಉದಯ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 22	ಮಹದೇವಪುರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 23	ಸಂಗಮ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 24	ವಿಜ್ಞಾನನಗರ	ಸಾಮಾನ್ಯ
ವಾರ್ಡ್ 25	ಎಲ್.ಬಿ. ಶಾಸ್ತ್ರಿ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 26	ಜಗದೀಶ್ ನಗರ	ಪರಿಶಿಷ್ಟ ಜಾತಿ
ವಾರ್ಡ್ 27	ವಿಭೂತಿಪುರ	ಸಾಮಾನ್ಯ (ಮಹಿಳೆ)
ಮಹದೇವಪುರ ವಿಧಾನಸಭಾ ಕ್ಷೇತ್ರ		
ವಾರ್ಡ್ 28	ಬೈರತಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 29	ಹೂಡಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 30	ಬೆಳತೂರು	ಪರಿಶಿಷ್ಟ ಜಾತಿ
ವಾರ್ಡ್ 31	ಕಾಡುಗೋಡಿ	ಸಾಮಾನ್ಯ
ವಾರ್ಡ್ 32	ಚನ್ನಸಂದ್ರ	ಸಾಮಾನ್ಯ
ವಾರ್ಡ್ 33	ಎಸ್.ಎಂ. ಕೃಷ್ಣ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 34	ಕಾವೇರಿ ನಗರ	ಪರಿಶಿಷ್ಟ ಜಾತಿ
ವಾರ್ಡ್ 35	ಗರುಡಾಚಾರ್ ಪಾಳ್ಯ	ಹಿಂದುಳಿದ ವರ್ಗ ಬಿ
ವಾರ್ಡ್ 36	ಭಾರತ ಐಕ್ಯ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 37	ಕುಂದಲಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 38	ವೈಟ್‌ಫೀಲ್ಡ್	ಹಿಂದುಳಿದ ವರ್ಗ ಎ
ವಾರ್ಡ್ 39	ಹಗದೂರು	ಸಾಮಾನ್ಯ (ಮಹಿಳೆ)
ವಾರ್ಡ್ 40	ವರ್ತೂರು	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 41	ಮುನ್ನೇನಕೊಳಲು	ಸಾಮಾನ್ಯ
ವಾರ್ಡ್ 42	ಪ್ರಿಯದರ್ಶಿನಿ ವಾರ್ಡ್	ಸಾಮಾನ್ಯ
ವಾರ್ಡ್ 43	ದೊಡ್ಡನೆಕ್ಕುಂದಿ	ಸಾಮಾನ್ಯ (ಮಹಿಳೆ)
ವಾರ್ಡ್ 44	ಅಶ್ವತ್ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 45	ಮಾರತ್‌ಹಳ್ಳಿ	ಸಾಮಾನ್ಯ
ವಾರ್ಡ್ 46	ಯಮಲೂರು	ಸಾಮಾನ್ಯ (ಮಹಿಳೆ)
ವಾರ್ಡ್ 47	ಬೆಳ್ಳಂದೂರು	ಸಾಮಾನ್ಯ
ವಾರ್ಡ್ 48	ಪಣತ್ತೂರು	ಪರಿಶಿಷ್ಟ ಜಾತಿ
ವಾರ್ಡ್ 49	ದೊಡ್ಡಕನ್ನಹಳ್ಳಿ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 50	ಗುಂಜೂರು	ಹಿಂದುಳಿದ ವರ್ಗ ಎ

ಪಾಲಿಕೆಗಳಿಗೆ ₹57 ಸಾವಿರ ಕೋಟಿ ಕೊರತೆ

ಸೇವಾಮಟ್ಟದ ಕೊರತೆ ನಿವಾರಿಸಲು ಮುಂದಿನ ಐದು ವರ್ಷಗಳಿಗೆ ನಿಧಿ ಅಗತ್ಯ: 5ನೇ ರಾಜ್ಯ ಹಣಕಾಸು ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವಾಮಟ್ಟದ ಕೊರತೆಯನ್ನು ನಿವಾರಿಸಿ, ಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸಬೇಕಿರುವ ಐದು ನಗರ ಪಾಲಿಕೆಗಳಿಗೆ, ಮುಂದಿನ ನಾಲ್ಕರಿಂದ ಐದು ವರ್ಷಗಳವರೆಗೆ ₹57 ಸಾವಿರ ಕೋಟಿ ಕೊರತೆಯಾಗಲಿದೆ.

ನಗರ ಪಾಲಿಕೆಗಳಲ್ಲಿ ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್ ಸೇರಿದಂತೆ ಬೃಹತ್ ಯೋಜನೆಗಳಿಗೆ ₹55,586 ಕೋಟಿ ಅಗತ್ಯವಿದೆ. 16ನೇ ಹಣಕಾಸು ಆಯೋಗವು ನಿರ್ದಿಷ್ಟ ಅನುದಾನವನ್ನು ಹಂಚಿಕೆ ಮಾಡದ್ದರಿಂದ, ನಗರ ಪಾಲಿಕೆಗಳು ತಮ್ಮದೇ ಸಂಪನ್ಮೂಲಗಳನ್ನು ಕಂಡುಕೊಳ್ಳಬೇಕಿದೆ. 2026–27ರಿಂದ 2030–31ರವರೆಗೆ ರಾಜಸ್ವ ಮತ್ತು ವೆಚ್ಚದ ಅಂದಾಜುಗಳು ₹57 ಸಾವಿರ ಕೋಟಿ ಕೊರತೆ ಸೂಚಿಸುತ್ತವೆ ಎಂದು 5ನೇ ರಾಜ್ಯ ಹಣಕಾಸು ಆಯೋಗದ ಜಿಬಿಎ ಪ್ರದೇಶದ 5 ನಗರ ಪಾಲಿಕೆಗಳ ಕುರಿತ ವರದಿಯಲ್ಲಿ ತಿಳಿಸಿದೆ. ಈ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ನಗರ ಪಾಲಿಕೆಗಳಿಗೆ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ನಿರ್ದಿಷ್ಟ ಕಾಮಗಾರಿಗಳನ್ನು ಕೈಗೊಳ್ಳಲು ವೇತನ ಪಾವತಿ ಹೊರತುಪಡಿಸಿ ಕನಿಷ್ಠ ಶೇ 40ರಷ್ಟು ಅನುದಾನ ನೀಡಬೇಕು. ಇದರಿಂದ ನಗರ ಪಾಲಿಕೆಗಳು ಸ್ಥಳೀಯ ಅಗತ್ಯಗಳಿಗೆ ಹಣ ಬಳಸುವ ಸ್ವಾತಂತ್ರ್ಯ ಹೊಂದುತ್ತವೆ. 16ನೇ ಹಣಕಾಸು ಆಯೋಗವೂ ಮೂಲ ಅನುದಾನದಲ್ಲಿ ಶೇ 40ರಷ್ಟನ್ನು ಅನಿರ್ಬಂಧಿತ ಅನುದಾನವಾಗಿ ನೀಡಲು ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ.

ಹೊಸದಾಗಿ ರಚಿಸಲಾಗಿರುವ ವಾರ್ಡ್‌ಗಳಿಗೆ ಕಚೇರಿ ಸ್ಥಾಪನೆ ಮತ್ತು ಇತರೆ ಅಗತ್ಯ ಅವಶ್ಯಗಳಿಗೆ ಒಂದು ಬಾರಿಯ ಸ್ಥಾಪನಾ ವೆಚ್ಚದ ಅನುದಾನವನ್ನು ಸರ್ಕಾರ ನೀಡಬೇಕು. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ, ಐದು ನಗರ ಪಾಲಿಕೆಗಳಿಗೆ ಅನುದಾನ ನೀಡಲು ಶಿಫಾರಸು ಮಾಡಲಾಗಿದೆ.

ಸಿಎಸ್‌ಆರ್ ನಿಧಿ: ಬೆಂಗಳೂರು ನಗರ 2021–22ರಲ್ಲಿ ಅತಿಹೆಚ್ಚು ₹1,074.13 ಕೋಟಿಯನ್ನು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿಯನ್ನಾಗಿ (ಸಿಎಸ್‌ಆರ್) ಪಡೆದುಕೊಂಡಿದೆ. ಅಗತ್ಯವಿರುವ ಯೋಜನೆಗಳಿಗೆ ಸಿಎಸ್‌ಆರ್ ಹರಿವನ್ನು ಕಾರ್ಯಗತಗೊಳಿಸಲು, ಪ್ರತಿಯೊಂದು ನಗರ ಪಾಲಿಕೆಯಲ್ಲೂ ಸಿಎಸ್‌ಆರ್ ಕೋಶ ಅಭಿವೃದ್ಧಿಪಡಿಸಿ, ಆ ಮೂಲಕ ನಿಧಿಯನ್ನು ಬಳಸಿಕೊಳ್ಳಬೇಕು. ಅಲ್ಲದೆ, ಹವಾಮಾನ ಯೋಜನೆಗಳಿಗೆ ವಿಶ್ವಸಂಸ್ಥೆ ಹಾಗೂ ರಾಷ್ಟ್ರೀಯ– ಅಂತರರಾಷ್ಟ್ರೀಯ ನಿಧಿ ಬಳಸಿಕೊಳ್ಳಲು ಹವಾಮಾನ ಕ್ರಿಯಾಕೋಶದಲ್ಲಿ ಮೇಲ್ವಿಚಾರಣೆ– ಅನುಷ್ಠಾನ ಘಟಕ ಸ್ಥಾಪಿಸಬೇಕು ಎಂದು ಶಿಫಾರಸು ಮಾಡಿದೆ.

ಅನುದಾನದ ಮೇಲೆ ಹೆಚ್ಚು ಅವಲಂಬಿತ

ಐದು ನಗರ ಪಾಲಿಕೆಗಳು ವಿಭಿನ್ನ ಅಭಿವೃದ್ಧಿ ನೆಲೆ ಮತ್ತು ಸಾಮರ್ಥ್ಯ ಹೊಂದಿದ್ದು, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಕಲ್ಯಾಣದ ಬಗ್ಗೆ ಹೆಚ್ಚು ಕಳಕಳಿ ಹೊಂದಿವೆ. ಉತ್ತರ, ಕೇಂದ್ರ ಮತ್ತು ಪಶ್ಚಿಮ ನಗರ ಪಾಲಿಕೆಗಳು ಅನೌಪಚಾರಿಕ ವಸತಿ ಪ್ರದೇಶಗಳು, ಜನನಿಬಿಡ ಪ್ರದೇಶಗಳಿಗೆ ಮೂಲ ಸೇವೆಗಳನ್ನು ಒದಗಿಸಬೇಕಿದೆ. ಪಶ್ಚಿಮ ನಗರ ಪಾಲಿಕೆಯು ಕಡಿಮೆ ಸಂಪನ್ಮೂಲ ಸಾಮರ್ಥ್ಯ ಹೊಂದಿದ್ದು, ಸಂಪನ್ಮೂಲ ಕೊರತೆ ಎದುರಿಸುತ್ತಿದೆ. ದಕ್ಷಿಣ ನಗರ ಪಾಲಿಕೆಯು 'ಒತ್ತಡದ ನಗರ' ನಿರ್ವಹಣೆಯೊಂದಿಗೆ ವಿಸ್ತಾರವಾಗುತ್ತಿದೆ. ಪೂರ್ವ ನಗರ ಪಾಲಿಕೆ ಸಮೃದ್ಧಿ ಹೊಂದಿರುವ ಆರ್ಥಿಕತೆಯನ್ನು ಹೊಂದುತ್ತಿದ್ದರೂ, ಅದರ ಸುಸ್ಥಿರತೆಗೆ ಪರಿಣಾಮಕಾರಿ ಸಂಪನ್ಮೂಲದ ನಿರ್ವಹಣೆಯ ಅಗತ್ಯವಿದೆ. ಆದ್ದರಿಂದ, ನಗರ ಪಾಲಿಕೆಗಳು ಬಾಹ್ಯ ಹಣಕಾಸಿನ ಮೂಲಗಳ ಮೇಲೆ, ಮುಖ್ಯವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದ ಮೇಲೆ ಹೆಚ್ಚು ಅವಲಂಬಿತವಾಗಿವೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಐದು ನಗರ ಪಾಲಿಕೆಗಳ ನಡುವೆ ಜನಸಂಖ್ಯೆ, ಆರ್ಥಿಕ ಅಸಮತೋಲನವಿದೆ. ಪಶ್ಚಿಮ ನಗರ ಪಾಲಿಕೆ ವಿಸ್ತೀರ್ಣದಲ್ಲಿ ದೊಡ್ಡದಾಗಿದ್ದರೆ, ಆರ್ಥಿಕವಾಗಿ ದುರ್ಬಲವಾಗಿದೆ. ಹೀಗಾಗಿ, ಈ ಪಾಲಿಕೆಗೆ ಮೂಲಸೌಕರ್ಯ ಅಭಿವೃದ್ಧಿ ಅನುದಾನವನ್ನು ರಾಜ್ಯ ಸರ್ಕಾರ ಒದಗಿಸಬೇಕು. ಉತ್ತರ ನಗರ ಪಾಲಿಕೆ ಆರ್ಥಿಕವಾಗಿ ದುರ್ಬಲವಾಗಿದ್ದು, ಸರ್ಕಾರದ ಹಣಕಾಸಿನ ನೆರವು ಅಗತ್ಯವಾಗಿದೆ ಎಂದು ಹೇಳಿದೆ.

ಎಷ್ಟು ಅನುದಾನಕ್ಕೆ ಶಿಫಾರಸು?

ಶೇ 10ರಷ್ಟು	ಎಲ್ಲ ನಗರ ಪಾಲಿಕೆಗಳಿಗೆ ಬಂಡವಾಳ ವೆಚ್ಚದ ನಿರ್ವಹಣಾ ಅನುದಾನ
₹50 ಕೋಟಿ	ಪ್ರತಿ ನಗರ ಪಾಲಿಕೆಗೆ ಕಾರ್ಯಕ್ಷಮತೆ ಅನುದಾನ
₹5 ಕೋಟಿ	ಪ್ರತಿ ವಾರ್ಡ್‌ಗೆ ಕಾರ್ಯಕ್ಷಮತೆ ಅನುದಾನ
₹2 ಕೋಟಿ	ಪ್ರತಿ ಹೊಸ ವಾರ್ಡ್‌ಗೆ ಒಂದು ಬಾರಿಯ ಸ್ಥಾಪನಾ ಅನುದಾನ
₹1 ಕೋಟಿ	ಸೌಲಭ್ಯವಿಲ್ಲದೆ ಅಸ್ತಿತ್ವದಲ್ಲಿರುವ ಪ್ರತಿ ವಾರ್ಡ್‌ಗೆ ಸ್ಥಾಪನಾ ಅನುದಾನ
₹5 ಕೋಟಿ	ಪ್ರತಿ ನಗರ ಪಾಲಿಕೆಗೆ ಸಾಮರ್ಥ್ಯ ಅಭಿವೃದ್ಧಿ ಅನುದಾನ

ಮುದ್ರಾಂಕ ಶುಲ್ಕದ ಸರ್‌ಚಾರ್ಜ್ ಪಾಲಿಕೆಗಳಿಗೆ ಪಾವತಿಸಿ

ಮುದ್ರಾಂಕ ಶುಲ್ಕದ (ಸ್ಟ್ಯಾಂಪ್ ಡ್ಯೂಟಿ) ಸರ್‌ಚಾರ್ಜ್ ಅನ್ನು 2020ರ ಜನವರಿ 29ರಿಂದ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು ಬಿಡುಗಡೆ ಮಾಡಿಲ್ಲ. ಬಾಕಿ ಉಳಿದಿರುವ ಸರ್‌ಚಾರ್ಜ್ ಅನ್ನು ಐದು ನಗರ ಪಾಲಿಕೆಗಳಿಗೆ ಬಿಡುಗಡೆ ಮಾಡಬೇಕು. ಭವಿಷ್ಯದಲ್ಲಿ ನಿಯಮಿತವಾಗಿ ಸರ್‌ಚಾರ್ಜ್ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು 5ನೇ ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ.

2006–07ರಿಂದ 2018–19ರವರೆಗೆ ವಸೂಲಾದ ಮುದ್ರಾಂಕ ಶುಲ್ಕದ ಮೇಲಿನ ಸರ್‌ಚಾರ್ಜ್ ಮೊತ್ತಕ್ಕೆ ಹೆಚ್ಚುವರಿಯಾಗಿ ₹239.84 ಕೋಟಿಯನ್ನು ಬಿಬಿಎಂಪಿಗೆ ಬಿಡುಗಡೆ ಮಾಡಲಾಗಿತ್ತು. ಅದಾದ ನಂತರ ಯಾವುದೇ ಮೊತ್ತ ಬಿಡುಗಡೆ ಆಗಿಲ್ಲ. ಹಿಂದಿನ ಬಿಬಿಎಂಪಿಗೆ ಬಿಡುಗಡೆಯಾಗದ ಸರ್‌ಚಾರ್ಜ್ ಮೊತ್ತವನ್ನು ಐದು ನಗರ ಪಾಲಿಕೆಗಳಿಗೆ ಬಿಡುಗಡೆ ಮಾಡಬೇಕೆಂದು ಶಿಫಾರಸು ಮಾಡಲಾಗಿದೆ.

ಜಿಎಸ್‌ಟಿ: ಶೇ 5ರಷ್ಟು ಪಾಲಿಕೆಗಳ ಪಾಲು

ರಾಜ್ಯದ ಜಿಎಸ್‌ಟಿ ಸಂಗ್ರಹದಲ್ಲಿ ಶೇ 60ರಷ್ಟು ಬೆಂಗಳೂರು ಪ್ರದೇಶದಿಂದಲೇ ಬರುತ್ತದೆ. ಇದಕ್ಕೆ ಕೊಡುಗೆ ನೀಡಿದ ಐದು ನಗರ ಪಾಲಿಕೆಗಳ ಸಂಪನ್ಮೂಲ ಕೊರತೆಯನ್ನು ನೀಗಿಸಲು ರಾಜ್ಯದಲ್ಲಿ ಸಂಗ್ರಹವಾಗುವ ಜಿಎಸ್‌ಟಿಯಲ್ಲಿ ಶೇ 5ರಷ್ಟನ್ನು ಅವುಗಳಿಗೆ ನೀಡಬೇಕು ಎಂದು ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ. ನಗರ ಪಾಲಿಕೆಗಳ ಸ್ವಂತ ಸಂಪನ್ಮೂಲ ರಾಜಸ್ವವನ್ನು ಹೆಚ್ಚಿಸಲು ನೂತನ ಕ್ರಮಗಳನ್ನು ಸೂಚಿಸಿರುವ ಆಯೋಗ, ಆಸ್ತಿ ತೆರಿಗೆ ಸುಧಾರಣೆ, ತೆರಿಗೆಯೇತರ ರಾಜಸ್ವದ ಮೂಲಗಳ ಬಳಕೆ, ಜಾಹೀರಾತು ಶುಲ್ಕ, ಮನರಂಜನಾ ಶುಲ್ಕ, ದಟ್ಟಣೆ ಶುಲ್ಕ ಸಂಗ್ರಹಿಸುವ ಜೊತೆಗೆ, ಮುನಿಸಿಪಲ್ ಬಾಂಡ್ ಮೂಲಕ ಹಣ ಸಂಗ್ರಹ, ಸಿಎಸ್‌ಆರ್ ನಿಧಿಗಳನ್ನು ಸಂಪನ್ಮೂಲ ನೆಲೆಯಾಗಿ ವಿಸ್ತರಿಸಿಕೊಳ್ಳಲು ಸಲಹೆ ನೀಡಿದೆ. ಅಲ್ಲದೆ, ಕೇಂದ್ರ ಬಜೆಟ್‌ನ ಪ್ಯಾರಾ 46ರಂತೆ, ಐದು ನಗರ ಪಾಲಿಕೆಗಳು ಹಸಿರು ಬಾಂಡ್‌ಗಳನ್ನೂ ವಿತರಿಸಬಹುದು.

ಜಿಬಿಎಗೆ ಅನುದಾನ

₹15 ಕೋಟಿಯನ್ನು ಮಾಸ್ಟರ್ ಪ್ಲಾನ್ ಸಿದ್ಧಪಡಿಸಲು ನೀಡಬೇಕು

₹22.95 ಕೋಟಿಯನ್ನು ಯೋಜನಾ ಬೆಂಬಲ, ಸಂಯೋಜಿತ ನಿಯಂತ್ರಣ ಕೇಂದ್ರ ನಿರ್ವಹಣೆಗೆ ಕೊಡಬೇಕು

₹35.06 ಕೋಟಿಯನ್ನು 369 ವಾರ್ಡ್‌ಗಳಲ್ಲಿ ವಾರ್ಡ್‌ಮಟ್ಟದ ಮಾಹಿತಿ ತಂತ್ರಜ್ಞಾನ ಆಧರಿತ ಸೇವೆಗಳಿಗೆ ನೀಡಬೇಕು

ಚುನಾವಣೆ ನಡೆಸದ್ದರಿಂದ ಅನುದಾನ ಇಲ್ಲ

ಬಿಬಿಎಂಪಿಗೆ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆಯದ ಕಾರಣ 16ನೇ ಹಣಕಾಸು ಆಯೋಗದಿಂದ ಬಿಬಿಎಂಪಿಗೆ ₹2,029.57 ಕೋಟಿ ಅನುದಾನ ಬಂದಿಲ್ಲ ಎಂದು 5ನೇ ರಾಜ್ಯ ಹಣಕಾಸು ಆಯೋಗ ಹೇಳಿದೆ.

ಘನತ್ಯಾಜ್ಯ ನಿರ್ವಹಣೆಗೆ ₹1,245 ಕೋಟಿ, ಸುತ್ತುವರಿದ ಗಾಳಿಯ ಗುಣಮಟ್ಟಕ್ಕೆ ₹511.90 ಕೋಟಿ ಹಾಗೂ ಆರೋಗ್ಯ ವಲಯಕ್ಕೆ ₹94.29 ಕೋಟಿ, ನೈಸರ್ಗಿಕ ವಿಕೋಪ ನಿರ್ವಹಣೆಗೆ ₹272.67 ಕೋಟಿ ಅನುದಾನ ಬಿಡುಗಡೆ ಆಗಿಲ್ಲ.

ವೇತನ ನೀಡದ ಪಶ್ಚಿಮ ನಗರ ಪಾಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಸಂಗ್ರಹ ಸೇರಿದಂತೆ ಸಂಪನ್ಮೂಲ ಕ್ರೋಢೀಕರಣದಲ್ಲಿ ಅತಿ ಹಿಂದುಳಿದಿರುವ, ಅತಿದೊಡ್ಡ ನಗರ ಪಾಲಿಕೆ ಎಂಬ ಹೆಗ್ಗಳಿಕೆ ಹೊಂದಿರುವ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ತನ್ನ ಸಿಬ್ಬಂದಿಗೆ ಫೆಬ್ರುವರಿಯ ವೇತನವನ್ನು ಪಾವತಿಸಿಲ್ಲ.

ಫೆಬ್ರುವರಿಯ ವೇತನ ತಿಂಗಳ ಅಂತ್ಯ ಅಥವಾ ಮಾರ್ಚ್ 1ಕ್ಕೆ ಪಾವತಿ ಆಗಬೇಕಿತ್ತು. ಆದರೆ, 10 ಕಳೆದರೂ ವೇತನ ಪಾವತಿ ಮಾಡಿಲ್ಲ. ಬಜೆಟ್ ತಯಾರಿಯಲ್ಲಿರುವ ಪಶ್ಚಿಮ ನಗರ ಪಾಲಿಕೆ, ಸಿಬ್ಬಂದಿ ವೇತನ ನೀಡಲು ಸಾಧ್ಯವಿಲ್ಲದಷ್ಟು ಆರ್ಥಿಕ ಸಂಕಷ್ಟ ಎದುರಾಗಿದೆ. ಆಸ್ತಿ ತೆರಿಗೆ ಸಂಗ್ರಹದಲ್ಲಿ ಶೇ 59ರಷ್ಟು ಮಾತ್ರ ಸಾಧನೆ ಮಾಡಿರುವ ಪಶ್ಚಿಮ ನಗರ ಪಾಲಿಕೆಗೆ, ಅಗತ್ಯಕ್ಕನುಸಾರವಾಗಿ ಸಂಪನ್ಮೂಲವಿಲ್ಲ. ಹೀಗಾಗಿ, ಇತರೆ ನಗರ ಪಾಲಿಕೆಗಳಿಗೆ ಹೋಲಿಸಿದರೆ ಈ ಪಾಲಿಕೆ ವ್ಯಾಪ್ತಿಯಲ್ಲಿ ಹೊಸ ಕಾಮಗಾರಿಗಳಿಗೂ ಚಾಲನೆ ಸಿಕ್ಕಿಲ್ಲ. ಪಾಲಿಕೆಯ ಆರ್ಥಿಕ ಸಂಕಷ್ಟ ಇದೀಗ, ಸಿಬ್ಬಂದಿಯ ವೇತನ ಪಾವತಿಸಲಾಗದ ಮಟ್ಟಕ್ಕೆ ಬಂದು ತಲುಪಿದೆ.

ಕಾರ್ಯ ಸ್ಥಗಿತ: 'ಪಶ್ಚಿಮ ನಗರ ಪಾಲಿಕೆಯ ಸಿಬ್ಬಂದಿಗೆ ಫೆಬ್ರುವರಿ ವೇತನವನ್ನು ಮಾರ್ಚ್ 11ರೊಳಗೆ ಪಾವತಿಸದಿದ್ದರೆ, ಎಲ್ಲ ಕೆಲಸಗಳನ್ನು ಸ್ಥಗಿತ ಮಾಡಲಾಗುವುದು' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ– ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಎಚ್ಚರಿಸಿದೆ.

'ಮಾರ್ಚ್ 10 ಆದರೂ ಫೆಬ್ರುವರಿ ವೇತನ ಪಾವತಿಸಿಲ್ಲ. ಮನೆ ಬಾಡಿಗೆ, ಮಕ್ಕಳ ಶಾಲಾ ಶುಲ್ಕ ಮತ್ತು ನಿತ್ಯದ ಆಹಾರ ಸಾಮಗ್ರಿಗಳನ್ನು ಖರೀದಿಸಲು ತುಂಬಾ ಕಷ್ಟವಾಗಿದೆ ಎಂದು ಪಶ್ಚಿಮ ನಗರ ಪಾಲಿಕೆಯ ಅಧಿಕಾರಿ– ನೌಕರರು ನಮ್ಮ ಸಂಘದ ಪದಾಧಿಕಾರಿಗಳಿಗೆ ಹೇಳಿಕೊಂಡಿದ್ದಾರೆ. ಹೀಗಾಗಿ, ಅವರ ವೇತನವನ್ನು ಕೂಡಲೇ ಪಾವತಿಸದಿದ್ದರೆ ಎಲ್ಲ ಕೆಲಸವನ್ನೂ ನಿಲ್ಲಿಸಲಾಗುತ್ತದೆ' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

'ಬುಧವಾರ ಬೆಳಿಗ್ಗೆ ಪಾವತಿ'

'ಆಸ್ತಿ ತೆರಿಗೆ ಸಂಗ್ರಹ ಸೇರಿ ಬ್ಯಾಂಕ್ ಖಾತೆಯಲ್ಲಿ ಕೆಲವು ಸಮಸ್ಯೆಗಳಿದ್ದವು. ಹೀಗಾಗಿ, ವೇತನ ಪಾವತಿ ತಡವಾಗಿದೆ. ಮಂಗಳವಾರ ಸಂಜೆ ಎಲ್ಲ ಮಾಹಿತಿಯನ್ನು ಬ್ಯಾಂಕ್‌ಗೆ ಕಳುಹಿಸಲಾಗಿದ್ದು, ಬುಧವಾರ ಬೆಳಿಗ್ಗೆಯೇ ವೇತನ ಪಾವತಿ ಆಗುತ್ತದೆ' ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಕೆ.ವಿ. ರಾಜೇಂದ್ರ ತಿಳಿಸಿದರು.

ಕೊಪ್ಪಳ: ಮಹಿಳೆ ಮೇಲೆ ನಿರ್ವಾಹಕ ಹಲ್ಲೆ

ಕೊಪ್ಪಳ: ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಮೇಲೆ ನಿರ್ವಾಹಕ ಟಿಕೆಟ್ ನೀಡುವ ಯಂತ್ರದಿಂದ ಹಲ್ಲೆ ಮಾಡಿದ್ದು ಮಹಿಳೆಗೆ ಗಾಯಗಳಾಗಿವೆ.

ತಾಲ್ಲೂಕಿನ ಬೆಟಗೇರಿ ಗ್ರಾಮದ ಮಲ್ಲಮ್ಮ ಗಾಯಗೊಂಡಿದ್ದು ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಘಟನೆ ಕುರಿತು ವರದಿ ನೀಡುವಂತೆ ಸೂಚಿಸಲಾಗಿದೆ' ಎಂದು ಕೊಪ್ಪಳ ವಿಭಾಗೀಯ ನಿಯಂತ್ರಣಾಧಿಕಾರಿ ಜಿ.ಶೀನಯ್ಯ ತಿಳಿಸಿದರು.



ಕೋಣನಕುಂಟೆ ಕ್ರಾಸ್‌ನ 'ನಮ್ಮ ಮೆಟ್ರೊ' ನಿಲ್ದಾಣದ ಬಳಿ ಸಾಯಿ ಸಿಲ್ಕ್ಸ್ ಗ್ರೂಪ್‌ನ (ಸಾಂಪ್ರದಾಯಿಕ ಉಡುಗೆಗಳ ಹಾಗೂ ಸೀರೆಗಳ ಮಾರಾಟ ವಲಯದ ಪ್ರಮುಖ ಕಂಪನಿ) 'ಕಳಾಮಂದಿರ್' ಶೋರೂಂ ಅನ್ನು ನಟ, ನಿರ್ದೇಶಕ ಉಪೇಂದ್ರ ಹಾಗೂ ಪ್ರಿಯಾಂಕಾ ಉಪೇಂದ್ರ ಅವರು ಸೋಮವಾರ ಉದ್ಘಾಟಿಸಿದರು. ಗ್ರೂಪ್‌ನ ನಿರ್ದೇಶಕ 'ಕಳಾಮಂದಿರ್' ಕಲ್ಯಾಣ್ ಉಪಸ್ಥಿತರಿದ್ದರು

'ಡಾಂಬರೀಕರಣ: ಆರ್‌ಡಿಎಫ್ ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಉತ್ಪತ್ತಿಯಾಗುವ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್ (ಆರ್‌ಡಿಎಫ್) ಅನ್ನು ರಸ್ತೆ ಡಾಂಬರೀಕರಣಕ್ಕೆ ಬಳಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸ್ವಚ್ಛ ಸರ್ವೇಕ್ಷಣಾ 2025-26ರ ಅಂಗವಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಅಂಜನಾಪುರ ವಾರ್ಡ್ ವ್ಯಾಪ್ತಿಯ ಪೌರಕಾರ್ಮಿಕರ ಮಸ್ಟರಿಂಗ್ ಕೇಂದ್ರಕ್ಕೆ ಮಂಗಳವಾರ ಭೇಟಿ ನೀಡಿ 'ಪೌರಕಾರ್ಮಿಕರೊಂದಿಗೆ ಸಂವಾದ' ನಡೆಸಿದ ಬಳಿಕ ಅವರು ಮಾತನಾಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಈಗಾಗಲೇ ಪ್ರತಿದಿನ 520 ಮೆಟ್ರಿಕ್ ಟನ್ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್ (ಆರ್‌ಡಿಎಫ್) ಸಂಗ್ರಹಿಸಲಾಗುತ್ತಿದ್ದು, ಅದನ್ನು ಸಿಮೆಂಟ್ ತಯಾರಿಕಾ ಘಟಕಗಳಿಗೆ ಕಳುಹಿಸಿ ಅದರಿಂದ ಇಪಿಆರ್ ಕ್ರೆಡಿಟ್ ಪಡೆಯಲಾಗುತ್ತಿದೆ. ಇದೇ ಮಾದರಿಯಲ್ಲಿ ನಾಗರಿಕರಲ್ಲಿ ಮತ್ತಷ್ಟು ಜಾಗೃತಿ ಮೂಡಿಸಿ, ಮೂಲದಲ್ಲಿಯೇ ತ್ಯಾಜ್ಯವನ್ನು ವಿಂಗಡಿಸಿ ನೀಡುವ ಮೂಲಕ ಆರ್‌ಡಿಎಫ್ ಸಂಗ್ರಹವನ್ನು ಹೆಚ್ಚಿಸಬೇಕು. ಇದನ್ನು ರಸ್ತೆ ಡಾಂಬರೀಕರಣ ಕಾರ್ಯಗಳಲ್ಲಿ ಬಳಸಿಕೊಳ್ಳಬೇಕು ಎಂದರು.

'ಯಾವ ಸಮಯಕ್ಕೆ ಕೆಲಸಕ್ಕೆ ಬರುತ್ತೀರಿ, ಎಷ್ಟು ಸಮಯ ಕೆಲಸ ಮಾಡುತ್ತೀರಿ, ಹಾಜರಾತಿ ಹೇಗೆ ಹಾಕುತ್ತೀರಿ, ಸುರಕ್ಷತಾ ಪರಿಕರಗಳನ್ನು ಬಳಸುತ್ತೀರಾ' ಎಂಬ ವಿಷಯಗಳ ಬಗ್ಗೆ ಪೌರಕಾರ್ಮಿಕರಿಂದ ಮಹೇಶ್ವರ್ ರಾವ್ ಮಾಹಿತಿ ಪಡೆದರು.

ಜಿಬಿಎ ವ್ಯಾಪ್ತಿಯಲ್ಲಿ ಈಗಾಗಲೇ 190 ಸ್ಥಳಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳಿದ್ದು, ಪ್ರತಿಯೊಂದು ವಾರ್ಡ್‌ಗೆ ಒಂದರಂತೆ 369 ವಾರ್ಡ್‌ಗಳಲ್ಲಿಯೂ ಒಣ ತ್ಯಾಜ್ಯ ಸಂಗ್ರಹಣಾ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಯಾವ ವಾರ್ಡ್‌ಗಳಲ್ಲಿ ಘಟಕಗಳ ಅಗತ್ಯ ಇದೆ ಎಂಬುದನ್ನು ಪರಿಶೀಲಿಸಿ ಸ್ಥಳಗಳನ್ನು ಗುರುತಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಮಕ್ಕಳಿಗಾಗಿ ಇದೇ 29ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದೆ.

ಈ ಸ್ಪರ್ಧೆಯು 8 ವರ್ಷದ ಒಳಗಿನ ಮಕ್ಕಳಿಗೆ, 13 ವರ್ಷದ ಒಳಗಿನ ಹಾಗೂ 18ವರ್ಷದ ಒಳಗಿನವರಿಗೆ ಎಂದು ಮೂರು ವಿಭಾಗಗಳಲ್ಲಿ ನಡೆಯಲಿದೆ. ಭಾಗವಹಿಸುವ ಎಲ್ಲರಿಗೂ ನೋಟ್ ಪುಸ್ತಕ ಹಾಗೂ ಪ್ರಮಾಣಪತ್ರ ನೀಡಲಾಗುತ್ತದೆ.

ಪ್ರತಿ ವರ್ಗದಲ್ಲಿ ಮೂವರು ವಿಜೇತರಿಗೆ ಟ್ರೋಫಿ ಹಾಗೂ ಸರ್ಟಿಫಿಕೇಟ್ ನೀಡಲಾಗುತ್ತದೆ. ಅಲ್ಲದೆ, ಪ್ರತಿ ವರ್ಗದಲ್ಲೂ 10 ವಿಶೇಷ ಬಹುಮಾನ ಹಾಗೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ ಶಾಲಾತಂಡಗಳಿಗೆ ಬಹುಮಾನಗಳನ್ನು ನೀಡಲಾಗುವುದು. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ಸಂಪರ್ಕ ಸಂಖ್ಯೆ: 93806 71947.

ಇಂಧನ ಬಿಕ್ಕಟ್ಟು ಶಮನಕ್ಕೆ ಕೇಂದ್ರದ ಪ್ರಯತ್ನ ತೃಪ್ತಿದಾಯಕವೇ?

●ಹೌದು ●ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಜೈ ಮಹಾರಾಷ್ಟ್ರ ಘೋಷಣೆ: ದೂರು

ಬೆಳಗಾವಿ: ಟಿ–20 ವಿಶ್ವಕಪ್ ಅನ್ನು ಭಾರತ ತಂಡ ಗೆದ್ದ ಹಿನ್ನೆಲೆಯಲ್ಲಿ, ಇಲ್ಲಿನ ರಾಣಿ ಚನ್ನಮ್ಮನ ವೃತ್ತದಲ್ಲಿ ಭಾನುವಾರ ರಾತ್ರಿ ನಡೆದ ವಿಜಯೋತ್ಸವದಲ್ಲಿ 'ಜೈ ಮಹಾರಾಷ್ಟ್ರ' ಎಂದು ಘೋಷಣೆ ಕೂಗಿದ ಆರೋಪದಡಿ ಆರು ಮಂದಿ ವಿರುದ್ಧ ಖಡೇ ಬಜಾರ್ ಠಾಣೆಯಲ್ಲಿ ಸೋಮವಾರ ದೂರು ದಾಖಲಾಗಿದೆ.

ಘೋಷಣೆ ಕೂಗಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾಗರಾಜ ಲಕ್ಕಪ್ಪಗೋಳ ಅವರು ದೂರು ನೀಡಿದ್ದಾರೆ.

ನಗರದಲ್ಲಿ ಇಂದು

'ತೆಲುಗು ಕನ್ನಡ ಅನುವಾದ ಕಥಾ ಕಮ್ಮಟ' ಉದ್ಘಾಟನೆ: ಚನ್ನಪ್ಪ ಕಟ್ಟಿ, ಅತಿಥಿಗಳು: ಮಧುರಾಂತಕಂ ನರೇಂದ್ರ, ಡಿ.ಕೆ. ಚಿತ್ತಯ್ಯ ಪೂಜಾರ್, ಕೆ. ಶಾರದಾ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕಚೇರಿ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಕರ್ನಾಟಕ ಎಂ.ಎಸ್.ಎಂ.ಇ ನೀತಿ 2026 ರೂಪಿಸುವ ರಾಜ್ಯ ಮಟ್ಟದ ಸಮಾಲೋಚನಾ ಕಾರ್ಯಾಗಾರ: ಆಯೋಜನೆ ಮತ್ತು ಸ್ಥಳ: ಕಾಸಿಯಾ ಸಭಾಂಗಣ, ಮೂರನೇ ಮಹಡಿ, ಹೊಸಹಳ್ಳಿ ಮೆಟ್ರೊ ನಿಲ್ದಾಣದ ಹತ್ತಿರ, ವಿಜಯನಗರ, ಬೆಳಿಗ್ಗೆ 10:30

ನಲ್ಲೂರು ಚಲಪತಿ ಅವರ 'ಗೆಳೆತನ' ಮಕ್ಕಳ ಕಥೆ ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಸಿ.ಎನ್. ಗೋವಿಂದಪ್ಪ, ಅತಿಥಿಗಳು: ಎನ್. ನರಹರಿ, ಎಚ್. ರಿಯಾಜ್, ಪಿ.ಎಂ. ಕನ್ಯಾಗಪ್ಪ, ಆಯೋಜನೆ: ಇಂಚರ ಪ್ರಕಾಶನ, ಸ್ಥಳ: ಸರ್ಕಾರಿ ಪ್ರೌಢಶಾಲೆಯ ಆವರಣ, ಕಲ್ಕೆರೆ, ಕೆ.ಆರ್. ಪುರ, ಮಧ್ಯಾಹ್ನ 3.30

ಸಾಂಸ್ಕೃತಿಕ ಉತ್ಸವ, ದಿವ್ಯಚೇತನ ಪ್ರಶಸ್ತಿ, ಸಮಾಜ ಸೇವಾರತ್ನ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಂಜಯಕುಮಾರ ಸ್ವಾಮೀಜಿ, ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರಶಸ್ತಿ ಪ್ರದಾನ: ಸತೀಶ್ ಜಾರಕಿಹೊಳಿ, ಆಯೋಜನೆ: ದಿವ್ಯ ಚೇತನ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಸಾಧಕ ಮಹಿಳಾ ಉದ್ಯಮಿಗಳಿಗೆ ಪ್ರಶಸ್ತಿ ಪ್ರದಾನ

'ಮಹಿಳೆಯರಿಗೆ ಸಮಾನ ವೇತನ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರ ಕೆಲಸಕ್ಕೆ ಸಮಾನ ವೇತನ ಸಿಗುತ್ತಿಲ್ಲ. ಈ ತಾರತಮ್ಯ ಹೋಗಬೇಕು' ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಹೇಳಿದರು.

ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಮಹಿಳಾ ಕೃಷಿ ಉದ್ಯಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ವೇತನ ತಾರತಮ್ಯ ನಿವಾರಣೆ ಆಗಬೇಕು. ಉದಾಹರಣೆಗೆ, ಪುರುಷರಿಗೆ ₹100 ನೀಡಿದರೆ, ಮಹಿಳೆಯರಿಗೆ ₹88 ನೀಡಲಾಗುತ್ತಿದೆ. ಅದಕ್ಕಾಗಿ ಮಹಿಳೆಯರಿಗೆ ಕೌಶಲ ತರಬೇತಿ ನೀಡಬೇಕಿದೆ. ಮಹಿಳೆಯರು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಡಬೇಕು. ಸರ್ಕಾರ ಬಸ್‌ಗಳಲ್ಲಿ ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸಿದ್ದು, ಸದುಪಯೋಗ ಪಡಿಸಿಕೊಳ್ಳಬೇಕು' ಎಂದರು.

ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಎಲಿಜಬೆಥ್ ಚೆರಿಯನ್, 'ಮಹಿಳೆಗೆ ಅಡೆತಡೆ ಇರುವುದು ಸಹಜ. ಅದನ್ನು ಮೆಟ್ಟಿ ನಿಂತು ಗುರಿ ಸಾಧನೆ ಕಡೆ ಗಮನಹರಿಸಬೇಕು' ಎಂದರು.

ಸಿ.ಎನ್. ನಂದಿನಿ ಕುಮಾರಿ ದತ್ತಿ ಕೃಷಿ ಉದ್ಯಮಿ ಪ್ರಶಸ್ತಿಯನ್ನು ಸಾಧಕಿಯರಾದ ವಸಂತ ಷಣ್ಮುಗಂ ಮತ್ತು ಫ್ಯಾನ್ಸಿ ಗಣಪತಿ ಅವರಿಗೆ ನೀಡಿ ಗೌರವಿಸಲಾಯಿತು. ರೋಟರಿ ಪ್ರಶಸ್ತಿಯನ್ನು ಪದ್ಮಿನಿ ಗೌಡ, ಪೂರ್ಣಿಮಾ, ಮಾರ್ಗರೇಟ್, ಜಯಮ್ಮ ಚನ್ನಗೌಡರ, ವಾಣಿ ಪುಷ್ಪಾ, ಪನ್ನಗಶ್ರೀ ಅವರಿಗೆ ಪ್ರದಾನ ಮಾಡಲಾಯಿತು.

ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಎ.ಬಿ. ಪಾಟೀಲ, ನಿವೃತ್ತ ಐಎಎಸ್ ಅಧಿಕಾರಿ ಭರತ್ ಲಾಲ್ ಮೀನಾ, ಸೆಕೆಂಡರಿ ಕೃಷಿ ನಿರ್ದೇಶನಾಲಯದ ನಿರ್ದೇಶಕ ವೆಂಕಟರಾಮರೆಡ್ಡಿ ಜೆ. ಪಾಟೀಲ್, ಎಡಬ್ಲ್ಯುಎಕೆಇ ಅಧ್ಯಕ್ಷೆ ಸಿ.ಭುವನೇಶ್ವರಿ, ಸಂಜೀವಿನಿ ಸಂಸ್ಥೆ ಕಾರ್ಯಾಚರಣೆ ವಿಭಾಗದ ಮುಖ್ಯ ಅಧಿಕಾರಿ ಕೆ.ಅನ್ನಪೂರ್ಣ, ಕೃಷಿಕ ಸಮಾಜದ ಕಾರ್ಯಾಧ್ಯಕ್ಷ ನಗರದ ಮಹದೇವಪ್ಪ, ಕೃಷಿ ತಂತ್ರಜ್ಞರ ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ಯೋಗೇಶ್ ಹಾಜರಿದ್ದರು.



ಸಾಧಕ ಮಹಿಳೆಯರಾದ ವಸಂತ ಷಣ್ಮುಗಂ ಮತ್ತು ಫ್ಯಾನ್ಸಿ ಗಣಪತಿ ಅವರಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ 'ನಂದಿನಿ ಕುಮಾರಿ ದತ್ತಿ ಕೃಷಿ ಉದ್ಯಮಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

'ಪ್ಲಾಸ್ಟಿಕ್ ಹೂವು ಮಾರಾಟ ಬೇಡ'

ಸಮೀಕ್ಷೆ ಪ್ರಕಾರ ನಗರದಲ್ಲಿ 1.42 ಲಕ್ಷ ಬೀದಿ ಬದಿ ವ್ಯಾಪಾರಿಗಳಿದ್ದು, ಈ ಪೈಕಿ ಶೇಕಡ 30ರಷ್ಟು ಹೂವು ವ್ಯಾಪಾರಿಗಳು. ಇತ್ತೀಚೆಗೆ ಪ್ಲಾಸ್ಟಿಕ್ ಹೂವು ಮಾರುಕಟ್ಟೆಗೆ ಬಂದ ಪರಿಣಾಮ ಹೂವು ವ್ಯಾಪಾರಿಗಳ ಜೀವನಕ್ಕೆ ತುಂಬಾ ತೊಂದರೆ ಆಗಿದೆ. ಹಾಗಾಗಿ ಪ್ಲಾಸ್ಟಿಕ್ ಹೂವು ಮಾರಾಟ ಬಂದ್ ಮಾಡಬೇಕು ಎಂದು ಕೆಪೆಕ್ ಎಂಡಿ ಸಿ.ಎನ್.ಶಿವಪ್ರಕಾಶ್ ಹೇಳಿದರು.

‘ಹೆಚ್ಚುವರಿ ತೆರಿಗೆ, ದಂಡ ವಿಧಿಸುವುದಿಲ್ಲ’

ವಿಧಾನಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ • ಭೌತಿಕವಾಗಿ ಸಮೀಕ್ಷೆ ನಡೆಸಲು ಅಶೋಕ ಒತ್ತಾಯ

ಪ್ರಜಾವಾಣಿ ವಾರ್ತೆ

ವಿಧಾನಮಂಡಲ ಅಧಿವೇಶನ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸಾರ್ವಜನಿಕ ನಿವೇಶನ, ಕಟ್ಟಡಗಳನ್ನು ಡ್ರೋನ್ ಕ್ಯಾಮೆರಾ ಮೂಲಕ ಸಮೀಕ್ಷೆ ನಡೆಸಿ, ಹೆಚ್ಚುವರಿ ತೆರಿಗೆ ಮತ್ತು ದಂಡ ವಿಧಿಸಿ ಶೋಕಾಸ್ ನೋಟಿಸ್ ನೀಡಲಾಗುತ್ತಿದೆ’ ಎಂದು ಬಿಜೆಪಿಯ ಸಿ.ಕೆ. ರಾಮಮೂರ್ತಿ ಆಕ್ಷೇಪ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ರಾಮಮೂರ್ತಿ, ‘ಅನವಶ್ಯಕವಾಗಿ ಹೆಚ್ಚುವರಿ ತೆರಿಗೆ ಮತ್ತು ದಂಡ ವಿಧಿಸುವುದು ಸರಿಯಲ್ಲ’ ಎಂದರು.

ಇದಕ್ಕೆ ದನಿಗೂಡಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ‘ಇದು ಆಸ್ತಿ ತೆರಿಗೆ ಭಯೋತ್ಪಾದನೆ. ನೋಟಿಸ್ ವಾಪಸ್ ಪಡೆಯಬೇಕು’ ಎಂದು ಒತ್ತಾಯಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಡ್ರೋನ್ ಸಮೀಕ್ಷೆಯಲ್ಲಿ ಲೋಪ ಗಣನೀಯವಾಗಿದ್ದರೆ, ಅಂಥವರು ಬಂದು ಅರ್ಜಿ ಸಲ್ಲಿಸಲಿ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ತಂದಿದ್ದೇವೆ ನಾನು. ತೆರಿಗೆ ಬಾಕಿ ಉಳಿಸಿಕೊಂಡವರು ಒಂದೇ ಬಾರಿಗೆ ಬಾಕಿ ಪಾವತಿಸಲು ಒಟಿಎಸ್ ಅವಕಾಶವಿದೆ’ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಧ್ಯಪ್ರವೇಶಿಸಿ, ‘ಇದು ತುಘಲಕ್ ದರ್ಬಾರ್. ಐದು ಪಾಲಿಕೆ ಮಾಡಿ ಐದು ಹೊಸ ತೆರಿಗೆ ತಂದಿದ್ದಾರೆ. ಹಳೆಯ ತೆರಿಗೆ ಪದ್ಧತಿ ತಂದವರೂ ಇವರೇ, ಹೊಸ ಪದ್ಧತಿ ತಂದಿರುವವರೂ ಇವರೇ. ಇದು ಅನಾಗರಿಕ ನೀತಿ. ಡ್ರೋನ್ ಸಮೀಕ್ಷೆಯಲ್ಲಿ ವ್ಯತ್ಯಾಸ ಆಗಿಯೇ ಆಗುತ್ತದೆ. ಇದು ಒಪ್ಪುವುದಲ್ಲ. ಭೌತಿಕವಾಗಿ ಸಮೀಕ್ಷೆ ಮಾಡಬೇಕು’ ಎಂದರು.

‘ಇದು ತೆರಿಗೆ ಭಯೋತ್ಪಾದನೆ. ಒಂದೊಂದು ಪಾಲಿಕೆಗೂ ₹509 ಕೋಟಿ, ₹1,000 ಕೋಟಿ ತೆರಿಗೆ ಸಂಗ್ರಹಿಸಿ ಕೊಡುವಂತೆ ಸರ್ಕಾರ ಕೇಳಿದೆ. ಇದು ಅನಾಗರಿಕ ನೀತಿ. ಸದ್ಯಕ್ಕೆ ಡ್ರೋನ್ ಸಮೀಕ್ಷೆ ಸ್ಥಗಿತಗೊಳಿಸಿ ಭೌತಿಕವಾಗಿ ಸಮೀಕ್ಷೆ ಮಾಡಿ ತೆರಿಗೆ ಸಂಗ್ರಹಿಸಬೇಕು. ಸಂಪೂರ್ಣ ಸಂಗ್ರಹಕ್ಕೆ ಬೇರೆ ದಾರಿ ಹುಡುಕಿ’ ಎಂದು ಸಲಹೆ ನೀಡಿದರು.

ಆಗ ಶಿವಕುಮಾರ್, ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024ರ ಪ್ರಕರಣ 150ರ ಅನ್ವಯ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಿ ವ್ಯತ್ಯಾಸದ ಮೊತ್ತ, ವ್ಯತ್ಯಾಸದ ಮೊತ್ತಕ್ಕೆ ಸಮನಾದ ದಂಡ ಮತ್ತು ಪಾವತಿಸುವ ದಿನಾಂಕದವರೆಗೆ ಅನ್ವಯವಾಗುವ ಬಡ್ಡಿ ವಿಧಿಸಲಾಗಿದೆ. ಹೆಚ್ಚುವರಿ ತೆರಿಗೆ ಮತ್ತು ದಂಡವನ್ನು ವಿಧಿಸುತ್ತಿಲ್ಲ. ಭೌತಿಕ ಸಮೀಕ್ಷೆಯನ್ನು ಮಾಡುತ್ತೇವೆ’ ಎಂದರು.

24,874 ಸ್ವತ್ತುಗಳಿಗೆ ಶೋಕಾಸ್ ನೋಟಿಸ್: ‘24,874 ಸ್ವತ್ತುಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ. ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 1,760, ಪೂರ್ವ ನಗರಪಾಲಿಕೆ ವ್ಯಾಪ್ತಿಯಲ್ಲಿ 895, ಪಶ್ಚಿಮ ನಗರಪಾಲಿಕೆಯಲ್ಲಿ 10,662, ಉತ್ತರ ನಗರಪಾಲಿಕೆಯಲ್ಲಿ 3,352 ಹಾಗೂ ದಕ್ಷಿಣ ನಗರ ಪಾಲಿಕೆಯಲ್ಲಿ 8,205 ಶೋಕಾಸ್ ನೋಟಿಸ್ ನೀಡಲಾಗಿದೆ’ ಎಂದೂ ಶಿವಕುಮಾರ್ ತಿಳಿಸಿದರು.

‘ಪಟ್ಟಿ ನೀಡಿದರೆ ಲಂಚ ಕೇಳಿದವರ ಅಮಾನತು’

ಬೆಂಗಳೂರು: ‘ಇ-ಖಾತಾ ಮಾಡಿಕೊಡಲು ಲಂಚ ಕೇಳಿದವರ ಪಟ್ಟಿ ನೀಡಿದರೆ ಅಮಾನತು ಮಾಡಲಾಗುವುದು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲೆ ನಡೆದ ಚರ್ಚೆಯ ವೇಳೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಇ-ಖಾತಾ ಮಾಡಿಕೊಡಲು ಲಂಚ ತೆಗೆದುಕೊಂಡು, ಲೂಟಿ ಮಾಡಲಾಗುತ್ತಿದೆ’ ಎಂದು ಆರೋಪಿಸಿದರು.

ಆಗ ಪ್ರತಿಕ್ರಿಯಿಸಿದ ಶಿವಕುಮಾರ್, ‘ದಾಖಲೆಗಳನ್ನು ಸ್ಕ್ಯಾನ್ ಮಾಡಿ ಮನೆ ಬಾಗಿಲಿಗೆ ಖಾತೆ ನೀಡಲಾಗುತ್ತಿದೆ. ಕೇಂದ್ರ ಸರ್ಕಾರವೇ ಉತ್ತಮ ಯೋಜನೆ ಎಂದು ಪ್ರಶಸ್ತಿ ನೀಡಿದೆ. ₹10 ಸಾವಿರ ಲಂಚ ಕೇಳಿದವರು ಯಾರು ಎಂದು ಪಟ್ಟಿ ಕೊಟ್ಟರೆ ಅಮಾನತು ಮಾಡುತ್ತೇವೆ’ ಎಂದರು.

‘ಬೆಂಗಳೂರಿನಲ್ಲಿ 10 ಲಕ್ಷ ಖಾತೆ ವಿತರಣೆ ಮಾಡಿದ್ದೇವೆ. ಕಂದಾಯ ಇಲಾಖೆಯಿಂದ 1.11 ಕೋಟಿ ಖಾತೆ ವಿತರಿಸಲಾಗಿದೆ. ಕೆಲವೊಂದು ಸಮಯದಲ್ಲಿ ತಾಂತ್ರಿಕ ತೊಂದರೆ ಆಗಿದೆ. ಇದಕ್ಕೆ ಇನ್ನೆರಡು ದಿನಗಳಲ್ಲಿ ಪರಿಹಾರ ನೀಡಿ, ಸದನದಲ್ಲಿಯೇ ಈ ಬಗ್ಗೆ ತಿಳಿಸುತ್ತೇನೆ’ ಎಂದರು.

‘ಹಸಿರು ವಲಯ, ವಂಚನೆ ಪ್ರಕರಣ, ಸರ್ಕಾರಿ ಭೂಮಿ ಮುಂತಾದ ಪ್ರಕರಣಗಳಲ್ಲಿ ಇ-ಖಾತಾ ನೀಡಲು ತೊಂದರೆಯಾಗುತ್ತಿದೆ’ ಎಂದೂ ಅವರು ಹೇಳಿದರು.

ಸುದ್ದಿ 2 ನಿಮಿಷ

ಸಿ.ಎಂ ಸ್ಪಂದನೆಗೆ ಚಿಣ್ಣರ ಹರ್ಷ

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಉಡುತೊರೆ ಹಳ್ಳ ಜಲಾಶಯ, ಪ್ರಮುಖ ಕೆರೆ-ಕಟ್ಟೆಗಳಿಗೆ ಕಾವೇರಿ ನದಿಯಿಂದ ನೀರು ತುಂಬಿಸಲು 2026–27ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಮಪುರ ಸಮೀಪದ ಕೆಂಪಯ್ಯನಹಟ್ಟಿ ಗ್ರಾಮದ ಮಕ್ಕಳು ಧನ್ಯವಾದ ತಿಳಿಸಿದ್ದಾರೆ.

2025ರ ಜುಲೈ ತಿಂಗಳು ಕೆಂಪಯ್ಯನ ಹಟ್ಟಿ ಗ್ರಾಮದ ವಿದ್ಯಾರ್ಥಿಗಳಾದ ವರ್ಣಿಕ, ಮೀನಾ, ಮಹಿಕೆಶ್, ಶ್ರೀಕರ ಎಂಬುವರು, ತಮ್ಮ ಪೋಷಕರು ಕೃಷಿಯಲ್ಲಿ ಅನುಭವಿಸುತ್ತಿರುವ ಕಷ್ಟವನ್ನು ನೋಡಿ ಮುಖ್ಯಮಂತ್ರಿ ಪತ್ರ ಬರೆದಿದ್ದರು. ಅವರು ಮಾಡಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

‘ನಮ್ಮ ಗ್ರಾಮದಲ್ಲಿ ಮಳೆಯ ಕೊರತೆಯಿಂದಾಗಿ ಅಂತರ್ಜಲ ಮಟ್ಟ ಕುಸಿದಿದೆ. ಪ್ರಾಣಿ-ಪಕ್ಷಿಗಳು ಪರಿತಪಿಸುತ್ತಿವೆ. ಗ್ರಾಮದಲ್ಲಿ ಜನರು ಬೇಸಾಯ ಬಿಟ್ಟು ಉದ್ಯೋಗಕ್ಕಾಗಿ ವಲಸೆ ಹೋಗುತ್ತಿದ್ದಾರೆ. ನಮಗೆ ಬಹಳ ದುಃಖವಾಗುತ್ತಿದೆ’ ಎಂದು ಅಳಲು ತೋಡಿಕೊಂಡಿದ್ದರು.

‘ರಾಮಪುರ ಹೋಬಳಿಯ ಎಲ್ಲ ಕೆರೆಗಳಿಗೆ ಕಾವೇರಿ ನದಿಯಿಂದ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು. ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸಬೇಕು’ ಎಂದು ಕೋರಿದ್ದರು. ಜುಲೈ 9ರಂದು ರಾಮಪುರ ಹೋಬಳಿ ವ್ಯಾಪ್ತಿಯಲ್ಲಿರುವ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾಧ್ಯಮಗಳಲ್ಲಿ ಸಮಗ್ರ ವರದಿ ಪ್ರಕಟಿಸಲಾಗಿತ್ತು.

‘ಅಂಬೇಡ್ಕರ್ ವಿಶ್ವಮಾನವ’



ಬೆಂಗಳೂರು: ‘ಭಾರತದ ಪ್ರತಿಯೊಬ್ಬ ಪ್ರಜೆಯ ಸಮಾನ ಹಕ್ಕುಗಳಿಗೆ ಹೋರಾಟ ಮಾಡಿದ ಅಂಬೇಡ್ಕರ್ ಅವರು ಒಂದೇ ಸಮುದಾಯಕ್ಕೆ ಸೀಮಿತರಾದವರಲ್ಲ’ ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಹೇಳಿದರು.

ಜ್ಞಾನಜ್ಯೋತಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಅಂಬೇಡ್ಕರ್ ಅಧ್ಯಯನ ಕೇಂದ್ರ ಸಹಯೋಗದಲ್ಲಿ ವಾರ್ತಾ, ಸಾರ್ವಜನಿಕ ಸಂಪರ್ಕ ಇಲಾಖೆ ನಗರ ಜಿಲ್ಲಾ ಘಟಕ ಏರ್ಪಡಿಸಿದ್ದ ಭೀಮ ಗಾಯನ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಸಂವಿಧಾನ ಪೀಠಿಕೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಏಕತೆ ಮತ್ತು ಭ್ರಾತೃತ್ವದ ಬದ್ಧತೆಯನ್ನು ಪ್ರತಿಪಾದಿಸುತ್ತದೆ. ಅಂಬೇಡ್ಕರ್ ರಚಿತ ಈ ಸಂವಿಧಾನದ ಪೀಠಿಕೆಯೇ ಅವರು ಒಬ್ಬ ವಿಶ್ವ ಮಾನವ ಎಂಬುದನ್ನು ಸಾಬೀತುಪಡಿಸುತ್ತದೆ’ ಎಂದು ಹೇಳಿದರು.

ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಮಾತನಾಡಿ, ‘ಸಾಮಾಜಿಕ ಹೋರಾಟಗಳಲ್ಲಿ ಹಾಡುಗಳು ಪ್ರಬಲ ಸಾಧನವಾಗಿದ್ದವು. ಯುವ ಜನತೆಗೆ ಭೀಮ ಗಾಯನದ ಹಾಡುಗಳು ಅಂಬೇಡ್ಕರ್ ಅವರ ಬದುಕಿನ ಹೋರಾಟ, ಸಾಧನೆ ಬಗ್ಗೆ ಜಾಗೃತಿ ಮೂಡಿಸುತ್ತವೆ’ ಎಂದರು.

ಕುಲಪತಿ ಬಿ.ರಮೇಶ, ಉಪ ನಿರ್ದೇಶಕಿ ಪಲ್ಲವಿ ಹೊನ್ನಾಪುರ, ಮುಖಂಡ ಮಾವಳ್ಳಿ ಶಂಕರ್, ಅಧ್ಯಯನ ಕೇಂದ್ರದ ನಿರ್ದೇಶಕಿ ಕೆ.ಆರ್.ಜಲಜಾ, ಸಿಂಡಿಕೇಟ್ ಸದಸ್ಯ ಫ್ರಾನ್ಸಿಸ್ ಉಪಸ್ಥಿತರಿದ್ದರು.

ಅರ್ಹರಿಗೆ ಕೋವಿ ಲೈಸೆನ್ಸ್: ಪರಮೇಶ್ವರ

ಬೆಂಗಳೂರು: ‘ಮಲೆನಾಡು ಭಾಗದ ಜಿಲ್ಲೆಗಳಲ್ಲಿ ಕೃಷಿ ಬೆಳೆ ರಕ್ಷಣೆಗೆ ಸಂಬಂಧಿಸಿದಂತೆ ರೈತರಿಗೆ ಕೋವಿ ಪರವಾನಗಿ ನೀಡಲು ಸಂಬಂಧಪಟ್ಟವರಿಗೆ ಸೂಚನೆ ನೀಡುತ್ತೇನೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಅಶೋಕ್ ಕುಮಾರ್ ರೈ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಮಾನಸಿಕ ಅಸ್ವಸ್ಥತೆ, ದೈಹಿಕ ನ್ಯೂನತೆ ಇದ್ದರೆ ಪರವಾನಗಿ ಕೊಡಲು ಅಥವಾ ನವೀಕರಿಸಲು ಸಾಧ್ಯವಿಲ್ಲ. ಕ್ರಿಮಿನಲ್ ಪ್ರಕರಣ ಇದ್ದವರಿಗೂ ಪರವಾನಗಿ ನೀಡುವುದಿಲ್ಲ’ ಎಂದು ಹೇಳಿದರು.

ಮೂರನೇ ಹಂತದ ಶುದ್ಧೀಕರಣ ಮಾಡದೆ ಪೂರೈಕೆ: ಸಮೃದ್ಧಿ ಮಂಜುನಾಥ್ ಆಕ್ರೋಶ

ಕೆ.ಸಿ. ವ್ಯಾಲಿ ನೀರು ಪ್ರದರ್ಶಿಸಿದ ಜೆಡಿಎಸ್ ಶಾಸಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರು ಮತ್ತು ಕೆ.ಸಿ. ವ್ಯಾಲಿ ನೀರನ್ನು ಬಾಟಲಿಯಲ್ಲಿ ತಂದು ವಿಧಾನ ಸಭೆಯಲ್ಲಿ ಪ್ರದರ್ಶಿಸಿದ ಜೆಡಿಎಸ್‌ನ ಸಮೃದ್ಧಿ ವಿ. ಮಂಜುನಾಥ್, ‘ಕೆ.ಸಿ. ವ್ಯಾಲಿ, ಎಚ್.ಎನ್. ವ್ಯಾಲಿ ನೀರು ಕೊಟ್ಟಿರುವುದು ಕಾಂಗ್ರೆಸ್ ಸರ್ಕಾರ. ಆದರೆ, ಮೂರನೇ ಹಂತದ ಶುದ್ಧೀಕರಣ ಮಾಡದೆ ಪೂರೈಸುತ್ತಿರುವ ಕಾರಣ ನೀರು ವಿಷವಾಗಿ ಪರಿವರ್ತನೆಯಾಗುತ್ತಿದೆ’ ಎಂದು ಆರೋಪಿಸಿದರು.



ಸಮೃದ್ಧಿ ಮಂಜುನಾಥ್

ಸಮೃದ್ಧಿ ಮಂಜುನಾಥ್ ಆರೋಪಕ್ಕೆ ಪ್ರತಿಕ್ರಿಯಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಕೆ.ಸಿ. ವ್ಯಾಲಿ ಹಾಗೂ ಎಚ್.ಎನ್. ವ್ಯಾಲಿಗಳಲ್ಲಿ ನೀರು ಹರಿಸುವ ಮೊದಲು, ವೈಜ್ಞಾನಿಕ ಕ್ರಮ ಅನುಸರಿಸಿ ಶುದ್ಧೀಕರಿಸಲಾಗುತ್ತಿದೆ. ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸಲಾಗುತ್ತಿದೆ. ಆದರೆ, ರಾಜಕೀಯ ಕಾರಣಗಳಿಗಾಗಿ ಉತ್ತಮ ಕೆಲಸಗಳಿಗೆ ಅನಗತ್ಯವಾಗಿ ಮಸಿ ಬಳಿಯುವುದು ಸರಿಯಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಎರಡು ಹಂತಗಳಲ್ಲಿ ಶುದ್ಧೀಕರಿಸಿದ ಕೆ.ಸಿ. ವ್ಯಾಲಿ ನೀರು ಹರಿಸಿ 146 ಕೆರೆಗಳನ್ನು ತುಂಬಲಾಗುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆ ಕೂಡ ನೀರನ್ನು ಪರೀಕ್ಷೆ ಮಾಡಿ ವರದಿ ನೀಡಿದೆ. ಶಾಸಕರು ನೀರನ್ನು ತಂದು ತೋರಿಸುತ್ತಿದ್ದಾರೆ. ಅವರು ತಂದಿರುವುದು ಯಾವ ನೀರೋ ಗೊತ್ತಿಲ್ಲ’ ಎಂದರು.

ಈ ವೇಳೆ ಆಕ್ರೋಶ ವ್ಯಕ್ತಪಡಿಸಿದ ಸಮೃದ್ಧಿ ಮಂಜುನಾಥ್, ಸಚಿವರ ವಿರುದ್ಧ ತಿರುಗಿಬಿದ್ದರು.

ಮಧ್ಯಪ್ರವೇಶಿಸಿದ ಕೃಷ್ಣ ಬೈರೇಗೌಡ, ‘ಪದೇ ಪದೇ ತಪ್ಪು ಮಾಹಿತಿ ಹರಡಿ ಜನರಿಗೆ ಗೊಂದಲ ಉಂಟು ಮಾಡಬಾರದು. ಕೆ.ಸಿ. ವ್ಯಾಲಿ ಹಾಗೂ ಎಚ್.ಎನ್. ವ್ಯಾಲಿ ನೀರಿನ ಗುಣಮಟ್ಟದ ಬಗ್ಗೆ ವೈಜ್ಞಾನಿಕ ಅಧ್ಯಯನ, ಆಧಾರ ಇಲ್ಲದೆ ಅನಗತ್ಯವಾಗಿ ಮಾತನಾಡುವುದು ಸರಿಯಲ್ಲ’ ಎಂದರು.

‘ಯಾವ ರೈತರಿಗೂ ತೊಂದರೆ ಆಗುವುದನ್ನು ನೋಡಿಕೊಂಡು ನಮ್ಮ ಸರ್ಕಾರ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಕೆ.ಸಿ. ವ್ಯಾಲಿ ಹಾಗೂ ಎಚ್.ಎನ್. ವ್ಯಾಲಿ ನೀರಿನ ಗುಣಮಟ್ಟವನ್ನು ಇನ್ನಷ್ಟು ಸುಧಾರಿಸಲು ವೈಜ್ಞಾನಿಕ ವರದಿ ಆಧಾರದಲ್ಲಿ ಏನೇ ಕ್ರಮ ಸೂಚಿಸಿದರೂ ಪಾಲಿಸಲು ಸರ್ಕಾರ ಸಿದ್ಧವಾಗಿದೆ’ ಎಂದರು.

‘ಕೆ.ಸಿ. ವ್ಯಾಲಿ ಹಾಗೂ ಎಚ್.ಎನ್. ವ್ಯಾಲಿ ನೀರಿನ ಗುಣಮಟ್ಟವನ್ನು ಭಾರತೀಯ ವಿಜ್ಞಾನ ಸಂಸ್ಥೆ ವತಿಯಿಂದ 2017–18ರಿಂದ ನಿರಂತರವಾಗಿ ಅಧ್ಯಯನ ಮಾಡಲಾಗುತ್ತಿದೆ. ಸಂಸ್ಥೆಯು ಪ್ರತಿ ಮೂರು ತಿಂಗಳಿಗೊಮ್ಮೆ ನೀರು ಹಾಗೂ ಬೆಳೆಗಳ ಗುಣಮಟ್ಟ ಪರಿಶೀಲಿಸುತ್ತಿದೆ. ಈ ಕೆಲಸವನ್ನು ಮೊದಲು ಐದು ವರ್ಷಕ್ಕೆ ನೀಡಿದ್ದೆವು. ಈಗ ಮತ್ತೆ ಐದು ವರ್ಷಕ್ಕೆ ವಿಸ್ತರಿಸಲಾಗಿದೆ. ತೆರೆದ ನೀರಿನ ಮೂಲಗಳ ಗುಣಮಟ್ಟ ಕಾಪಾಡಲು ಅಗತ್ಯವಾದ ಎಲ್ಲ ವೈಜ್ಞಾನಿಕ ಕ್ರಮಗಳನ್ನೂ ಪಾಲಿಸಲಾಗುತ್ತಿದೆ. ಅಲ್ಲದೆ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಜಲ ಸಂಪನ್ಮೂಲ ಮಂಡಳಿ, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ, ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿರುವ ವೈಜ್ಞಾನಿಕ ಪರಿಕ್ರಮಗಳನ್ನೂ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ’ ಎಂದು ಹೇಳಿದರು.

‘ಬೆಂಗಳೂರು ಪೊಲೀಸ್ ವ್ಯವಸ್ಥೆ ಪುನರ್ ರಚನೆ’

ಬೆಂಗಳೂರು: ಜನಸಂಖ್ಯೆ ಹೆಚ್ಚಳ, ಸಂಚಾರ ದಟ್ಟಣೆ ಹಾಗೂ ಕಾನೂನು ಸುವ್ಯವಸ್ಥೆಯ ಸವಾಲುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಬೆಂಗಳೂರು ಪೊಲೀಸ್ ಕಮಿಷನರೇಟ್ ಅನ್ನು ಪುನರ್ ರಚಿಸುವ ಕುರಿತು ಪರಿಶೀಲಿಸುತ್ತೇವೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.



ಜಿ.ಪರಮೇಶ್ವರ

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಕೆ.ಗೋವಿಂದರಾಜ್ ಅವರು ಈ ಕುರಿತು ಮಾಡಿದ ಪ್ರಸ್ತಾಪಕ್ಕೆ ಅವರು ಉತ್ತರಿಸಿದರು.

ಬೆಂಗಳೂರು ನಗರದ ಕಾನೂನು ಸುವ್ಯವಸ್ಥೆ ಮತ್ತು ಸಂಚಾರ ನಿರ್ವಹಣೆಗೆ ಕಮಿಷನರ್, ಹೆಚ್ಚುವರಿ ಕಮಿಷನರ್, ಇಬ್ಬರು ಜಂಟಿ ಕಮಿಷನರ್ (ಕಾನೂನು ಸುವ್ಯವಸ್ಥೆ ಮತ್ತು ಸಂಚಾರ) ಹಾಗೂ 11 ಡಿಸಿಪಿಗಳು (ಕಾನೂನು ಸುವ್ಯವಸ್ಥೆ), ನಾಲ್ವರು ಡಿಸಿಪಿಗಳು (ಸಂಚಾರ) ಮತ್ತು ಇಬ್ಬರು ಡಿಸಿಪಿಗಳು (ಅಪರಾಧ) ಇದ್ದಾರೆ. ನಗರದ ಬೆಳವಣಿಗೆ ಗಮನದಲ್ಲಿಟ್ಟುಕೊಂಡು ಪೊಲೀಸ್ ವ್ಯವಸ್ಥೆ ಬಲಪಡಿಸಲು ಈಗಾಗಲೇ ಚರ್ಚಿಸಲಾಗಿದೆ ಎಂದರು.

ಪಾದಚಾರಿ ಮಾರ್ಗ ಅತಿಕ್ರಮಣ ತೆರವು: ಕೆಂಪೇಗೌಡ ರಸ್ತೆಯಲ್ಲಿ (ಮೈಸೂರು ಬ್ಯಾಂಕ್ ಬಳಿ) ಪಾದಚಾರಿ ಮಾರ್ಗಗಳ ಅತಿಕ್ರಮಣ ಮತ್ತು ಅನಧಿಕೃತ ವಾಹನ ನಿಲುಗಡೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕ್ರಮ ಕೈಗೊಳ್ಳಲು ಈಗಾಗಲೇ ಸೂಚಿಸಲಾಗಿದೆ ಎಂದು ಪರಮೇಶ್ವರ ಹೇಳಿದರು.

ಕಾಂಗ್ರೆಸ್‌ನ ರಮೇಶ್ ಬಾಬು ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ಪಾದಚಾರಿ ಮಾರ್ಗಗಳಲ್ಲಿ ಶೆಡ್ ನಿರ್ಮಿಸಿರುವುದು, ವಾಹನ ನಿಲುಗಡೆ ಮಾಡುತ್ತಿರುವುದನ್ನು ಗುರುತಿಸಲಾಗಿದೆ. ನಗರಪಾಲಿಕೆ, ಗಾಂಧಿನಗರ ವಾರ್ಡ್‌ನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಮಾಹಿತಿ ನೀಡಲಾಗಿದೆ ಎಂದು ಹೇಳಿದರು.

ಅರ್ಹತೆ ಹೊಂದದವರು, ನಕಲಿ ವೈದ್ಯರ ವಿರುದ್ಧ ಕ್ರಮಕ್ಕೆ ಒತ್ತಾಯ

‘ಚರ್ಮ, ಕೂದಲ ಕಸಿ: ಅನಧಿಕೃತ ಚಿಕಿತ್ಸೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲ ದಂತ ವೈದ್ಯರು ಹಾಗೂ ನಕಲಿ ವೈದ್ಯರು ಕಾನೂನು ಬಾಹಿರವಾಗಿ ಚರ್ಮದ ಚಿಕಿತ್ಸೆ, ಕೂದಲು ಕಸಿ ಮತ್ತು ಸೌಂದರ್ಯ ಚಿಕಿತ್ಸೆಗಳನ್ನು ನೀಡುತ್ತಿದ್ದು, ಅಂತಹವರ ವಿರುದ್ಧ ಕಾನೂನಿನಡಿ ಕ್ರಮಕೈಗೊಳ್ಳಬೇಕು’ ಎಂದು ಚರ್ಮರೋಗ ತಜ್ಞರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ಚರ್ಮ, ಲೈಂಗಿಕ ಮತ್ತು ಕುಷ್ಠ ರೋಗ ತಜ್ಞರ ಸಂಘದ (ಐಎಡಿವಿಎಲ್) ಕರ್ನಾಟಕ ಶಾಖೆ ಅಧ್ಯಕ್ಷೆ ಡಾ.ಸವಿತಾ ಎ.ಎಸ್., ‘ದಂತ ವೈದ್ಯರು, ಬ್ಯೂಟಿಷಿಯನ್‌ಗಳು ತಾವು ಸೌಂದರ್ಯ ತಜ್ಞರೆಂದು ಚಿಕಿತ್ಸೆ ನೀಡುತ್ತಿದ್ದಾರೆ’ ಎಂದು ಹೇಳಿದರು.

‘ನಕಲಿ ವೈದ್ಯರು, ತರಬೇತಿ ಇಲ್ಲದವರು ಕೂದಲು ನಾಟಿ, ಚರ್ಮ ಸೌಂದರ್ಯ ಮತ್ತು ಚರ್ಮ ವೈದ್ಯಕೀಯ ಪ್ರಕ್ರಿಯೆಗಳನ್ನು ನಡೆಸುತ್ತಿರುವುದು ಆತಂಕಕಾರಿ. ಕೂದಲು ಕಸಿ, ಲೇಸರ್ ಚಿಕಿತ್ಸೆ ಹಾಗೂ ವಿವಿಧ ಅಲಂಕಾರಿಕ ಚರ್ಮ ಚಿಕಿತ್ಸೆಗಳನ್ನು ಅನರ್ಹರು ಒದಗಿಸುತ್ತಿದ್ದಾರೆ. ಕಳಪೆ ಗುಣಮಟ್ಟದ ಸೌಂದರ್ಯ ವರ್ಧಕಗಳಿಂದ ಆಗುವ ಹಾನಿ ತಡೆಯಲು ಸರ್ಕಾರ ಕ್ರಮಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.



ಚರ್ಮರೋಗ ತಜ್ಞರ ವಿವರ ಒದಗಿಸುವ ಕ್ಯೂಆರ್ ಕೋಡ್ ಅನ್ನು ಡಾ.ಸವಿತಾ ಎ.ಎಸ್. ಬಿಡುಗಡೆ ಮಾಡಿದರು. ಡಾ. ವೆಂಕಟರಾಮ್ ಮೈಸೂರು, ಡಾ.ಬಿ.ಎಸ್. ಚಂದ್ರಶೇಖರ್, ಡಾ. ಜಗದೀಶ್, ಡಾ. ಅಕ್ಷಯ್ ಸಾಮಗಾನಿ, ಡಾ.ಎಂ.ಎಸ್. ಗಿರೀಶ್ ಉಪಸ್ಥಿತರಿದ್ದರು

450ಕ್ಕೂ ಹೆಚ್ಚು ದೂರು ಸಲ್ಲಿಕೆ

‘ನಕಲಿ ವೈದ್ಯರ ವಿರುದ್ಧ ಐಎಡಿವಿಎಲ್ ಕಳೆದ ವರ್ಷ ನಡೆಸಿದ ಜಾಗೃತಿ ಅಭಿಯಾನದ ವೇಳೆ, ರಾಜ್ಯದ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ 450ಕ್ಕೂ ಹೆಚ್ಚು ದೂರುಗಳು ಸಲ್ಲಿಕೆಯಾಗಿದ್ದವು. ಕೆಲವೆಡೆ ಕಾನೂನು ಕ್ರಮ ಜರುಗಿಸಲಾಗಿದೆ. ಅವುಗಳಲ್ಲಿ ಕೆಲವು ಕ್ಲಿನಿಕ್‌ಗಳು ಮತ್ತೆ ಕಾರ್ಯಾರಂಭ ಮಾಡಿವೆ. ಸರ್ಕಾರವು ಅನಧಿಕೃತ ಕ್ಲಿನಿಕ್‌ಗಳ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಡಾ.ಸವಿತಾ ಎ.ಎಸ್. ಆಗ್ರಹಿಸಿದರು.

‘ಚರ್ಮ ವೈದ್ಯಕೀಯ ಅಥವಾ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ, ರಾಜ್ಯ ವೈದ್ಯಕೀಯ ಮಂಡಳಿಯಲ್ಲಿ ನೋಂದಾಯಿತ ವೈದ್ಯರಷ್ಟೇ ವೈದ್ಯಕೀಯ ಪ್ರಕ್ರಿಯೆಗಳನ್ನು ನಡೆಸಬೇಕು. ಕೂದಲು ಕಸಿ, ಮತ್ತು ಸೌಂದರ್ಯವರ್ಧಕ ಚರ್ಮ ಚಿಕಿತ್ಸೆಗಳು ಸಂಕೀರ್ಣವಾಗಿದ್ದು, ಆಧುನಿಕ ವೈದ್ಯಕೀಯ ಜ್ಞಾನ ಮತ್ತು ಶಸ್ತ್ರಚಿಕಿತ್ಸಾ ತರಬೇತಿ ಅಗತ್ಯ’ ಎಂದು ಹೇಳಿದರು.

ರಾಜ್ಯ ವೈದ್ಯಕೀಯ ಮಂಡಳಿಯಡಿ ನೋಂದಾಯಿತ ಚರ್ಮ ತಜ್ಞರ ವಿವರ ಒದಗಿಸುವ ಕ್ಯೂಆರ್ ಕೋಡ್ ಅನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.

ಸಂಘದ ಮಾಜಿ ಅಧ್ಯಕ್ಷರಾದ ಡಾ. ವೆಂಕಟರಾಮ್ ಮೈಸೂರು, ಡಾ.ಬಿ.ಎಸ್. ಚಂದ್ರಶೇಖರ್, ಪದಾಧಿಕಾರಿಗಳಾದ ಡಾ. ಜಗದೀಶ್, ಡಾ. ಅಕ್ಷಯ್ ಸಾಮಗಾನಿ, ಡಾ.ಎಂ.ಎಸ್. ಗಿರೀಶ್ ಉಪಸ್ಥಿತರಿದ್ದರು.

‘ಅಸಭ್ಯ ವಿಡಿಯೊ: ಸೈಬರ್ ಕ್ರೈಂಗೆ ದೂರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಸುದ್ದಿಗೋಷ್ಠಿಗಳಲ್ಲಿ ಹಾಗೂ ಚಿತ್ರ ಬಿಡುಗಡೆ ವೇಳೆ ಅಸಭ್ಯವಾಗಿ ಮಹಿಳಾ ಕಲಾವಿದರ ವಿಡಿಯೊಗಳು ಹಾಗೂ ಫೋಟೊಗಳನ್ನು ಸೆರೆಹಿಡಿಯುವವರ ವಿರುದ್ಧ ಸೈಬರ್ ಕ್ರೈಂಗೆ ದೂರು ನೀಡಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಅಸಭ್ಯವಾಗಿ ವಿಡಿಯೊ, ಫೋಟೊಗಳನ್ನು ಹಾಕುತ್ತಿರುವವರ ವಿರುದ್ಧ ನಟಿ ಸಪ್ತಮಿ ಗೌಡ ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿದ್ದರು. ಮಂಡಳಿಗೂ ಈ ಬಗ್ಗೆ ಪತ್ರ ಬರೆದಿದ್ದರು. ಇದಕ್ಕೆ ಚಂದನವನದ ಕಲಾವಿದರು ಬೆಂಬಲ ಸೂಚಿಸಿದ್ದರು. ಇದರ ಬೆನ್ನಲ್ಲೇ ಮಂಡಳಿಯಲ್ಲಿ ಸಭೆ ನಡೆದಿದ್ದು, ಇದರಲ್ಲಿ ಮಂಡಳಿಯ ಪದಾಧಿಕಾರಿಗಳು, ನಟಿಯರಾದ ಮಾಳವಿಕಾ ಅವಿನಾಶ್, ಶ್ರುತಿ, ಸಪ್ತಮಿ ಗೌಡ, ನಿರ್ದೇಶಕ ತರುಣ್ ಸುಧೀರ್, ಸಿನಿಮಾಗಳ ಪಿಆರ್‌ಒಗಳು, ಡಿಜಿಟಲ್ ಮಾಧ್ಯಮ, ಯೂಟ್ಯೂಬ್ ಚಾನೆಲ್‌ನ ಪ್ರತಿನಿಧಿಗಳು ಭಾಗವಹಿಸಿದ್ದರು.



ಜಯಮಾಲಾ

‘ಈಗಾಗಲೇ ಪೋಸ್ಟ್ ಮಾಡಿರುವ ಫೋಟೊ, ವಿಡಿಯೊಗಳನ್ನು ತೆಗೆದು ಹಾಕಲಾಗಿದೆ ಎಂದು ಡಿಜಿಟಲ್ ಮೀಡಿಯಾ ಪ್ರತಿನಿಧಿಗಳು, ಪಿಆರ್‌ಒಗಳು ತಿಳಿಸಿದ್ದಾರೆ. ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸಬಾರದು. ಮರುಕಳಿಸಿದರೆ ಅದಕ್ಕೆ ಪಿಆರ್‌ಒಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಮುಂದಿನ ದಿನಗಳಲ್ಲಿ ಇಂತಹ ಯಾವುದೇ ವಿಡಿಯೊ, ಫೋಟೊಗಳನ್ನು ಚಿತ್ರೀಕರಿಸಿದ ಘಟನೆಗಳು ಕಂಡು ಬಂದಲ್ಲಿ ಕೂಡಲೇ ಸೈಬರ್ ಕ್ರೈಂಗೆ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು’ ಎಂದು ಮಂಡಳಿ ಅಧ್ಯಕ್ಷೆ ಜಯಮಾಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲೆಗಳ ವಿಲೀನ: ಟಿ.ಸಿ ನೀಡಲು ಸೂಚನೆ

ಬೆಂಗಳೂರು: ಹೊಂಗನೂರು ಕರ್ನಾಟಕ ಪಬ್ಲಿಕ್ ಶಾಲೆ ವ್ಯಾಪ್ತಿಯ 7 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟಿಕ್ ಶಾಲಾ ಯೋಜನೆಯಡಿ ವಿಲೀನ ಮಾಡಿರುವ ಕಾರಣ, ಮ್ಯಾಗ್ನೆಟಿಕ್ ಶಾಲೆಗೆ ಬಾರದ 5 ಶಾಲೆಗಳ ವಿದ್ಯಾರ್ಥಿಗಳ ವರ್ಗಾವಣೆ ಪತ್ರಗಳನ್ನು (ಟಿ.ಸಿ) ಪೋಷಕರಿಗೆ ನೀಡುವಂತೆ ಶಾಲಾ ಶಿಕ್ಷಣ ಇಲಾಖೆಯ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ಬಿಇಒ ಆದೇಶ ಹೊರಡಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಮಾಡಲಾಗಿದ್ದು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಚನ್ನಂಕೇಗೌಡನ ದೊಡ್ಡಿಯಿಂದ ಇಬ್ಬರು ವಿದ್ಯಾರ್ಥಿಗಳು, ಸಂತೇಮೊಗೇನಹಳ್ಳಿ ದೊಡ್ಡಿಯಿಂದ ಐದು ವಿದ್ಯಾರ್ಥಿಗಳು ಮಾತ್ರ ಮ್ಯಾಗ್ನೆಟಿಕ್ ಶಾಲೆಗೆ ಬರುತ್ತಿದ್ದಾರೆ. ಹೊಡಿಕೆ ಹೊಸಹಳ್ಳಿ, ಕನ್ನಿದೊಡ್ಡಿ, ಅಮ್ಮಳ್ಳಿದೊಡ್ಡಿ, ಸಂತೆಮೊಗೇನಹಳ್ಳಿ, ಸುಣ್ಣಘಟ್ಟ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರು, ಮ್ಯಾಗ್ನೆಟಿಕ್ ಶಾಲೆಯ ಉದ್ದೇಶ, ಪ್ರಯೋಜನ ಹಾಗೂ ಸೌಲಭ್ಯದ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾಗಿದ್ದಾರೆ ಎಂದು ಆದೇಶದಲ್ಲಿ ಹೇಳಿದ್ದಾರೆ.

ಇದೇ 11ರೊಳಗೆ ಪೋಷಕರ ಮನವೊಲಿಸಿ, ಟಿ.ಸಿಗಳನ್ನು ಪೋಷಕರಿಗೆ ನೀಡುವಂತೆ ಕ್ರಮಕೈಗೊಳ್ಳಬೇಕು. ಇಲ್ಲವಾದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

‘ಬಡವರ ಶಿಕ್ಷಣ ವಿರೋಧಿ ನೀತಿ’

‘ಶಾಲಾ ವಿಲೀನದ ರಾಜ್ಯ ಸರ್ಕಾರದ ಕ್ರಮವು ಪ್ರಜಾತಾಂತ್ರಿಕವಲ್ಲದ, ಬಡವರ ಶಿಕ್ಷಣ ವಿರೋಧಿ ನೀತಿಯಾಗಿದೆ. ತಮ್ಮ ಮಕ್ಕಳಿಗೆ ಹತ್ತಿರದ ಶಾಲೆಗಳಲ್ಲೇ ಶಿಕ್ಷಣ ಮುಂದುವರಿಯಬೇಕು, ಶಿಕ್ಷಕರು ಸ್ಥಳಾಂತರವಾಗಬಾರದು’ ಎಂದು ಎಐಡಿಎಸ್‌ಒ ರಾಜ್ಯ ಸಮಿತಿ ಕಾರ್ಯದರ್ಶಿ ಅಜಯ್ ಕಾಮತ್ ಆಗ್ರಹಿಸಿದ್ದಾರೆ.

ಇಷ್ಟಲಿಂಗ ಮಹಾಪೂಜೆ, ಧರ್ಮ ಜಾಗೃತಿ ಸಭೆಯಲ್ಲಿ ಕಾಶಿ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ

‘ಶಿಕ್ಷಣದ ಜೊತೆಗೆ ಮಕ್ಕಳಿಗೆ ಸಂಸ್ಕಾರ ನೀಡಿ’


ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ ಜಿಲ್ಲೆ): ‘ವೀರಶೈವ ಲಿಂಗಾಯತರಿಗೆ ಸಿದ್ಧಾಂತ ಶಿಖಾಮಣಿ ಗ್ರಂಥ ಅತ್ಯಂತ ಪವಿತ್ರವಾದುದು. ಅದರಲ್ಲಿನ ಒಳಮರ್ಮವನ್ನು ಅರಿತು ಜೀವನ ನಡೆಸಬೇಕು’ ಎಂದು ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು.

ನಗರದ ವೀರಶೈವ ಸಮುದಾಯ ಭವನದಲ್ಲಿ ಪಂಚಪೀಠ ಧಾರ್ಮಿಕ ಕಾರ್ಯಕ್ರಮ ಆಚರಣಾ ಸಮಿತಿ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆ ಮತ್ತು ಧರ್ಮ ಜಾಗೃತಿ ಸಭೆಯಲ್ಲಿ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

‘ಈ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಗತಿಗೆ ಐದು ಸೂತ್ರಗಳಿವೆ. ಅವುಗಳನ್ನು ಅಳವಡಿಸಿಕೊಳ್ಳಬೇಕು. ಅವುಗಳಲ್ಲಿ ಬದುಕಿನ ಸಾರ ಅಡಗಿದೆ. ಮಕ್ಕಳಿಗೆ ತಂದೆ– ತಾಯಿ ಜನ್ಮ ನೀಡಿ, ಶಿಕ್ಷಣ ನೀಡಿದರೆ ಸಾಲದು, ಮುಖ್ಯವಾಗಿ ಸಂಸ್ಕಾರ ಕಲಿಸಬೇಕು. ಮಕ್ಕಳಿಗೆ ಬಾಲ್ಯದಲ್ಲಿ ಏಳು ವರ್ಷ ಕಲಿಸಿದ ಸಂಸ್ಕಾರ 77 ವರ್ಷಗಳವರೆಗೆ ಇರುತ್ತದೆ. ತಂದೆ– ತಾಯಿಗಳು ಮಕ್ಕಳಿಗೆ ತಮ್ಮ ಜೊತೆಯಲ್ಲಿಯೇ ಸಂಸ್ಕಾರ, ಸಂಸ್ಕೃತಿ ಕಲಿಸಬೇಕು. ಇದರಿಂದ ವೃದ್ಧಾಪ್ಯದಲ್ಲಿ ಮಕ್ಕಳು ಹೆತ್ತವರ ಪಾಲನೆ ಮಾಡುತ್ತಾರೆ’ ಎಂದರು.

‘ಲಿಂಗಾಯತರು ಕಡ್ಡಾಯವಾಗಿ ಲಿಂಗಪೂಜೆ ಮಾಡಬೇಕು. ಭಕ್ತಿ ಭಾವದಿಂದ ಪೂಜೆ ಮಾಡಿ ಶಿವನ ಒಲುಮೆ ಪಡೆಯಬೇಕು. ಮಾನವರು ಬಾಹ್ಯ ಶುದ್ಧಿಗೆ ಹೆಚ್ಚಿನ ಆದ್ಯತೆ ನೀಡುವುದು ಸರಿಯಲ್ಲ. ಬದಲಿಗೆ ಆತ್ಮ ಶುದ್ಧಿಗೆ ಶಿವನನ್ನು ನೆನೆಯಬೇಕು. ಆಧ್ಯಾತ್ಮಿಕ ತತ್ವಗಳನ್ನು ಆಲಿಸಿ, ಆತ್ಮ ಶುದ್ಧೀಕರಿಸಿಕೊಳ್ಳಬೇಕು. ಮನಸ್ಸು ಶುದ್ಧವಿದ್ದಾಗ ಮಾತ್ರ ಶಿವ ಒಲಿಯುತ್ತಾನೆ’ ಎಂದರು.



ಅರಸೀಕೆರೆಯ ವೀರಶೈವ ಸಮುದಾಯ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಧರ್ಮ ಜಾಗೃತಿ ಸಭೆಯಲ್ಲಿ ಕಾಶಿ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು

ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ಶಿವಯೋಗೀಶ್ವರ ಸ್ವಾಮೀಜಿ, ‘ಸಿದ್ಧಾಂತ ಶಿಖಾಮಣಿ ಗ್ರಂಥವನ್ನು 21 ಭಾಷೆಗಳಿಗೆ ತರ್ಜುಮೆ ಮಾಡಿ, ದೇಶ, ವಿದೇಶಗಳಲ್ಲಿ ವೀರಶೈವ ಸಂಪ್ರದಾಯಗಳನ್ನು ಪಸರಿಸಿದ ಕೀರ್ತಿ ಕಾಶಿ ಶ್ರೀಗಳಿಗೆ ಸಲ್ಲುತ್ತದೆ. ಇಷ್ಟಲಿಂಗಪೂಜೆ ಮನುಷ್ಯನ ಸಕಲ ಇಷ್ಟಾರ್ಥಗಳನ್ನು ಪೂರೈಸುತ್ತದೆ. ಅನಿಷ್ಟಗಳನ್ನು ದೂರ ಮಾಡುತ್ತದೆ’ ಎಂದರು.

ದೊಡ್ಡಗುಣಿ ಹಿರೇಮಠದ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಿವಗಂಗಾ ಕ್ಷೇತ್ರದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ತೆಂಕಲಗೂಡು ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಮಾತನಾಡಿದರು.

ಡಿ.ಎಂ. ಕುರ್ಕೆ ಬೂದಿಹಾಳ್ ವಿರಕ್ತಮಠದ ಶಶಿಶೇಖರ ಸಿದ್ಧ ಬಸವ ಸ್ವಾಮೀಜಿ ಪಾಲ್ಗೊಂಡಿದ್ದರು.

> **ಸಿದ್ಧಾಂತ ಶಿಖಾಮಣಿಯಲ್ಲಿ ವೀರಶೈವ ಧರ್ಮದ ಆಚರಣೆಗಳು, ಲಿಂಗಧಾರಣೆ, ಸ್ಥಲ ಸಿದ್ಧಾಂತಗಳನ್ನು ಅರ್ಥ ಮಾಡಿಕೊಳ್ಳಲು ಅತ್ಯಗತ್ಯವಾದ ಸಾರಗಳು ಅಡಗಿವೆ**
> **ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ,** ಕಾಶಿ ಪೀಠ

ಎಲ್ಲ ನಿಗಮಗಳಿಗೆ ₹500 ಕೋಟಿ ಅನುದಾನ ನೀಡುವಂತೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಒಡೆತನ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಎಲ್ಲ ನಿಗಮಗಳಿಗೆ ಕನಿಷ್ಠ ₹500 ಕೋಟಿ ಅನುದಾನವನ್ನು ನೀಡಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಆರ್. ಮೋಹನ್‌ರಾಜ್ ಆಗ್ರಹಿಸಿದರು.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಎಲ್ಲ ನಿಗಮಗಳಿಗೆ ನೀಡಿರುವ ಅನುದಾನ ಬಳಸಿಕೊಂಡು ದಲಿತ ಸಮುದಾಯವನ್ನು ಆರ್ಥಿಕವಾಗಿ ಬಲಪಡಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕರಿಗೆ ಶೇ 4ರಷ್ಟು ಬಡ್ಡಿ ದರದಲ್ಲಿ ₹2 ಕೋಟಿ ಸಾಲ ನೀಡಿ ಕಂಪನಿಗಳನ್ನು ಆರಂಭಿಸಲು ಅವಕಾಶ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

‘ಪ್ರಬುದ್ಧ ಯೋಜನೆ ಅಡಿಯಲ್ಲಿ ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಅರ್ಜಿ ಸಲ್ಲಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಕಾಶ ಕಲ್ಪಿಸಬೇಕು. 2026ರ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅಡಿಯಲ್ಲಿ ನೀಡಿರುವ ಅನುದಾನವನ್ನು ಬೇರೆ ಯೋಜನೆಗಳಿಗೆ ಬಳಕೆ ಮಾಡಬಾರದು’ ಎಂದರು.

‘ಬೌದ್ಧ ನಿಗಮ ಸ್ಥಾಪಿಸಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಈ ನಿಗಮಕ್ಕೆ ₹500 ಕೋಟಿ ಅನುದಾನವನ್ನು ನೀಡಬೇಕು’ ಎಂದು ಹೇಳಿದರು.

ಅಧ್ಯಕ್ಷರಾಗಿ ಎಚ್.ಬಿ. ಸಿದ್ಯಾನಾಯ್ಕ್ ಆಯ್ಕೆ

ಬೆಂಗಳೂರು: ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ಅಧ್ಯಕ್ಷರಾಗಿ ಎಚ್.ಬಿ. ಸಿದ್ಯಾನಾಯ್ಕ್ ಆಯ್ಕೆಯಾಗಿದ್ದಾರೆ.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಧನಂಜಯ ನಾಯಕ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಸಂಘದ ಉಪಾಧ್ಯಕ್ಷ ಎಸ್. ರಾಮದಾಸ್ ನಾಯಕ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

2028ರ ವರೆಗೆ ಜಲ ಜೀವನ್ ಮಿಷನ್ ವಿಸ್ತರಣೆ

ನವದೆಹಲಿ: ಜಲ ಜೀವನ್ ಮಿಷನ್ ಯೋಜನೆಯನ್ನು 2028ರ ಡಿಸೆಂಬರ್ ವರೆಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಗ್ರಾಮೀಣ ಭಾರತದ ಎಲ್ಲ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲು ಈ ಯೋಜನೆಯನ್ನು 2019ರಲ್ಲಿ ಪ್ರಾರಂಭಿಸಲಾಗಿತ್ತು. ಯೋಜನೆಯನ್ನು ಮರು ವಿನ್ಯಾಸ ಗೊಳಿಸುವ ಜಲಶಕ್ತಿ ಸಚಿವಾಲಯದ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಯೋಜನೆಯ ಗಮನವು ಮೂಲಸೌಕರ್ಯ ನಿರ್ಮಾಣದಿಂದ ಸೇವೆಯ ವಿತರಣೆಯತ್ತ ಹರಿಯಲಿದೆ. ಮಿಷನ್‌ನ ಮರುರಚನೆಗಾಗಿ ಒಟ್ಟು ವೆಚ್ಚವನ್ನು ₹8.69 ಲಕ್ಷ ಕೋಟಿಗೆ ಹೆಚ್ಚಿಸಲು ಒಪ್ಪಿಗೆ ನೀಡಲಾಗಿದೆ. ಇದರಲ್ಲಿ ಕೇಂದ್ರದ ಒಟ್ಟು ಪಾಲು ₹3.59 ಲಕ್ಷ ಕೋಟಿ ಆಗಿರಲಿದೆ. ಈ ಮೂಲಕ ಕೇಂದ್ರದ ಪಾಲನ್ನು ₹1.51 ಲಕ್ಷ ಕೋಟಿ ಹೆಚ್ಚಿಸಲಾಗಿದೆ’ ಎಂದರು.

‘ಯೋಜನೆಯ ಗುರಿ ಸಾಧನೆಗಾಗಿ ‘ಸುಜಲಂ ಭಾರತ್’ ಎಂಬ ಏಕರೂಪದ ರಾಷ್ಟ್ರೀಯ ಡಿಜಿಟಲ್ ಚೌಕಟ್ಟನ್ನು ರೂಪಿಸಲಾಗುವುದು. ಇದರ ಅಡಿಯಲ್ಲಿ ಪ್ರತಿ ಹಳ್ಳಿಗೂ ವಿಶಿಷ್ಟವಾದ ‘ಸುಜಲ್ ಗಾಂವ್’ ಅಥವಾ ‘ಸೇವಾ ಪ್ರದೇಶದ ಗುರುತು’ ನೀಡಲಾಗುವುದು’ ಎಂದರು.

ಉದ್ಯಮಿ ಕೊಲೆ ಪ್ರಕರಣ ಸಿಐಡಿಗೆ ಹಸ್ತಾಂತರ

ಆನೇಕಲ್: ರಿಯಲ್ ಎಸ್ಟೇಟ್ ಉದ್ಯಮಿ ಗೋಪಿ ಅಪಹರಣ ಮತ್ತು ಕೊಲೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿ ಡಿಜಿಪಿ ಡಾ.ಎಂ.ಎ.ಸಲೀಂ ಆದೇಶಿಸಿದ್ದಾರೆ. ಕೊಲೆ ಸಂಬಂಧ ವಿಧಾನಸಭೆ ಅಧಿವೇಶನದಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದಾಗ ಗೃಹ ಸಚಿವ ಜಿ.ಪರಮೇಶ್ವರ, ಸಿಐಡಿ ತನಿಖೆಗೆ ಸೂಚಿಸಿದ್ದರು.

ಕೊಲೆ ಹಿನ್ನೆಲೆಯಲ್ಲಿ ಪ್ರಮುಖ ಸೂತ್ರಧಾರ ಹೊನ್ನಕಳಶಾಪುರ ಗ್ರಾಮದ ಮೋಹನ್ ಬಾಬುನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೃತದೇಹ ತಮಿಳುನಾಡಿನ ಡೆಂಕಣಿಕೋಟೆಯಲ್ಲಿ ಸಿಕ್ಕಿದ್ದರಿಂದ ಅಲ್ಲಿನ ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಿದರು. ಪೊಲೀಸ್ ಬಿಗಿ ಬಂದೋಬಸ್ತ್‌ನಲ್ಲಿ ಅಂತ್ಯಕ್ರಿಯೆ ನಡೆಯಿತು.

6 ಆರೋಪಿಗಳ ಬಂಧನ: ಗೋಪಿ ಅಪಹರಣ ಮತ್ತು ಕೊಲೆಗೆ ಸಂಬಂಧಿಸಿದಂತೆ ಆರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

₹48.24 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ನಾಲ್ವರು ಆರೋಪಿಗಳ ಬಂಧನ
ಪಶ್ಚಿಮ ಬಂಗಾಳದಿಂದ ಗಾಂಜಾ ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ, ಕೆ.ಜಿ ಹಳ್ಳಿ ಹಾಗೂ ಮಲ್ಲೇಶ್ವರ ಠಾಣೆಯ ಪೊಲೀಸರು ತಮ್ಮ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.



ಬಂಧಿತರಿಂದ ₹48.24 ಲಕ್ಷ ಮೌಲ್ಯದ 37 ಕೆ.ಜಿ ಗಾಂಜಾ, 33 ಗ್ರಾಂ ಹೈಡ್ರೊಗಾಂಜಾ, 23.19 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಜಪ್ತಿ ಮಾಡಲಾಗಿದೆ. ಆಟೊ ಚಾಲಕ ಫಯಾಜ್ (60) ಎಂಬುವವರನ್ನು ಕೆ.ಜಿ ಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದಿಂದ ಮಾದಕ ವಸ್ತು ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಆರೋಪಿ ಕುರ್ಷಿಂದ್ ಆಲಂ(31) ಎಂಬುವರನ್ನು ಮಹದೇವಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿಯಿಂದ ₹20 ಲಕ್ಷ ಮೌಲ್ಯದ ಗಾಂಜಾ ವಶಕ್ಕೆ ಪಡೆಯಲಾಗಿದೆ. ಆರೋಪಿ ಇತ್ತೀಚೆಗೆ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ. ಈ ಮಾಹಿತಿ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಮಾಲು ಸಮೇತ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ನಾಲ್ಕು ವರ್ಷಗಳಿಂದ ರಾಮಮೂರ್ತಿನಗರದ ವಿಜಿನಾಪುರದಲ್ಲಿ ವಾಸವಾಗಿದ್ದು, ಟೈಲರಿಂಗ್ ಕೆಲಸ ಮಾಡಿಕೊಂಡಿದ್ದ. ಜತೆಗೆ, ಪಶ್ಚಿಮ ಬಂಗಾಳದಿಂದ ರೈಲು ಮೂಲಕ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಮೂರು ವರ್ಷಗಳಿಂದ ಕುರ್ಷಿಂದ್ ಆಲಂ ಗಾಂಜಾ ಮಾರಾಟ ದಂಧೆಯಲ್ಲಿ ತೊಡಗಿದ್ದ. ತನ್ನ ಗ್ರಾಹಕರ ಹೆಸರನ್ನು ಪಟ್ಟಿ ಮಾಡಿಕೊಂಡಿರುವ ಆರೋಪಿ, ಅವರಿಗೆ ಮಾತ್ರ ಗಾಂಜಾ ಮಾರುತ್ತಿದ್ದ. ಬೇರೆ ಯಾರಿಗೂ ಕೊಡುತ್ತಿರಲಿಲ್ಲ. ತನ್ನ ಪಟ್ಟಿಯಲ್ಲಿದ್ದ ವ್ಯಕ್ತಿ ಬೇರೆ ಯಾರಿಗಾದರೂ ಗಾಂಜಾ ಕೊಡುವಂತೆ ಕೇಳಿಕೊಂಡಾಗ ಮಾತ್ರ ಅಂತವರಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದ’ ಎಂದು ಪೊಲೀಸರು ಮಾಹಿತಿ ನೀಡಿದರು.

ಈ ಸಂಬಂಧ ಮಹದೇವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಹದೇವಪುರ ಠಾಣಾಧಿಕಾರಿ ಪ್ರವೀಣ್ ಬಾಬು ಮತ್ತು ತಂಡ ಕಾರ್ಯಾಚರಣೆ ನಡೆಸಿದೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

₹49.30 ಲಕ್ಷ ಮೌಲ್ಯದ 321 ಮೊಬೈಲ್ ಜಪ್ತಿ

ಬೆಂಗಳೂರು: ಇಲ್ಲಿನ ಆಗ್ನೇಯ ವಿಭಾಗದ ಪೊಲೀಸರು ಮಾರ್ಚ್ 1ರಿಂದ 10ರ ವರೆಗೆ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಆರೋಪಿಗಳಿಂದ ₹49.30 ಲಕ್ಷ ಮೌಲ್ಯದ 321 ಮೊಬೈಲ್ ಜಪ್ತಿ ಮಾಡಿಕೊಳ್ಳು-ವಲ್ಲಿ ಯಶಸ್ವಿ ಆಗಿದ್ದಾರೆ. ಎಲ್ಲ ಮೊಬೈಲ್‌ಗಳನ್ನೂ ವಾರಸುದಾರರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ‘ಇ-ಲಾಸ್ಟ್’ ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ‘ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್’ (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ತಾಂತ್ರಿಕ ಸುಳಿವು ಆಧರಿಸಿ, ಪೊಲೀಸರು ತನಿಖೆ ನಡೆಸಿ ಮೊಬೈಲ್ ಪತ್ತೆ ಮಾಡಿ ಜಪ್ತಿ ಮಾಡಿಕೊಳ್ಳುವಲ್ಲಿ ಆಗ್ನೇಯ ವಿಭಾಗದ ಪೊಲೀಸರು ಯಶಸ್ವಿ ಆಗಿದ್ದಾರೆ.

ಆಡುಗೋಡಿ ಠಾಣೆಯ ಪೊಲೀಸರು 45, ಬೊಮ್ಮನಹಳ್ಳಿ ಠಾಣೆಯ ಪೊಲೀಸರು 49, ಎಚ್‌ಎಸ್‌ಆರ್ ಲೇಔಟ್ 15, ಕೋರಮಂಗಲ 27, ಮಡಿವಾಳ 49, ಮೈಕೊಲೇಔಟ್ 65, ಸುದ್ದಗುಂಟೆ ಪಾಳ್ಯ 41, ತಿಲಕ್‌ನಗರ ಠಾಣೆಯ ಪೊಲೀಸರು 30 ಮೊಬೈಲ್ ಫೋನ್‌ಗಳನ್ನು ಆರೋಪಿಗಳಿಂದ ವಶಕ್ಕೆ ಪಡೆದುಕೊಂಡಿದ್ದಾರೆ.

ಇಬ್ಬರು ರೌಡಿಗಳ ಬಂಧನ

ಬೆಂಗಳೂರು: ಅಕ್ರಮವಾಗಿ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಇಟ್ಟುಕೊಂಡು ಬೆದರಿಕೆ ಹಾಕುತ್ತಿದ್ದ ಇಬ್ಬರು ರೌಡಿಗಳನ್ನು ಸಿಸಿಬಿಯ ಸಂಘಟಿತ ಅಪರಾಧ ದಳದ ಸಿಬ್ಬಂದಿ ಬಂಧಿಸಿದ್ದಾರೆ.



ನಾಗೇಂದ್ರ ಹಾಗೂ ಸುಹೈಲ್ ಖಾನ್ ಬಂಧಿತರು. ಬಂಧಿತರಿಂದ ಎರಡು ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ.

‘ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪದ ಮೇಲೆ ನಾಗೇಂದ್ರನನ್ನು ಈ ಹಿಂದೆ ಪೊಲೀಸರು ಬಂಧಿಸಿದ್ದರು. ನಾಗೇಂದ್ರ ವಿರುದ್ಧ ರೌಡಿ ಪಟ್ಟಿಯನ್ನೂ ತೆರೆಯಲಾಗಿತ್ತು. ಜಾಮೀನಿನ ಮೇಲೆ ಹೊರ ಬಂದು ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ಹಾಜರಾಗುತ್ತಿರಲಿಲ್ಲ. ಬನ್ನೇರುಘಟ್ಟ ರಸ್ತೆಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಪರವಾನಗಿ ಇಲ್ಲದ ಎರಡು ಪಿಸ್ತೂಲ್ ಹಾಗೂ ಮೂರು ಜೀವಂತ ಗುಂಡುಗಳನ್ನು ಇಟ್ಟಿದ್ದ ಆತ, ಪಿಸ್ತೂಲ್ ಹಿಡಿದು ಸಾರ್ವಜನಿಕರನ್ನೂ ಬೆದರಿಸುತ್ತಿದ್ದ. ಆತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ, ಹೊರರಾಜ್ಯದ ವ್ಯಕ್ತಿಯಿಂದ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಖರೀದಿಸಿರುವುದು ಗೊತ್ತಾಗಿತ್ತು. ಖಚಿತ ಮಾಹಿತಿ ಆಧರಿಸಿ ಹೊರರಾಜ್ಯದ ವ್ಯಕ್ತಿಯನ್ನೂ ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಬನಶಂಕರಿ ಪೊಲೀಸರ ಕಾರ್ಯಾಚರಣೆ

₹1.26 ಕೋಟಿ ಮೌಲ್ಯದ 589 ಗ್ರಾಂ ಚಿನ್ನಾಭರಣ, 1 ಕೆ.ಜಿ 126 ಗ್ರಾಂ ಬೆಳ್ಳಿಯ ವಸ್ತುಗಳು, ಒಂದು ಕಾರು, ಮೂರು ದ್ವಿಚಕ್ರ ವಾಹನಗಳು ಹಾಗೂ ₹9.50 ಲಕ್ಷ ನಗದು ಜಪ್ತಿ

ಮನೆಗೆ ಕನ್ನ: ಐವರ ಸೆರೆ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿ ಪರಾರಿ ಆಗಿದ್ದ ಐವರು ಆರೋಪಿಗಳನ್ನು ಬನಶಂಕರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಾಜರಹಳ್ಳಿಯ ಬಾಲಾಜಿ ಲೇಔಟ್‌ನ ರಘು ಅಲಿಯಾಸ್ ‘ಪೆಪ್ಸಿ’ (25), ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ವಿ.ಲಿಖಿತ್ ಅಲಿಯಾಸ್ ‘ಕಡ್ಡಿ’ (23), ಬೆಂಗಳೂರಿನ ತ್ಯಾಗರಾಜನಗರದ ಮಿಥುನ್ ಅಲಿಯಾಸ್ ‘ಮಿಲ್ಕಿ’ (22), ಬನಶಂಕರಿ ಮೊದಲ ಹಂತದ ನಿವಾಸಿ ಎನ್.ಪುನೀತ್ (34) ಹಾಗೂ ಬಿಸಿಎಂಸಿ ಲೇಔಟ್‌ನ ನಿವಾಸಿ ಪುನೀತ್ ಅಲಿಯಾಸ್ ‘ಹಂಡಿ’ (19) ಬಂಧಿತರು.



ಆರೋಪಿಗಳಿಂದ ವಶಕ್ಕೆ ಪಡೆದ ಚಿನ್ನದ ಆಭರಣ ಹಾಗೂ ನಗದು

ನಗರವೂ ಸೇರಿದಂತೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಆರೋಪಿ ರಘು ವಿರುದ್ಧ 36, ಲಿಖಿತ್ ವಿರುದ್ಧ 14, ಮಿಥುನ್ ವಿರುದ್ಧ 22 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಆರೋಪಿಗಳಿಂದ ₹1.26 ಕೋಟಿ ಮೌಲ್ಯದ 589 ಗ್ರಾಂ ಚಿನ್ನಾಭರಣ, 1 ಕೆ.ಜಿ 126 ಗ್ರಾಂ ಬೆಳ್ಳಿಯ ವಸ್ತುಗಳು, ಒಂದು ಕಾರು, ಮೂರು ದ್ವಿಚಕ್ರ ವಾಹನಗಳು ಹಾಗೂ ₹9.50 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬನಶಂಕರಿ ಎರಡನೇ ಹಂತದಲ್ಲಿ ನೆಲಸಿದ್ದ ಕುಟುಂಬವು ತಮಿಳುನಾಡಿನ ಪ್ರವಾಸಕ್ಕೆ ತೆರಳಿತ್ತು. ವಾಪಸ್ ಬಂದು ನೋಡಿದಾಗ ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿ ಆಗಿರುವುದು ಗೊತ್ತಾಗಿತ್ತು. ಮನೆಯ ಮಾಲೀಕರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಭಾರತೀನಗರ ಠಾಣೆ ಪೊಲೀಸರಿಂದ ಆರೋಪಿಗಾಗಿ ಹುಡುಕಾಟ

ಗಿಳಿಶಾಸ್ತ್ರ: ಐ.ಟಿ ಅಧಿಕಾರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಯಲ್ಲಿ ಬಡ್ತಿಗಾಗಿ ಗಿಳಿಶಾಸ್ತ್ರದ ಮೊರೆ ಹೋಗಿದ್ದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಯೊಬ್ಬರು ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಹಾಗೂ ಹಣ ಕಳೆದುಕೊಂಡಿದ್ದಾರೆ.

55 ವರ್ಷದ ಅಧಿಕಾರಿಯೊಬ್ಬರು ನೀಡಿರುವ ದೂರಿನ ಮೇಲೆ ಭಾರತೀನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಆರೋಪಿಯ ಪತ್ತೆಗೆ ತನಿಖೆ ಆರಂಭಿಸಿದ್ದಾರೆ.

ನಗರದ ಆದಾಯ ತೆರಿಗೆ ಇಲಾಖೆ ಕಚೇರಿಯಲ್ಲಿ ಕಳೆದ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಣ ಕಳೆದುಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

‘ಶೇಖರ್ ಎಂಬ ವ್ಯಕ್ತಿ 194 ಗ್ರಾಂ ಚಿನ್ನದ ಆಭರಣ ಹಾಗೂ 1 ಕೆ.ಜಿ 300 ಗ್ರಾಂ ಬೆಳ್ಳಿಯ ಆಭರಣ ಪಡೆದು ಪರಾರಿಯಾಗಿದ್ದಾನೆ’ ಎಂದು ದೂರು ನೀಡಲಾಗಿದೆ.

‘ಡಿಸೆಂಬರ್‌ನಲ್ಲಿ ಭಾರತೀನಗರದ ಶ್ರೀಸರ್ಕಲ್ ಬಳಿ ಅಧಿಕಾರಿ ನಡೆದು ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ಗಿಳಿಶಾಸ್ತ್ರ ಹೇಳುವ ವ್ಯಕ್ತಿ ರಸ್ತೆ ಬದಿ ಕುಳಿತಿದ್ದ. ಗಿಳಿಶಾಸ್ತ್ರ ಹೇಳುವ ವ್ಯಕ್ತಿಯೇ ಅಧಿಕಾರಿಯನ್ನು ಪರಿಚಯಿಸಿಕೊಂಡು, ಗಿಳಿಶಾಸ್ತ್ರ ಹೇಳುವುದಾಗಿ ತಿಳಿಸಿದ್ದ. ಆತನ ಮಾತು ನಂಬಿದ್ದ ಅಧಿಕಾರಿ ಗಿಳಿಶಾಸ್ತ್ರ ಕೇಳಲು ಕುಳಿತಿದ್ದರು’ ಎಂದು ಪೊಲೀಸರು ಹೇಳಿದರು.

‘ನಿಮ್ಮ ಮುಖ ನೋಡಿ ಜಾತಕ ಹೇಳ್ತೀನಿ, ಜೀವನ ಸುಧಾರಿಸಬೇಕಾದರೆ ಪೂಜೆ ಮಾಡಿಸಬೇಕು’ ಎಂದು ನಂಬಿಸಿದ್ದ ಆರೋಪಿ, ಆರಂಭದಲ್ಲಿ ₹50 ಸಾವಿರ ಪಡೆದು ಸಣ್ಣದೊಂದು ಪೂಜೆ ಮಾಡಿದ್ದ. ಇದಾದ ಬಳಿಕ ಕರೆ ಮಾಡಿದ್ದ ಶೇಖರ್, ‘ನಿಮಗೆ ವೃತ್ತಿಯಲ್ಲಿ ಬಡ್ತಿ, ವರ್ಗಾವಣೆ ಆಗಬೇಕು’ ಎಂದರೆ ದೊಡ್ಡ ಪೂಜೆಯೊಂದನ್ನು ಮಾಡಬೇಕು. ಮನೆಯಲ್ಲಿರುವ ಚಿನ್ನಾಭರಣ ತಗೊಂಡು ಬನ್ನಿ’ ಎಂದಿದ್ದ. ಆರೋಪಿಯ ಮಾತು ನಂಬಿದ್ದ ಅಧಿಕಾರಿ ಸುಮಾರು 194 ಗ್ರಾಂ ಚಿನ್ನ ಮತ್ತು 1 ಕೆ.ಜಿ 300 ಗ್ರಾಂ ಬೆಳ್ಳಿ ಆಭರಣಗಳನ್ನು ಪೂಜೆಗಾಗಿ ಆತನಿಗೆ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

ಸಬೂಬು ಹೇಳಿ ಪರಾರಿ: ‘ಒಂದೇ ದಿನದಲ್ಲಿ ಪೂಜೆ ಮುಗಿಸಿ ಚಿನ್ನಾಭರಣ ವಾಪಸ್ ಕೊಡುತ್ತೇನೆ’ ಎಂದು ಆರೋಪಿ ಹೇಳಿದ್ದ. ಅದಾದ ಮೇಲೆ ‘ನಾಳೆ ಬನ್ನಿ, ನಾಡಿದ್ದು ಬನ್ನಿ’ ಎಂದು ಸಬೂಬು ಹೇಳಲಾರಂಭಿಸಿದ್ದ. ಅನುಮಾನಗೊಂಡ ಅಧಿಕಾರಿ, ಆರೋಪಿ ಕುಳಿತಿದ್ದ ಶ್ರೀಸರ್ಕಲ್ ಬಳಿ ಹೋಗಿ ನೋಡಿದಾಗ ಅಲ್ಲಿಂದ ಆತ ಪರಾರಿ ಆಗಿರುವುದು ಗೊತ್ತಾಗಿದ್ದು ಬಳಿಕ ದೂರು ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಮನೆಗೆ ಕನ್ನ: ಆರೋಪಿ ಸೆರೆ

ಬೆಂಗಳೂರು: ಆರು ತಿಂಗಳಿಂದ ಸಂಚು ರೂಪಿಸಿ ಮನೆಯೊಂದರಲ್ಲಿ ₹3 ಕೋಟಿ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣಗಳನ್ನು ಕಳ್ಳತನ ಮಾಡಿದ್ದ ಹೊರರಾಜ್ಯದ ಆರೋಪಿಯನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ವೆಲಾರಾಮ್ ಮೀನಾ (19) ಆರೋಪಿ. ಆರೋಪಿ ಬಚ್ಚಿಟ್ಟಿದ್ದ 1 ಕೆ.ಜಿ 833 ಗ್ರಾಂ ವಜ್ರ ಹಾಗೂ ಚಿನ್ನದ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರ್.ಟಿ ನಗರದ ನಿವಾಸಿ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.


‘ಅಮೆರಿಕದಲ್ಲಿ ನೆಲಸಿದ್ದ ದಂಪತಿಗೆ ನ್ಯಾಯಾಂಗ ಬಡಾವಣೆಯಲ್ಲಿ ಮನೆ ಇದೆ. ದಂಪತಿ ಆರು ತಿಂಗಳು ಅಥವಾ ವರ್ಷಕ್ಕೊಮ್ಮೆ ನಗರಕ್ಕೆ ಬಂದು ಹೋಗುತ್ತಿದ್ದರು. ಮನೆಯ ಪಕ್ಕದಲ್ಲೇ ನಿರ್ಮಾಣ ಹಂತದ ಕಟ್ಟಡದಲ್ಲಿ ಆರೋಪಿ ವೆಲಾರಾಮ್ ಮೀನಾ ಅವರು ಟೈಲ್ಸ್ ಕೆಲಸ ಮಾಡುತ್ತಿದ್ದರು. ಅವರ ಜತೆಗೆ ಇಪ್ಪತ್ತು ಮಂದಿ ರಾಜಸ್ಥಾನದ ಯುವಕರು ಕೆಲಸ ಮಾಡುತ್ತಿದ್ದರು. ಕೆಲಸಕ್ಕೆ ಬಂದಾಗ ವೆಲಾರಾಮ್ ಅವರು ಬೀಗ ಹಾಕಿದ್ದ ಮನೆಯನ್ನು ಗಮನಿಸಿದ್ದರು. ರಾತ್ರಿ ವೇಳೆ ಆ ಮನೆಯ ಬೀಗ ಒಡೆದು ಮನೆಯಲ್ಲಿದ್ದ ಆಭರಣಗಳನ್ನು ಕಳ್ಳತನ ಮಾಡಿದ್ದರು’ ಎಂದು ಮೂಲಗಳು ಹೇಳಿವೆ.

ರಾಜಸ್ಥಾನಕ್ಕೆ ಪರಾರಿ: ‘ಕೃತ್ಯ ಎಸಗಿದ ಬಳಿಕ ಆರೋಪಿ ರಾಜಸ್ಥಾನಕ್ಕೆ ತೆರಳಿದ್ದರು. ಅಲ್ಲಿ ಸ್ವಲ್ಪ ಆಭರಣವನ್ನು ಮಾರಾಟ ಮಾಡಿ ಉಳಿದ ಆಭರಣವನ್ನು ಮನೆಯಲ್ಲೇ ಬಚ್ಚಿಟ್ಟಿದ್ದರು. ಅಲ್ಲಿಗೆ ತೆರಳಿದ್ದ ಪೊಲೀಸ್ ತಂಡವು ಆರೋಪಿಯನ್ನು ಬಂಧಿಸಿ ಚಿನ್ನಾಭರಣ ವಶಕ್ಕೆ ಪಡೆದುಕೊಂಡಿದೆ’ ಎಂದು ಮೂಲಗಳು ತಿಳಿಸಿವೆ.

‘ಅಮೆರಿಕದಲ್ಲಿದ್ದ ದಂಪತಿ ಮೊಬೈಲ್ ಮೂಲಕ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದ್ದರು. ಯಾರೋ ಮನೆಯ ಬೀಗ ಒಡೆದು ಒಳಕ್ಕೆ ನುಗ್ಗುತ್ತಿರುವ ದೃಶ್ಯವು ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಮನೆಯ ಮಾಲೀಕರು ನೀಡಿದ ಮಾಹಿತಿ ಮೇರೆಗೆ ಆರ್.ಟಿ ನಗರದ ವ್ಯಕ್ತಿಯೊಬ್ಬರು ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

ಚಂಪಕಧಾಮ ರಥೋತ್ಸವ

ಪ್ರಜಾವಾಣಿ ಚಿತ್ರ:



ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಚಂಪಕಧಾಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು

ರಾಜ್ಯದೆಲ್ಲೆಡೆ ಕಂಬಳಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ



ನವದೆಹಲಿ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹೊರತುಪಡಿಸಿ ಕರ್ನಾಟಕದ ಇತರ ಭಾಗಗಳಲ್ಲಿ ಕಂಬಳ ನಡೆಸುವುದನ್ನು ಪ್ರಶ್ನಿಸಿ ‘ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್’ (ಪೆಟಾ) ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಕರ್ನಾಟಕ ಹೈಕೋರ್ಟ್‌ನ ನವೆಂಬರ್ 14ರ ಆದೇಶ ಪ್ರಶ್ನಿಸಿ ಪೆಟಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ, ‘ಕಂಬಳ ಕ್ರೀಡೆಯನ್ನು ರಾಜ್ಯದ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಏಕೆ ಸೀಮಿತಗೊಳಿಸಬೇಕು’ ಎಂದು ಪ್ರಶ್ನಿಸಿದೆ.

‘ಸಮಿತಿಯವರು ರಾಜ್ಯದ ವಿವಿಧ ಭಾಗಗಳಲ್ಲಿ ಸಂಸ್ಕೃತಿ ಪ್ರದರ್ಶಿಸಲು ಬಯಸಿದರೆ ತಪ್ಪೇನು? ರಾಜ್ಯದ ಇತರ ಭಾಗಗಳ ಜನರೂ ಈ ಸಂಸ್ಕೃತಿಯ ಪರಿಚಯ ಹೊಂದಲಿ’ ಎಂದು ನ್ಯಾ. ಮೆಹ್ತಾ ಅಭಿಪ್ರಾಯಪಟ್ಟರು.

ಆಗ ಪೆಟಾ ವಕೀಲರು, ‘ನಿರ್ದಿಷ್ಟ ಪ್ರದೇಶದ ಹೊರತಾಗಿ ರಾಜ್ಯದ ಇತರ ಭಾಗಗಳಲ್ಲಿ ಕಂಬಳ ಆಯೋಜಿಸುವುದು ಒಪ್ಪುವಂತಹುದಲ್ಲ. ಸುಪ್ರೀಂ ಕೋರ್ಟ್ ಮುಂದೆ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರದ ಅನುಸಾರ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರವೇ ಕಂಬಳವನ್ನು ಆಯೋಜಿಸಬೇಕಿದೆ’ ಎಂದರು.

‘ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಂಬಳ ಸ್ಪರ್ಧೆ ನಡೆಸಲು ಬೆಂಗಳೂರು ಕಂಬಳ ಸಮಿತಿಗೆ ಅನುಮತಿ ನೀಡಬಾರದು. ಈ ದಿಸೆಯಲ್ಲಿ ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಕೋರಿ ಪೆಟಾ ಸಂಸ್ಥೆಯು ಹೈಕೋರ್ಟ್ ಮೆಟ್ಟಿಲೇರಿತ್ತು.

‘ಬೇರಾವುದೇ ಜಿಲ್ಲೆಯಲ್ಲಿ ಕಂಬಳ ನಡೆಸುವುದರಿಂದ ಕೋಣಗಳಿಗೆ ಹಿಂಸೆ ನೀಡಿದಂತಾಗಲಿದೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಕಂಬಳಕ್ಕೆ ಲಕ್ಷಾಂತರ ಜನ ಬರುತ್ತಾರೆ. ಇದಕ್ಕಾಗಿ ವಿಐಪಿ ಪಾಸ್‌ಗಳನ್ನು ವಿತರಿಸಲಾಗುತ್ತಿದೆ. ದೊಡ್ಡ ದೊಡ್ಡ ಉದ್ಯಮಿಗಳು ಇದರ ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ. ಶಿವಮೊಗ್ಗದಲ್ಲೂ ಈ ಕ್ರೀಡೆ ನಡೆಸುವ ಚಿಂತನೆಯನ್ನು ಕಂಬಳ ಆಯೋಜನಾ ಸಮಿತಿ ಹೊಂದಿದೆ’ ಎಂದು ಅರ್ಜಿಯಲ್ಲಿ ದೂರಲಾಗಿತ್ತು.

‘ಸುಮಾರು 300 ಕಿ.ಮೀ ದೂರದಿಂದ ತರಲಾಗುವ ದಣಿದ ಕೋಣಗಳನ್ನು ಸ್ಪರ್ಧೆಗೆ ಇಳಿಸಲಾಗುತ್ತದೆ. ಇದು ಪ್ರಾಣಿ ಹಿಂಸೆಯಾಗುತ್ತದೆ. ಆದ್ದರಿಂದ, ನ್ಯಾಯಾಲಯ ನಿರ್ಧರಿಸುವ ವರೆಗೆ ಕೋಣಗಳನ್ನು ಬೆಂಗಳೂರಿಗೆ ಟ್ರಕ್‌ನಲ್ಲಿ ತರದಂತೆ ಕಂಬಳ ಆಯೋಜನಾ ಸಮಿತಿಗೆ ಆದೇಶಿಸಬೇಕು’ ಎಂದು ಕೋರಲಾಗಿತ್ತು.

ಚಿತ್ರಾವಳಿ



ಷ್ನೈಡರ್ ಎಲೆಕ್ಟ್ರಿಕ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಸ್‌ಇಐಎಲ್), ಷ್ನೈಡರ್ ಎಲೆಕ್ಟ್ರಿಕ್ ಇಂಡಿಯಾ ಫೌಂಡೇಷನ್ (ಎಸ್‌ಇಐಎಫ್) ಹಾಗೂ ಶಿಶು ಮಂದಿರ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಸೌಲಭ್ಯ ವಂಚಿತ ಸಮುದಾಯಗಳಿಗೆ 3,000 ಪೋರ್ಟಬಲ್ ಸೌರ ದೀಪಗಳನ್ನು ವಿತರಿಸಲಾಯಿತು



ದೊಡ್ಡಕಲ್ಲಸಂದ್ರದಲ್ಲಿರುವ ಮೀನಾಕ್ಷಿ ಸಭಾಂಗಣದಲ್ಲಿ ಶ್ರೀ ಸಿದ್ದೇಶ್ವರಿ ರಾಜರಾಜೇಶ್ವರಿ ದೇವಸ್ಥಾನ ಹಾಗೂ ಚಿಂತಾಮಣಿ ಸಂಸ್ಥೆಗಳು ಆಯೋಜಿಸಿದ್ದ ‘ಸ್ವರ ಕೈವಲ್ಯಂ’ ಕಾರ್ಯಕ್ರಮದಲ್ಲಿ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಮರಿ ಮೊಮ್ಮಕ್ಕಳಾದ ಎಸ್.ಐಶ್ವರ್ಯ ಮತ್ತು ಎಸ್.ಸೌಂದರ್ಯ ಅವರ ಸಂಗೀತ ಕಛೇರಿ ನಡೆಯಿತು



ಮೈಕೊ ಲೇಔಟ್‌ನಲ್ಲಿರುವ ಐಡಿಬಿಐ ಬ್ಯಾಂಕ್ ಶಾಖೆಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಯಳ್ಳುಂಕುಂಟೆ ಹಿರಿಯ ಪ್ರಾಥಮಿಕ ಶಾಲೆಗೆ ನೀರು ಶುದ್ಧೀಕರಣ ಯಂತ್ರ (ವಾಟರ್ ಪ್ಯೂರಿಫೈಯರ್) ಹಾಗೂ ಅಡುಗೆ ಪಾತ್ರೆಗಳನ್ನು ದೇಣಿಗೆಯಾಗಿ ನೀಡಲಾಯಿತು. ಬ್ಯಾಂಕ್‌ನ ಅಧಿಕಾರಿಗಳಾದ ಎಂ. ಮಹೇಶ್ವರನ್, ಪ್ರಾಗ್ಯ ತ್ರಿಪಾಠಿ, ಶಾಲೆಯ ಮುಖ್ಯೋಪಾಧ್ಯಾಯ ಎಂ. ಶ್ರೀನಾಥ್, ಎಚ್‌ಎಸ್‌ಆರ್ ಸಿಟಿಜನ್ ಫೋರಂನ ಅಧ್ಯಕ್ಷ ಬಿ.ಎನ್.ಎಸ್. ರತ್ನಾಕರ್, ಬ್ಯಾಂಕರ್ಸ್ ಕನ್ನಡಿಗರ ಅಧ್ಯಕ್ಷ ಎಂ. ವೆಂಕಟೇಶ ಶೇಷಾದ್ರಿ ಉಪಸ್ಥಿತರಿದ್ದರು

ಉದ್ಯೋಗ ನೇಮಕಾತಿಯಲ್ಲಿ ಅನ್ಯಾಯ: ಆರೋಪ

ಒಳಮೀಸಲಾತಿ: ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ನೀಡದೆ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಖಂಡಿಸಿ ಮಾರ್ಚ್ 12ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲು ಒಳಮೀಸಲಾತಿ ಹೋರಾಟ ಸಮಿತಿ ಮುಂದಾಗಿದೆ.

ಒಳಮೀಸಲಾತಿ ಅನ್ವಯಿಸದೇ 56,432 ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸಚಿವ ಸಂಪುಟ ತೀರ್ಮಾನ ಕೈಗೊಂಡಿರುವುದು ಘೋರ ಅನ್ಯಾಯ. ಒಳಮೀಸಲಾತಿಗಾಗಿ 35 ವರ್ಷಗಳಿಂದ ಮಾಡಿದ ಹೋರಾಟಕ್ಕೆ ದ್ರೋಹ ಬಗೆದಿದೆ ಎಂದು ಕರ್ನಾಟಕ ಸಮಸ್ತ ಒಳಮೀಸಲಾತಿ ಹೋರಾಟಗಾರರ ನೇತೃತ್ವದ ಸಮಿತಿಯ ಮುಖಂಡರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಒಳಮೀಸಲಾತಿ ತಪ್ಪಿಸುವ ಹುನ್ನಾರದಿಂದ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು. ಒಳಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ನ್ಯಾ. ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ 17ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಿದ್ದು ಅದು ಜಾರಿಯಲ್ಲಿದೆ. ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಇದನ್ನು ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ನೇರ ನೇಮಕಾತಿ, ಬಡ್ತಿ, ಮುಂಬಡ್ತಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ 2001ರ ಹಿಂದಿನ ಬ್ಯಾಕ್‌ಲಾಗ್ ಹುದ್ದೆಗಳಿಗೆ ಮಾತ್ರ ಅನ್ವಯಿಸಲಾಗುತ್ತಿದೆ. ಈ ನಿಯಮವನ್ನು 2001ರ ನಂತರದ ಬ್ಯಾಕ್‌ಲಾಗ್ ಹುದ್ದೆಗಳಿಗೂ ಅನ್ವಯಿಸಬೇಕು. ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ನೇಮಕಾತಿಗಳಲ್ಲಿ ವಿಶ್ವವಿದ್ಯಾಲಯವನ್ನು ಒಂದು ಘಟಕವಾಗಿ ಪರಿಗಣಿಸಬೇಕು ಎಂಬ ಪ್ರಸ್ತಾವವನ್ನು ಕೈಬಿಡಬೇಕು. ಅಲೆಮಾರಿ ಸಮುದಾಯಗಳಿಗೆ ಶೇ 1 ಪ್ರತ್ಯೇಕ ಮೀಸಲಾತಿ ನೀಡಬೇಕು. ಸಮಾಜ ಕಲ್ಯಾಣ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಿಸದೇ ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಿರುವ ಸಚಿವರನ್ನು ಬದಲಾಯಿಸಬೇಕು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಒಳಮೀಸಲಾತಿ ಹೋರಾಟ ಸಮಿತಿಯ ಮಾರಸಂದ್ರ ಮುನಿಯಪ್ಪ, ಅಂಬಣ್ಣ ಅರೋಲಿಕರ್, ಬಸವರಾಜ್ ಕೌತಾಳ್, ಬಿ.ಆರ್. ಭಾಸ್ಕರ ಪ್ರಸಾದ್, ಬಿ. ನರಸಪ್ಪ ದಂಡೋರ, ಮುತ್ತುರಾಜ್, ಕೇಶವಮೂರ್ತಿ ಸಹಿತ ಅನೇಕರು ಭಾಗವಹಿಸಿದ್ದರು.

ನಿಧನ ವಾರ್ತೆ

ರವೀಂದ್ರ ದಾಸೇಗೌಡ

ಬೆಂಗಳೂರು: ಕಟ್ಟಡ ನಿರ್ಮಾಣ ಗುತ್ತಿಗೆದಾರ ಡಿ.ಎಸ್.ರವೀಂದ್ರ ದಾಸೇಗೌಡ (60) ಅವರು ಹೃದಯಾಘಾತದಿಂದ ಮಂಗಳವಾರ ನಿಧನರಾದರು.

ಸುಬ್ರಹ್ಮಣ್ಯ ನಗರದ ನಿವಾಸಿಯಾಗಿದ್ದ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಪುತ್ರಿ ಕೆನಡಾದಿಂದ ಆಗಮಿಸಿದ ನಂತರ ಗುರುವಾರ ಮಧ್ಯಾಹ್ನ 12ರ ನಂತರ ರಾಜಾಜಿನಗರದ ಹರಿಶ್ಚಂದ್ರಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂಪರ್ಕ: 9611628732



ಇಂಡಿಗೊ ಸಿಇಒ ರಾಜೀನಾಮೆ

ನವದೆಹಲಿ (ಪಿಟಿಐ): ದಿಢೀರ್ ಬೆಳವಣಿಗೆಯಲ್ಲಿ ಇಂಡಿಗೊ ವಿಮಾನಯಾನ ಸಂಸ್ಥೆಯ ಸಿಇಒ ಪೀಟರ್ ಎಲ್ಬರ್ಸ್ ಅವರು ಮಂಗಳವಾರ ರಾಜೀನಾಮೆ ನೀಡಿದ್ದಾರೆ.



ಪೀಟರ್ ಅವರು ವೈಯಕ್ತಿಕ ಕಾರಣಗಳನ್ನು ನೀಡಿ ರಾಜೀನಾಮೆ ನೀಡಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಸಂಸ್ಥೆಯು ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿದೆ.

ಹೊಸ ಸಿಇಒ ನೇಮಕವಾಗುವವರೆಗೂ ಸಹ-ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಭಾಟಿಯ ಅವರು ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ

‘ಸಹಯೋಗ್ ಪೋರ್ಟಲ್’ಗೆ ಸಂಬಂಧಿಸಿದ ಪ್ರಕರಣ: ‘ಎಕ್ಸ್ ಕಾರ್ಪ್’ ಮೇಲ್ಮನವಿ

ಕೇಂದ್ರಕ್ಕೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸಲು ಜಾರಿಗೆ ತರಲಾಗಿರುವ ‘ಸಹಯೋಗ್ ಪೋರ್ಟಲ್’ ಆರಂಭಿಸಿರುವ ಕೇಂದ್ರದ ನಿಲುವನ್ನು ಎತ್ತಿಹಿಡಿದಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ‘ಎಕ್ಸ್ ಕಾರ್ಪ್’ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಗೊಳಿಸುವಂತೆ ಕೋರಿ ‘ಎಕ್ಸ್ ಕಾರ್ಪ್’ (ಈ ಹಿಂದಿನ ಟ್ವಿಟರ್) ಸ್ಥಳೀಯ ಪ್ರತಿನಿಧಿ ಸಲ್ಲಿಸಿರುವ ರಿಟ್ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ‘ಎಕ್ಸ್ ಕಾರ್ಪ್’ ಪರ ಪದಾಂಕಿತ ಹಿರಿಯ ವಕೀಲ ಕೆ.ಜಿ. ರಾಘವನ್ ಮತ್ತು ಕೇಂದ್ರ ಸರ್ಕಾರದ ಪರ ಕೆ.ಅರವಿಂದ ಕಾಮತ್ ಅವರ ವಿವರಣೆ ಆಲಿಸಿದ ನ್ಯಾಯಪೀಠ, ಕೇಂದ್ರ ಕಾನೂನು, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ, ಗೃಹ, ಹಣಕಾಸು, ರಕ್ಷಣೆ, ರೈಲ್ವೆ, ಬೃಹತ್ ಕೈಗಾರಿಕೆ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಲಾಗಿದೆ.

ದೇಶದಲ್ಲಿನ ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರ ಕಲಂ 79(3) (ಬಿ) ಅಡಿಯಲ್ಲಿ ‘ಸಹಯೋಗ್ ಪೋರ್ಟಲ್’ ಪ್ರಾರಂಭಿಸಿದ್ದ ಕೇಂದ್ರ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ‘ಎಕ್ಸ್’ ಕಾರ್ಪ್‌ನ ಸ್ಥಳೀಯ ಪ್ರತಿನಿಧಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿತ್ತು.

‘ವೇಗ ನ್ಯಾಯದಾನ’

ಬೆಂಗಳೂರು: ‘ಮಿಕ್ಕಿರುವ ಹಳೆಯ ಎಲ್ಲ ಪ್ರಕರಣಗಳನ್ನೂ ಇದೇ ರೋಸ್ಟರ್‌ನಲ್ಲಿ (ಕರ್ತವ್ಯಸೂಚಿ ನಾಮಾವಳಿ) ಇತ್ಯರ್ಥಪಡಿಸುತ್ತೇನೆ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಸ್.ರಾಚಯ್ಯ ಅವರು ವೇಗ ನ್ಯಾಯದಾನದ ಆಶಯ ವ್ಯಕ್ತಪಡಿಸಿದರು.

ಸದ್ಯ ಬೆಂಗಳೂರು ಪ್ರಧಾನ ಪೀಠದಲ್ಲಿ 22ನೇ ಕೋರ್ಟ್ ಹಾಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಮೂರ್ತಿ ರಾಚಯ್ಯ ಅವರು ಮಂಗಳವಾರ ಬೆಳಗಿನ ಕಲಾಪ ಆರಂಭಿಸುವ ಮುನ್ನ ಮೆಮೊ (ಜ್ಞಾಪನಾ ಪತ್ರ) ಸ್ವೀಕರಿಸುವ ವೇಳೆ ಈ ಕುರಿತಂತೆ ವಕೀಲ ವೃಂದಕ್ಕೆ ಮೌಖಿಕ ಭರವಸೆ ನೀಡಿದರು.



ನ್ಯಾ.ಎಸ್. ರಾಚಯ್ಯ

‘ಈ ರೋಸ್ಟರ್‌ನಲ್ಲಿ ನನ್ನ ಬಳಿ ಹಿಂದಿನವೂ ಸೇರಿದಂತೆ ಒಟ್ಟು 1,700 ಅರ್ಜಿಗಳಿವೆ. ಇವುಗಳಲ್ಲಿ ಈಗಾಗಲೇ 250 ಪ್ರಕರಣಗಳನ್ನು ವಿಲೇವಾರಿ ಮಾಡಿದ್ದೇನೆ’ ಎಂದು ಅವರು ತಿಳಿಸಿದರು.

ಕೋಲ್ಕತ್ತ ರೇಸ್

ಕ್ಯಾಸ್ಟೀಲ್ ಗೆಲ್ಲುವ ನಿರೀಕ್ಷೆ

ಇಂಡಿಯನ್ ಗೋಲ್ಡನ್ ವೇಸ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ಯಾಸ್ಟೀಲ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರಾಯಲ್ ಕಿಂಗ್ 5, ಸ್ವಾರ್ಜೆನೆಗರ್ 7, ಲಹಿನ 1
2ನೇ ರೇಸ್: ಅಮೇಜ್ ಅಂಡ್ ಇನ್‌ಸ್ಪೈರ್ 2, ರೊಸಾಲಿಯಾ 5, ಸ್ಟಾರ್ ಪವರ್ 3
3ನೇ ರೇಸ್: ಲಗೂನ ಸೆಕಾ 11, ಅನಿಗ್ರಹ 5, ಮೋಸ್ಟ್ ಅಂಡ್ ಮೋರ್ 6
4ನೇ ರೇಸ್: ಕ್ಯಾಸ್ಟೀಲ್ 1, ಟ್ರಾಯಿಲಾ 4, ಬ್ಲ್ಯಾಕ್ ಈಗಲ್ 2
5ನೇ ರೇಸ್: ಅಡ್ಮೈರಿಂಗ್ಲಿ 1, ಸ್ಟಾರ್ಮ್‌ಚೇಸರ್ 3
6ನೇ ರೇಸ್: ಎನ್‌ಚಾನ್ಟಿಂಗ್ 5, ಇಂಪ್ರೆಶಿವ್ ಆನಿ 2, ಮದ್ರಾಸ್ ಚೆಕ್ 3


ಉತ್ತಮ ಬೆಟ್: ಎನ್‌ಚಾನ್ಟಿಂಗ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಎಐ ಜೊತೆ ವ್ಯವಹರಿಸುವಾಗ ನಾವು ಕೇಳುವ ಪ್ರಶ್ನೆಗಳು 'ಸೌಜನ್ಯ'ಯುತವಾಗಿದ್ದರೆ ಅದು ಹೆಚ್ಚು ಸಮರ್ಪಕ ಉತ್ತರಗಳನ್ನು ಕೊಡುವುದೆ? ಈ ಬಗ್ಗೆಯೂ ಈಗ ಸಂಶೋಧನೆಗಳು ನಡೆಯುತ್ತಿವೆಯಂತೆ!



ಉಷ್ಣವನ್ನು ತಡೆಯುವ ಜೀನ್ಸ್



• ಎಸ್.ಎನ್.ಹೆಗಡೆ

> ಮಾನವರನ್ನೂ ಸೇರಿದಂತೆ ಜೀವಿಗಳಿಗೆ ಉಷ್ಣಾಘಾತವನ್ನು ತಡೆದುಕೊಳ್ಳುವ ಶಕ್ತಿ ಇದೆಯೇ ಎಂಬುದನ್ನು ವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಅತಿಯಾದ ಶಾಖವನ್ನು ತಡೆದುಕೊಳ್ಳಲು ಜೀವಿಗಳ ಶರೀರದಲ್ಲಿ ರಕ್ಷಣಾವ್ಯವಸ್ಥೆಯೊಂದು ಕೆಲಸ ಮಾಡುತ್ತದೆ. ವಾತಾವರಣದಲ್ಲಿ ಉಷ್ಣತೆ ಹೆಚ್ಚಿ ಸೆಕೆ ಅತಿಯಾದಾಗ ಆ ಶಾಖ ಜೀವಿಗಳ ಮೇಲೆ ಪ್ರಭಾವ ಬೀರುತ್ತದೆ.

ಈ ವರ್ಷ ಉಷ್ಣತೆಯ ಪ್ರಮಾಣ ವಾರ್ಷಿಕ ಸರಾಸರಿಗಿಂತ ಎರಡು ಡಿಗ್ರಿ ಹೆಚ್ಚಿರುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪರಿಸರಮಾಲಿನ್ಯದ ಪ್ರಭಾವದಿಂದ ಜಾಗತಿಕ ತಾಪಮಾನ ಪ್ರತಿವರ್ಷವೂ ಬೇಸಿಗೆಯಲ್ಲಿ ಒಂದು ಅಥವಾ ಎರಡು ಡಿಗ್ರಿ ಸೆಲ್ಸಿಯಸ್ ಉಷ್ಣತೆ ಹೆಚ್ಚುತ್ತಲೇ ಇರುತ್ತದಂತೆ. ಪರಿಸರಮಾಲಿನ್ಯವನ್ನು ತಡೆಯುವುದೊಂದೆ ಇದಕ್ಕೆ ಮಾರ್ಗ ಎಂದು ತಜ್ಞರು ಸಮಾಜದಲ್ಲಿ ಅರಿವು ಮೂಡಿಸುವ ಪ್ರಯತ್ನ ನಡೆಸುತ್ತಲೇ ಇದ್ದಾರೆ; ಆದರೆ ಪ್ರತಿಫಲ ಶೂನ್ಯ. ಈಗ ನಮ್ಮ ಮುಂದಿರುವ ಪ್ರಶ್ನೆ, ಪ್ರತಿವರ್ಷವೂ ಹೆಚ್ಚುತ್ತಿರುವ ಉಷ್ಣತೆಯನ್ನು ನಾವು ತಡೆದುಕೊಳ್ಳಬಲ್ಲೆವೇ? ಹೀಗೆ ಉಷ್ಣತೆ ಹೆಚ್ಚುತ್ತಿದ್ದು ಮುಂದೊಂದು ದಿನ ಜಾಗತಿಕ ಉಷ್ಣಾಂಶ 60–70 ಡಿಗ್ರಿ ಸೆಲ್ಸಿಯಸ್ ಅಥವಾ ಅದಕ್ಕಿಂತ ಹೆಚ್ಚಾದರೆ ನಾವು ಸುಟ್ಟುಹೋಗುವುದಿಲ್ಲವೇ? ಸದ್ಯಕ್ಕಂತೂ ಹೀಗೆ ಭಯ ಪಡುವ ಅಗತ್ಯವಿಲ್ಲ. ಏಕೆಂದರೆ ನಡುವೆ ಸಂಭವಿಸುವ ಜಾಗತಿಕ ಆಕಸ್ಮಿಕಗಳು ಜಾಗತಿಕ ಉಷ್ಣತೆಯನ್ನು ಇದೇ ಪ್ರಮಾಣದಲ್ಲಿ ಇಳಿಸುವುದರಿಂದ ಜಾಗತಿಕವಾಗಿ ತಾಪಮಾನ ನೂರು ಡಿಗ್ರಿ ತಲುಪಲು ಸಹಸ್ರಾರು ವರ್ಷಗಳೇ ಬೇಕು.

ಜೀವಿಗಳು ನಿರಂತರವಾಗಿ ಶಾಖಕ್ಕೆ ಒಡ್ಡಿಕೊಳ್ಳುವುದರಿಂದ ಶಾರೀರಿಕ ಒತ್ತಡಗಳು ಉಂಟಾಗುತ್ತವೆ. ಅದನ್ನು 'ಉಷ್ಣಾಘಾತ' ಅಥವಾ 'ಹೀಟ್‌ಶಾಕ್' ಎನ್ನುತ್ತಾರೆ. ಮಾನವರನ್ನೂ ಸೇರಿದಂತೆ ಜೀವಿಗಳಿಗೆ ಉಷ್ಣಾಘಾತವನ್ನು ತಡೆದುಕೊಳ್ಳುವ ಶಕ್ತಿ ಇದೆಯೇ ಎಂಬುದನ್ನು ವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಅತಿಯಾದ ಶಾಖವನ್ನು ತಡೆದುಕೊಳ್ಳಲು ಜೀವಿಗಳ ಶರೀರದಲ್ಲಿ ರಕ್ಷಣಾವ್ಯವಸ್ಥೆಯೊಂದು ಕೆಲಸ ಮಾಡುತ್ತದೆ. ಈ ರಕ್ಷಣಾವ್ಯವಸ್ಥೆಯಲ್ಲಿ ಕೆಲವೊಂದು ಜೀನ್‌ಗಳು ಭಾಗವಹಿಸುತ್ತವೆ ಎಂದು ಕೆಲವು ಸಂಶೋಧನೆಗಳು ತಿಳಿಸಿವೆ. ಅವುಗಳಿಗೆ 'ಉಷ್ಣಾಘಾತ–ಜೀನ್'ಗಳೆಂದೇ ಹೆಸರಿಸಲಾಗಿದೆ.

1962ರಲ್ಲಿ ಫೆರುಸಿಯೊ ರಿಟ್ಸೊಸ ಎಂಬ ವಿಜ್ಞಾನಿ ಇಂಥ ಸಂಶೋಧನೆಗಳನ್ನು ಆರಂಭಿಸಿದರು. 'ಡ್ರೊಸಾಫಿಲಾ' ಎಂಬ ಪ್ರಭೇದದ ಹಣ್ಣಿನ ನೊಣಗಳಲ್ಲಿ ಅವರು ಉಷ್ಣಾಘಾತ ಜೀನ್‌ಗಳನ್ನು (ಹೀಟ್‌ಶಾಕ್ ಜೀನ್ಸ್) ಕಂಡು ಹಿಡಿದರು. ಮುಂದಿನ ಎರಡು ದಶಕಗಳ ಸಂಶೋಧನೆಯ ಪರಿಣಾಮವಾಗಿ ಉಷ್ಣಾಘಾತ ಜೀನ್‌ಗಳು ಮಾನವನೂ ಸೇರಿದಂತೆ ಎಲ್ಲ ಜೀವಿಗಳಲ್ಲಿಯೂ ಇವೆ ಎಂದು ಕಂಡು ಬಂತು.

ನಂತರದ ದಿನಗಳಲ್ಲಿ ಈ ಜೀನ್‌ಗಳ ರಚನೆ ಹೇಗಿದೆ? ಅವು ಹೇಗೆ ಕೆಲಸ ಮಾಡುತ್ತವೆ? ಎಂದು ಕಂಡುಹಿಡಿಯವತ್ತ ಸಂಶೋಧನೆಗಳು ಸಾಗಿದವು. ಈ ಎಲ್ಲ ಸಂಶೋಧನೆಗಳಿಗೂ ಕೇವಲ ಮೂರರಿಂದ ನಾಲ್ಕು ಮಿಲಿಮೀಟರ್ ಉದ್ದದ ಡ್ರೊಸಾಫಿಲಾ ಹಣ್ಣಿನ ನೊಣವನ್ನೇ ವಿಜ್ಞಾನಿಗಳು ಬಳಸಿಕೊಂಡರು. ದೊರೆತ ಫಲಿತಾಂಶಗಳು ಮಾನವ ಹಾಗೂ ಇತರ ಜೀವಿಗಳಿಗೆ ಅನ್ವಯವಾಗುವುದನ್ನು ಕಂಡರು. ಈ ಕೀಟವು ಚಿಕ್ಕದಾದರೂ ಅದರಿಂದ ದೊರಕಿದ ಫಲಿತಾಂಶಗಳು ಅತ್ಯಂತ ಉಪಯುಕ್ತವಾಗಿದ್ದವು. ಈ ಜೀನ್‌ಗಳು ಪ್ರೊಟೀನ್ ಸಂಶ್ಲೇಷಣೆಯ ಮೂಲಕ ತಮ್ಮ ಕೆಲಸ ಮಾಡುತ್ತವೆ ಎಂದು ಕಂಡುಬಂತು. 1975ರಲ್ಲಿ ಈ ಪ್ರೊಟೀನ್‌ಗಳಿಗೆ 'ಉಷ್ಣಾಘಾತ ಪ್ರೊಟೀನ್‌ಗಳು' ಅಥವಾ 'ಹೀಟ್‌ಶಾಕ್ ಪ್ರೊಟೀನ್ಸ್' ಅಥವಾ 'ಎಚ್‌ಎಸ್‌ಪಿ' ಎಂದು ಹೆಸರಿಸಲಾಯಿತು. ವಿಜ್ಞಾನಿಗಳು ಸಂಶೋಧನೆಯನ್ನು ಅಲ್ಲಿಗೆ ನಿಲ್ಲಿಸಲಿಲ್ಲ. ಈ ಜೀನ್‌ಗಳು ಹೇಗೆ ಕೆಲಸ ಮಾಡುತ್ತವೆ? ಈ ಪ್ರೊಟೀನ್‌ಗಳ ರಚನೆ ಏನು? ಜೀವಿಗಳ ಮೇಲೆ ಈ ಪ್ರೊಟೀನ್‌ಗಳು ಹೇಗೆ ಪ್ರಭಾವ ಬೀರುತ್ತವೆ? ಇಂಥ ವಿಷಯಗಳ ಕುರಿತು ಅಧ್ಯಯನವನ್ನು ಮಾಡತೊಡಗಿದರು.

ವಾತಾವರಣದಲ್ಲಿ ಉಷ್ಣತೆ ಹೆಚ್ಚಿ ಸೆಕೆ ಅತಿಯಾದಾಗ ಅದು ಜೀವಿಗಳ ಮೇಲೆ ಪ್ರಭಾವ ಬೀರುತ್ತದೆ. ಆ ಜೀವಿಯ ಎಲ್ಲ ಜೀವಕೋಶಗಳಿಗೂ ಅದರ ಪರಿಣಾಮ ತಟ್ಟುತ್ತದೆ. ಇದರಿಂದ ಜೀವಕೋಶಗಳಲ್ಲಿರುವ ಜೈವಿಕ ರಸಾಯನಗಳು ಅವನತಿ ಹೊಂದುತ್ತವೆ ಅಥವಾ ಗುಣವನ್ನು ಕಳೆದುಕೊಳ್ಳುತ್ತವೆ. ಅದರಿಂದ ಜೈವಿಕ ಕ್ರಿಯೆಗಳು ಕುಂಠಿತವಾಗುತ್ತವೆ ಹಾಗೂ ಒಟ್ಟಾರೆ ಜೀವಿಯ ನಡವಳಿಕೆ ಮತ್ತು ಶಾರೀರಿಕ ಕ್ರಿಯೆಗಳ ಮೇಲೂ ಪರಿಣಾಮ ಬೀರಿ ಜೀವಕೋಶಗಳ ಕ್ರಿಯೆ ಸ್ಥಗಿತವಾಗಬಹುದು, ಅಥವಾ ಹೆಚ್ಚಳವಾಗಬಹುದು ಅಥವಾ ಅವು ಕ್ರಿಯಾಹೀನವಾಗಬಹುದು. ಇದರಿಂದ ಶಾರೀರಿಕ ಕ್ರಿಯೆಗಳಲ್ಲಿ ವ್ಯತ್ಯಾಸವುಂಟಾಗಿ ಕ್ಯಾನ್ಸರ್ ಸೇರಿದಂತೆ ಹಲವು ಕಾಯಿಲೆಗಳು ಕಾಣಿಸಿಕೊಳ್ಳಬಹುದು. ಈ ಬದಲಾವಣೆಗಳು ವ್ಯಕ್ತಿಯ ಗಮನಕ್ಕೆ ಬಾರದೇ ಆಂತರಿಕವಾಗಿಯೇ ಹಲವಾರು ದೀರ್ಘಕಾಲಿಕ ಪರಿಣಾಮಗಳಾಗಬಹುದು. ಅಂತಿಮವಾಗಿ ಮಾರಕ ಪರಿಣಾಮಗಳು ಆಗಬಹುದು.

ಜೀವಕೋಶಗಳು ಆಘಾತಕ್ಕೆ ಒಳಗಾದಾಗ ಕೋಶಗಳಲ್ಲಿರುವ ವಿಶೇಷ ಘಟಕಗಳು (ಇವುಗಳನ್ನು 'ಎಚ್‌ಎಸ್‌ಎಫ್' ಎನ್ನುತ್ತಾರೆ) ಅವುಗಳ ಆನುವಂಶೀಯ ವಸ್ತು ಡಿಎನ್‌ಎಗೆ (ಆನುವಂಶೀಯ ವಸ್ತು) ಸೂಚನೆ ನೀಡುತ್ತವೆ. ಆಗ ಜೀವಕೋಶಗಳ ಕೋಶಕೇಂದ್ರದಲ್ಲಿರುವ ಉಷ್ಣಾಘಾತ ಜೀನ್‌ಗಳು ಕ್ರಿಯಾಶೀಲವಾಗುತ್ತವೆ ಹಾಗೂ ಅವು ಎಚ್‌ಎಸ್‌ಪಿ ಪ್ರೊಟೀನ್‌ಗಳನ್ನು ತಯಾರಿಸುತ್ತವೆ. ಈ ಪ್ರೊಟೀನ್‌ಗಳು ರಚನೆಯಲ್ಲಿ ಅಪೂರ್ಣವಾಗಿದ್ದು, (ಇವುಗಳನ್ನು 'ಚಾಪರೋನ್' ಎನ್ನುತ್ತಾರೆ) ಆಘಾತಕ್ಕೆ ಸಂಬಂಧಿಸಿದ ಜೀನ್‌ಗಳ ಕ್ರಿಯೆಗಳನ್ನು ನಿರ್ಬಂಧಿಸುತ್ತವೆ. ಅಧಿಕ ಉಷ್ಣತೆಯ ಪರಿಣಾಮವಾಗಿ ಉಳಿದ ಜೀನ್‌ಗಳ ಹಾಗೂ ಪ್ರೊಟೀನ್‌ಗಳ ಮೇಲೆ ಉಂಟಾಗುವ ಹಾನಿಕಾರಕ ಪರಿಣಾಮಗಳನ್ನು ತಡೆಯುತ್ತವೆ. ವ್ಯಕ್ತಿ ಅಥವಾ ಜೀವಿಗೆ ಉಷ್ಣಾಘಾತದ ಪರಿಣಾಮಗಳಿಂದ ರಕ್ಷಣೆ ದೊರಕುತ್ತದೆ.

ಉಷ್ಣಾಘಾತ ಜೀನ್‌ಗಳು ಅಧಿಕ ಶಾಖದಿಂದ ಶರೀರವನ್ನು ರಕ್ಷಿಸುತ್ತವೆ ಎಂದು ಭಾವಿಸಲಾಗಿತ್ತು. ಆದರೆ ಈ ಜೀನ್‌ಗಳು ಮಾನವರಲ್ಲಿ, ಶಾಖ ಆಘಾತದ ಜೊತೆಗೆ ಅತಿಯಾದ ಶೀತ, ವಾತಾವರಣದ ವೈಪರೀತ್ಯಗಳಿಂದ ಉಂಟಾಗುವ ಒತ್ತಡ, ಸಹಿಷ್ಣುತೆ, ಸಾಮಾನ್ಯ ಬೆಳವಣಿಗೆ, ರೋಗನಿರೋಧತೆ, ವಯಸ್ಸಾಗುವಿಕೆ, ಕ್ಯಾನ್ಸರ್ ಮತ್ತು ನರಕ್ಷೀಣತೆ ಮುಂತಾದ ಕಾಯಿಲೆಗಳ ವಿರುದ್ಧವೂ ರಕ್ಷಣೆಯನ್ನು ನೀಡುತ್ತವೆಯಂತೆ.

ಉಷ್ಣಾಘಾತ ಜೀನ್‌ಗಳು ನಮ್ಮ ಶರೀರದಲ್ಲಿರುವುದರಿಂದ ನಮಗೆ ಶಾಖದಿಂದ ಅಥವಾ ಇತರ ಒತ್ತಡಗಳಿಂದ ರಕ್ಷಣೆ ದೊರಕುತ್ತದೆ ಎಂದಾಯಿತು. ಹಾಗಾದರೆ ನಾವು ಉರಿಯುತ್ತಿರುವ ಬೆಂಕಿಯ ನಡುವೆ ನಿಲ್ಲಲು ಸಾಧ್ಯವೇ? ಖಂಡಿತ ಇಲ್ಲ. 2020ರಲ್ಲಿ 'ಲೈಫ್ ಸೈನ್ಸ್' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಪ್ರಕಾರ, ಶರೀರದ ಆಂತರಿಕ ಉಷ್ಣಾಂಶ 42 ಡಿಗ್ರಿ ಹಾಗೂ ವಾತಾವರಣದ ಉಷ್ಣಾಂಶ 50-55 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾದರೆ ಅದನ್ನು ಮಾನವಶರೀರ ತಡೆದುಕೊಳ್ಳಲಾರದು. ಸಾವು ಸಂಭವಿಸುತ್ತದೆ. ಈ ಜೀನ್‌ಗಳು ವಾತಾವರಣದಲ್ಲಿ ಸಂಭವಿಸುವ ಅಲ್ಪ ಸ್ವಲ್ಪ ಬದಲಾವಣೆಗಳಿಂದ ನಮ್ಮನ್ನು ರಕ್ಷಿಸುತ್ತವೆ.

❖

ಡೇಟಾ ಗೋತಾ!?

• ವಿಕ್ರಮ ಜೋಶಿ



ಮಧ್ಯಪೂರ್ವ ರಾಷ್ಟ್ರಗಳಲ್ಲಿರುವ ಡೇಟಾಸೆಂಟರ್‌ಗಳ ಮೇಲೆ ಡ್ರೋಣ್ ದಾಳಿಯನ್ನು ನಡೆಸಿ ಇರಾನ್ ತನ್ನ ಪ್ರತೀಕಾರವನ್ನು ತೀರಿಸಿಕೊಂಡಿತು. ಇದರಿಂದಾಗಿ ಮಧ್ಯಪೂರ್ವ ರಾಷ್ಟ್ರಗಳ ಬಹು ದಿನಗಳ ಡೇಟಾಸೆಂಟರ್‌ಗಳ ಬೆಳವಣಿಗೆಯ ಕನಸಿಗೆ ಸ್ವಲ್ಪ ಹಿನ್ನಡೆ ಉಂಟಾಗಿದೆ. ಯಾರ ಹತ್ತಿರ ಬಂದರುಗಳಿವೆಯೋ ಅವರೇ ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಭಾವಶಾಲಿಗಳಾಗಿದ್ದರು. ಹಾಗೆಯೇ ಇಪ್ಪತ್ತನೆಯ ಶತಮಾನದಲ್ಲಿ ಕಚ್ಚಾ ತೈಲದ ಸಂಸ್ಕರಣಾಗಾರವುಳ್ಳವರು ಶಕ್ತಿಶಾಲಿಯಾಗಿ ಮೆರೆದರು. ಇಪ್ಪತ್ತೊಂದನೆಯ ಶತಮಾನವು ಡೇಟಾಸೆಂಟರ್‌ಗೆ ಸೇರಿದ್ದು; ಯಾರ ಹತ್ತಿರ ಹೆಚ್ಚು ಡೇಟಾಸೆಂಟರ್‌ಗಳು ಇವೆಯೋ ಅವರದ್ದೇ ಸೂಪರ್ ಪವರ್! ಇದಕ್ಕಾಗಿಯೇ ನೋಡಿ ಇಂದು ಎಲ್ಲೆಲ್ಲೂ ಡೇಟಾಸೆಂಟರ್ ಕ್ಷೇತ್ರದಲ್ಲಿ ಪೈಪೋಟಿ ರಂಗೇರಿದೆ. ಇಷ್ಟೊಂದು ಡೇಟಾ ಸೆಂಟರ್‌ಗಳು ಅಣಬೆಯಂತೆ ತಲೆಯೆತ್ತುತ್ತಿರುವಾಗ ಪ್ರತಿಯೊಬ್ಬರನ್ನೂ ಕಾಡುತ್ತಿರುವ ಒಂದು ಪ್ರಶ್ನೆಯೆಂದರೆ 'ನಮ್ಮ ದತ್ತಾಂಶವು ಡೇಟಾಸೆಂಟರ್‌ಗಳಲ್ಲಿ ಸುರಕ್ಷಿತವೇ?' ಈ ಒಂದು ಪ್ರಶ್ನೆಯಲ್ಲಿ ಎರಡು ಭಾಗಗಳಿವೆ; ಮೊದಲನೆಯದು, ಡೇಟಾಸೆಂಟರ್‌ಗೆ ಏನಾದರೂ ಆದರೆ ಅಲ್ಲಿರುವ ದತ್ತಾಂಶಗಳು ಏನಾಗುತ್ತವೆ? ಎರಡನೆಯದು, ನಮ್ಮ ದತ್ತಾಂಶವನ್ನು ಬಳಸಿಕೊಂಡು ಡೇಟಾಸೆಂಟರ್‌ನವರು ಏನಾದರೂ ದುರುಪಯೋಗ ಮಾಡಿಕೊಂಡರೆ? ಎರಡಕ್ಕೂ ಉತ್ತರ ಕಂಡುಕೊಳ್ಳುವುದು ಬಹಳ ಮುಖ್ಯ.

ಪ್ರತಿಯೊಂದು ಕಂಪನಿಗೂ ಅವರವರ ಡೇಟಾಸೆಂಟರ್ ಕುರಿತಾಗಿ ಅತ್ಯಂತ ಕಾಳಜಿಯಿರುತ್ತದೆ. ಡೇಟಾಸೆಂಟರ್ ಹೊರಗಿನ ಗೋಡೆ, ಕಟ್ಟಡದ ನಿರ್ಮಾಣದಿಂದ ಹಿಡಿದು ಒಳಗಿನ ಸರ್ವರ್ ಕೊಠಡಿಯ ತನಕ ಹಲವಾರು ಬಗೆಯ ರಕ್ಷಣಾ ಕವಚಗಳಿರುತ್ತವೆ. ಪ್ರಕೃತಿ ವಿಕೋಪಗಳಿಂದ ಏನೂ ಹಾನಿ ಆಗದಂತೆ ವಿನ್ಯಾಸ, ತಾಪಮಾನದ ನಿಯಂತ್ರಣ, ನಿರಂತರ ವಿದ್ಯುತ್ ಪೂರೈಕೆ, ಅಡಿಗಡಿಗೆ ಸಿಸಿಟಿವಿ ಕ್ಯಾಮೆರಾ, ಬಯೊಮೆಟ್ರಿಕ್ ವ್ಯವಸ್ಥೆ – ಹೀಗೆ ಅತ್ಯಂತ ಉತ್ಕೃಷ್ಟ ಮಟ್ಟದ ಭದ್ರತೆ ಅಲ್ಲಿರುತ್ತದೆ. ಆದರೂ ದುರದೃಷ್ಟವಶಾತ್ ಏನಾದರೂ ಅನಾಹುತವಾದರೆ ಅಲ್ಲಿಯ ದತ್ತಾಂತಕ್ಕೆ ಏನೂ ಆಗದಂತೆ 'ಬ್ಯಾಕ್‌ಅಪ್' ಇನ್ನೊಂದು ಕಡೆ ಸುರಕ್ಷಿತವಾಗಿರುವುದು.

ಡೇಟಾಸೆಂಟರ್‌ಗಳನ್ನು ಭೂಮಿಯ ಮೇಲಷ್ಟೇ ಅಲ್ಲ ಪಾತಾಳದಲ್ಲೂ ಪ್ರತಿಷ್ಠಾಪಿಸಲಾಗಿದೆ. ಮೈಕ್ರೋಸಾಫ್ಟ್ ಕಂಪನಿಯ ಒಂದು ಡೇಟಾಸೆಂಟರ್ ಸ್ಕಾಟ್ಲೆಂಡ್‌ನ ಸಾಗರದಡಿಯಲ್ಲಿದೆ; ಅದರ ಆಳ 117 ಅಡಿ. ಜಗತ್ತಿನ ಮೊದಲ ಜಲಾವೃತ ಕಮರ್ಷಿಯಲ್ ಡೇಟಾಸೆಂಟರನ್ನು ನಿರ್ಮಿಸಿದ್ದು ಚೀನಾ; ಹೈನಾನ್ ದ್ವೀಪದಲ್ಲಿರುವ ಈ ಡೇಟಾಸೆಂಟರ್ ಭೂಮಿಯಿಂದ 115 ಅಡಿ ಆಳದಲ್ಲಿದೆ. ಇವೆಲ್ಲವೂ ಅತ್ಯಂತ ಸುರಕ್ಷಿತ. ಭೂಮಿಯ ಮೇಲೆಯೇ ಯಾಕೆ? ಅನ್ಯಗ್ರಹಗಳಲ್ಲೂ ಡೇಟಾಸೆಂಟರ್ ನಿರ್ಮಿಸುವ ಕನಸನ್ನು ಇಲಾನ್ ಮಸ್ಕ್ ಹಾಗೂ ಮತ್ತಿತರರು ಕಾಣುತ್ತಿದ್ದಾರೆ!

> ಸ್ವಿಡನ್‌ನ ಸ್ಟಾಕ್ಹೋಮ್ ನಗರದಲ್ಲಿನ ಗ್ರಾನೈಟ್ ಗುಡ್ಡದಡಿಯಲ್ಲಿ, 30 ಮೀಟರ್ ಆಳದಲ್ಲಿ, ಪರಮಾಣು ಬಂಕರ್ ಕವಚದೊಳಗೆ ಪೈಯೊನೆನ್ ಡೇಟಾ ಸೆಂಟರನ್ನು ನಿರ್ಮಿಸಲಾಗಿದೆ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಹೈಡ್ರೋಜನ್ ಬಾಂಬ್ ಸ್ಫೋಟವಾದರೂ ಡೇಟಾ ಸೆಂಟರ್‌ಗೆ ಏನೂ ಆಗಬಾರದೆಂಬ ದೃಷ್ಟಿಯಿಂದ 1943ರಲ್ಲಿ ಇದನ್ನು ನಿರ್ಮಿಸಲಾಗಿತ್ತು. ನಂತರ ಇದು ಅತ್ಯಾಧುನಿಕ ಡೇಟಾ ಸೆಂಟರ್ ಆಗಿ ನವೀಕರಣಗೊಂಡಿದ್ದು 2008ರಲ್ಲಿ. ಈ ಡೇಟಾ ಸೆಂಟರ್ ಗೋಡೆಯ ದಪ್ಪ ಎರಡುವರೆ ಅಡಿ; ಯಾವುದೇ ಹೊರಗಿನ ವಿದ್ಯುತ್ ಪೂರೈಕೆ ಇಲ್ಲದೇ ಹೋದರು ತನ್ನೊಳಗಿರುವ ಸಬ್‌ಮರೈನ್ ಇಂಜಿನ್‌ನಿಂದ ವಿದ್ಯುತ್ ಉತ್ಪಾದನೆ ಮಾಡಿಕೊಂಡು ವಾರಗಟ್ಟಲೆ ಸಕ್ರಿಯವಾಗಿರಬಹುದು; ಭೂಕಂಪ, ಸ್ಫೋಟ ಯಾವುದೂ ಇದನ್ನು ಧ್ವಂಸ ಮಾಡುವುದಕ್ಕೆ ಸಾಧ್ಯವಿಲ್ಲ; ಅಷ್ಟೇ ಅಲ್ಲ, ಇದು ಇರುವ ಜಾಗವನ್ನು ಪತ್ತೆ ಹಚ್ಚುವುದೂ ಕಷ್ಟ!

ಈಗ ಡೇಟಾಸೆಂಟರ್‌ನಲ್ಲಿರುವ ದತ್ತಾಂಶಗಳ ದುರುಪಯೋಗದ ಬಗ್ಗೆ ಚರ್ಚಿಸೋಣ.

ಡಿಜಿಟಲ್ ಸಾರ್ವಭೌಮತ್ವದ ವಿಷಯವನ್ನು ಇಲ್ಲಿಯೇ ಪ್ರಸ್ತಾಪಿಸಬೇಕು. ಇಂದು ಪ್ರತಿಯೊಂದು ದೇಶವೂ ತನ್ನದೇ ಆದ ಡಿಜಿಟಲ್ ಸಾರ್ವಭೌಮತ್ವವನ್ನು ಹೊಂದುವುದಕ್ಕೆ ಪ್ರಯತ್ನಿಸುತ್ತದೆ. ಭಾರತವೂ ಈ ಪ್ರಯತ್ನದಲ್ಲಿ ಹಿಂದುಳಿದಿಲ್ಲ. ಆದರೆ ಇವತ್ತಿನ ಪರಿಸ್ಥಿತಿ ಬೇರೆಯೇ ಆಗಿದೆ. ಇಂದು ಕೃತಕ ಬುದ್ಧಿಮತ್ತೆ ಎಷ್ಟು ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆಯೋ ಅಷ್ಟೇ ವೇಗದಲ್ಲಿ ಅದನ್ನು ನಿಯಂತ್ರಿಸುವ ನೀತಿಗಳು ರೂಪಗೊಳ್ಳುತ್ತಿಲ್ಲ ಎನ್ನುವುದು ಕಹಿಸತ್ಯ. ಚೀನಾದಲ್ಲಿ ಮಾತ್ರ ಅವರ ಮಾಹಿತಿಯು ಆ ದೇಶವನ್ನು ಬಿಟ್ಟು ಬೇರೆ ಕಡೆ ಹೋಗುವುದಿಲ್ಲ. ಎಲ್ಲವೂ ಅಲ್ಲಿಯ ಸರ್ಕಾರದ ನಿಯಂತ್ರಣದಲ್ಲಿರುತ್ತದೆ. ಅವರೇ ಅದನ್ನು ಬಳಸಿಕೊಂಡ ತಮಗೆ ಬೇಕಾದ ಹಾಗೆ ಉಪಯೋಗಿಸುತ್ತಾರೆ. ಜಗತ್ತಿನಲ್ಲಿ ಒಟ್ಟೂ 122 ಗಿಗಾವಾಟ್ ಸಾಮರ್ಥ್ಯದ ಡೇಟಾಸೆಂಟರ್‌ಗಳಿವೆ; ಅದರಲ್ಲಿ ಶೇ 70ರಷ್ಟು ಅಮೆರಿಕಾ ಹಾಗೂ ಚೀನಾಕ್ಕೆ ಸೇರಿದ್ದು. ಚೀನಾವು ತನ್ನದೇ ಆದ ಡಿಜಿಟಲ್ ಸಾರ್ವಭೌಮತ್ವವನ್ನು ಕಾಪಾಡಿಕೊಂಡು ಬಂದಿದೆ.

ನಮ್ಮ ದೇಶದ ನಾಗರಿಕರ ಅಧಿಕೃತ ಹಾಗೂ ವೈಯಕ್ತಿಕ ಮಾಹಿತಿಗಳು ನಮ್ಮ ದೇಶದೊಳಗೇ, ಸರ್ಕಾರದ ಡೇಟಾಸೆಂಟರ್‌ಗಳಲ್ಲೇ ಇವೆ. ಆದರೆ ಇತರೆ ಖಾಸಗಿ ಮಾಹಿತಿಗಳು ಸರ್ಕಾರದ ಅಧೀನದಲ್ಲಿಲ್ಲ, ಹೀಗಾಗಿ ಅವು ದೇಶದ ಹೊರಗಿವೆ. ನೀವು ಗೂಗಲ್, ಓಪನ್‌ಎಐ, ಕ್ಲಾಡ್ ಯಾವುದೇ ಜೆನ್-ಎಐ ಚಾಟ್‌ಬಾಟ್ ಬಳಸುತ್ತಿದ್ದರೂ ಒಮ್ಮೆ 'ನಾನು ವ್ಯವಹರಿಸುತ್ತಿರುವ ಮಾಹಿತಿಗಳೆಲ್ಲ ಯಾವ ಡೇಟಾಸೆಂಟರ್‌ನಲ್ಲಿದೆ' ಎಂದು ಕೇಳಿ ನೋಡಿ. ಯಾವುದೂ ಭಾರತದಲ್ಲಿಲ್ಲ! ಸಾಮಾಜಿಕ ಜಾಲತಾಣಗಳಲ್ಲಿ ನಾವು ಹಂಚಿಕೊಳ್ಳುವ ಎಲ್ಲಾ ಮಾಹಿತಿಗಳು ಕೂಡ ಆ ಕಂಪನಿಗಳಿಗೆ ಸೇರುತ್ತವೆ; ಅದನ್ನು ಬಳಸಿಕೊಂಡು ಅವರೇನು ಬೇಕಾದರೂ ಮಾಡಬಹುದು. ಎಲ್ಲಾ ಮಾಹಿತಿಗಳು ಕೂಡ 'ಎನ್ಕ್ರಿಪ್ಟೆಡ್' ಎನ್ನುತ್ತಾರೆ. ಆದರೆ ಯಾರೂ ಪುಕ್ಕಟೆಯಾಗಿ ಏನನ್ನೂ ಕೊಡುವುದಿಲ್ಲ. ನಮ್ಮೆಲ್ಲರ ಮಾಹಿತಿಯನ್ನು ಅವರು ಬಿಗ್ ಡೇಟಾಮೈನಿಂಗ್ ಹಾಗೂ ಅನಾಲಿಸಿಸ್ ಮೂಲಕ ಬಳಸಿಕೊಂಡು ವೈಯಕ್ತೀಕರಣ ಮಾಡುತ್ತಾರೆ. ಸಾಮಾಜಿಕ ಜಾಲತಾಣದ ಬಳಕೆಯಲ್ಲಿ ನಾವು ನಿಸ್ಸೀಮರು. ಆ ಎಲ್ಲ ಮಾಹಿತಿಗಳು ಕೂಡ ಅವರವರ ಸರ್ವರ್‌ನಲ್ಲಿಯೇ ಇರುತ್ತವೆ. ಅಷ್ಟೇ ಅಲ್ಲ, ನಮ್ಮ ಮೊಬೈಲ್‌ನಲ್ಲಿರುವ ಮಾಹಿತಿಯ ಮೇಲೂ ಅವರು ನಿಗಾ ಇಟ್ಟಿರುತ್ತಾರೆ. ಯಾಕೆ ಎಂದು ಕೇಳಬಾರದು - ಅವರಿಗೆ ಒಪ್ಪಿಗೆ ಕೊಟ್ಟಿದ್ದೇ ನಾವು!

ಹೀಗೆಂದು ಡೇಟಾಸೆಂಟರ್ ನಲ್ಲಿರುವ ಎಲ್ಲಾ ಮಾಹಿತಿಯನ್ನು ಕೂಡ ಅವರು ಬಳಸಿಕೊಳ್ಳುತ್ತಾರೆ ಎಂದೇನಿಲ್ಲ. ಕೆಲವೊಂದು ಕಾರ್ಪೊರೇಟ್ ದತ್ತಾಂಶಗಳನ್ನು ಅವರು ಬಳಸುವುದಕ್ಕೆ ಆಗುವುದಿಲ್ಲ. ಡೇಟಾಸೆಂಟರ್‌ನಲ್ಲಿರುವ ಡೇಟಾ ಎಲ್ಲವೂ ಒಬ್ಬರಿಗೇ ಸೇರಿರುವುದಿಲ್ಲ, ಅದೊಂದು ಕಂಪ್ಯೂಟರ್‌ಗಳ ಸಂಕೀರ್ಣವಿದ್ದಂತೆ. ಕೆಲವೊಮ್ಮೆ ಎಡಗೈ ಏನು ಮಾಡುತ್ತಿದೆ ಎಂಬುದು ಬಲಗೈಗೆ ಗೊತ್ತಿರುವುದಿಲ್ಲ. ಆದರೆ ಸಾರ್ವಜನಿಕವಾಗಿ ಹಂಚಿಕೊಳ್ಳುವ ಮಾಹಿತಿಗೆ ನಾವೇ ಜವಾಬ್ದಾರರು. ನಾವು ಅವರಿಗೆ ಉಚಿತವಾಗಿ ದತ್ತಾಂಶವನ್ನು ಕೊಟ್ಟರೆ ಅವರು ಅದನ್ನು ಹೇಗೆ ಬೇಕಾದರೂ ಬಳಸಬಹುದು. ಆದರೆ ನಮ್ಮ ನಿಯಂತ್ರಣದಲ್ಲಿರುವ ಡೇಟಾವನ್ನು ಅವರು ಏನೂ ಮಾಡಲು ಆಗುವುದಿಲ್ಲ. ಸರ್ಕಾರವಾಗಲಿ, ಕಂಪನಿಗಳಾಗಲಿ, ಅಥವಾ ವ್ಯಕ್ತಿಗಳೇ ಆಗಲಿ ತಮ್ಮ ಅತ್ಯಂತ ಮಹತ್ವದ ಡೇಟಾವನ್ನು ಎಲ್ಲೆಂದರಲ್ಲಿಟ್ಟರೆ ಅದರ ಹೊಣೆಗಾರಿಕೆ ಯಾರಿಗೂ ಇರದು. ಆವಾಗ ಡೇಟಾಸೆಂಟರ್ ಎಲ್ಲಿದ್ದರೇನು? ನಾಳೆ ಡೇಟಾಸೆಂಟರ್ ಭಾರತದಲ್ಲೇ ಇದ್ದರೂ ಆ ಡೇಟಾವನ್ನು ಆ ಕಂಪನಿಯವರೂ ಬಳಸಿಕೊಳ್ಳಬಹುದು. ಹೀಗಾಗಿ ಡೇಟಾಸೆಂಟರ್‌ನಲ್ಲಿರುವ ಮಾಹಿತಿಗಳು ಸುರಕ್ಷಿತವೇ ಎನ್ನುವ ಪ್ರಶ್ನೆಗೆ 'ಹೌದು ಮತ್ತು ಅಲ್ಲ' ಎನ್ನುವ ಎರಡೂ ಉತ್ತರವು ಒಪ್ಪುತ್ತದೆ!


❖

ಎಸ್ಸೆಸ್ಸೆಲ್ಸಿ ಪರೀಕ್ಷೆ — ವಿಜ್ಞಾನ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

28) ಮಾನವನ ಮಿದುಳಿನ ಚಿತ್ರ ಬರೆದು ವಿವಿಧ ಭಾಗಗಳನ್ನು ಗುರುತಿಸಿ
ಉತ್ತರ:–



29) ನಮ್ಮ ಕಣ್ಣಿನ ಮೂಲಕ ಹತ್ತಿರದ ವಸ್ತುವನ್ನು ನೋಡಲು ಹೇಗೆ ಸಾಧ್ಯವಾಗುತ್ತದೆ?
ಉತ್ತರ:– ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ

30) ಗ್ರಹಗಳು ಮಿನುಗುವುದಿಲ್ಲ ಏಕೆ?
ಉತ್ತರ:– ಗ್ರಹಗಳು ಭೂಮಿಗೆ ತುಂಬಾ ಹತ್ತಿರದಲ್ಲಿವೆ ಮತ್ತು ವಿಸ್ತರಿಸಿದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಾವು ಒಂದು ಗ್ರಹವನ್ನು ಹಲವಾರು ಬಿಂದು ಗಾತ್ರದ ಬೆಳಕಿನ ಮೂಲದ ಒಂದು ಸಂಗ್ರಹ ಎಂದು ಭಾವಿಸಿದರೆ ಒಟ್ಟು ಎಲ್ಲಾ ಬಿಂದುಗಳಿಂದ ನಮ್ಮ ಕಣ್ಣನ್ನು ತಲುಪುವ ಬೆಳಕಿನ ವ್ಯತ್ಯಾಸವು ಎಲ್ಲಾ ಬಿಂದುಗಳ ಬೆಳಕಿನ ಸರಾಸರಿ ಹತ್ತಿರವಾಗುತ್ತದೆ. ಇದರಿಂದಾಗಿ ಗ್ರಹಗಳ ಮಿನುಗುವಿಕೆ ಶೂನ್ಯವಾಗಿದೆ

31) ಯಾವುದಕ್ಕೆ ರೋಧಕ ಎಂದು ಕರೆಯುವರು ಕರೆಯುವರು?
ಉತ್ತರ:– ವಾಹಕದ ಮೂಲಕ ಇಲೆಕ್ಟ್ರಾನ್‌ಗಳ ಪ್ರವಾಹವು ಅದರ ರೋಧದಿಂದಾಗಿ ಕುಂಠಿತವಾಗುತ್ತದೆ. ಒಂದು ನಿರ್ದಿಷ್ಟ ಗಾತ್ರದ ವಸ್ತುವು ಕಡಿಮೆ ರೋಧವನ್ನು ಒದಗಿಸಿದರೆ ಅದು ಉತ್ತಮ ವಾಹಕವಾಗಿದೆ. ಒಂದು ವಾಹಕವು ಗಣನೀಯವಾದ ರೋಧವನ್ನು ಹೊಂದಿದ್ದರೆ ಅದನ್ನು ರೋಧಕ ಎಂದು ಕರೆಯುವರು. ಹೆಚ್ಚಿನ ರೋಧವನ್ನು ಒಡ್ಡುವ ಒಂದೇ ಗಾತ್ರದ ವಸ್ತುವು ದುರ್ಬಲ ವಾಹಕವಾಗಿದೆ.


32) ಓಝೋನ್ ಕುಸಿತದ ಕುರಿತು ಬರೆಯಿರಿ
ಉತ್ತರ:– 1980ರ ದಶಕದಲ್ಲಿ ಓಝೋನ್ ಪ್ರಮಾಣವು ತೀವ್ರವಾಗಿ ಕುಸಿಯಲಾರಂಭಿಸಿತು. ಶೀತಲೀಕರಣ ಮತ್ತು ಅಗ್ನಿಶಾಮಕದಲ್ಲಿ ಬಳಸಲ್ಪಡುವ ಕ್ಲೋರೋಫ್ಲೋರೋಕಾರ್ಬನ್(CFC)ಗಳಂಥ ಸಂಶ್ಲೇಷಿತ ರಾಸಾಯನಿಕಗಳು ಈ ಕುಸಿತಕ್ಕೆ ಕಾರಣ ಎಂದು ಕಂಡುಕೊಳ್ಳಲಾಯಿತು. 1987ರಲ್ಲಿ ಸಂಯುಕ್ತ ರಾಷ್ಟ್ರಗಳ ಪರಿಸರ ಕಾರ್ಯಕ್ರಮ (United Nations Environment Programme - UNEP) ಸಿಎಫ್‌ಸಿಗಳ ಉತ್ಪಾದನೆಯನ್ನು 1986ರ ಮಟ್ಟಕ್ಕೆ ಸ್ಥಗಿತಗೊಳಿಸುವಂಥ ಒಪ್ಪಂದ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಪ್ರಪಂಚದಾದ್ಯಂತ ಸಿಎಫ್‌ಸಿ – ಮುಕ್ತ ರೆಫ್ರಿಜರೇಟರ್‌ಗಳನ್ನು ಎಲ್ಲಾ ಉತ್ಪಾದನಾ ಕಂಪನಿಗಳು ತಯಾರಿಸುವುದು ಇದೀಗ ಕಡ್ಡಾಯವಾಗಿದೆ.

33) ಕೆಳಗಿನ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ
(1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು
(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ
ಈ ಸಂದರ್ಭಗಳು ಕ್ರಿಯಾತ್ಮಕವಾಗಿ ಹೇಗೆ ಭಿನ್ನವಾಗಿವೆ? ಕಾರಣ ಕೊಡಿ
ಉತ್ತರ:– (1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು, ಇದು ಐಚ್ಛಿಕ ಕ್ರಿಯೆ, ನಾವು ಮಾಡುವ ಆಲೋಚನೆಯ ಆಧಾರದ ಮೇಲೆ ನಡೆಯುವ ಕ್ರಿಯೆ.. ಮುಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.
(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ ಇದು ಅನೈಚ್ಛಿಕ ಕ್ರಿಯೆ, ಆಲೋಚನೆ ನಿಯಂತ್ರಣವಿಲ್ಲದ ಕ್ರಿಯೆ, ಹಿಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

34) ಇವುಗಳಿಗೆ ಕಾರಣ ಕೊಡಿ
1) ಆಹಾರ ಸರಪಣಿಯಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.
2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.
ಉತ್ತರ:– (1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.
2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

35) ಪೋಷಣಾಸ್ತರವನ್ನು ಚಿತ್ರವನ್ನು ಬರೆಯಿರಿ
ಉತ್ತರ:–



36) ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ?
ಉತ್ತರ:– ಒಂದು ವೇಳೆ ಅಂಡವು ಫಲಿತಗೊಳ್ಳದಿದ್ದರೆ, ಅದು ಒಂದು ದಿನದವರೆಗೆ ಬದುಕಿರುತ್ತದೆ. ಅಂಡಾಶಯವು ಪ್ರತಿ ತಿಂಗಳೂ ಒಂದು ಅಂಡವನ್ನು ಬಿಡುಗಡೆಗೊಳಿಸುವುದರಿಂದ ಗರ್ಭಕೋಶವೂ ಫಲಿತ ಅಂಡವನ್ನು ಬರಮಾಡಿಕೊಳ್ಳಲು ಪ್ರತಿ ತಿಂಗಳು ತನ್ನನ್ನು ತಾನೇ ಸಜ್ಜುಗೊಳಿಸಿಕೊಳ್ಳುತ್ತದೆ. ಹೀಗೆ ಅದರ ಒಳಸ್ತರಿಯು ದಪ್ಪವಾಗಿ ಸ್ಪಂಜಿನಂತಾಗುತ್ತದೆ. ಒಂದು ವೇಳೆ ಅಂಡವು ಫಲಿತಗೊಂಡರೆ ಅದರ ಪೋಷಣೆಗಾಗಿ ಇದು ಅಗತ್ಯವಾಗುತ್ತದೆ. ಅಂಡವು ಫಲಿತಗೊಳ್ಳದಿದ್ದರೆ ಈ ಒಳಸ್ತರಿಯ ಅಗತ್ಯವಿರುವುದಿಲ್ಲ. ಆದ್ದರಿಂದ ಈ ಒಳಸ್ತರಿಯು ನಿಧಾನವಾಗಿ ಬಿರುಕು ಬಿಟ್ಟು ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರಬರುತ್ತದೆ. ಈ ಚಕ್ರವು ಸರಿ ಸುಮಾರು ಪ್ರತಿ ತಿಂಗಳೂ ನಡೆಯುತ್ತದೆ ಮತ್ತು ಇದನ್ನು ಋತುಚಕ್ರ (menstruation) ಎನ್ನುವರು. ಸಾಮಾನ್ಯವಾಗಿ ಇದು ಎರಡರಿಂದ ಎಂಟು ದಿನಗಳವರೆಗೆ ಮುಂದುವರೆಯುತ್ತದೆ.

37) ಏಕಲಿಂಗಿ ಹೂವು ಯಾವುದು?
ಉತ್ತರ:– ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು
ಉದಾ:– ಪಪಾಯ, ಕಲ್ಲಂಗಡಿ

38) ಯಾವುದಕ್ಕೆ ಶಾಬ್ದನ (sonorous) ಎನ್ನುವರು?
ಉತ್ತರ:– ಒಂದು ಗಟ್ಟಿಯಾದ ಮೇಲ್ಮೈಗೆ ಬಡಿದಾಗ ಶಬ್ದ ಉಂಟುಮಾಡುವ ಲೋಹಗಳ ಗುಣವನ್ನು ಶಾಬ್ದನ(sonorous) ಎನ್ನುವರು

(ಮುಂದುವರಿಯುವುದು)

ಪಿಯುಸಿ/ಸಿಇಟಿ ಪರೀಕ್ಷೆ — CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MULTIPLE CHOICE QUESTIONS

9) Which of the following aqueous solutions should have the highest boiling point?
a) 1.0 M NaOH b) 1.0 M Na_2SO_4
c) 1.0 M NH_4NO_3 d) 1.0 M KNO_3
Answer: (b)
Expln:- Colligative properties of solutions are properties that depend upon the concentration of solute molecules or ions but not the identity of the solute. Concentrations of all the solutions are the same given one. So, colligative property (elevation in boiling point) depends only on the number of ions or molecules. The boiling point increases as the number of ions increases in the aqueous solutions.
1M NaOH gives the number of ions = 2
1M Na_2SO_4 gives the number of ions = 3
1M NH_4SO_4 gives the number of ions = 2
1M KNO_3 gives the number of ions = 2
So, 1M Na_2SO_4 has the maximum boiling point among them all.

10) Conductivity of a saturated solution of a sparingly salt AB at 298 K is 1.85×10^{-5} S m^{-1}. Solubility product of the salt AB at 298 K is
Given: $\Lambda^{o}_{m}(AB) = 140 \times 10^{-4}$ S m^2 mol^{-1}
a) 5.7×10^{-12} b) 1.32×10^{-12}
c) 7.5×10^{-12} d) 1.74×10^{-12}
Ans:- (d)
Expln:-using the relationship between solubility of sparingly soluble salt and Λ^{o}_{m},
$K = 1.85 \times 10^{-5}\ S\ m^{-1} = 1.85 \times 10^{-7}\ S\ cm^{-1}$
$\Lambda^{0}_{m} = 140 \times 10^{-4}\ S\ m^2\ mol^{-1} = 140\ S\ cm^2\ mol^{-1}$
$$s = \frac{k \times 1000}{\Lambda^{0}_{m}} = \frac{1.85 \times 10^{-7} \times 1000}{140}$$
$= 1.32 \times 10^{-6}$
$K_{sp} = (s)^2$ [For AB type of salt]
$= (1.32 \times 10^{-6})^2 = 1.74 \times 10^{-12}$

11) The last element of the p-block in the 6^{th} period is represented by the outermost electronic configuration:
a) $4f^{14}\,5d^{10}6s^{2}6p^{4}$ b) $4f^{14}\,5d^{10}6s^{2}\,6p^{6}$
c) $7s^{2}\,7p^{6}$ d) $4f^{14}\,6d^{10}7s^{2}\,7p^{6}$
Answer: (b)
Expln:- The last element of the p-block in 6th period is Radon (Rn)
The electronic configuration of Rn is
$[Xe]4f^{14}\,5d^{10}6s^{2}\,6p^{6}$

12) When $KMNO_4$ solution is added to oxalic acid solution, the decolourisation is slow in the beginning but becomes instantaneous after some time because
a) CO_2 is formed as the product
b) Reaction is exothermic
c) MnO^{-}_{4} catalyses the reaction
d) Mn^{2+} acts as autocatalyst
Ans:- d

13) Match List-I with List-II

List-I (Types of redox reactions)	List-II (Examples)
a. Combination reaction	i. $Cl_{2(g)} + 2Br^{-}_{(aq)} \rightarrow 2Cl^{-}_{(aq)} + Br_{2(l)}$
b. Decomposition reaction	ii. $2H_2O_{2(aq)} \rightarrow 2H_2O_{(l)} + O_{2(g)}$
c. Displacement reaction	iii. $CH_{4(g)} + 2O_{2(g)} \xrightarrow{\Delta} CO_{2(g)} + 2H_2O_{(l)}$
d. Disproportionation reaction	iv. $2H_2O_{(l)} \xrightarrow{\Delta} 2H_{2(g)} + O_{2(g)}$

Choose the correct answer from the options given below.
(A) a-iv, b-iii, c-i, d-ii (B) a-ii, b-i, c-iv, d-iii
(C) a-iii, b-iv, c-i, d-ii (D) a-iii, b-ii, c-i, d-iv
Ans. C
Soln : Combination reaction – no example given
Decomposition reaction - $H_2O_{2(aq)} \rightarrow H_2O_{(l)} + O_{2(g)}$
$H_2O_{(l)} \xrightarrow{\Delta} 2H_{2(g)} + O_{2(g)}$
Displacement reaction - $Cl_{2(g)} + 2Br^{-}_{(aq)} \rightarrow 2Cl^{-}_{(aq)} + Br_{2(g)}$
Disproportionation reaction - $2H_2O_{2(aq)} \rightarrow 2H_2O_{(l)} + O_{2(g)}$

14) Which one of the following is an example for homogeneous catalysis?
a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl
Ans:- d

15) Which of the following is not the characteristic of ionic solids?
a) Very low value of electrical conductivity in the molten state.
b) Brittle nature.
c) very strong forces of interactions.
d) Anisotropic nature.
Ans:-a

16) On treating 100 mL of 0.1 M aqueous solution of the complex $CrCl_3.6H_2O$ with excess of $AgNO_3$, 2.86 g of AgCl was obtained. The complex is:
(A) $[Cr(H_2O)_3Cl_3].3H_2O$
(B) $[Cr(H_2O)_4Cl_2]Cl.2H_2O$
(C) $[Cr(H_2O)_5Cl]Cl_2.H_2O$
(D) $[Cr(H_2O)_6]Cl_3$
Ans:- C

17) H_2O_2 cannot oxidize.............
(a) Na_2SO_3 (b) KI
(c) PbS (d) O_3
Ans: - d
Expln:- O_3 is a stronger oxidizing agent than H_2O_2.

(Contd........)

ಸೈಬರ್ ಕಾನೂನು ಘಟಕಕ್ಕೆ ನೇಮಕ

ಬೆಂಗಳೂರು: 'ಸೈಬರ್ ಕಮಾಂಡ್ ಘಟಕ'ದ ಕಾನೂನು ವಿಭಾಗದ ಸಲಹೆಗಾರರು ಮತ್ತು ಮುಖ್ಯಸ್ಥರನ್ನಾಗಿ ಹೈಕೋರ್ಟ್ ವಕೀಲೆ ಬಿ.ಪುಷ್ಪಲತಾ ಅವರನ್ನು ನೇಮಕ ಮಾಡಲಾಗಿದೆ.

'ರಾಜ್ಯದ ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಎಲ್ಲ ಪ್ರಕರಣಗಳನ್ನು ಪ್ರತಿನಿಧಿಸಲು ಅನುವಾಗಲು ಪುಷ್ಪಲತಾ ಅವರನ್ನು ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಆಗಿಯೂ ನೇಮಿಸಲಾಗಿದೆ' ಎಂದು ಗೃಹ ಇಲಾಖೆಯ ಆದೇಶ ಹೇಳಿದೆ.

'ಬಂಡಾಯ ಸಾಹಿತ್ಯ: ಹೊಸ ತಲೆಮಾರು' ಅಭಿಯಾನ

ರಾಜ್ಯದ ವಿವಿಧೆಡೆ ವಿಚಾರಸಂಕಿರಣ • ಹೊಸ ಪೀಳಿಗೆಯಲ್ಲಿ ವೈಜ್ಞಾನಿಕ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯು 'ಬಂಡಾಯ ಸಾಹಿತ್ಯ: ಹೊಸ ತಲೆಮಾರು' ಅಭಿಯಾನದ ಭಾಗವಾಗಿ ರಾಜ್ಯದ ವಿವಿಧೆಡೆ ವಿಚಾರಸಂಕಿರಣಗಳನ್ನು ಆಯೋಜಿಸಲು ನಿರ್ಧರಿಸಿದೆ.

ಈ ಅಭಿಯಾನದಡಿ ಮೊದಲನೆ ಕಾರ್ಯಕ್ರಮ ಇದೇ 15ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆಯಲಿದೆ. 'ಜನ ಚಳವಳಿಗಳು ಮತ್ತು ಸಾಹಿತ್ಯ' ಎಂಬ ವಿಷಯದ ಮೇಲೆ ವಿಚಾರಸಂಕಿರಣ ಆಯೋಜಿಸಲಾಗಿದೆ.

'ಬಂಡಾಯ ಸಾಹಿತ್ಯ ಸಂಘಟನೆಯು ಹೊಸ ತಲೆಮಾರಿನ ಲೇಖಕರು, ಚಿಂತಕರು ಹಾಗೂ ಕಾರ್ಯಕರ್ತರನ್ನು ಒಳಗೊಂಡಂತೆ ವಿವಿಧ ವಿಷಯಗಳ ಚಿಂತನಾ ಕಾರ್ಯಕ್ರಮವನ್ನು ಅಭಿಯಾನದಡಿ ಆಯೋಜಿಸಲು ಮುಂದಾಗಿದೆ. ಹೊಸ ತಲೆಮಾರಿನವರಿಗೆ ವೇದಿಕೆ ಒದಗಿಸುವುದು ಮತ್ತು ಹೊಸ ತಲೆಮಾರನ್ನು ಗಮನದಲ್ಲಿಟ್ಟುಕೊಂಡು ವೈಚಾರಿಕ ಜಾಗೃತಿ ಮೂಡಿಸುವುದು ಈ ಅಭಿಯಾನದ ಉದ್ದೇಶ' ಎಂದು ಸಂಘಟನೆ ಪರವಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.

'ನಮ್ಮ ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತವಾದ ವಿಚಾರಧಾರೆಗಳನ್ನು ಮತ್ತು ವಿಷಯಗಳ ಬಗ್ಗೆ ಚರ್ಚಿಸಲು ವಿಚಾರಸಂಕಿರಣಗಳನ್ನು ರಾಜ್ಯದ ಅನೇಕ ಕಡೆ ಆಯೋಜಿಸಲಾಗುತ್ತಿದೆ. ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ರಾಯಚೂರು, ಚಿತ್ರದುರ್ಗ, ತುಮಕೂರು, ಹಾಸನ, ಬೆಳಗಾವಿ ಜಿಲ್ಲೆಗಳಲ್ಲಿ ಈ ಅಭಿಯಾನದ ಭಾಗವಾಗಿ ವಿಚಾರಸಂಕಿರಣ ಆಯೋಜಿಸಲಾಗುವುದು. ಬಳಿಕ, ಮತ್ತಷ್ಟು ಜಿಲ್ಲೆಗಳಲ್ಲೂ ಅಭಿಯಾನವನ್ನು ವಿಸ್ತರಿಸಲಾಗುವುದು' ಎಂದು ಹೇಳಿದ್ದಾರೆ.

ಚುನಾವಣಾ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ: ನ್ಯಾ. ವೀರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿತಿ ಮೀರಿರುವ ಚುನಾವಣೆ ಭ್ರಷ್ಟಾಚಾರ ತಡೆಯುವ ಜತೆಗೆ, ಮತದಾನ ಮಾಡದವರ ಸರ್ಕಾರಿ ಸವಲತ್ತು ಕಡಿತ ಮಾಡಲು ಕರ್ನಾಟಕ ರಾಜ್ಯ ಚುನಾವಣೆ ಆಯೋಗ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಬೇಕು' ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಲಾಂಛನ ಮತ್ತು ಅಧಿಕೃತ ಸಾಮಾಜಿಕ ಜಾಲತಾಣಗಳಿಗೆ ಮಂಗಳವಾರ ಅವರು ಚಾಲನೆ ನೀಡಿ ಮಾತನಾಡಿದರು.

'ವಿದ್ಯಾವಂತರು ಮತ ಹಾಕಲು ಮುಂದೆ ಬರುತ್ತಿಲ್ಲ. ಮತ ಹಾಕಲು ರಜೆ ನೀಡಿದರೆ ಕುಟುಂಬ ಸಮೇತ ಪ್ರವಾಸ ಹೊರಡುತ್ತಾರೆ. ಕಡ್ಡಾಯ ಮತದ ಹಕ್ಕನ್ನು ಸಂವಿಧಾನದಲ್ಲಿ ನೀಡಲಾಗಿದ್ದರೂ ಇಂತಹ ಮತದಾರರಿಂದ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಮತದಾನ ಮಾಡದೇ ಇರುವವರ ಡಿ.ಎಲ್, ಪಡಿತರ ಚೀಟಿ, ನೀರು, ವಿದ್ಯುತ್ ಸಂಪರ್ಕ ರದ್ದು ಮಾಡುವಂತಾಗಬೇಕು. ಚುನಾವಣೆ ಆಯೋಗ ಇಂತಹ ವಿಚಾರವನ್ನೂ ಗಮನಿಸಬೇಕು' ಎಂದು ಹೇಳಿದರು.

'ಈಗಂತೂ ಹಾಲಿನ ಡೇರಿ ಚುನಾವಣೆಯಿಂದ ಹಿಡಿದು ಬಾರ್ ಕೌನ್ಸಿಲ್ ಚುನಾವಣೆವರೆಗೂ ಕಾಂಚಾಣದ ಸದ್ದು ಜೋರಾಗಿದೆ. ಮತ ಪಡೆಯಲು ದುಡ್ಡು ಮಾತ್ರವಲ್ಲದೇ ಇತರೆ ಆಮಿಷಗಳೊಂದಿಗೆ ಜನರ ಬಳಿ ಬರುವ ಅಭ್ಯರ್ಥಿಗಳನ್ನು ಸೋಲಿಸಬೇಕು. ಆಗ ಭ್ರಷ್ಟಾಚಾರದ ಭೂತ ತೊಲಗಬಹುದು' ಎಂದರು.

ಧೈರ್ಯದಿಂದ ಪ್ರಶ್ನಿಸಿ: ಪಂಚಾಯಿತಿ, ತಾಲ್ಲೂಕು ಕಚೇರಿಗಳಲ್ಲಿ ಖಾತಾ ಮಾಡಿಕೊಡಲು ಹಣ ಕೊಡಲೇಬೇಕು. ಇಲ್ಲದೇ ಇದ್ದರೆ ನೆಪ ಹೇಳಿ ಸಾಮಾನ್ಯರನ್ನು ಸತಾಯಿಸುವ ಮನಸ್ಥಿತಿ ಬದಲಾಗಿಲ್ಲ. ಎಚ್ಚರಿಕೆ ನೀಡಿದ ನಂತರವೂ ತಹಶೀಲ್ದಾರರ ಕಾರ್ಯಶೈಲಿ ಹಾಗೆಯೇ ಇದೆ. ಕೆಲ ದಿನಗಳ ಹಿಂದೆ ನನಗೆ ಇದರ ಅನುಭವವಾಯಿತು. ಜನ ಕಾನೂನು ತಿಳಿದುಕೊಂಡು ಧೈರ್ಯದಿಂದ ಕೇಳದೇ ಇದ್ದರೆ ಬದಲಾವಣೆ ಅಸಾಧ್ಯ' ಎಂದರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯ ಸುರೇಶ ಕೆ ವಂಟಿಗೋಡಿ, ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ, ಕಾನೂನು ಸಲಹೆಗಾರ ಸದಾನಂದ ಎಚ್. ಹೊಸಗೌಡರ್, ಕಾರ್ಯದರ್ಶಿ ಎನ್. ಆರ್.ನಾಗರಾಜ್, ಅಧೀನ ಕಾರ್ಯದರ್ಶಿ ಪಿ.ಎಸ್.ಮರಬಳ್ಳಿ, ಶಾಖಾಧಿಕಾರಿ ವೆಂಕಟಲಕ್ಷ್ಮಮ್ಮ ಉಪಸ್ಥಿತರಿದ್ದರು.



ಗೋದ್ರೆಜ್ ಎಂಟರ್‌ಪ್ರೈಸಸ್ ಗ್ರೂಪ್ ನೀಡುವ ಪ್ರತಿಷ್ಠಿತ 'ಗೀವೀಸ್ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ಕಂಪನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಶ್ಯಾಮ್ ಮೊಟ್ವಾನಿ (ಮಧ್ಯದಲ್ಲಿರುವವರು) ಮತ್ತು ಗಣ್ಯರು ಪಾಲ್ಗೊಂಡಿದ್ದರು

ಶ್ರೇಷ್ಠ ವಾಸ್ತುಶಿಲ್ಪಿಗಳಿಗೆ 'ಗೀವೀಸ್' ಪ್ರಶಸ್ತಿ

• ಗಣಪತಿ ಹೆಗಡೆ

ಮಜೊರ್ಡಾ (ಗೋವಾ): ದೇಶದ ವಾಸ್ತುಶಿಲ್ಪ ಕ್ಷೇತ್ರದಲ್ಲಿನ ಶ್ರೇಷ್ಠ ವಿನ್ಯಾಸ, ಹೊಸ ಪ್ರಯೋಗಗಳನ್ನು ಗುರುತಿಸಿ ಗೋದ್ರೆಜ್ ಎಂಟರ್‌ಪ್ರೈಸಸ್ ಗ್ರೂಪ್ ನೀಡುವ ಪ್ರತಿಷ್ಠಿತ 'ಗೀವೀಸ್ ಪ್ರಶಸ್ತಿ'ಯ 5ನೇ ಆವೃತ್ತಿಯ ಪ್ರದಾನ ಸಮಾರಂಭ ಈಚೆಗೆ ಇಲ್ಲಿ ಅದ್ದೂರಿಯಾಗಿ ನಡೆಯಿತು.

ದೇಶದ ಪ್ರಮುಖ ವಾಸ್ತುಶಿಲ್ಪಿಗಳು, ಒಳಾಂಗಣ ವಿನ್ಯಾಸಕರು ಮತ್ತು ಉದ್ಯಮದ ಪ್ರಭಾವಿಗಳ ಪೈಕಿ ಅತ್ಯುನ್ನತ ಜನರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಗೋದ್ರೆಜ್ ವ್ಯಾಲ್ಯೂ ಕೋ-ಕ್ರಿಯೇಟರ್ಸ್ ಕ್ಲಬ್‌ನಡಿ (ಜಿವಿಸಿಸಿ) ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ವಸತಿ, ವಾಣಿಜ್ಯ, ಆತಿಥ್ಯ, ಸಾಂಸ್ಥಿಕ ಮತ್ತು ವಿಶೇಷ ವಿನ್ಯಾಸ ವಿಭಾಗಗಳಲ್ಲಿ ವ್ಯಾಪಿಸಿರುವ 15 ವಿಭಾಗಗಳಲ್ಲಿ ಪ್ರತ್ಯೇಕವಾಗಿ ನೀಡಲಾಯಿತು.

ವಿವೇಕ್ ಸಿಂಗ್ ರಾಥೋಡ್, ಹಾರ್ಟ್‌ಮಟ್, ಯತಿನ್ ಪಟೇಲ್, ಸೌರಭ ಚಂದ್ರ, ರಾಹುಲ್ ಸಾಥೆ ಮತ್ತು ಚರಂಜಿತ್ ಸಿಂಗ್ ಶಾ ಸೇರಿ ಪ್ರಸಿದ್ಧ ವಾಸ್ತುಶಿಲ್ಪಿಗಳು ಮತ್ತು ವಿನ್ಯಾಸ ತಜ್ಞರನ್ನು ಒಳಗೊಂಡ ಶ್ರೇಷ್ಠ ತೀರ್ಪುಗಾರರ ಸಮಿತಿಯು ಮೌಲ್ಯಮಾಪನ ಪ್ರಕ್ರಿಯೆಯ ಮೂಲಕ ವಿಜೇತರನ್ನು ಆಯ್ಕೆ ಮಾಡಿತ್ತು.

'ಗೀವೀಸ್ ಒಂದು ಪ್ರಬಲ ಕೈಗಾರಿಕಾ ವೇದಿಕೆಯಾಗಿ ವಿಕಸನಗೊಂಡಿದೆ. ವಾಸ್ತುಶಿಲ್ಪ ಕ್ಷೇತ್ರದ ನಾವೀನ್ಯ, ಸುಸ್ಥಿರತೆ, ವಿನೂತನ ವಿನ್ಯಾಸಗಳನ್ನು ಗುರುತಿಸಿ, ಪ್ರೋತ್ಸಾಹಿಸುವಲ್ಲಿ ಮುಂಚೂಣಿಯಲ್ಲಿದ್ದೇವೆ. ಭಾರತದ ವಾಸ್ತುಶಿಲ್ಪ ಮತ್ತು ವಿನ್ಯಾಸ ಸಮುದಾಯವನ್ನು ಸಬಲೀಕರಣಗೊಳಿಸಲು ಗೋದ್ರೆಜ್ ಎಂಟರ್‌ಪ್ರೈಸಸ್ ಗ್ರೂಪ್ ಬದ್ಧವಾಗಿದೆ' ಎಂದು ಕಂಪನಿಯ ವಕ್ತಾರರು ತಿಳಿಸಿದರು.

ಗೋದ್ರೆಜ್ ಲಾಕ್ಸ್, ಆರ್ಕಿಟೆಕ್ಚರಲ್ ಫಿಟ್ಟಿಂಗ್ಸ್ ಮತ್ತು ಸಿಸ್ಟಮ್‌ನ ಕಾರ್ಯ ನಿರ್ವಾಹಕ ಉಪಾಧ್ಯಕ್ಷ ಶ್ಯಾಮ್ ಮೊಟ್ವಾನಿ ಮತ್ತು ಇತರ ಗಣ್ಯರು ಪಾಲ್ಗೊಂಡಿದ್ದರು.

ಕೆಎಸ್‌ಬಿಸಿ ಚುನಾವಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ (ಕೆಎಸ್‌ಬಿಸಿ) 23 ಸದಸ್ಯ ಸ್ಥಾನಗಳಿಗೆ ಬುಧವಾರ (ಮಾ.11) ರಾಜ್ಯದಾದ್ಯಂತ ಚುನಾವಣೆ ನಡೆಯಲಿದೆ.

ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಗಳಲ್ಲಿ ಬೆಳಿಗ್ಗೆ 9.30ರಿಂದ ಸಂಜೆ 6 ಗಂಟೆಯವರೆಗೆ ಮತದಾನ ಜರುಗಲಿದೆ. ಕೆಎಸ್‌ಬಿಸಿಯಲ್ಲಿ ಒಟ್ಟು 26 ಸದಸ್ಯ ಸ್ಥಾನಗಳಿದ್ದು, 23 ಸ್ಥಾನಕ್ಕೆ ಮಾತ್ರವೇ ವಕೀಲರು ಮತ ಚಲಾಯಿಸಬೇಕು. ಇದೇ ಪ್ರಥಮ ಬಾರಿಗೆ ಐದು ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿವೆ. ಎರಡು ಸ್ಥಾನಗಳಿಗೆ ನಾಮನಿರ್ದೇಶನ ಮಾಡಲಾಗುತ್ತದೆ. ಉಳಿದ ಒಂದು ಸ್ಥಾನಕ್ಕೆ ಪದನಿಮಿತ್ತ ಸದಸ್ಯರಾಗಿ ಅಡ್ವೊಕೇಟ್ ಜನರಲ್ ಇರುತ್ತಾರೆ.

195 ಮತಗಟ್ಟೆಗಳಲ್ಲಿ ಮತದಾನ ಹಾಗೂ ಇದೇ 16ಕ್ಕೆ ಮತ ಎಣಿಕೆ ನಡೆಯಲಿದೆ. ರಾಜ್ಯ ಚುನಾವಣಾ ಅಧಿಕಾರಿಯಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕಣದಲ್ಲಿರುವ 149 ಅಭ್ಯರ್ಥಿಗಳ ಪೈಕಿ 42 ಮಹಿಳಾ ವಕೀಲರು ಸ್ಪರ್ಧಾಳುಗಳಾಗಿದ್ದು, 107 ಮಂದಿ ಪುರುಷರಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 22 ಸಾವಿರ ವಕೀಲರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ರಾಜ್ಯದಲ್ಲಿ ಒಟ್ಟು ಮತದಾರರು 70 ಸಾವಿರಕ್ಕೂ ಹೆಚ್ಚು ಮತದಾರ ವಕೀಲರಿದ್ದಾರೆ. ಕೆಎಸ್‌ಬಿಸಿಗೆ 2018ರ ಮಾರ್ಚ್ 27ರಂದು ಚುನಾವಣೆ ನಡೆದಿತ್ತು. ನಂತರ ಕೋವಿಡ್ ಮತ್ತು ಸರ್ಟಿಫಿಕೇಟ್ ಆಫ್ ಪ್ರ್ಯಾಕ್ಟೀಸ್ (ಸಿಒಪಿ) ಪ್ರಕ್ರಿಯೆ ಸಮರ್ಪಕವಾಗಿಲ್ಲ ಎಂಬ ಕಾರಣದಿಂದ ನಿಯಮಿತ ಅವಧಿಯಲ್ಲಿ ಚುನಾವಣೆ ನಡೆದಿರಲಿಲ್ಲ.

'ಯುಸಿಸಿಯಿಂದ ಸಮಾನ ಹಕ್ಕು'

ಒಂದನೇ ಪುಟದಿಂದ...

'ಯಾವುದೇ ಶಾಸನಬದ್ಧ ಕಾನೂನು ಪಾಲಿಸದೆ, ಮುಸ್ಲಿಂ ಪುರುಷರು ಏಕ ಪಕ್ಷೀಯವಾಗಿ ವಿಚ್ಛೇದನ ಪಡೆಯುತ್ತಾರೆ. ಆದ್ದರಿಂದ ನಾವು ಷರೀಯತ್‌ನಡಿ ಹೊಂದಿದ ಬಹುಪತ್ನಿತ್ವವನ್ನು ಅಮಾನ್ಯವೆಂದು ಘೋಷಿಸಬಹುದೇ?, ಇಲ್ಲ. ಆದ್ದರಿಂದ ಶಾಸಕಾಂಗವು ಈ ನಿಟ್ಟಿನಲ್ಲಿ ಸೂಕ್ತ ಕಾನೂನು ಜಾರಿಗೊಳಿಸಬೇಕು' ಎಂದು ಪೀಠ ಹೇಳಿತು.

ಮುಸ್ಲಿಂ ಮಹಿಳೆಯರೇ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಾಂಗ ಹಸ್ತಕ್ಷೇಪ ಮಾಡುವುದು ಸೂಕ್ತ ಎಂದೂ ನ್ಯಾಯಾಲಯ ಹೇಳಿತು.

'ಇದು ಸಮಾನತೆಯ ಪ್ರಶ್ನೆಯಾಗಿದೆ' ಎಂದು ನ್ಯಾಯಪೀಠದ ಗಮನಕ್ಕೆ ತಂದ ಪ್ರಶಾಂತ್ ಭೂಷಣ್, ಅರ್ಜಿದಾರರಲ್ಲಿ ಕೆಲವರು ಮುಸ್ಲಿಂ ಮಹಿಳೆಯರು ಎಂದು ಹೇಳಿದರು.

ಷರೀಯತ್‌ನ ಉತ್ತರಾಧಿಕಾರದ ನಿಬಂಧನೆಗಳನ್ನು ರದ್ದುಗೊಳಿಸಿದಲ್ಲಿ, ಪರಿಹಾರೋಪಾಯಗಳನ್ನು ಸೇರಿಸಲು ಅರ್ಜಿಯ ತಿದ್ದುಪಡಿ ಮಾಡುವಂತೆ ಪೀಠ ಸೂಚಿಸಿತು.

‘ಪೊಲೀಸರಿಗೆ ಪಾವತಿಯಾಗದ ವೇತನ’

ಮಾರ್ಚ್ 10 ಕಳೆದರೂ ಜಮೆ ಆಗದ ಫೆಬ್ರುವರಿ ವೇತನ, ಸಿಬ್ಬಂದಿ ಪಡಿಪಾಟಲು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ವಿಜಯನಗರ, ಬಳ್ಳಾರಿ, ಉತ್ತರ ಕನ್ನಡ, ಗದಗ, ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯ ಪೊಲೀಸ್ ಸಿಬ್ಬಂದಿಗೆ ಫೆಬ್ರುವರಿ ತಿಂಗಳ ವೇತನ ಇನ್ನೂ ಪಾವತಿಯಾಗಿಲ್ಲ.

‘ಪ್ರತಿ ತಿಂಗಳು 1ನೇ ತಾರೀಖು ವೇತನ ಖಾತೆಗೆ ಜಮೆಯಾಗುತ್ತಿತ್ತು. ಮಾರ್ಚ್ 10 ಕಳೆದರೂ ಇನ್ನು ಜಮೆ ಆಗಿಲ್ಲ’ ಎಂದು ಧಾರವಾಡ ನಗರದ ಸಿಬ್ಬಂದಿಯೊಬ್ಬರು ತಿಳಿಸಿದರು.

‘ಮನೆ ನಿರ್ಮಿಸಲು ಸಾಲ ಮಾಡಿದ್ದೇನೆ. ಪ್ರತಿ ತಿಂಗಳು 5ರ ಒಳಗೆ ಇಎಂಐ ಪಾವತಿಸಬೇಕು. ಕಂತು ಪಾವತಿಗೂ ಸಾಲ ಮಾಡಬೇಕಿದೆ’ ಎಂದು ಮತ್ತೊಬ್ಬರು ನೋವು ತೋಡಿಕೊಂಡರು.

‘ವೇತನ ಬಿಡುಗಡೆಗೆ ಕಾರಣ ಗೊತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಇಂದು ನಾಳೆ ಎನ್ನುತ್ತಿದ್ದಾರೆ’ ಎಂದು ಬಾಗಲಕೋಟೆ ಜಿಲ್ಲೆಯ ಪೊಲೀಸರೊಬ್ಬರು ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ 1,600ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಇದ್ದಾರೆ. ವೇತನ ಜಮೆಯಾಗದೆ ಸಮಸ್ಯೆಯಾಗಿದೆ. ವಿಜಯನಗರ, ಬಳ್ಳಾರಿ ಜಿಲ್ಲೆಯಲ್ಲಿಯೂ ಇದೇ ಸಮಸ್ಯೆ ಇದ್ದು, ಸಿಬ್ಬಂದಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

‘25 ವರ್ಷಗಳಿಂದ ಇಂತಹ ಸ್ಥಿತಿ ಎದುರಾಗಿರಲಿಲ್ಲ. ವೇತನ, ಭತ್ಯೆ ವಿಳಂಬ ಆಗಿರಲಿಲ್ಲ’ ಎಂದು ವಿಜಯನಗರದ ಕೆಲ ಸಿಬ್ಬಂದಿ ಅಭಿಪ್ರಾಯಪಟ್ಟರು.

‘ತಾಂತ್ರಿಕ ಕಾರಣಗಳಿಂದ ಗೃಹ ಇಲಾಖೆಯಿಂದಲೇ ವೇತನದ ದುಡ್ಡು ಹಂಚಿಕೆಯಾಗಿಲ್ಲ. ಬೇರೆಲ್ಲಾ ಇಲಾಖೆಗಳು ವೇತನದ ದುಡ್ಡು ಹಂಚಿಕೆ ಮಾಡಿವೆ’ ಎಂದು ವಿಜಯನಗರ ಜಿಲ್ಲಾ ಖಜಾನೆ ಅಧಿಕಾರಿ ರಾಮ್‌ಪ್ರಸಾದ್ ತಿಳಿಸಿದರು.

‘ಖಜಾನೆಗೆ ವಿವಿಧ ಇಲಾಖೆಗಳಿಂದ ದುಡ್ಡು ಹಂಚಿಕೆಯಾದರೆ ಮಾತ್ರ ಬಿಲ್ ಪರಿಶೀಲಿಸಿ ಆರ್‌ಬಿಐಗೆ ಶಿಫಾರಸು ಮಾಡಲಾಗುತ್ತದೆ. ಬಳಿಕ ಅಲ್ಲಿಂದ ಖಾತೆಗಳಿಗೆ ವೇತನ ರವಾನೆಯಾಗುತ್ತದೆ. ಈ ಬಾರಿ ಅಪರೂಪಕ್ಕೆ ಎಂಬಂತೆ ಪೊಲೀಸ್ ಇಲಾಖೆಗೆ ಆಗಿದೆ. ಇದು ಖಜಾನೆ ಇಲಾಖೆ ಲೋಪವಲ್ಲ. ಬದಲಿಗೆ ಆಯಾ ಇಲಾಖೆಗಳ ಲೋಪ’ ಎಂದು ತಿಳಿಸಿದರು.

‘ಶೀಘ್ರವೇ ವೇತನ ಪಾವತಿ ಆಗಲಿದೆ’ ಎಂದು ವಿಜಯನಗರ ಎಸ್‌ಪಿ ಎಸ್. ಜಾಹ್ನವಿ ಹೇಳಿದರು.

ವೇತನ: ಕಲಬುರಗಿ, ಶಿವಮೊಗ್ಗದಲ್ಲೂ ಪರದಾಟ



ಕಲಬುರಗಿ: ಫೆಬ್ರುವರಿ ತಿಂಗಳ ವೇತನ ಜಮೆ ಆಗದೇ ಮನೆ ಬಾಡಿಗೆ, ಮಾಸಿಕ ಕಂತುಗಳು, ಮಕ್ಕಳ ಶಾಲಾ ಶುಲ್ಕ ಸೇರಿದಂತೆ ಇತರ ಅಗತ್ಯ ವೆಚ್ಚಗಳಿಗಾಗಿ ಹಣ ಹೊಂದಿಸಲು ಪೊಲೀಸ್ ಸಿಬ್ಬಂದಿ ಪರದಾಡುತ್ತಿದ್ದಾರೆ.

ವೇತನ ವಿಳಂಬದ ಜೊತೆಗೆ ಗಳಿಕೆ ರಜೆ ನಗದೀಕರಣವೂ ಆಗಿಲ್ಲ. ಇದರಿಂದ ಸಮಸ್ಯೆ ಆಗಿದೆ ಎಂದು ಕಲಬುರಗಿ ಕಮಿಷನರೇಟ್ ವ್ಯಾಪ್ತಿಯ ಪೊಲೀಸ್ ಸಿಬ್ಬಂದಿಯೊಬ್ಬರು ತಿಳಿಸಿದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ, ‘ಆರ್ಥಿಕ ವರ್ಷದ ಅಂತ್ಯದಲ್ಲಿ ವೇತನ ಬಟವಡೆಯಲ್ಲಿ ವಿಳಂಬ ಆಗಿದೆ. ವೇತನ ಮಾರ್ಚ್ 11ರಂದು ಖಾತೆಗಳಿಗೆ ಜಮಾ ಆಗಲಿದೆ’ ಎಂದರು.

ಶಿವಮೊಗ್ಗ ವರದಿ: ಜಿಲ್ಲೆಯಲ್ಲಿ ಪೊಲೀಸರಿಗೆ ಫೆಬ್ರುವರಿ ತಿಂಗಳ ವೇತನ ಇನ್ನೂ ಪಾವತಿ ಆಗಿಲ್ಲ.

‘ವೇತನ ಜಮೆ ಆಗಿಲ್ಲ. ಡಿಪಿಒ ವಿಭಾಗದವರು ಕರೆ ಸ್ವೀಕರಿಸುತ್ತಿಲ್ಲ’ ಎಂದು ಸಾಗರದ ಕಾನ್‌ಸ್ಟೆಬಲ್‌ವೊಬ್ಬರು ಬೇಸರ ತೋಡಿಕೊಂಡರು.

ಚುಟುಕೆ ಸುದ್ದಿ

ಮಹಿಳಾ ಚಿಂತನಾ ಸಮಾವೇಶ 13–14ಕ್ಕೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಇದೇ 13 ಮತ್ತು 14ರಂದು ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಾಧಕಿ–ಮಹಿಳಾ ಚಿಂತನಾ ಸಮಾವೇಶ ಹಮ್ಮಿಕೊಂಡಿದೆ.

ಕರ್ನಾಟಕ ಲೇಖಕಿಯರ ಸಂಘದ ಸಹಯೋಗವಿದೆ. ಸಾಹಿತ್ಯ ವಲಯದಲ್ಲಿ ಅವಜ್ಞೆಗೊಳಗಾದ ಮಧ್ಯಕಾಲೀನ ಯುಗದ ವಚನಕಾರ್ತಿಯರು, ಕೀರ್ತನಕಾರ್ತಿಯರು ಮತ್ತು ತತ್ವಪದಕಾರ್ತಿಯರನ್ನು ಕೇಂದ್ರೀಕರಿಸಿ ಗೋಷ್ಠಿಗಳನ್ನು ರೂಪಿಸಲಾಗಿದೆ ಎಂದು ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

‘200ಕ್ಕೂ ಹೆಚ್ಚು ಚಿಂತಕಿಯರು ಸಮಾವೇಶದಲ್ಲಿ ಭಾಗವಹಿಸುತ್ತಿದ್ದಾರೆ. ವಚನಕಾರ್ತಿಯರಲ್ಲಿ ಲಿಂಗತ್ವ ಪರಿಕಲ್ಪನೆ ಮತ್ತು ಕಾಯಕ ತತ್ವ, ತತ್ವ ಪದಕಾರ್ತಿಯರಲ್ಲಿ ಸ್ತ್ರೀ-ಪುರುಷ ಪರಿಕಲ್ಪನೆ ಸೇರಿ ವಿವಿಧ ವಿಷಯಗಳ ಮೇಲೆ ಗೋಷ್ಠಿಗಳು ನಡೆಯಲಿವೆ’ ಎಂದು ಹೇಳಿದ್ದಾರೆ.

ಕೆರೆಯಲ್ಲಿ ಮುಳುಗಿ ತಂದೆ-ಮಗ ಸಾವು

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ಇಲ್ಲಿನ ಪೊನ್ನಂಪೇಟೆ ಬಳಿಯ ಚಿಕ್ಕಮಂಡೂರಿನಲ್ಲಿ ಸೋಮವಾರ ಆಕಸ್ಮಿಕವಾಗಿ ಕೆರೆಗೆ ಬಿದ್ದ ಮಗ, ಆತನ ರಕ್ಷಣೆಗೆ ಧಾವಿಸಿದ ತಂದೆ ಮೃತಪಟ್ಟಿದ್ದಾರೆ. ಕೆಂಚ (8) ಹಾಗೂ ಜೇನು ಕುರುಬರ ಶಿವಣ್ಣ (40) ಮೃತರು.

ಕಾಫಿ ತೋಟವೊಂದರ ಲೈನ್‌ಮನೆಯಲ್ಲಿ ವಾಸವಿದ್ದ ಶಿವಣ್ಣ, ಕುಟುಂಬದವರು ಕೆರೆಗೆ ಬಟ್ಟೆ ತೊಳೆಯಲು ಹೋಗಿದ್ದಾಗ ಅವಘಡ ನಡೆದಿದೆ.

ಬಾಲಕ ಕೆಂಚ ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 2ನೇ ತರಗತಿ ಓದುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ

₹3.63 ಕೋಟಿ ಕಾಣಿಕೆ ಸಂಗ್ರಹ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಂಗಳವಾರ ಹುಂಡಿ ಕಾಣಿಕೆ ಎಣಿಕೆ ಮಾಡಿದ್ದು, 28 ದಿನಗಳಲ್ಲಿ ಭಕ್ತರಿಂದ ₹3.63 ಕೋಟಿ ನಗದು ಬಂದಿದೆ.



ಫೆ. 10ರಿಂದ ಮಾರ್ಚ್ 9ರ ವರೆಗಿನ ಅವಧಿಯಲ್ಲಿ ₹ 3.52 ಕೋಟಿ ನಗದು, ₹11 ಲಕ್ಷ ಮೊತ್ತದ ನಾಣ್ಯಗಳು ಸೇರಿವೆ. 28 ಗ್ರಾಂ ಚಿನ್ನ ಮತ್ತು 1 ಕೆ.ಜಿ. ಬೆಳ್ಳಿಯನ್ನು ಭಕ್ತರು ಕಾಣಿಕೆಯಾಗಿ ನೀಡಿದ್ದಾರೆ ಪ್ರಕಟಣೆ ತಿಳಿಸಿದೆ.

ವಿಷಪೂರಿತ ಮೇವು 14 ಎಮ್ಮೆ ಸಾವು

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಮೇದೂರಿನಲ್ಲಿ ಸೋಮವಾರ ಸಂಜೆ ವಿಷಪೂರಿತ ಮೇವು ತಿಂದು 14ಕ್ಕೂ ಹೆಚ್ಚು ಎಮ್ಮೆಗಳು ಸಾವಿಗೀಡಾಗಿವೆ.

ಮೇದೂರಿನ ಸಿದ್ದಪ್ಪ ಬತ್ತಿಕೊಪ್ಪ ಎಂಬುವರಿಗೆ ಸೇರಿದ ಎಮ್ಮೆಗಳು ಜಮೀನಿನಲ್ಲಿ ಮೇವು ತಿಂದ ಬಳಿಕ ದಾರಿಯುದ್ದಕ್ಕೂ ಒಂದೊಂದೇ ಉರುಳಿ ಬಿದ್ದು ಪ್ರಾಣಬಿಟ್ಟಿವೆ.

‘ಎಮ್ಮೆಗಳು ಹಾಲು ಕೊಡುತ್ತಿದ್ದವು. ಯಾವ ಕಾರಣಕ್ಕೆ ಮೃತಪಟ್ಟಿವೆ ಎನ್ನುವುದು ತಿಳಿದಿಲ್ಲ’ ಎಂದು ಸಿದ್ದಪ್ಪ ಬತ್ತಿಕೊಪ್ಪ ಅವರು ಕಣ್ಣೀರಿಟ್ಟರು.

ಮಧುಬಲೆ: ಫ್ಯಾಷನ್ ಡಿಸೈನರ್ ಸೆರೆ

ಬೆಳಗಾವಿ: ಪುರುಷರನ್ನು ಮರುಳು ಮಾಡಿ, ಲಾಡ್ಜ್‌ಗೆ ಕರೆದೊಯ್ದು ಅವರ ವಸ್ತುಗಳನ್ನು ದೋಚುತ್ತಿದ್ದ ಮಹಿಳೆಯನ್ನು ಟಿಳಕವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.



ದೀಪಾ

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ ಮೂಲದ, ಪ್ರಸ್ತುತ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ವಾಸಿಸುತ್ತಿರುವ ದೀಪಾ ಮಹಾಲಿಂಗ ಅವಟಗಿ (33) ಬಂಧಿತ ಮಹಿಳೆ.

‘ಫ್ಯಾಷನ್ ಡಿಸೈನರ್ ಆಗಿರುವ ಈಕೆಯಿಂದ 11 ಮೊಬೈಲ್, ಒಂದು ಟ್ಯಾಬ್, ₹14 ಸಾವಿರ ನಗದು, 2 ಕಾರು ಸೇರಿ ₹32.86 ಲಕ್ಷ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಆಕೆಯ ಸಹಚರ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆದಿದೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ಮಂಗಳವಾರ ತಿಳಿಸಿದರು.

‘ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ಶ್ರೀಮಂತರ ಸ್ನೇಹ ಬೆಳೆಸುತ್ತಿದ್ದಳು. ಬಳಿಕ ಲಾಡ್ಜ್‌ಗಳಿಗೆ ಕರೆಯುತ್ತಿದ್ದಳು. ಫ್ರೆಶ್ ಆಗುವಂತೆ ಹೇಳುತ್ತಿದ್ದಳು. ನಂತರ ಹೊರಗಿನಿಂದ ಕೊಠಡಿ ಲಾಕ್ ಮಾಡಿ ಅವರ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದಳು’ ಎಂದು ಹೇಳಿದರು.

‘ಸಂಕೇಶ್ವರದ ನಿವಾಸಿ ಶಿವಾನಂದ ಮಠಪತಿ ಶ್ರೀಮಂತ ವ್ಯಕ್ತಿಗಳನ್ನು ಬಲೆಗೆ ಬೀಳಿಸಲು ಸಹಾಯ ಮಾಡುತ್ತಿದ್ದ’ ಎಂದು ತಿಳಿಸಿದರು.


ಬೆಂಗಳೂರಿನಲ್ಲೂ ದೀಪಾ ವಿರುದ್ಧ ಪ್ರಕರಣ ದಾಖಲಾಗಿವೆ ಎಂದರು.

ಸುದ್ದಿ 2 ನಿಮಿಷ

ಮರು ಅಧಿಸೂಚನೆಗೆ ಆಗ್ರಹ

ಚಿತ್ರದುರ್ಗ: ‘56,432 ಹುದ್ದೆಗಳನ್ನು ಒಳಮೀಸಲಾತಿ ಅನ್ವಯವೇ ನೇಮಕಾತಿ ನಡೆಸುವ ಸಂಬಂಧ ಮರು ಅಧಿಸೂಚನೆ ಹೊರಡಿಸಿ’ ಎಂದು ಒತ್ತಾಯಿಸಿ ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ಆಂಧ್ರಪ್ರದೇಶ, ತೆಲಂಗಾಣದಲ್ಲಿ ಈಗಾಗಲೇ ಒಳಮೀಸಲಾತಿ ಅನುಷ್ಠಾನಗೊಂಡಿದೆ. ಪರಿಶಿಷ್ಟ ಜಾತಿಯಲ್ಲಿ ಹೆಚ್ಚು ಮೀಸಲಾತಿ ಸೌಲಭ್ಯವುಳ್ಳವರು ಸಂವಿಧಾನದ ವಿರುದ್ಧವಾಗಿ ನಡೆದು ಕೊಳ್ಳುತ್ತಿರುವುದು ಮಾದಿಗ ಸಮುದಾಯದವರ ಆತಂಕಕ್ಕೆ ಕಾರಣವಾಗಿದೆ’ ಎಂದು ತಿಳಿಸಿದ್ದಾರೆ.



‘2022-23ರಿಂದ ಎಸ್‌ಸಿ, ಎಸ್‌ಟಿ ಸಮುದಾಯದವರು ಶೇ 24ರಷ್ಟು ಮೀಸಲಾತಿ ಸೌಲಭ್ಯ ಪಡೆಯುತ್ತಿದ್ದಾರೆ. ಇದಕ್ಕೆ ಈಚೆಗೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತರಲಾಗಿದೆ. ಅದರ ತೆರವಿಗೆ ಕಾನೂನು ಇಲಾಖೆ ವಿಫಲವಾಗಿದೆ. ತಡೆಯಾಜ್ಞೆ ತೆರವುಗೊಳಿಸಿ ಎಸ್‌ಸಿಯವರಿಗೆ ಶೇ 17, ಎಸ್‌ಟಿಯವರಿಗೆ ಶೇ 7ರಷ್ಟು ಮೀಸಲಾತಿ ಹಂಚಿಕೆ ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.

ಶರಾವತಿ ಪಂಪ್ಡ್ ಸ್ಟೋರೇಜ್ ಶಾಶ್ವತ ರದ್ದತಿಗೆ ಹಕ್ಕೊತ್ತಾಯ

ಹೊನ್ನಾವರ (ಉತ್ತರ ಕನ್ನಡ): ಉದ್ದೇಶಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕೈಬಿಟ್ಟು, ವಿದ್ಯುತ್ ಕೊರತೆ ನೀಗಿಸಲು ಬದಲಿ ಇಂಧನ ಮೂಲಗಳ ಮೊರೆ ಹೋಗಬೇಕು ಎಂದು ಪಟ್ಟಣದಲ್ಲಿ ಮಂಗಳವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಒತ್ತಾಯಿಸಲಾಗಿದೆ.

ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಅವರ ನೇತೃತ್ವದಲ್ಲಿ ‘ಶರಾವತಿ ಉಳಿಸಿ ಹೋರಾಟ ಸಮಿತಿ’ಯು ಹಮ್ಮಿಕೊಂಡಿದ್ದ ಪ್ರತಿಭಟನಾ ಸಮಾವೇಶದಲ್ಲಿ ಯೋಜನೆಯ ಶಾಶ್ವತ ರದ್ದತಿಗೆ ಸರ್ಕಾರವನ್ನು ಒತ್ತಾಯಿಸಿ ನಿರ್ಣಯ ಮಂಡಿಸಲಾಯಿತು.

‘ಶರಾವತಿ ನದಿ ನೀರನ್ನು ಪರಿಸರ ನಾಶದ ಯೋಜನೆಗೆ ಬಳಸಿಕೊಳ್ಳುವುದು ತಾಯಿಯ ರಕ್ತ ಕುಡಿದಷ್ಟೇ ಮಹಾಪಾಪ’ ಎಂದು ರಾಘವೇಶ್ವರ ಶ್ರೀ ಅಭಿಪ್ರಾಯಪಟ್ಟರು.

‘ಉತ್ತರ ಕನ್ನಡ ಜಿಲ್ಲೆಯ ಪರಿಸರ ಧಾರಣ ಸಾಮರ್ಥ್ಯದ ಅಧ್ಯಯನ ನಡೆಸದೇ, ಇಲ್ಲಿ ಯಾವುದೇ ಬೃಹತ್ ಯೋಜನೆ ಹೇರಿಕೆ ಮಾಡಬಾರದು’ ಎಂಬ ಒತ್ತಾಯ ಮಾಡಲಾಯಿತು.

ಮೀನುಗಾರಿಕೆ ಸಚಿವ ಮಂಕಾಳ ವೈದ್ಯ, ಶಾಸಕ ದಿನಕರ ಶೆಟ್ಟಿ, ಬಂಗಾರಮಕ್ಕಿ ಕ್ಷೇತ್ರದ ಧರ್ಮದರ್ಶಿ ಮಾರುತಿ ಗುರೂಜಿ, ಬ್ರಹ್ಮಶ್ರೀ ನಾರಾಯಣಗುರು ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು.

ಕೇಂದ್ರ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಮನವಿಗೆ ಸ್ಪಂದನ

ಸಿಲಿಂಡರ್: ಸಚಿವ ಪುರಿ ನಿರ್ದೇಶನ

ಪ್ರಜಾವಾಣಿ ವಾರ್ತೆ


ನವದೆಹಲಿ: ಕರ್ನಾಟಕಕ್ಕೆ ಅಗತ್ಯವಿರುವಷ್ಟು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಸರಬರಾಜು ಮಾಡುವಂತೆ ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್‌ಸಿಂಗ್ ಪುರಿ ನಿರ್ದೇಶನ ನೀಡಿದರು.

ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆ ಉಂಟಾಗಿರುವ ಬಗ್ಗೆ ಹೋಟೆಲ್ ಉದ್ಯಮದವರು ಕೇಂದ್ರ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಅವರ ಗಮನಕ್ಕೆ ತಂದಿದ್ದರು. ಶೋಭಾ ಅವರು ಹರದೀಪ್‌ಸಿಂಗ್ ಪುರಿ ಅವರನ್ನು ಸಂಸತ್ ಭವನದಲ್ಲಿ ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ಕೇಂದ್ರ ಸರ್ಕಾರ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಶೋಭಾ, ‘ಜಾಗತಿಕ ಮಟ್ಟದಲ್ಲಿ ದೊಡ್ಡ ಯುದ್ಧ ನಡೆಯುತ್ತಿದೆ. ಕಚ್ಚಾತೈಲ ವಲಯದಲ್ಲಿ ಭಾರತ ಆತ್ಮ ನಿರ್ಭರ ಆಗಿಲ್ಲ. ನಮ್ಮ ದೇಶವು ಪಶ್ಚಿಮ ಏಷ್ಯಾ ಮೇಲೆ ಅವಲಂಬಿಸಿದೆ. ನಮ್ಮ ಕಚ್ಚಾತೈಲ ಹೊತ್ತ ಹಡಗುಗಳು ಬರಬೇಕಿವೆ. ಹೋಟೆಲ್ ಮಾಲೀಕರ ಸಮಸ್ಯೆಯನ್ನು ಸಚಿವರ ಗಮನಕ್ಕೆ ತಂದಿದ್ದೇನೆ’ ಎಂದರು.

‘ದೇಶದ 33 ಕೋಟಿ ಮನೆಗಳಿಗೆ ಎಲ್‌ಪಿಜಿ ನೀಡುವುದು ನಮ್ಮ ಆದ್ಯತೆ. ಜತೆಗೆ, ಆಸ್ಪತ್ರೆ ಹಾಗೂ ಕಾಲೇಜುಗಳಿಗೆ ಅಡುಗೆ ಅನಿಲ ಒದಗಿಸಬೇಕಿದೆ. ಈ ಸಮಸ್ಯೆ ಬಗ್ಗೆ ಪರಿಶೀಲಿಸಲು ಸರ್ಕಾರ ಸಮಿತಿ ರಚಿಸಿದೆ’ ಎಂದರು.

‘ಇಂತಹ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳುವ ಜನರಿದ್ದಾರೆ. ಈ ಬಗ್ಗೆ ಕೂಡಾ ಕೇಂದ್ರ ಸರ್ಕಾರ ಗಮನ ಹರಿಸುತ್ತಿದೆ. ದೇಶಕ್ಕೆ ಆಪತ್ತು ಬಂದಾಗ ಜನರು ಒಟ್ಟಾಗಿ ಎದುರಿಸಬೇಕು. ಕಾಳಸಂತೆಯಲ್ಲಿ ಅಡುಗೆ ಅನಿಲ ಸಿಲಿಂಡರ್ ಮಾರಾಟ ತಡೆಯಲು ಜಿಲ್ಲಾವಾರು ತಂಡ ರಚಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದೇನೆ’ ಎಂದರು.



ಹರದೀಪ್ ಸಿಂಗ್ ಪುರಿ ಅವರಿಗೆ ಶೋಭಾ ಕರಂದ್ಲಾಜೆ ಮನವಿ ಸಲ್ಲಿಸಿದರು

ಮಲಪ್ರಭೆ ತಟದಲ್ಲಿ ಚಿಫ್‌ಚಾಫ್ ಹಕ್ಕಿ



ಚಿಫ್‌ಚಾಫ್ ಹಕ್ಕಿ

ರೋಣ (ಗದಗ ಜಿಲ್ಲೆ): ತಾಲ್ಲೂಕಿನ ಹೊಳೆಆಲೂರು ಭಾಗದ ಮಲಪ್ರಭೆ ತಟದಲ್ಲಿ ಫಿಲೋಸ್ಕೋಪಿಡೆ ಕುಟುಂಬಕ್ಕೆ ಸೇರಿದ ಕಾಮನ್ ಚಿಫ್‌ಚಾಫ್ ಹಕ್ಕಿ (ಕಂದು ಎಲೆ ಉಲಿಯಕ್ಕಿ) ಇದೇ ಮೊದಲ ಬಾರಿಗೆ ಕಂಡುಬಂದಿದೆ.

‘ಫಿಲೋಸ್ಕೋಪಸ್ ಕೊಲ್ಲಿಬಿಟಾ ಎಂಬ ಹೆಸರಿನಿಂದ ಗುರುತಿಸಲ್ಪಡುವ ಇದು ಚಿಕ್ಕಗಾತ್ರದ ಕೀಟಹಾರಿ ಪಕ್ಷಿ. ಮರಗಳ ಎಲೆಗಳ ನಡುವೆ ಅಡಗಿಕೊಂಡು ಕೀಟಗಳನ್ನು ಬೇಟೆಯಾಡುತ್ತದೆ. ಇವು ಹಾರಾಡುತ್ತಲೇ ಕೀಟಗಳನ್ನು ಹಿಡಿಯುವ ಸಾಮರ್ಥ್ಯ ಹೊಂದಿವೆ’ ಎನ್ನುತ್ತಾರೆ ತಜ್ಞರು.

ಸೌದೆಯ ಮೊರೆ ಹೋದ ಹೋಟೆಲ್‌ಗಳು

ಎಲ್‌ಪಿಜಿ ಕೊರತೆ: ತಟ್ಟಿದ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ಹೋಟೆಲ್‌ಗಳು ಹಾಗೂ ಪೇಯಿಂಗ್ ಗೆಸ್ಟ್ (ಪಿ.ಜಿ) ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ.

ಕೆಲವು ಹೋಟೆಲ್‌ಗಳು ಮುಂಜಾಗ್ರತಾ ಕ್ರಮವಾಗಿ ಸೌದೆ ತರಿಸಿಕೊಂಡು ದಾಸ್ತಾನು ಮಾಡಿಕೊಳ್ಳುತ್ತಿವೆ. ಮತ್ತೆ ಕೆಲವು ಹೋಟೆಲ್‌ಗಳ ಮೆನುವಿನಲ್ಲಿ ಬದಲಾವಣೆ ಮಾಡಲಾಗಿದ್ದು, ದೋಸೆ, ಚಪಾತಿ, ಫ್ರೈಡ್ ರೈಸ್, ಗೋಬಿ ಮಂಚೂರಿ ಸ್ಥಗಿತಗೊಳಿಸಲಾಗಿದೆ. ಕೆಲವೆಡೆ, ‘ಕಾಫಿ, ಟೀ, ಅನ್ನ, ಸಾಂಬಾರ್ ಮಾತ್ರ ಲಭ್ಯವಿದೆ’ ಎಂಬ ಫಲಕ ಹಾಕಿರುವುದು ಕಂಡುಬಂತು.

ಸಿಲಿಂಡರ್‌ಗಳ ಕೊರತೆಯಿಂದ ನಗರದಲ್ಲಿ ಮಂಗಳವಾರ ಕೆಲವು ಹೋಟೆಲ್‌ಗಳು ಬಂದ್ ಆಗಿದ್ದವು. ಬಸವನಗುಡಿಯ ವಿದ್ಯಾರ್ಥಿ ಭವನ ಹೋಟೆಲ್‌ನಲ್ಲಿ ನಾಲ್ಕು ದೋಸೆ ಹಂಚುಗಳ ಪೈಕಿ ಎರಡು ಹಂಚುಗಳನ್ನು ಬಳಸಲಿಲ್ಲ. ಇದು ನಗರದ ಬಹುತೇಕ ಹೋಟೆಲ್‌ಗಳು ಎದುರಿಸುತ್ತಿರುವ ಸಮಸ್ಯೆಯಾಗಿದೆ.

‘ಎರಡು ದಿನಕ್ಕೆ ಆಗುವಷ್ಟು ಸಿಲಿಂಡರ್ ದಾಸ್ತಾನು ಇದೆ. ಹೋಟೆಲ್ ಬಂದ್ ಮಾಡಲು ಇಷ್ಟವಿಲ್ಲ. ಆಸನಗಳ ಸಂಖ್ಯೆ ಹಾಗೂ ದೋಸೆ ಹಂಚುಗಳನ್ನು ಕಡಿಮೆ ಮಾಡಲಾಗಿದೆ. ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ’ ಎಂದು ವಿದ್ಯಾರ್ಥಿ ಭವನ ಮಾಲೀಕ ಅರುಣ ಅಡಿಗ ತಿಳಿಸಿದರು.

‘ಸದ್ಯ ಇರುವ ಸಿಲಿಂಡರ್‌ಗಳನ್ನು ಬಳಸಿಕೊಂಡು ಸಾರ್ವಜನಿಕರಿಗೆ ತಿಂಡಿ–ತಿನಿಸುಗಳನ್ನು ಪೂರೈಕೆ ಮಾಡಲಾಗುತ್ತಿದೆ. ಹೋಟೆಲ್‌ಗೆ ನಿತ್ಯ 5 ರಿಂದ 10 ಸಿಲಿಂಡರ್ ಅಗತ್ಯವಿದೆ. ಕೆಲವೆಡೆ 5 ರಿಂದ 7 ಸಿಲಿಂಡರ್ ದಾಸ್ತಾನು ಇರುತ್ತದೆ. ಕಾಳಸಂತೆಯಲ್ಲೂ ಸಿಲಿಂಡರ್ ಸಿಗುತ್ತಿಲ್ಲ’ ಎಂದು ಹೋಟೆಲ್ ಮಾಲೀಕರೊಬ್ಬರು ಹೇಳಿದರು.

‘ಗ್ರಾಹಕರಿಗೆ ತೊಂದರೆ ಆಗಬಾರದೆಂದು ತಾರಾ ಹೋಟೆಲ್‌ಗಳಲ್ಲಿ ಸೌದೆ ಬಳಸಿ ಅಡುಗೆ ತಯಾರಿಸಲಾಗುತ್ತಿದೆ. ಸಿಲಿಂಡರ್ ಪೂರೈಕೆಯಾಗದಿದ್ದರೆ 48 ತಾಸು ಕಳೆದ ಬಳಿಕ ಬಹುತೇಕ ಹೋಟೆಲ್‌ಗಳು ಬಂದ್ ಆಗಲಿವೆ. ಬುಧವಾರ ಸಂಜೆವರೆಗೂ ಕಾದು ನೋಡಲಾಗುವುದು’ ಎಂದು ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸದ್ಯ ನಗರದಲ್ಲಿ ಸಿಎನ್‌ಜಿ ಪೂರೈಕೆಯಲ್ಲಿ ವ್ಯತ್ಯಯ ಕಂಡುಬಂದಿಲ್ಲ.

15 ಸಾವಿರ ಪಿ.ಜಿ: 10 ಲಕ್ಷ ಮಂದಿ

ಬೆಂಗಳೂರಿನಲ್ಲಿ ಅಂದಾಜು 15 ಸಾವಿರ ಪಿ.ಜಿ. ಗಳಿದ್ದು (ಪೇಯಿಂಗ್ ಗೆಸ್ಟ್), 10 ಲಕ್ಷಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ನೋಂದಾಯಿತ ಪಿ.ಜಿಯಲ್ಲಿ ಮೂರು ಎಲ್‌ಪಿಜಿ ಸಿಲಿಂಡರ್ ದಾಸ್ತಾನು ಇರಲಿದ್ದು, ಐದಾರು ದಿನಗಳು ಬಳಸಿಕೊಳ್ಳಬಹುದು. ಸಿಲಿಂಡರ್‌ಗೆ ಕಡಿಮೆ ಬೇಡಿಕೆ ಇರುವ ಸಮೀಪದ ಪಟ್ಟಣಗಳಿಂದ ಅವುಗಳನ್ನು ತರಿಸಿಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಬೆಂಗಳೂರು ಪಿ.ಜಿ ಮಾಲೀಕರ ಸಂಘದ ಅಧ್ಯಕ್ಷ ಅರುಣ್ ಕುಮಾರ್ ತಿಳಿಸಿದ್ದಾರೆ.

‘ಪಿ.ಜಿ ಮಾಲೀಕರ ಸಂಘ ಸಭೆ ನಡೆಸಿದ್ದು, ಅನಿವಾರ್ಯವಾದರೆ ಇಂಡಕ್ಷನ್ ಸ್ಟೌ, ಹೆಚ್ಚಿನ ಸಾಮರ್ಥ್ಯದ ಎಲೆಕ್ಟ್ರಿಕ್ ಹೀಟರ್‌ಗಳನ್ನು ಬಳಸಿ ಅಡುಗೆ ಮಾಡಲು ಚರ್ಚಿಸಲಾಗಿದೆ. ಚಪಾತಿ, ರೊಟ್ಟಿ ಮಾಡದಂತೆ ನಿರ್ಧರಿಸಲಾಗಿದೆ. ಅನ್ನ, ಸಾಂಬಾರ್ ಸೇರಿದಂತೆ ಗ್ಯಾಸ್ ಕಡಿಮೆ ಬಳಕೆ ಆಗುವ ಪದಾರ್ಥಗಳನ್ನು ಮಾಡಲು ನಿರ್ಧರಿಸಲಾಗಿದೆ’ ಎಂದರು.

ಬಾಯಿ ಬಿಡದ ಕೇಂದ್ರ; ಡಿಕೆಶಿ ವಾಗ್ದಾಳಿ

ಅನಿಲ ಸಿಲಿಂಡರ್ ವ್ಯತ್ಯಯ: ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆ ಮಾಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನಿಲ ಸಿಲಿಂಡರ್‌ಗಳು ಸರಿಯಾಗಿ ಸಿಗದೆ ಹೋಟೆಲ್ ಉದ್ದಿಮೆ ಮುಚ್ಚುವ ಹಂತಕ್ಕೆ ಬಂದಿದೆ. ದೇಶದಲ್ಲಿ ಸಮಸ್ಯೆ ತಲೆದೋರಿದೆ. ಆದರೂ ಕೇಂದ್ರ ಸರ್ಕಾರ ಬಾಯಿಬಿಡುತ್ತಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಮನೆ ಬಳಕೆಗೆ, ಉದ್ದಿಮೆಗೆ ಯಾವುದೇ ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಕಳೆದ 15 ದಿನಗಳಿಂದಲೂ ಈ ವಿಚಾರವಾಗಿ ಯಾವುದೇ ಸೂಕ್ತ ವ್ಯವಸ್ಥೆ ಮಾಡಿಕೊಂಡಿಲ್ಲ’ ಎಂದು ಆರೋಪಿಸಿದರು.

‘ದೇಶದ ವಿದೇಶಾಂಗ ನೀತಿ ಹಳ್ಳ ಹಿಡಿದಿದೆ. ಸರ್ಕಾರ ಈ ಬಗ್ಗೆ ತನ್ನ ನಿಲುವು ಸ್ಪಷ್ಟಪಡಿಸಬೇಕು. ಸಂಸದರು ಕೂಡ ಈ ಬಗ್ಗೆ ಮಾತನಾಡಬೇಕು. ಸರ್ಕಾರ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು’ ಎಂದು ಆಗ್ರಹಿಸಿದರು.

‘ಕರ್ನಾಟಕ ಹೋಟೆಲ್ ಅಸೋಸಿಯೇಷನ್‌ನವರು ಹೋಟೆಲ್‌ಗಳನ್ನು ಮುಚ್ಚಲು ತೀರ್ಮಾನಿಸಿದ್ದಾರೆ. ಇದರಿಂದ ಆಸ್ಪತ್ರೆಗಳಿಗೂ ಹೊಡೆತ ಬೀಳಲಿದೆ’ ಎಂದೂ ಹೇಳಿದರು.

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಸಿ: ಸಿ.ಎಂ ಪತ್ರ

ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಕೇಂದ್ರ ಸರ್ಕಾರವು ತಕ್ಷಣವೇ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್‌ಸಿಂಗ್ ಪುರಿ ಅವರಿಗೆ ಪತ್ರ ಬರೆದಿದ್ದಾರೆ.

ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆಗಿಂತ, ಗೃಹ ಬಳಕೆ ಸಿಲಿಂಡರ್‌ಗಳ ಪೂರೈಕೆಗೆ ಆದ್ಯತೆ ನೀಡಿ ಎಂದು ಕೇಂದ್ರ ಸರ್ಕಾರವು ತೈಲ ಸಂಸ್ಕರಣ ಕಂಪನಿಗಳಿಗೆ ನೀಡಿರುವ ಸುತ್ತೋಲೆಯ ಬಗ್ಗೆ ಸಿದ್ದರಾಮಯ್ಯ ಅವರು ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

‘ಬೆಂಗಳೂರಿನಂತಹ ನಗರದಲ್ಲಿ ಸಾವಿರಾರು ಹೋಟೆಲ್, ಮೆಸ್, ರೆಸ್ಟೋರೆಂಟ್, ವಸತಿ ಗೃಹಗಳು ಮತ್ತು ರಾಜ್ಯದಲ್ಲಿನ ಹಲವು ಕೈಗಾರಿಕೆಗಳು ಭಾರಿ ಪ್ರಮಾಣದಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಬಳಸುತ್ತವೆ. ರಾಜ್ಯದಲ್ಲಿ ಪ್ರತಿದಿನ 1,000–1,100 ಟನ್‌ಗಳಷ್ಟು ವಾಣಿಜ್ಯ ಬಳಕೆ ಎಲ್‌ಪಿಜಿಯ ಬೇಡಿಕೆ ಇದೆ. ಈಗ ಪೂರೈಕೆ ಸ್ಥಗಿತವಾದರೆ, ಹೋಟೆಲ್ ಉದ್ಯಮಗಳಿಗೆ ಹೊಡೆತ ಬೀಳಲಿದೆ’ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಅಡುಗೆ ಅನಿಲಕ್ಕಾಗಿ ಕಾಯ್ದೆ ಪ್ರಯೋಗ

ಒಂದನೇ ಪುಟದಿಂದ...

ಸಾಂಪ್ರದಾಯಿಕ ಮೂಲಗಳಿಂದ ಆಗುವ ಎಲ್‌ಪಿಜಿ ಉತ್ಪಾದನೆಯು ಗರಿಷ್ಠ ಮಟ್ಟವನ್ನು ತಲುಪಿದೆ. ಹೀಗಾಗಿ ಕೇಂದ್ರ ಸರ್ಕಾರವು, ಪೆಟ್ರೊ ರಾಸಾಯನಿಕಗಳಿಂದಲೂ ಎಲ್‌ಪಿಜಿ ಉತ್ಪಾದಿಸುವಂತೆ ಸಂಸ್ಕರಣಾ ಕಂಪನಿಗಳಿಗೆ ಸೂಚಿಸಿತ್ತು. ‘ಈಗ ಉತ್ಪಾದನೆಯು ಶೇ 10ರಷ್ಟು ಹೆಚ್ಚಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಪರಿಸ್ಥಿತಿ ಸಹಜವಾದ ನಂತರದಲ್ಲಿ ಮೊದಲಿನ ಎಲ್ಲ ಗುತ್ತಿಗೆಗಳು ಪುನಃ ಜಾರಿಗೆ ಬರಲಿವೆ ಎಂದರು.

ನೈಸರ್ಗಿಕ ಅನಿಲವನ್ನು ವಿದ್ಯುತ್ ಉತ್ಪಾದಿಸಲು, ರಸಗೊಬ್ಬರ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇದೇ ಅನಿಲವನ್ನು ಸಿಎನ್‌ಜಿ, ಎಲ್‌ಪಿಜಿ ಉತ್ಪಾದಿಸಲು ಬಳಸಲಾಗುತ್ತದೆ.

ತಿಂಗಳಿಗೆ ಒಂದೇ ಸಿಲಿಂಡರ್

ಒಂದನೇ ಪುಟದಿಂದ...

‘ಅಲ್ಲದೆ, ಅವರು ಕಡ್ಡಾಯವಾಗಿ ಒಟಿಪಿಯನ್ನು ನೀಡುವಂತೆಯೂ ಸೂಚನೆ ನೀಡಲಾಗಿದೆ ಎಂದು ತೈಲೋತ್ಪನ್ನ ಕಂಪನಿಯ ಅಧಿಕಾರಿಯೊಬ್ಬರು ಹೇಳಿದರು.

‘ಏಪ್ರಿಲ್ ತಿಂಗಳವರೆಗೂ ಸಮಸ್ಯೆ ಆಗದು. ವಾಣಿಜ್ಯ ಸಿಲಿಂಡರ್ ಹಂಚಿಕೆ ಪ್ರಮಾಣ ಶೇ 20ರಷ್ಟು ಕಡಿಮೆಯಾಗಿದ್ದು, ಅದನ್ನು ಗೃಹ ಬಳಕೆಗೆ ವರ್ಗಾಯಿಸಲಾಗಿದೆ’ ಎಂದು ವಿತರಕರೊಬ್ಬರು ತಿಳಿಸಿದರು.

ಸಿ.ಎಂ ಪತ್ರ

ಒಂದನೇ ಪುಟದಿಂದ...

ರಾಜ್ಯದಲ್ಲಿ ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆ ಉಂಟಾಗಿರುವ ಬಗ್ಗೆ ಕೇಂದ್ರ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಸಹ ಸಚಿವ ಪುರಿ ಅವರ ಗಮನಕ್ಕೆ ತಂದಿದ್ದಾರೆ. ಕರ್ನಾಟಕಕ್ಕೆ ಅಗತ್ಯವಿರುವಷ್ಟು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಸರಬರಾಜು ಮಾಡುವಂತೆ ಪುರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ: ಕಾರ್ಯಪಡೆ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಆರಂಭವಾಗುತ್ತಿರುವ ಕಾರಣ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮೇಲ್ವಿಚಾರಣೆಗಾಗಿ 10 ದಿನದೊಳಗೆ ಸಂಪುಟ ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕಾರ್ಯಪಡೆಯನ್ನು ರಚಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ವಿಧಾನಸಭೆಯಲ್ಲಿ ತಿಳಿಸಿದರು.

ಕಾಂಗ್ರೆಸ್‌ನ ಎಚ್.ಸಿ.ಬಾಲಕೃಷ್ಣ ಅವರ ಗಮನ ಸೆಳೆಯುವ ಸೂಚನೆಗೆ ಪ್ರಿಯಾಂಕ್ ಉತ್ತರಿಸಿದರು. ‘ಮುಂದಿನ ವಾರ ನಡೆಯುವ ಕಂದಾಯ, ಪಶುಸಂಗೋಪನಾ ಸಚಿವರು ಸೇರಿದಂತೆ ಹಲವರನ್ನು ಒಳಗೊಂಡ ಸಂಪುಟ ಉಪಸಮಿತಿ ಸಭೆಯಲ್ಲಿ ಬೇಸಿಗೆಯಲ್ಲಿ ಪರಿಸ್ಥಿತಿ ನಿರ್ವಹಣೆ ಬಗ್ಗೆ ಚರ್ಚಿಸಲಾಗುವುದು. ಕಾರ್ಯಪಡೆ ರಚನೆ ಸೇರಿದಂತೆ ಕ್ಷೇತ್ರವಾರು ಅನುದಾನ ಹಂಚಿಕೆ ಬಗ್ಗೆಯೂ ತೀರ್ಮಾನವಾಗಲಿದೆ’ ಎಂದು ಹೇಳಿದರು

ಸಂಘಟನೆ, ಹೋರಾಟದಲ್ಲಿ ಜೊತೆಯಾಗಿರುವೆ: ಮುಖ್ಯಮಂತ್ರಿ ಸಿದ್ದರಾಮಯ್ಯ

‘ಡಿಕೆಶಿಗೆ ಉಜ್ವಲ ರಾಜಕೀಯ ಭವಿಷ್ಯವಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನಗಿಂತ ಕಿರಿಯರಾದ ಡಿ.ಕೆ. ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಅನ್ನು ಮತ್ತೆ ಅಧಿಕಾರಕ್ಕೆ ತರಬೇಕು. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡ ಅವರ ಜೊತೆ ಇರುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷರಾಗಿ ಶಿವಕುಮಾರ್ ಆರು ವರ್ಷ ಪೂರೈಸಿದ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ, ‘ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ಪಕ್ಷದ ಯುವ ನಾಯಕರಿಗೆ ಮಾದರಿ’ ಎಂದಿದ್ದಾರೆ.

‘ಬಿಜೆಪಿ ಸುಳ್ಳು ಪ್ರಕರಣ ದಾಖಲಿಸಿ, ಕಿರುಕುಳ ನೀಡಿದರೂ ಶಿವಕುಮಾರ್ ಮಣಿಯದೆ, ಪಕ್ಷಕ್ಕೆ ನಿಷ್ಠರಾಗಿ ಉಳಿದರು. ಕಾಂಗ್ರೆಸ್ ಬಗೆಗೆ ಅವರಿಗೆ ಇರುವ ನಿಷ್ಠೆಗೆ ಇದು ಸಾಕ್ಷಿ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ, ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವಲ್ಲಿ ಅವರು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜತೆ ಹಗಲು–ಇರುಳು ದುಡಿದಿದ್ದಾರೆ’ ಎಂದಿದ್ದಾರೆ.

‘ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮರುಕಟ್ಟುವಲ್ಲಿ ಶಿವಕುಮಾರ್ ಅವರು ನನ್ನ ಹೆಗಲಿಗೆ, ಹೆಗಲಾಗಿ ನಿಂತಿದ್ದಾರೆ’ ಎಂದೂ ಹೇಳಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಔತಣಕೂಟದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಹೂಗುಚ್ಛ ನೀಡಿದರು.

ಔತಣಕೂಟ

ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಸಂಭ್ರಮದಲ್ಲಿ, ಶಿವಕುಮಾರ್ ಅವರು ತಮ್ಮ ಪಕ್ಷದ ಶಾಸಕರಿಗೆ ಬೆಂಗಳೂರಿನ ಐಟಿಸಿ ಗಾರ್ಡೇನಿಯಾ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ಔತಣಕೂಟ ಆಯೋಜಿಸಿದ್ದರು.

ಸಿದ್ದರಾಮಯ್ಯ ಸೇರಿದಂತೆ ಬಹುತೇಕ ಎಲ್ಲ ಸಚಿವರು, ಶಾಸಕರು ಈ ಕೂಟದಲ್ಲಿ ಭಾಗವಹಿಸಿದರು. ಪರಿಷತ್ ಸದಸ್ಯ ಪುಟ್ಟಣ್ಣ ಅವರು ಶಿವಕುಮಾರ್ ಅವರಿಗೆ ಬೆಳ್ಳಿಯ ಗಡಿಯಾರ ನೀಡಿ ಅಭಿನಂದಿಸಿದರು. ಕನಕಪುರದಿಂದ ಬಂದಿದ್ದ ತಂಡದಿಂದ ಜನಪದ ಹಾಡುಗಳ ಗಾಯನವೂ ನಡೆಯಿತು.

ತೀವ್ರ ಕೀಟಲೆಗೆ ಗುರಿಯಾಗಿದ್ದ ಬಾಲಕ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಸತಿ ಶಾಲೆಯಲ್ಲಿ ಶನಿವಾರ ಸಹಪಾಠಿಗಳ ಮೇಲೆ ತೀವ್ರ ಹಲ್ಲೆ ನಡೆಸಿ, ಒಬ್ಬನ ಕೊಂದಿದ್ದ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ತೀವ್ರ ಕೀಟಲೆಗೆ ಗುರಿಯಾಗಿದ್ದ ಎನ್ನಲಾಗಿದೆ.

ಆಪ್ತ ಸಮಾಲೋಚನೆ ವೇಳೆ ಬಾಲಕ ಈ ವಿಷಯವನ್ನು ವಿಚಾರಣಾ ತಂಡಕ್ಕೆ ತಿಳಿಸಿದ್ದಾನೆ. ಇಡೀ ಹಾಸ್ಟೆಲ್‌ನಲ್ಲಿ ಎಲ್ಲರೂ ಆಂಧ್ರಪ್ರದೇಶದವರಾಗಿದ್ದರೂ, ಈತನೊಬ್ಬನೇ ಕರ್ನಾಟಕದವನಾಗಿದ್ದ. ಆಟಪಾಠಗಳಲ್ಲಿ ಆತನನ್ನು ಯಾರೂ ಸೇರಿಸಿಕೊಳ್ಳುತ್ತಿರಲಿಲ್ಲ. ಕ್ರಿಕೆಟ್ ಆಡುವಾಗ ‘ಆರ್‌ಸಿಬಿ’ ಎಂದು ರೇಗಿಸುತ್ತಿದ್ದರು ಎಂದು ಹೇಳಿಕೊಂಡಿರುವುದಾಗಿ ಗೊತ್ತಾಗಿದೆ.

ಹಲ್ಲೆ ನಡೆದ ರಾತ್ರಿಯು ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕನನ್ನು ಕೀಟಲೆ ಮಾಡಲು ಸಹಪಾಠಿಗಳು ಮಾತನಾಡಿಕೊಳ್ಳುತ್ತಿದ್ದರು ಎನ್ನಲಾಗಿದೆ. ಇದೆಲ್ಲದರಿಂದ ಬೇಸರಗೊಂಡ ಬಾಲಕ ಎಲ್ಲರ ಮೇಲೆ ತೀವ್ರ ಹಲ್ಲೆ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಮಂದಿರದಲ್ಲಿ ಬಾಲಕ: ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕನನ್ನು ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸರ್ಕಾರಿ ಬಾಲ ಮಂದಿರದಲ್ಲಿ ಇರಿಸಲಾಗಿದೆ.

ಮಂಗಳವಾರ ಸುಪರ್ದಿಗೆ ಪಡೆದು, ಮತ್ತೆ ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಬುಧವಾರ ಸ್ಥಳ ಮಹಜರಿಗೆ ಕರೆತರಲಾಗುತ್ತದೆ ಎಂದು ಗೊತ್ತಾಗಿದೆ.

ಅಭ್ಯರ್ಥಿಗಳು	
ಈಶಾನ್ಯ ಶಿಕ್ಷಕರ ಕ್ಷೇತ್ರ	ಶಶೀಲ್ ಜಿ.ನಮೋಶಿ
ಪಶ್ಚಿಮ ಪದವೀಧರರ ಕ್ಷೇತ್ರ	ಎಸ್.ವಿ.ಸಂಕನೂರ
ಆಗ್ನೇಯ ಪದವೀಧರರ ಕ್ಷೇತ್ರ	ಕೆ.ಎಂ. ಸುರೇಶ್
ಬೆಂಗಳೂರು ಶಿಕ್ಷಕರ ಕ್ಷೇತ್ರ	ಜೆಡಿಎಸ್ ಅಭ್ಯರ್ಥಿ (ಇನ್ನಷ್ಟೇ ಪ್ರಕಟವಾಗಬೇಕಿದೆ)

ವಿಧಾನ ಪರಿಷತ್ ಚುನಾವಣೆ ಬಿಜೆಪಿ ಅಭ್ಯರ್ಥಿಗಳ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನ ಪರಿಷತ್‌ನ ಶಿಕ್ಷಕರು ಹಾಗೂ ಪದವೀಧರರ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಬಿಜೆಪಿ ಮಂಗಳವಾರ ಪ್ರಕಟಿಸಿದ್ದು, ಒಂದು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ.

ನವೆಂಬರ್‌ನಲ್ಲಿ ನಡೆಯುವ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಈ ಹಿಂದೆಯೇ ಬಿಡುಗಡೆ ಮಾಡಿತ್ತು. ಬೆಂಗಳೂರು ಶಿಕ್ಷಕರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ, ಆಗ್ನೇಯ ಪದವೀಧರರ ಕ್ಷೇತ್ರ ಹಾಗೂ ಈಶಾನ್ಯ ಶಿಕ್ಷಕರ ಕ್ಷೇತ್ರಗಳಿಗೆ ಸಂಭಾವ್ಯರ ಹೆಸರನ್ನು ಬಿಜೆಪಿ ಪ್ರಮುಖರ ಸಭೆಯಲ್ಲಿ ಚರ್ಚಿಸಿ ತಿಂಗಳುಗಳ ಹಿಂದೆಯೇ ವರಿಷ್ಠರಿಗೆ ಕಳುಹಿಸಲಾಗಿತ್ತು. ಪ್ರತಿಯೊಂದು ಕ್ಷೇತ್ರಕ್ಕೆ 3–4 ಹೆಸರುಗಳನ್ನು ಶಿಫಾರಸು ಮಾಡಲಾಗಿತ್ತು. ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿರುವ ಬಿಜೆಪಿ, ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನು ಬಿಟ್ಟುಕೊಟ್ಟಿದೆ. ಈ ಮೂಲಕ, ಪರಿಷತ್ ಚುನಾವಣೆಯಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರಿಯಲಿದೆ.

ಕವಿತಾ ಉಪವಾಸ ಸತ್ಯಾಗ್ರಹ ಅಂತ್ಯ

ಹೈದರಾಬಾದ್ (ಪಿಟಿಐ): ಖಮ್ಮಂನಲ್ಲಿ ತೆಲಂಗಾಣ ಜಾಗೃತಿ ಅಧ್ಯಕ್ಷೆ ಕೆ. ಕವಿತಾ ಅವರು ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಪೊಲೀಸರು ಮಂಗಳವಾರ ನಿಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರದ ಭೂಸ್ವಾಧೀನದಿಂದ ಜಮೀನು ಕಳೆದುಕೊಂಡವರಿಗೆ ನ್ಯಾಯ ಒದಗಿಸುವಂತೆ ಕೋರಿ ಕವಿತಾ ಸೋಮವಾರ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದರು.

ಪ್ರತಿಭಟನೆಯಿಂದ ವಾಹನ ದಟ್ಟಣೆ ಹೆಚ್ಚಾದ ಕಾರಣ ಪೊಲೀಸರು ಕವಿತಾ ಅವರನ್ನು ವಶಕ್ಕೆ ಪಡೆದರು.

ಅನುಮತಿ ಪಡೆಯದೆ ಪ್ರತಿಭಟನೆ ನಡೆಸಿರುವುದಕ್ಕೆ ನೋಟಿಸ್ ನೀಡಿ, ಅವರನ್ನು ಬಿಡುಗಡೆ ಮಾಡಿದರು ಎಂದು ತೆಲಂಗಾಣ ಜಾಗೃತಿ ತಿಳಿಸಿದೆ.

‘ಹೆಣ್ಣು ಭ್ರೂಣ ಹತ್ಯೆ: ನೈತಿಕ ಕಳಂಕ’

ಆರೋಪಿಗಳ ಅರ್ಜಿ ವಜಾ ಮಾಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಣ್ಣು ಭ್ರೂಣ ಹತ್ಯೆ ಕೇವಲ ಅಪರಾಧವಲ್ಲ; ಅದೊಂದು ನೈತಿಕ ಕಳಂಕ ಮತ್ತು ಸಾಂವಿಧಾನಿಕ ಅವಮಾನ’ ಎಂದು ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಕಾನೂನು ಬಾಹಿರವಾಗಿ ಭ್ರೂಣಲಿಂಗ ಪತ್ತೆ ನಿರ್ಧರಿಸುವ ಉದ್ದೇಶಕ್ಕಾಗಿ ಪೋಷಕರನ್ನು ಕರೆತರಲು ಏಜೆಂಟ್‌ಗಳಾಗಿ ಕಾರ್ಯನಿರ್ವಹಿಸಿದ ಇಬ್ಬರು ಆರೋಪಿಗಳ ವಿರುದ್ಧದ ಕ್ರಿಮಿನಲ್ ಮೊಕದ್ದಮೆ ರದ್ದುಗೊಳಿಸಲು ನಿರಾಕರಿಸಿದೆ.

‘ನಮ್ಮ ವಿರುದ್ಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಈ ಸಂಬಂಧ ನಗರದ 46ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಗೆ ತಡೆ ನೀಡಬೇಕು’ ಎಂದು ಕೋರಿ ಚನ್ನಪಟ್ಟಣ ತಾಲ್ಲೂಕು ಮಾಲೂರಿನ ಶಾರದಮ್ಮ (48) ಹಾಗೂ ಇವರ ಪತಿ ದಾಸೇಗೌಡ (60) ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಕುರಿತಾದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಪ್ರಕಟಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಇಂತಹ ವಿಷಯಗಳಲ್ಲಿ ದಯೆ ತೋರುವುದು ಕಾನೂನು ಎಂಬುದನ್ನು ಸತ್ತ ಅಕ್ಷರಗಳನ್ನು ಜೋಡಿಸಿ ಶರೀರವನ್ನಾಗಿ ಮಾಡಿದಂತೆ’ ಎಂದು ಕುಟುಕಿದೆ.

‘ಪ್ರಸ್ತುತ ಪ್ರಕರಣದಲ್ಲಿ ಕಂಡುಬರುತ್ತಿರುವ ಸ್ಪಷ್ಟ ಸಂಗತಿಗಳನ್ನು ಗಮನಿಸಿದರೆ, ಈ ಹಂತದಲ್ಲಿ ಹೈಕೋರ್ಟ್ ತನ್ನ ಅಂತರ್ಗತ ಅಥವಾ ಅಸಾಧಾರಣ ನ್ಯಾಯ ವ್ಯಾಪ್ತಿಯನ್ನು ಚಲಾಯಿಸುವ ನೆಪದಲ್ಲಿ ಹಸ್ತಕ್ಷೇಪ ಮಾಡುವುದು ಸಲ್ಲ. ಇದು ಮೊಕದ್ದಮೆಯನ್ನು ಶೈಶವಾವಸ್ಥೆಯಲ್ಲಿಯೇ ಹತ್ತಿಕ್ಕಿದಂತಾಗುತ್ತದೆ. ಆರೋಪಗಳ ಸತ್ಯಾಸತ್ಯತೆ ಅಥವಾ ಅಥವಾ ಸಾಕ್ಷ್ಯಗಳನ್ನು ಒರೆಗೆ ಹಚ್ಚುವುದು ವಿಚಾರಣಾ ನ್ಯಾಯಾಲಯದ ನಿರ್ಣಾಯಕ ಅಂಶಗಳಿಗೆ ಸಂಬಂಧಿಸಿದೆ‘ ಎಂದು ಅರ್ಜಿ ವಜಾಕ್ಕೆ ಕಾರಣ ನೀಡಿದೆ.

‘ವೈದ್ಯಕೀಯ ಪರಿಣತಿಯ ಸೋಗಿನಲ್ಲಿ ಲಿಂಗ ತಾರತಮ್ಯದ ವ್ಯಾಪಾರ ಮಾಡುವವರು ಸಮಾಜಕ್ಕೆ ಅಪಾಯ ಉಂಟುಮಾಡಬಲ್ಲರು. ಇಂತಹ ಗಂಭೀರ ಪ್ರಕರಣಗಳಲ್ಲಿ ಆರಂಭದಲ್ಲೇ ಕೋರ್ಟ್ ಸಡಿಲಿಕೆಗೆ ಅವಕಾಶ ನೀಡಿದರೆ ಕಾನೂನೇ ಅರ್ಥಹೀನವಾಗುತ್ತದೆ ಮತ್ತು ಲಿಂಗಭೇದದ ಅಪರಾಧಗಳನ್ನು ಉತ್ತೇಜಿಸುವ ಪರಿಸ್ಥಿತಿ ಉಂಟಾಗುತ್ತದೆ. ಹೀಗಾಗಿ, ಈ ಹಂತದಲ್ಲಿ ಪ್ರಕರಣ ರದ್ದುಪಡಿಸುವುದು ಸೂಕ್ತವಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಅರ್ಜಿದಾರರ ವಿರುದ್ಧ, ವೈದ್ಯಕೀಯ ಗರ್ಭಪಾತ ಕಾಯ್ದೆ–1971ರ ಕಲಂ 4 ಮತ್ತು ಭಾರತೀಯ ನ್ಯಾಯ ಸಂಹಿತಾ–2023ರ ಕಲಂ 91 ಮತ್ತು 3(5)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದ್ದರು.

ಆರೋಪಿಗಳು ನಡೆಸಿರುವ ಅಕ್ರಮ ವೈದ್ಯಕೀಯ ಹಸ್ತಕ್ಷೇಪಗಳ ಸರಣಿ ಗಮನಿಸಿದರೆ ಈ ಪ್ರಕರಣದಲ್ಲಿ ಪ್ರತಿಯೊಬ್ಬ ಆರೋಪಿಯೂ ವಿಭಿನ್ನ, ಸ್ವತಂತ್ರ ಪಾತ್ರ ನಿರ್ವಹಿಸಿರುವುದು ಗೊತ್ತಾಗುತ್ತದೆ

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ದಂಪತಿಯ ಪರಿತಾಪ

ಚನ್ನಪಟ್ಟಣ ತಾಲೂಕಿನ ದಂಪತಿ ತಮಗೆ ಜನಿಸಲಿರುವ ಮೂರನೇ ಮಗುವಿನ ಲಿಂಗವನ್ನು ಖಚಿತಪಡಿಸಿಕೊಳ್ಳಲು ಉದ್ದೇಶಪೂರ್ವಕ ಅನ್ವೇಷಣೆ ಪ್ರಾರಂಭಿಸಿದ್ದರು. ಈ ಹಂತದಲ್ಲಿ ತಮ್ಮ ಸಂಬಂಧಿಕರಾದ ಶಾರದಮ್ಮ ಮತ್ತು ದಾಸೇಗೌಡ ಅವರ ಸಹಾಯದಿಂದ ಜಿಲ್ಲಾಸ್ಪತ್ರೆಯ ಡಾ.ಶಶಿ ಅವರ ಮೂಲಕ ಅಕ್ರಮವಾಗಿ ಲಿಂಗಪತ್ತೆಗೆ ಸ್ಕ್ಯಾನಿಂಗ್ ಮಾಡಿಸಿದ್ದರು.

‘ಮಹಿಳೆಗೆ ಖಾಸಗಿ ಕ್ಲಿನಿಕ್‌ನಲ್ಲಿ ಗರ್ಭಪಾತಕ್ಕೆ ಔಷಧ ನೀಡಲಾಗಿದೆ ಮತ್ತು ಔಷಧ ಸೇವಿಸಿದ ಆಕೆಗೆ ರಾತ್ರಿ ತೀವ್ರ ರಕ್ತಸ್ರಾವ ಉಂಟಾಗಿ ಭ್ರೂಣ ಮೃತಪಟ್ಟಿದೆ’ ಎಂದು ಆರೋಪಿಸಿ ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ದೂರು ನೀಡಿದ್ದರು. ‘ಆರೋಪಿಗಳು ಲಿಂಗ ಪರೀಕ್ಷೆಗೆ ರೋಗಿಗಳನ್ನು ಕರೆತರುವ ಏಜೆಂಟ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಈಗ ಪತ್ತೆಯಾಗಿರುವುದು ಒಂದೇ ಘಟನೆ. ಆದರೆ, ಇದರ ಹಿಂದೆ ಹಲವು ಘಟನೆಗಳು ಮರೆಯಾಗಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲ, ಘಟನೆ ಹಿಂದೆ ಸಂಘಟಿತ ಜಾಲವಿರುವ ಸಾಧ್ಯತೆ ಇದೆ’ ಎಂದು ದೂರಿನಲ್ಲಿ ವಿವರಿಸಲಾಗಿತ್ತು.



ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಮಾಜಿ ಸಚಿವ ಎಚ್.ಆಂಜನೇಯ ನೇತೃತ್ವದಲ್ಲಿ ಮಾದಿಗ ಸಮುದಾಯದ ಜನಪ್ರತಿನಿಧಿಗಳ ನಿಯೋಗ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತು. ಸಚಿವ ಎಚ್.ಸಿ. ಮಹದೇವಪ್ಪ ಇದ್ದರು

ನೇಮಕ ಪ್ರಕ್ರಿಯೆ: ಸಿ.ಎಂಗೆ ಎಡಗೈ ಮುಖಂಡರ ಮನವಿ

ಒಳಮೀಸಲು: 27ಕ್ಕೆ ವಿಶೇಷ ಸಂಪುಟ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಹಂಚಿಕೆ ಮಾಡಿದ ನಂತರವೇ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು’ ಎಂದು ದಲಿತ ಎಡಗೈ ಸಮುದಾಯದ ನಾಯಕರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ ಸಚಿವರಾದ ಕೆ.ಎಚ್. ಮುನಿಯಪ್ಪ ಮತ್ತು ಆರ್.ಬಿ. ತಿಮ್ಮಾಪುರ ನೇತೃತ್ವದ ಎಡಗೈ ಸಮುದಾಯದ ನಾಯಕರು ಈ ಕುರಿತು ಮನವಿ ಸಲ್ಲಿಸಿದ್ದಾರೆ.

ಒಳ ಮೀಸಲಾತಿ ಕುರಿತು ಚರ್ಚಿಸಲು ಇದೇ 27ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ.

ಮುಖ್ಯಮಂತ್ರಿಯನ್ನು ಭೇಟಿಯಾದ ಬಳಿಕ ಮಾತನಾಡಿದ ಮುನಿಯಪ್ಪ, ‘ನಮ್ಮ ಮನವಿಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಪರಿಶಿಷ್ಟ ಜಾತಿಯ ಎಲ್ಲ 101 ಜಾತಿಗಳಿಗೂ ಸಮಾನ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಹೀಗಾಗಿ, ಈ ವಿಚಾರವಾಗಿ ಅನಗತ್ಯ ಹೇಳಿಕೆಗಳನ್ನು ಯಾರೂ ನೀಡಬಾರದು, ಸಂಘಟನೆಗಳು ಹೋರಾಟಗಳನ್ನೂ ಹಮ್ಮಿಕೊಳ್ಳಬಾರದು’ ಎಂದು ಮನವಿ ಮಾಡಿದರು.

‘ಒಳಮೀಸಲಾತಿ ಕುರಿತು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದರು.

‘ಒಳಮೀಸಲಾತಿ ಗೊಂದಲವನ್ನು ಬಗೆಹರಿಸಿಕೊಳ್ಳುವವರೆಗೂ 56,432 ಹುದ್ದೆಗಳ ನೇಮಕ ಪ್ರಕ್ರಿಯೆ ಆರಂಭಿಸಬಾರದು. ವಿಶೇಷ ಸಂಪುಟ ಸಭೆಯಲ್ಲಿ ಆಂಧ್ರ ಪ್ರದೇಶ, ತೆಲಂಗಾಣ ಮಾದರಿಯಲ್ಲೇ ಒಳಮೀಸಲಾತಿ ಸಮರ್ಪಕ ಅನುಷ್ಠಾನದ ನಿರ್ಧಾರ ಕೈಗೊಂಡು ಸಮುದಾಯದಲ್ಲಿನ ಆತಂಕ ದೂರ ಮಾಡಬೇಕು’ ಎಂದು ಮಾಜಿ ಸಚಿವ ಎಚ್. ಆಂಜನೇಯ ಆಗ್ರಹಿಸಿದರು.

‘ಸದ್ಯ ಜಾರಿಗೊಳಿಸಿರುವ ಒಳಮೀಸಲಾತಿ ಅನುಷ್ಠಾನಗೊಳಿಸಲು ಅಡ್ಡಿಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ವಿಷಯವಾರು ನೇಮಕಾತಿಯನ್ನು ಕೈಬಿಟ್ಟು ವಿಶ್ವವಿದ್ಯಾಲಯವನ್ನೇ ಒಂದು ಘಟಕವಾಗಿ ಪರಿಗಣಿಸುವ ಹುನ್ನಾರ ನಡೆಯುತ್ತಿದೆ. ಹೈಕೋರ್ಟ್ ತಡೆಯಾಜ್ಞೆ ತೆರವುಗೊಳಿಸಿ ಪರಿಶಿಷ್ಟ ಜಾತಿಗಳಿಗೆ ಶೇ 17 ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ 7ರಷ್ಟು ಮೀಸಲಾತಿಯನ್ನು ಅನುಷ್ಠಾನಗೊಳಿಸಬೇಕು’ ಎಂದು ಅವರು ಆಗ್ರಹಿಸಿದರು.

ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಶಾಸಕರಾದ ಶ್ರೀನಿವಾಸ್, ಕೆ.ಎಸ್. ಬಸವಂತಪ್ಪ, ಪರಿಷತ್ ಸದಸ್ಯರಾದ ಸುಧಾಮ್ ದಾಸ್, ತಿಮ್ಮಯ್ಯ, ವಸಂತ ಕುಮಾರ್ ನಿಯೋಗದಲ್ಲಿ ಇದ್ದರು.

1,332 ವಹಿವಾಟು ತಿದ್ದುಪಡಿ: ಅರ್ಜಿ ಹಿಂಪಡೆದ ಆರೋಪಿಗಳು

ಕಾವೇರಿ–2 ಪೋರ್ಟಲ್‌ಗೆ ಕನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ–2 ಪೋರ್ಟಲ್ ವಹಿವಾಟಿನ ಸ್ವರೂಪವನ್ನು ಬದಲಾಯಿಸಿ, ಸ್ಥಿರಾಸ್ತಿ ದಾಖಲೆ ನೋಂದಣಿ ಪ್ರಕ್ರಿಯೆ ವೇಳೆ ಪಂಚಾಯತ್ ರಾಜ್ ಇಲಾಖೆಯ (ಆರ್‌ಡಿಪಿಆರ್) ಇ–ಖಾತಾ ವ್ಯವಸ್ಥೆಯನ್ನು ದುರ್ಬಳಕೆ ಮಾಡಿ ಅಕ್ರಮ ಎಸಗಿದ ಆರೋಪ ಹೊತ್ತ ಅರ್ಜಿದಾರರು ಹೈಕೋರ್ಟ್‌ನ ಕೆಂಗಣ್ಣಿಗೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳಲು ಅರ್ಜಿ ವಾಪಸು ಪಡೆದಿದ್ದಾರೆ.

‘ನಮ್ಮ ವಿರುದ್ಧ 45ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು’ ಎಂದು ಕೋರಿ ಬೊಮ್ಮನಹಳ್ಳಿಯ ಹರೀಶ್‌ಬಾಬು (44), ಚಂದ್ರಬಾಬು (41) ಮತ್ತು ಸಿಂಗಸಂದ್ರದ ಸಾಜಿಮೊನ್ ಜಾನಿ (53) ಕ್ರಿಮಿನಲ್ ಅರ್ಜಿ (ಸಿಆರ್‌ಎಲ್‌ಪಿ 1783/2026) ಸಲ್ಲಿಸಿದ್ದರು.

ಈ ಅರ್ಜಿಯ ಕುರಿತಂತೆ



ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸುದೀರ್ಘ ವಿಚಾರಣೆ ನಡೆಸಿತು.

ಈ ವೇಳೆ ಅರ್ಜಿದಾರರ ಪರ ವಕೀಲರು, ‘ಎಫ್‌ಐಆರ್‌ನಲ್ಲಿ ಅರ್ಜಿದಾರರ ಹೆಸರಿಲ್ಲ. ಆದರೂ ಪೊಲೀಸರು ತನಿಖೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ. ಇವರೆಲ್ಲಾ ಜಿಪಿಎ (ಸಾಮಾನ್ಯ ಅಧಿಕಾರ ಪತ್ರ) ಹೊಂದಿದವರು. ದೂರಿನ ಅನುಬಂಧದಲ್ಲಿ ವಿವರಿಸಲಾದ ಆಸ್ತಿಗಳ ಮಾಲೀಕರು ಅರ್ಜಿದಾರರಿಗೆ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಯಥೋಚಿತ ಮುದ್ರಾಂಕ ಶುಲ್ಕವನ್ನೂ ಪಾವತಿ ಮಾಡಿದ್ದಾರೆ. ಇವರು ಯಾವುದೇ ಅಪರಾಧ ಎಸಗಿಲ್ಲ’ ಎಂದು ಪ್ರತಿಪಾದಿಸಿದ್ದರು.

ಒಂದು ಹಂತದಲ್ಲಿ ನ್ಯಾಯಪೀಠವು ಅರ್ಜಿದಾರರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗುವ ಸುಳಿವು ದೊರೆಯುತ್ತಿದ್ದಂತೆಯೇ, ಅವರ ಪರ ವಕೀಲರು ಅರ್ಜಿಯನ್ನು ವಾಪಸು ಪಡೆಯಲು ನ್ಯಾಯಪೀಠದ ಅನುಮತಿ ಕೋರಿದರು. ಇದನ್ನು ಮನ್ನಿಸಿದ ನ್ಯಾಯಪೀಠ ಅರ್ಜಿದಾರರ ಕಾನೂನಾತ್ಮಕ ಸ್ವಾತಂತ್ರ್ಯವನ್ನು ಕಾಯ್ದಿರಿಸಿ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿದೆ. ಪ್ರಾಸಿಕ್ಯೂಷನ್ ಪರ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಪುಷ್ಪಲತಾ ಹಾಜರಾಗಿದ್ದರು.

ಪ್ರಕರಣವೇನು?: ‘ಆರೋಪಿಗಳು ಕಾವೇರಿ–2 ಪೋರ್ಟಲ್‌ನಲ್ಲಿ 2024ರ ಡಿಸೆಂಬರ್ 6ರಿಂದ 2025ರ ಡಿಸೆಂಬರ್ 5ರ ಅವಧಿಯಲ್ಲಿ, ಏಕೀಕೃತ ಭೂ ಸ್ವಾಧೀನ ವ್ಯವಸ್ಥೆ (ಯುಎಲ್‌ಎಂಎಸ್) ಮುಖಾಂತರ ಆಸ್ತಿಯ ವಿವರಗಳನ್ನು ಪಡೆದುಕೊಂಡು ನಂತರ ಆ ಮಾಹಿತಿಗಳ ಸಾಫ್ಟ್‌ವೇರ್ ಹ್ಯಾಕ್ ಮಾಡಿ (ಸಾಫ್ಟ್‌ವೇರ್ ಬೈಪಾಸ್ ಮಾಡಿ) ಅಂತಹ ಆಸ್ತಿಗಳನ್ನು ಆರ್‌ಡಿಪಿಆರ್ ಆಸ್ತಿ ಎಂದು ಒಟ್ಟು 1,332 ವಹಿವಾಟುಗಳನ್ನು ತಿದ್ದುಪಡಿ ಮಾಡಿದ್ದಾರೆ’ ಎಂಬ ಆರೋಪ ಎದುರಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ, ‘ದಾಖಲೆ ನೋಂದಾಯಿಸುವಾಗ ವಂಚನೆ ಹಾಗೂ ದುರುದ್ದೇಶದ ವಹಿವಾಟುಗಳನ್ನು ನಡೆಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು’ ಎಂದು ‘ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್’ ಕಾರ್ಯನಿರ್ವಾಹಕ ನಿರ್ದೇಶಕ ರಾಹುಲ್ ರತ್ನಂ ಪಾಂಡೆ, ಬೆಂಗಳೂರು ಉತ್ತರ ಸೆನ್ (ಸೈಬರ್, ಎಕನಾಮಿಕ್ ಅಂಡ್ ನಾರ್ಕೊಟಿಕ್ ಕ್ರೈಂ) ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಈ ದೂರನ್ನು ರದ್ದುಗೊಳಿಸುವಂತೆ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಡಿಸೇಲ್ ಜಪ್ತಿ

ಉಪ್ಪಿನಂಗಡಿ: ಅಕ್ರಮವಾಗಿ ದಾಸ್ತಾನು ಮಾಡಿದ್ದ 4,175 ಲೀಟರ್ ಡಿಸೇಲ್ ಅನ್ನು ಬೆಳ್ತಂಗಡಿ ಡಿವೈಎಸ್ಪಿ. ರೋಹಿಣಿ ಸಿ.ಕೆ. ನೇತೃತ್ವದ ತಂಡ ಜಪ್ತಿ ಮಾಡಿದೆ.

ಬೆಳ್ತಂಗಡಿ ತಾಲ್ಲೂಕಿನ ಕಣಿಯೂರು ಗ್ರಾಮದ ಜಗದೀಶ್ ಎಂಬಾತ ಶೆಡ್‌ನಲ್ಲಿ ಅಕ್ರಮವಾಗಿ ಡೀಸೆಲ್ ದಾಸ್ತಾನು ಮಾಡಿದ್ದ. ಇವುಗಳ ಮೌಲ್ಯ ₹3.50 ಲಕ್ಷ ಎಂದು ಅಂದಾಜಿಸಲಾಗಿದೆ.

ಕಂಗೀಲು ನೃತ್ಯ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ತುಳು ಪರಿಷತ್ ಆಶ್ರಯದಲ್ಲಿ ಮಂಗಳೂರಿನಲ್ಲಿ ನಡೆದ ‘ವಿದ್ಯಾರ್ಥಿ ಕಲಾಸಿರಿ’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತುಳುನಾಡಿನ ವಿಶಿಷ್ಟ ಜಾನಪದ ಕಲೆ ಕಂಗೀಲು ನೃತ್ಯ ಪ್ರದರ್ಶಿಸಿದರು

ಮುಷ್ಕರ ವಾಪಸ್ ಪಡೆದ ವೈದ್ಯರು

ಒಂದನೇ ಪುಟದಿಂದ...



ಬೇಡಿಕೆ ಈಡೇರಿಸದಿದ್ದಲ್ಲಿ ಇದೇ 11ರಿಂದ ಸರ್ಕಾರಿ ಆಸ್ಪತ್ರೆಗಳ ಹೊರರೋಗಿ ವಿಭಾಗ (ಒಪಿಡಿ) ಬಂದ್ ಮಾಡಿ, ಮುಷ್ಕರ ಪ್ರಾರಂಭಿಸುವುದಾಗಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ ಹಾಗೂ ಇಲಾಖೆಯ ಎಲ್ಲ ವೃಂದ ಸಂಘಗಳು ಜಂಟಿಯಾಗಿ ಘೋಷಿಸಿದ್ದವು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ವೈದ್ಯಾಧಿಕಾರಿಗಳ ಸಂಘದ ಮುಖಂಡರ ಜತೆಗೆ ಮಂಗಳವಾರ ಸಂಧಾನ ಸಭೆ ನಡೆಸಿದರು.

ಕರ್ತವ್ಯದ ಬಳಿಕ ಖಾಸಗಿ ವ್ಯವಸ್ಥೆಯಡಿ ಒಳರೋಗಿ ಚಿಕಿತ್ಸೆಗೆ ಅವಕಾಶ ಹೊರತುಪಡಿಸಿ ಉಳಿದ 13 ಬೇಡಿಕೆಗಳನ್ನು ಮೂರು ತಿಂಗಳಲ್ಲಿ ಈಡೇರಿಸಲು ಒಪ್ಪಿಗೆ ಸೂಚಿಸಲಾಗಿದೆ. ಹೀಗಾಗಿ, ವೈದ್ಯಾಧಿಕಾರಿಗಳು ಮುಷ್ಕರವನ್ನು ಮುಂದೂಡಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆ ಯಥಾ ಪ್ರಕಾರ ಲಭ್ಯವಾಗಲಿದೆ.

‘ನಮ್ಮ ಮುಷ್ಕರವನ್ನು ಮುಂದೂಡಲಾಗಿದೆ’ ಎಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ. ರವೀಂದ್ರನಾಥ ಎಂ. ಮೇಟಿ ತಿಳಿಸಿದರು.

ರಕ್ಷಣಾ ಸಚಿವಾಲಯಕ್ಕೆ ‘ಸುಪ್ರೀಂ’ ಎಚ್ಚರಿಕೆ



ನವದೆಹಲಿ (ಪಿಟಿಐ): ತರಬೇತಿ ಅವಧಿಯಲ್ಲಿ ಅಂಗ ಊನತೆಗೆ ಒಳಗಾದ ಸೇನಾ ಕೆಡೆಟ್‌ಗಳಿಗೆ ಹಣಕಾಸು ಸೌಲಭ್ಯಗಳನ್ನು ವಿಸ್ತರಿಸುವ ನಿರ್ಧಾರವನ್ನು ಕೈಗೊಳ್ಳುವಲ್ಲಿ ವಿಫಲವಾದರೆ ರಕ್ಷಣಾ ಮತ್ತು ಹಣಕಾಸು ಸಚಿವಾಲಯಕ್ಕೆ ಸಮನ್ಸ್ ನೀಡುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ಎಚ್ಚರಿಕೆ ನೀಡಿದೆ.

ತರಬೇತಿಯ ವೇಳೆ ಉಂಟಾದ ಗಾಯ ಮತ್ತು ಅಂಗ ಊನತೆಯಿಂದಾಗಿ ಸೇವೆಯಿಂದ ಹೊರಗುಳಿದಿರುವ ಸೇನಾ ಕೆಡೆಟ್‌ಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಪ್ರಕರಣದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ವಿ ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು ವಿಚಾರಣೆ ನಡೆಸಿತು.

‘ಸಂಬಂಧಿಸಿದ ಸಚಿವಾಲಯಗಳಿಗೆ ಆರು ವಾರ ಕಾಲಾವಕಾಶವನ್ನು ನೀಡಲಾಗಿತ್ತು. ಆದರೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಇದಕ್ಕೆ ಸಂಬಂಧಿಸಿ ಇನ್ನೂ ಯಾವುದೇ ಬೆಳವಣಿಗೆಗಳು ಆಗದಿದ್ದರೆ. ರಕ್ಷಣಾ ಮತ್ತು ಹಣಕಾಸು ಇಲಾಖೆಗಳ ಕಾರ್ಯದರ್ಶಿಗಳನ್ನು ನ್ಯಾಯಾಲಯದ ಮುಂದೆ ಕರೆಸಲು ನಾವು ಮುಕ್ತರಾಗಿದ್ದೇವೆ’ ಎಂದು ನ್ಯಾಯಪೀಠ ಎಚ್ಚರಿಸಿದೆ.

ಇನ್ನೂ ಹೆಚ್ಚಿನ ಕಾಲಾವಕಾಶ ನೀಡುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಪದೋನ್ನತಿ: ಶಿಕ್ಷಕರು ಕನಿಷ್ಠ 12 ವರ್ಷಗಳ ಸೇವಾವಧಿ ಪೂರೈಸಿರಬೇಕು

ಶಿಕ್ಷಕರ ಬಡ್ತಿ: ಅಧಿಸೂಚನೆ ಪ್ರಕಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆದೇಶದ ವಿರುದ್ಧ ಶಿಕ್ಷಕರ ಹೋರಾಟ
- ಹೊಸ ಮಾರ್ಗಸೂಚಿ
- ಪ್ರೌಢಶಾಲಾ ಶಿಕ್ಷಕರನ್ನು ಗ್ರೇಡ್–2 ವೃಂದದ ಹುದ್ದೆ ಬಡ್ತಿಗೆ ಪರಿಗಣನೆ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರು, ಪದವೀಧರ ಶಿಕ್ಷಕರು ಹಾಗೂ ಪ್ರೌಢಶಾಲಾ ಶಿಕ್ಷಕರ ಬಡ್ತಿ ಕುರಿತ ಅಧಿಸೂಚನೆಯನ್ನು ಶಾಲಾ ಶಿಕ್ಷಣ ಇಲಾಖೆ ಹೊರಡಿಸಿದೆ.

ಹೊಸ ಮಾರ್ಗಸೂಚಿ ಪ್ರಕಾರ ಮೂರು ಹುದ್ದೆಗಳಿದ್ದರೆ ಎರಡು ಹುದ್ದೆಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಒಂದು ಹುದ್ದೆ ಪದವೀಧರ ಪ್ರಾಥಮಿಕ ಶಿಕ್ಷಕರಿಗೆ ಮೀಸಲಾಗಿರುತ್ತದೆ. ಪದೋನ್ನತಿಗೆ ಪರಿಗಣಿಸಲು ಎರಡೂ ವೃಂದದ ಶಿಕ್ಷಕರು ಕನಿಷ್ಠ 12 ವರ್ಷಗಳ ಸೇವಾವಧಿಯನ್ನು ಪೂರೈಸಿರಬೇಕು.

ನಿಯಮದಂತೆ 1ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. 6 ಮತ್ತು 7ನೇ ತರಗತಿಗಳಿಗೆ ಬೋಧಿಸಲು ಸಂಬಂಧಿಸಿದ ವಿಷಯದಲ್ಲಿ ಪದವಿ ಪಡೆದಿರುವುದು ಕಡ್ಡಾಯ. ಒಂದು ವೃಂದದಲ್ಲಿ ಅರ್ಹ ಶಿಕ್ಷಕರು ಲಭ್ಯವಿಲ್ಲದಿದ್ದರೆ, ನಿಯಮಾನುಸಾರ ಇತರ ವೃಂದದ ಅರ್ಹ ಶಿಕ್ಷಕರನ್ನು ಜ್ಯೇಷ್ಠತಾ ಪಟ್ಟಿಯ ಆಧಾರದಲ್ಲಿ ಪದೋನ್ನತಿಗೆ ಪರಿಗಣಿಸಬಹುದು. ಪ್ರೌಢ ಶಾಲಾ ಶಿಕ್ಷಕರನ್ನು ಗ್ರೇಡ್–2 ವೃಂದದ ಹುದ್ದೆಗೆ ಬಡ್ತಿಗೆ ಪರಿಗಣಿಸಲಾಗುತ್ತದೆ.

2017ರಲ್ಲಿ ತಂದ ವೃಂದ ಮತ್ತು ನೇಮಕಾತಿ ನಿಯಮದಂತೆ 1ರಿಂದ 8ನೇ ತರಗತಿಯ ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರನ್ನು 1ರಿಂದ 5ನೇ ತರಗತಿಗೆ ಸೀಮಿತಗೊಳಿಸಿರುವ ಆದೇಶವನ್ನು ಹೊರಡಿಸಲಾಗಿತ್ತು. ಈ ಆದೇಶದ ವಿರುದ್ಧ ಶಿಕ್ಷಕರು ಹೋರಾಟ ನಡೆಸಿದ್ದರು. ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 2016ಕ್ಕೂ ಮೊದಲು ನೇಮಕವಾದ ಶಿಕ್ಷಕರಿಗೆ ಪೂರ್ವಾನ್ವಯ ಮಾಡಬಾರದು. ಪದವಿ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ) ಎಂದೇ ಪರಿಗಣಿಸಬೇಕು. ಅದಕ್ಕಾಗಿ ಬಡ್ತಿ, ವರ್ಗಾವಣೆಗೆ ಅಡ್ಡಿಯಾಗಿರುವ ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತಂದು ನ್ಯಾಯ ದೊರಕಿಸಿಕೊಡಬೇಕು ಎನ್ನುವುದು ಅವರ ಬೇಡಿಕೆಯಾಗಿತ್ತು.

ಉದ್ಯೋಗ ವಾಣಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಅನ್ಯಾಯದ ಸ್ಥಾನವು ಅಭದ್ರವಾದುದು. ಅದರಿಂದ ಏಳಿಗೆಯಿಲ್ಲ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಆರ್ಡರ್ಲಿ ವ್ಯವಸ್ಥೆ ಅಂತ್ಯಕ್ಕೆ ಬೇಕಿದೆ ಸಾಂಸ್ಥಿಕ ಧೈರ್ಯ

ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಮನೆಗಳಲ್ಲಿ ಆರ್ಡರ್ಲಿಗಳಾಗಿ ನಿಯೋಜನೆಗೊಂಡಿದ್ದ ಪೊಲೀಸ್ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಳ್ಳಲು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಆದೇಶಿಸಿದ್ದಾರೆ. ಆರ್ಡರ್ಲಿಗಳಾಗಿ ನಿಯೋಜನೆಗೊಂಡಿದ್ದವರನ್ನು ಎಂದಿನ ಪೊಲೀಸ್ ಕೆಲಸಕ್ಕೆ ಮರುನಿಯೋಜನೆ ಮಾಡಲು ಅವರು ಸೂಚಿಸಿದ್ದಾರೆ. ಸಲೀಂ ಅವರು ಇರಿಸಿರುವ ಹೆಜ್ಜೆ ಸ್ವಾಗತಾರ್ಹ. ಆದರೆ, ಹಿಂದೆ ಇದೇ ವಿಚಾರವಾಗಿ ನಡೆದ ಪ್ರಯತ್ನಗಳಿಗೆ ಒದಗಿದ ಸ್ಥಿತಿಯನ್ನು ಗಮನಿಸಿದರೆ, ಸಲೀಂ ಅವರ ಕ್ರಮದ ಬಗ್ಗೆ ಹೆಚ್ಚಿನ ಭರವಸೆ ಇರಿಸಿಕೊಳ್ಳುವ ಅಗತ್ಯ ಕಾಣಿಸುವುದಿಲ್ಲ. ಆರ್ಡರ್ಲಿ ವ್ಯವಸ್ಥೆಯ ಅಡಿಯಲ್ಲಿ, ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಹಿರಿಯ ಪೊಲೀಸ್ ಅಧಿಕಾರಿಗಳ ಮನೆಗೆಲಸಗಳಿಗೆ ನಿಯೋಜಿಸಲಾಗುತ್ತದೆ. ಇದು ವಸಾಹತುಶಾಹಿ ಕಾಲದ ಪಳೆಯುಳಿಕೆ. ಈಗ ಅಂದಾಜು ಮೂರು ಸಾವಿರ ಮಂದಿಯನ್ನು ಈ ಬಗೆಯಲ್ಲಿ ನಿಯೋಜಿಸಲಾಗಿದ್ದು, ಅವರನ್ನೆಲ್ಲ ಮತ್ತೆ ಪೊಲೀಸ್ ಕೆಲಸಕ್ಕೆ ಮರುನಿಯೋಜನೆ ಮಾಡುವ ಉದ್ದೇಶ ಹೊಂದಲಾಗಿದೆ. ಸಲೀಂ ಅವರ ಆದೇಶಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು, ಹಿರಿಯ ಪೊಲೀಸ್ ಅಧಿಕಾರಿಗಳು ಖಾಸಗಿಯಾಗಿ ಸಹಾಯಕರನ್ನು ನೇಮಕ ಮಾಡಿಕೊಳ್ಳಬಹುದು ಅಥವಾ ಗೃಹರಕ್ಷಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬಹುದು, ಅವರಿಗೆ ಭತ್ಯೆ ನೀಡಲು ಅವಕಾಶ ಮಾಡಿಕೊಡಲಾಗುತ್ತದೆ ಎಂದು ಹೇಳಿದೆ. ಈ ಸುಧಾರಣಾ ಕ್ರಮಗಳು ಮೇಲ್ನೋಟಕ್ಕೆ ಚೆನ್ನಾಗಿಯೇ ಇವೆ. ಆದರೆ, ವಾಸ್ತವದಲ್ಲಿ ರಾಜ್ಯವು ಈ ಹಿಂದೆಯೂ ಇದೇ ಬಗೆಯ ಪ್ರಯತ್ನಗಳನ್ನು ನಡೆಸಿತ್ತು ಎಂಬುದನ್ನು ಮರೆಯಬಾರದು. ಆರ್ಡರ್ಲಿ ವ್ಯವಸ್ಥೆಯ ಬಗ್ಗೆ ವ್ಯಾಪಕ ಟೀಕೆಗಳು ಬಂದ ನಂತರದಲ್ಲಿ, ಕಾನ್‌ಸ್ಟೆಬಲ್‌ಗಳಿಂದಲೇ ಪ್ರತಿಭಟನೆಗಳು ವ್ಯಕ್ತವಾದ ನಂತರದಲ್ಲಿ 2017ರಲ್ಲಿ ಅದನ್ನು ನಿಷೇಧಿಸಲಾಯಿತು. ಆದರೆ, ನಿಷೇಧವು ಉಪಚಾರದ ಮಾತು ಮಾತ್ರವೇ ಆಯಿತು. ಟೀಕೆಗಳು ತಣ್ಣಗಾದ ನಂತರದಲ್ಲಿ ಆರ್ಡರ್ಲಿಗಳು ಅಧಿಕಾರಿಗಳ ನಿವಾಸಗಳಿಗೆ ಕೆಲಸಕ್ಕೆ ಹಿಂದಿರುಗಬೇಕಾಯಿತು.



ಆರ್ಡರ್ಲಿ ವ್ಯವಸ್ಥೆಯು ವಸಾಹತುಶಾಹಿ ಆಡಳಿತದ ಪಳೆಯುಳಿಕೆ. ಪ್ರಬಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾಂಸ್ಥಿಕ ಧೈರ್ಯದಿಂದಷ್ಟೇ ಅದನ್ನು ಇಲ್ಲವಾಗಿಸಲು ಸಾಧ್ಯ.

ಇದು ಕರ್ನಾಟಕಕ್ಕೆ ಸೀಮಿತವಾದ ಸಮಸ್ಯೆ ಅಲ್ಲ. ಈ ವ್ಯವಸ್ಥೆಯ ಬಗ್ಗೆ ದೇಶದಾದ್ಯಂತ ಮತ್ತೆ ಮತ್ತೆ ಟೀಕೆ ವ್ಯಕ್ತವಾಗಿದೆ. ಈ ವ್ಯವಸ್ಥೆಯನ್ನು ಇನ್ನಿಲ್ಲವಾಗಿಸಬೇಕು ಎಂದು ರಾಷ್ಟ್ರೀಯ ಪೊಲೀಸ್ ಆಯೋಗವು ದಶಕಗಳ ಹಿಂದೆಯೇ ಶಿಫಾರಸು ಮಾಡಿದೆ. ಈ ವ್ಯವಸ್ಥೆಯು ಪೊಲೀಸರ ನೈತಿಕ ಸ್ಥೈರ್ಯವನ್ನು ಕುಗ್ಗಿಸುತ್ತದೆ, ಅತ್ಯಗತ್ಯವಾದ ಪೊಲೀಸ್ ಕರ್ತವ್ಯ ನಿರ್ವಹಿಸಬೇಕಾದವರನ್ನು ಇದು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತದೆ ಎಂದು ಆಯೋಗ ಹೇಳಿತ್ತು. ನ್ಯಾಯಾಲಯಗಳು ಕೂಡ ಈ ವ್ಯವಸ್ಥೆಯನ್ನು ಬಹಳ ತೀಕ್ಷ್ಣ ಮಾತುಗಳಲ್ಲಿ ಖಂಡಿಸಿವೆ. ಇದು 'ವಸಾಹತುಶಾಹಿ ಗುಲಾಮಿತನ'ದ ಒಂದು ರೂಪ ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ. ರಾಜಕೀಯ ನಾಯಕರು ಕೂಡ ಇದರ ಬಗ್ಗೆ ಆಕ್ರೋಶ ಹೊರಹಾಕಿದ್ದಾರೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ ವ್ಯವಸ್ಥೆಯು ಗುಲಾಮಿತನದ ರೂಪ, ಮಾನವ ಹಕ್ಕುಗಳ ಉಲ್ಲಂಘನೆ ಎಂದು ಕರೆದಿದ್ದಾರೆ. ಕೆಲವು ರಾಜ್ಯಗಳು ಪರ್ಯಾಯ ವ್ಯವಸ್ಥೆಗಳನ್ನು ಕಂಡುಕೊಳ್ಳುವ ಪ್ರಯೋಗ ನಡೆಸಿವೆ. ನಿಯಮಗಳ ಪಾಲನೆಯ ಮೇಲೆ ನಿಗಾ ಇರಿಸಲು ತಮಿಳುನಾಡಿನಲ್ಲಿ ಜಿಲ್ಲಾಧಿಕಾರಿ ನೇತೃತ್ವದ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಆರ್ಡರ್ಲಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವುದನ್ನು ತೆಲಂಗಾಣದಲ್ಲಿ ಒಟ್ಟಾರೆ ಪೊಲೀಸ್ ವ್ಯವಸ್ಥೆಯ ಸುಧಾರಣೆಯ ಭಾಗವಾಗಿ ಕಾಣಲಾಗುತ್ತಿದೆ. ಹೀಗಿದ್ದರೂ, ಬಲಿಷ್ಠ ಪೊಲೀಸ್ ಅಧಿಕಾರಿಗಳ ಲಾಬಿಯು ನ್ಯಾಯಾಲಯಗಳು ಮತ್ತು ಸರ್ಕಾರಗಳ ಪ್ರಯತ್ನಗಳನ್ನು ಸೋಲಿಸುತ್ತಿದೆ.

ಕಾನೂನಿನ ಜಾರಿಗೆ, ಅಪರಾಧ ಕೃತ್ಯಗಳ ತನಿಖೆಗೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಕಾನ್‌ಸ್ಟೆಬಲ್‌ಗಳನ್ನು ನೇಮಕ ಮಾಡಿಕೊಂಡು, ಅವರಿಗೆ ತರಬೇತಿ ನೀಡಲು ಸರ್ಕಾರಗಳು ಲಕ್ಷಾಂತರ ರೂಪಾಯಿ ವೆಚ್ಚ ಮಾಡುತ್ತವೆ. ಆದರೆ, ಬಹಳಷ್ಟು ಮಂದಿ ಕಾನ್‌ಸ್ಟೆಬಲ್‌ಗಳು ಅಧಿಕಾರಿಗಳ ಮನೆಗಳಲ್ಲಿ ಕೆಲಸ ಮಾಡುತ್ತ, ಅವರಿಗಾಗಿ ದಿನಸಿ ವಸ್ತುಗಳನ್ನು ತಂದುಕೊಡುತ್ತ ತಮ್ಮ ವೃತ್ತಿ ಜೀವನ ಆರಂಭಿಸುತ್ತಿದ್ದಾರೆ. ತರಬೇತಿ ಪಡೆದ ಸಿಬ್ಬಂದಿಯನ್ನು ಈ ಬಗೆಯಲ್ಲಿ ಬಳಕೆ ಮಾಡಿಕೊಳ್ಳುವುದು ಅವಮಾನಕರ ಮಾತ್ರವೇ ಅಲ್ಲ, ಅದು ಸಂಪನ್ಮೂಲದ ದುರ್ಬಳಕೆಯೂ ಹೌದು. ಸಲೀಂ ಅವರು ಹೊರಡಿಸಿರುವ ಆದೇಶವು ಯಶಸ್ಸು ಕಾಣಬೇಕು ಎಂದಾದರೆ, ಉತ್ತರದಾಯಿತ್ವದ ಅಗತ್ಯ ಇದೆ. ಆರ್ಡರ್ಲಿಗಳನ್ನು ಹೊಂದುವ ಅಧಿಕಾರಿಗಳು ಶಿಸ್ತುಕ್ರಮ ಎದುರಿಸುವಂತೆ ಮಾಡಬೇಕು. ಕಾನ್‌ಸ್ಟೆಬಲ್‌ಗಳನ್ನು ಮನೆಗೆಲಸಕ್ಕೆ ಬಳಕೆ ಮಾಡಿಕೊಳ್ಳುವ ಈ ವ್ಯವಸ್ಥೆಯು ಹೊಸ ಹೆಸರಿನಲ್ಲಿ ಮುಂದುವರಿಯಬಾರದು ಎಂದಾದರೆ ನಿರಂತರವಾದ, ಸ್ವತಂತ್ರವಾದ ನಿಗಾ ಬೇಕು. ಆರ್ಡರ್ಲಿ ವ್ಯವಸ್ಥೆ ಎಂಬುದು ಆಡಳಿತಾತ್ಮಕ ಲೋಪ ಮಾತ್ರವೇ ಅಲ್ಲ; ಅದು ಪೊಲೀಸ್ ವ್ಯವಸ್ಥೆಯಲ್ಲಿನ ಊಳಿಗಮಾನ್ಯ ಪದ್ಧತಿಯ ದ್ಯೋತಕ. ಅದನ್ನು ಇನ್ನಿಲ್ಲವಾಗಿಸಬೇಕು ಎಂದಾದರೆ ಸುತ್ತೋಲೆಗಳಿಗಿಂತ ಹೆಚ್ಚಿನ ಕ್ರಮಗಳು ಬೇಕು; ಪ್ರಬಲವಾದ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾಂಸ್ಥಿಕ ಧೈರ್ಯ ಬೇಕು.

ಚಾಟಿ

ಸ್ವಾಭಿಮಾನಕ್ಕೆ ಪೆಟ್ಟು



ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ 'ಕಾಲೇಜು ಕ್ಯಾಂಪಸ್‌ನಲ್ಲಿ ಇಂಗ್ಲಿಷ್‌ನಲ್ಲೇ ಮಾತನಾಡಿ' ಎಂದು ಹೇಳಿಕೆ ನೀಡಿದ್ದಾರೆ. ಇದು ಒಂದು ರೀತಿಯಲ್ಲಿ ನಿಮ್ಮ ತಾಯಿಯನ್ನು ಕೈಬಿಟ್ಟು, ಬೇರೆಯವರ ತಾಯಿಯನ್ನು ತಾಯಿ ಎಂದು ಕರೆಯಿರಿ ಎಂಬಂತಾಗಿದೆ. ಸಚಿವರ ಹೇಳಿಕೆ ಕನ್ನಡಿಗರ ಸ್ವಾಭಿಮಾನಕ್ಕೆ ನೇರ ದೊಡ್ಡ ಏಟು.

ಟಿ.ಎ. ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ, 'ಎಕ್ಸ್'ನಿಂದ

ಕಿಡಿನುಡಿ



ಬೆಂಗಳೂರಿನ ಸಂಚಾರ ದುಃಸ್ಥಿತಿ ನೋಡಿ ತೆಲಂಗಾಣದ ಮುಖ್ಯಮಂತ್ರಿ ನಗುತ್ತಿದ್ದಾರೆ. 'ಬ್ರ್ಯಾಂಡ್ ಬೆಂಗಳೂರು' ಎಂಬ ಘೋಷಣೆ ಬರೀ ಬೂಟಾಟಿಕೆ ಎನ್ನುವುದಕ್ಕೆ ಸಾಕ್ಷಿ ನುಡಿದಿದ್ದಾರೆ. ಬೆಂಗಳೂರು ಉಸ್ತುವಾರಿ ಸಚಿವರು ಈ ವಿಷಯದಲ್ಲಿ ಮೌನವಾಗಿರುವುದೇಕೆ?

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಭಾನುವಾರ, 11-3-2001

• 7 ಮಂದಿ ಕಾಂಗ್ರೆಸ್ಸಿಗರ ಭೀಕರ ಕೊಲೆ

ಗುಂಟೂರು, ಮಾರ್ಚ್ 10 (ಯುಎನ್‌ಐ)– ಆಂಧ್ರಪ್ರದೇಶದಲ್ಲಿ ಈಚಿನ ದಿನಗಳಲ್ಲಿ ಸಂಭವಿಸಿದ ಅತ್ಯಂತ ಭೀಕರ ರಾಜಕೀಯ ಹಿಂಸಾಚಾರವೊಂದರಲ್ಲಿ ಶಂಕಿತ ತೆಲುಗು ದೇಶಂ ಪಕ್ಷದ (ಟಿಡಿಪಿ) ಕಾರ್ಯಕರ್ತರು ಇಂದು ಗುಂಟೂರು ಜಿಲ್ಲೆಯ ದುರ್ಗಿ ಪೊಲೀಸ್ ಠಾಣೆ ಸಮೀಪ ಏಳು ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಕೊಚ್ಚಿ ಕೊಲೆ ಮಾಡಿದ್ದಾರೆ.

ಘಟನೆಯಲ್ಲಿ ಇತರ ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ದಾಳಿಯ ಸಂದರ್ಭದಲ್ಲಿ ಒಬ್ಬರು ಮಾತ್ರ ದುಷ್ಕರ್ಮಿಗಳಿಂದ ತಪ್ಪಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ.

75 ವರ್ಷಗಳ ಹಿಂದೆ

ಭಾನುವಾರ, 11-3-1951

• 'ಹಿಂಸೆ ತ್ಯಜಿಸಲು ಕಮ್ಯುನಿಸ್ಟರ ಷರತ್ತು ಒಪ್ಪೆವು'

ನವದೆಹಲಿ, ಮಾರ್ಚ್ 10– ಗೃಹ ಸಚಿವ ಸಿ. ರಾಜಗೋಪಾಲಾಚಾರಿ ಅವರು ಇಂದು ಪಾರ್ಲಿಮೆಂಟಿನಲ್ಲಿ ಕಮ್ಯುನಿಸ್ಟ್ ಪಕ್ಷ ಹಾಗೂ ಹಿಂದೂ ಮಹಾಸಭೆ ಕುರಿತು ಭಾರತ ಸರ್ಕಾರದ ಧೋರಣೆಯನ್ನು ವಿವರಿಸಿದರು.

ಆರ್. ವೆಂಕಟರಾಮನ್ ರವರ ಪ್ರಶ್ನೆಗೆ ಉತ್ತರವಾಗಿ ಸಭೆಯ ಮುಂದಿಟ್ಟ ಹೇಳಿಕೆಯೊಂದರಲ್ಲಿ ರಾಜಗೋಪಾಲಾಚಾರಿಯವರು, ಕಮ್ಯುನಿಸ್ಟ್ ಪಕ್ಷದ ಘೋಷಣೆ ಹಾಗೂ ಸವಾಲುಗಳನ್ನು ಪಕ್ಷದವರ ಪ್ರಸ್ತುತ ಹಿಂಸಾತ್ಮಕ ಹಾಗೂ ರಹಸ್ಯ ಚಟುವಟಿಕೆಗಳನ್ನು ತ್ಯಜಿಸಲು ತಕ್ಕ ಷರತ್ತೆಂದು ಸರ್ಕಾರವು ಒಪ್ಪಲಾರದು. ಈ ಘೋಷಣೆ ಹಾಗೂ ಸವಾಲುಗಳನ್ನು ನಾವು ಅಂಗೀಕರಿಸಲಾರೆವು ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ: ಸುಧಾರಣೆ ಹೇಗೆ?



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸುಧಾರಣೆ ಈವರೆಗೆ ಮುಖ್ಯವಾಗಿ ಮೂರು ಹಂತಗಳನ್ನು ಹಾದು ಬಂದಿದೆ. ಆ ಸ್ವರೂಪಗಳನ್ನು ಗಮನಿಸಿದರೆ ಇಂದಿನ ಪರೀಕ್ಷಾ ಪದ್ಧತಿಯನ್ನು ಅರ್ಥ ಮಾಡಿಕೊಳ್ಳಬಹುದು.

ಮೊದಲನೆಯದು, 100 ಅಂಕಗಳಿಗೆ ಪರೀಕ್ಷಾ ಮಂಡಳಿ ನಡೆಸುತ್ತಿದ್ದ ಪರೀಕ್ಷೆ. ಆ ಪದ್ಧತಿಯಲ್ಲಿ ಶೇ 35ರಷ್ಟು ಅಂಕ ಪಡೆಯುವುದು ಕನಿಷ್ಠ ಉತ್ತೀರ್ಣತೆಯ ಅರ್ಹತೆಯಾಗಿತ್ತು. ವಿದ್ಯಾರ್ಥಿಯ ದಕ್ಷತೆ, ನೈತಿಕತೆ ಮತ್ತು ಕಲಿಕೆಯ ಅವಧಿಯಲ್ಲಿ ಶಾಲೆ ನಡೆಸಿದ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆಲ್ಲ ಯಾವ ಪರಿಗಣನೆಯೂ ಇರಲಿಲ್ಲ. ಇಡೀ ವರ್ಷದ ಕಲಿಕೆಯ ತೀರ್ಮಾನವು 100 ಅಂಕಗಳ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಸೀಮಿತವಾಗಿದ್ದುದು ಹಳೆಯ ವ್ಯವಸ್ಥೆ.

ಸುಧಾರಣೆಯ ಎರಡನೆಯ ಹಂತದಲ್ಲಿ, ಮಂಡಳಿಯ ಪರೀಕ್ಷೆಗಷ್ಟೆ ಸೀಮಿತವಾಗದೆ ಶಾಲಾ ಹಂತದಲ್ಲಿ ವಿದ್ಯಾರ್ಥಿಯ ಕಲಿಕಾ ದಕ್ಷತೆ ಆಧರಿಸಿ, ಅಧ್ಯಾಪಕರು ಪ್ರತೀ ವಿಷಯದಲ್ಲಿ ಶೇ 20ರಷ್ಟು ಆಂತರಿಕ ಅಂಕಗಳನ್ನು ಕೊಡುವಂತಾಯಿತು. ನಂತರ ಮಂಡಳಿಯು ಶೇ 80ರಷ್ಟು ಅಂಕಗಳಿಗಾಗಿ ಸಾರ್ವತ್ರಿಕ ಪರೀಕ್ಷೆ ನಡೆಸಿ, ಆ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳಿಗೆ ಅಧ್ಯಾಪಕರು ಕೊಟ್ಟ ಅಂಕಗಳನ್ನೂ ಸೇರಿಸಿ ಫಲಿತಾಂಶ ಘೋಷಿಸಲಾಗುತ್ತಿತ್ತು. ಈ ಪದ್ಧತಿಯಲ್ಲಿಯೂ ಉತ್ತೀರ್ಣತೆಯ ಕನಿಷ್ಠ ಅಂಕ ಶೇ 35. ಈ ಅಂಕಗಳಲ್ಲಿ ಮಂಡಳಿ ನಡೆಸುವ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಕನಿಷ್ಠ 28 ಅಂಕ ಪಡೆಯಲೇಬೇಕು. ಅದಕ್ಕೆ ಅಧ್ಯಾಪಕರು ಕೊಟ್ಟ ಆಂತರಿಕ ಅಂಕಗಳು ಸೇರಿದಾಗ 35 ಮತ್ತು ಅದಕ್ಕಿಂತ ಜಾಸ್ತಿ ಬರಬೇಕು ಎನ್ನುವುದು ಪದ್ಧತಿ. ಉದಾಹರಣೆಗೆ, ಒಬ್ಬ ವಿದ್ಯಾರ್ಥಿಗೆ ಅಧ್ಯಾಪಕರು 20ಕ್ಕೆ 12 ಅಂಕಗಳನ್ನು ಕೊಟ್ಟಿದ್ದು, ಮಂಡಳಿ ನಡೆಸುವ ಪರೀಕ್ಷೆಯಲ್ಲಿ ಆತನಿಗೆ 25 ಅಂಕಗಳು ಬರುತ್ತವೆ ಎಂದು ಭಾವಿಸಿ. ಆಗ ಒಟ್ಟು ಅಂಕ 35ರ ಮಾನದಂಡ ದಾಟಿದರೂ ವಿದ್ಯಾರ್ಥಿ ಉತ್ತೀರ್ಣನಾಗುವುದಿಲ್ಲ. ಏಕೆಂದರೆ, ಮಂಡಳಿ ನಡೆಸಿದ ಪರೀಕ್ಷೆಯಲ್ಲಿ 28 ಅಂಕಗಳನ್ನು ಪಡೆಯಲು ಅವನಿಗೆ ಸಾಧ್ಯವಾಗಿಲ್ಲ. ಈ ಪದ್ಧತಿಯಲ್ಲಿ ಅಧ್ಯಾಪಕರು ಆಂತರಿಕ ಅಂಕವಾಗಿ 20ಕ್ಕೆ 20 ಕೊಟ್ಟರೂ ಉತ್ತೀರ್ಣತೆಯ ಮಾನದಂಡಕ್ಕೆ ಅಧ್ಯಾಪಕರು ಕೊಟ್ಟಿದ್ದರಲ್ಲಿ 7 ಅಂಕಗಳು ಮಾತ್ರ ಪರಿಗಣನೆಗೆ ಬರುತ್ತವೆ. 7ಕ್ಕಿಂತ ಜಾಸ್ತಿಯ ಅಂಕಗಳು ವಿದ್ಯಾರ್ಥಿಯ ಒಟ್ಟು ಅಂಕಗಳ ಗಳಿಕೆಯನ್ನು ಹೆಚ್ಚಿಸುತ್ತವೆ; ಉತ್ತೀರ್ಣತೆಯ ಕನಿಷ್ಠ ಮಾನದಂಡಕ್ಕೆ ಸಹಾಯ ಮಾಡುವುದಿಲ್ಲ.

ಸುಧಾರಣೆಯ ಇತ್ತೀಚಿನ ಹಂತದಲ್ಲಿ ಪರೀಕ್ಷಾ ಕೊಠಡಿಗೆ ಸಿ.ಸಿ.ಟಿ.ವಿ. ಅಳವಡಿಸಿ ಪರೀಕ್ಷೆಯನ್ನು ಹೆಚ್ಚು ಬಿಗಿಗೊಳಿಸಲಾಯಿತು. ಅದೇ ಸುಧಾರಿತ ಪರೀಕ್ಷಾ ಪದ್ಧತಿಯಲ್ಲಿ ಇದೇ ಮಾರ್ಚ್ 18ರಿಂದ ಮೊದಲ ಬಾರಿಗೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈಗ ಜಾರಿಗೆ ತರಲಾಗಿರುವ ಪರೀಕ್ಷಾ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಕನಿಷ್ಠ ಶೇ 33ರಷ್ಟು ಅಂಕ ಪಡೆದರೆ ಉತ್ತೀರ್ಣ. ಈ 33ರಲ್ಲಿ ಮಂಡಳಿಯು ಶೇ 80ರಷ್ಟು ಅಂಕಗಳಿಗಾಗಿ ನಡೆಸುವ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಕನಿಷ್ಠ ಇಷ್ಟು ಅಂಕವನ್ನು ಪಡೆಯಬೇಕು ಎಂಬ ನಿಯಮವಿಲ್ಲ. ಅಧ್ಯಾಪಕರು 20ರಲ್ಲಿ ಎಷ್ಟು ಅಂಕಗಳನ್ನು ಕೊಟ್ಟರೂ ಅದನ್ನು ಮಂಡಳಿ ನಡೆಸಿದ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳಿಗೆ ಸೇರಿಸಿದಾಗ ಒಟ್ಟು ಶೇ 33ರಷ್ಟು ಬಂದರೆ ವಿದ್ಯಾರ್ಥಿ ಉತ್ತೀರ್ಣ.

ಪ್ರಸ್ತುತ ಸುಧಾರಿತವಾದ ಪರೀಕ್ಷಾ ಪದ್ಧತಿಯಲ್ಲಿ ಅಧ್ಯಾಪಕರು 20ಕ್ಕೆ 20 ಅಂಕ ಕೊಡಬೇಕು ಅಥವಾ ಕೊಡುತ್ತಾರೆ ಎನ್ನುವುದು ಶೈಕ್ಷಣಿಕ ವಲಯದಲ್ಲಿ ಎಲ್ಲರಿಗೂ ಗೊತ್ತಿರುವ ಗುಟ್ಟು. ಸರ್ವ ಶಿಕ್ಷಣ ಅಭಿಯಾನವು ಜಾರಿಗೆ ಬಂದ ನಂತರದ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿ ಉತ್ತೀರ್ಣನಾಗಬೇಕಾದ್ದು ವಿದ್ಯಾರ್ಥಿಯ ಜವಾಬ್ದಾರಿಯಲ್ಲ; ಅದು ಅಧ್ಯಾಪಕರಿಗೆ ಮಾತ್ರ ಇರುವ ಜವಾಬ್ದಾರಿ ಎನ್ನುವುದು ಅಘೋಷಿತವಾಗಿ ಸಾರ್ವತ್ರಿಕವಾಗಿ ಸ್ವೀಕೃತವಾಗಿರುವ ವ್ಯವಸ್ಥೆಯಾಗಿದೆ. ಹಾಗಿರುವಾಗ

> ಸುಧಾರಣೆಯ ಹಾದಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿ ಪಡೆದುಕೊಂಡಿರುವ ಸ್ವರೂಪ ವಿದ್ಯಾರ್ಥಿಗಳ ಮೇಲಿನ ಶಿಕ್ಷಕರ ಹಿಡಿತವನ್ನು ಪೂರ್ಣ ಕಸಿದುಕೊಂಡಿದೆ. ಶಿಕ್ಷಕರಿಗೆ ನೈತಿಕತೆ ಪಾಲಿಸಲು ಹಾಗೂ ವಿದ್ಯಾರ್ಥಿಗಳ ಮೇಲಿನ ಭಾವನಾತ್ಮಕ ನಿಯಂತ್ರಣಕ್ಕೆ ಪರೀಕ್ಷಾ ಪದ್ಧತಿ ಅವಕಾಶ ಒದಗಿಸಬೇಕು.

ಯಾವ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ 13 ಅಂಕಗಳನ್ನೂ ಪಡೆಯಲು ಕಷ್ಟ ಎನಿಸುತ್ತದೆಯೋ ಅಂತಹ ವಿದ್ಯಾರ್ಥಿಗೆ ಅಧ್ಯಾಪಕರು 20 ಅಂಕ ಕೊಡಲು ಮಾನಸಿಕವಾಗಿ ಸಿದ್ಧರಾಗುತ್ತಾರೆ. ಪರೀಕ್ಷೆಯಲ್ಲಿ 13 ಅಂಕ ಬರುವುದೇ ಕಷ್ಟ ಇರುವ ವಿದ್ಯಾರ್ಥಿಗೆ ಸಂಪೂರ್ಣ ಅಂಕ ಕೊಟ್ಟಾಗ, 80ಕ್ಕೆ 80 ತೆಗೆಯ ಬಲ್ಲವನಿಗೆ ಕೊಡದೆ ಇರಲಾಗುವುದೆ? ಅಧ್ಯಾಪಕರಿಗೆ ಇನ್ನೂ ಒಂದು ಬಗೆಯ ಒತ್ತಡ ಇರುತ್ತದೆ. ಒಬ್ಬ ವಿದ್ಯಾರ್ಥಿಗೆ ಅಧ್ಯಾಪಕರು 20ಕ್ಕೆ 19 ಕೊಟ್ಟು, ಮಂಡಳಿ ನಡೆಸುವ ಪರೀಕ್ಷೆಯಲ್ಲಿ ಆ ವಿದ್ಯಾರ್ಥಿ 13 ಅಂಕಗಳನ್ನು ಪಡೆದುಕೊಂಡರೆ ಒಟ್ಟು 32 ಅಂಕಗಳಾಗುತ್ತವೆ; ಒಂದು ಅಂಕದ ಕೊರತೆಯಿಂದ ವಿದ್ಯಾರ್ಥಿ ಅನುತ್ತೀರ್ಣನಾಗುತ್ತಾನೆ. ಆಗ ವಿದ್ಯಾರ್ಥಿ, ಪಾಲಕರು, ಸಹೋದ್ಯೋಗಿಗಳು, ಊರಿನವರು ಎಲ್ಲರೂ ಸೇರಿ, 'ಮೇಷ್ಟ್ರ ಇನ್ನೊಂದು ಅಂಕ ಜಾಸ್ತಿ ಕೊಟ್ಟಿದ್ದರೆ ಏನಾಗುತ್ತಿತ್ತು, ಹುಡುಗ ಪಾಸಾಗ್ತಿದ್ದನಲ್ವ' ಎನ್ನುತ್ತಾರೆಯೇ ಹೊರತು, 'ಮಂಡಳಿಯ ಪರೀಕ್ಷೆಯಲ್ಲಿ ವಿದ್ಯಾರ್ಥಿ ಇನ್ನು ಒಂದು ಅಂಕ ಜಾಸ್ತಿ ತೆಗೆಯಲು ಆಗುತ್ತಿರಲಿಲ್ಲವೆ' ಎನ್ನುವುದಿಲ್ಲ.

ಈ ಪರೀಕ್ಷಾ ಪದ್ಧತಿಯು ಸಮಸ್ಯೆ ಇರುವ ವಿದ್ಯಾರ್ಥಿಗಳನ್ನು ನಿಯಂತ್ರಿಸಲು ಅಧ್ಯಾಪಕರಿಗಿದ್ದ ಕಡೆಯ ಅವಕಾಶವನ್ನು ಕಿತ್ತು ಹಾಕಿದೆ. ಈಗಾಗಲೇ ಅಶಿಸ್ತಿನ, ಮುಖ್ಯವಾಗಿ ಸಹಪಾಠಿಗಳಿಗೆ ದೈಹಿಕ ಹಲ್ಲೆಯನ್ನೆಲ್ಲ ನಡೆಸುವಂತಹ ಪ್ರವೃತ್ತಿಯ ವಿದ್ಯಾರ್ಥಿಗಳನ್ನು ನಿಯಂತ್ರಿಸಲು ಅಧ್ಯಾಪಕರಿಗೆ ಅಧಿಕಾರ ಇರಲಿಲ್ಲ. ಪುಂಡಾಟಿಕೆ ನಡೆಸಿದ ವಿದ್ಯಾರ್ಥಿಯನ್ನು ಕರೆದು ಆತನ ಮನವೊಲಿಸಿ ತಿಳಿವಳಿಕೆ ಹೇಳಬೇಕು. ಸರಿ ಹೋಗದಿದ್ದರೆ ಪೋಷಕರನ್ನು ಕರೆಸಿ ವಿದ್ಯಾರ್ಥಿಗೆ ಮನೋವಿಜ್ಞಾನಿಗಳಿಂದ ಆಪ್ತಸಲಹೆ, ಸಮಾಲೋಚನೆ ಕೊಡಿಸುವ ಮುಖಾಂತರ ಸರಿಪಡಿಸಬೇಕು. ನಿಯಮ ಪ್ರಕಾರ ಇಷ್ಟೇ ಮಾಡಲು ಸಾಧ್ಯ. ವಿದ್ಯಾರ್ಥಿಗಳ ದುರ್ವರ್ತನೆಗಳಿಗೆ ಕುಟುಂಬದ ಪರಿಸರವೂ ಕಾರಣ ಆಗಿರಬಹುದು. ಅದನ್ನು ಅಧ್ಯಾಪಕರು ಸರಿಪಡಿಸಲು ಹೋದರೆ ಕುಟುಂಬದ ಖಾಸಗಿತನದ ಹಕ್ಕಿಗೆ ಧಕ್ಕೆ ಬರುತ್ತದೆ. ಆದ್ದರಿಂದ ಒಬ್ಬ ವಿದ್ಯಾರ್ಥಿ ಮತ್ತೊಬ್ಬ ವಿದ್ಯಾರ್ಥಿಗೆ ದೈಹಿಕ ಹಲ್ಲೆ ನಡೆಸಿದ ಬಗ್ಗೆ ಅಧ್ಯಾಪಕರಿಗೆ ದೂರು ಕೊಟ್ಟರೂ ಅವರು ಏನೂ ಮಾಡಲಾರರು ಎಂದು ಹಲ್ಲೆಗೊಳಗಾದವನಿಗೆ ಗೊತ್ತಿರುತ್ತದೆ. ಆಗ ಹಲ್ಲೆಗೊಳಗಾದವನು ಕೂಡ ಗುಂಪು ಕಟ್ಟಿಕೊಂಡು ಪ್ರತಿಯಾಗಿ ಹಲ್ಲೆ ಮಾಡುವ ದಾರಿಯನ್ನು ಕಂಡುಕೊಳ್ಳುತ್ತಾನೆ. ಈ ಸಮಸ್ಯೆ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಇನ್ನೂ ಹೆಚ್ಚು.

ಶುಲ್ಕವಾಗಿ ಲಕ್ಷಾಂತರ ರೂಪಾಯಿ ಕೊಟ್ಟಿರುವುದು ತನ್ನ ಅಪ್ಪ ಎನ್ನುವ ಧೈರ್ಯ ವಿದ್ಯಾರ್ಥಿಗಿರುತ್ತದೆ. ಅಂದರೆ ವಿದ್ಯಾರ್ಥಿಗಳನ್ನು ಪಾಲಕರಾಗಲಿ, ಆಡಳಿತ ಮಂಡಳಿಗಳಾಗಲಿ, ಅಧಿಕಾರಿಗಳಾಗಲಿ, ಅಧ್ಯಾಪಕರಾಗಲಿ ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎಂದು ವಿದ್ಯಾರ್ಥಿಗಳಿಗೆ ಗೊತ್ತಿದೆ. ಇಂತಹ ಸಂದರ್ಭದಲ್ಲಿ ಹಿಂದಿನ ಪರೀಕ್ಷಾ ಪದ್ಧತಿಯಲ್ಲಿ ಅಲ್ಲಿಂದಲ್ಲಿಗೆ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಅಧ್ಯಾಪಕರು ನೀಡುತ್ತಿದ್ದ ಆಂತರಿಕ ಅಂಕಕ್ಕಾಗಿಯಾದರೂ ಶಿಸ್ತುಬದ್ಧನಾಗಿರುವ, ಅವರ ಮಾತನ್ನು ಕೇಳಿಸಿಕೊಳ್ಳಬೇಕಾದ ಅವಶ್ಯಕತೆ ಇತ್ತು. ಈಗದು ಇಲ್ಲವಾಗಿದೆ.

ಈ ಸನ್ನಿವೇಶವನ್ನು ತುಸು ಮಾರ್ಪಡಿಸಬಹುದು. ಎಸ್‌ಎಸ್‌ಎಸ್‌ಸಿ ಅಂಕವೇ ಕಲಿಕಾ ದಕ್ಷತೆಯ ಸೂಚಕವೂ ಅಲ್ಲ, ಅದೇ ವಿದ್ಯಾರ್ಥಿಯ ಬದುಕಿನ ನಿರ್ಧಾರಕವೂ ಅಲ್ಲ. ಹಾಗಾಗಿ, ವಿದ್ಯಾರ್ಥಿಗಳೆಲ್ಲರೂ ಉತ್ತೀರ್ಣರಾಗಲಿ ಎಂದು ಬಯಸುವುದು ಸರಿಯೇ ಇದೆ. ಆದರೆ, ಸಹಪಾಠಿಗಳಿಗೆ ತೊಂದರೆ ಕೊಡುವ, ಕಲಿಕೆಯಲ್ಲಿ ಆಸಕ್ತಿ ವಹಿಸದ, ಎಷ್ಟೇ ಹೇಳಿದ ನಂತರವೂ ಶಿಸ್ತನ್ನು ಪಾಲಿಸದ, ಶಾಲಾ ಪರೀಕ್ಷೆಗಳಲ್ಲಿ ಒಳ್ಳೆಯ ಅಂಕವನ್ನೂ ಪಡೆಯದ ವಿದ್ಯಾರ್ಥಿಗೂ, ಅತ್ಯಂತ ಶಿಸ್ತುಬದ್ಧವಾಗಿದ್ದು, ಸಹಪಾಠಿಗಳೊಂದಿಗೆ ಸತ್ಸಂಬಂಧ ಕಾಪಾಡಿಕೊಳ್ಳುವ, ಶಾಲಾ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆಯುವ ವಿದ್ಯಾರ್ಥಿಗೂ ಆಂತರಿಕ ಮೌಲ್ಯಮಾಪನದ 20 ಅಂಕವೇ ಬಂದಾಗ ಸಮಸ್ಯಾತ್ಮಕ ವಿದ್ಯಾರ್ಥಿಗೆ ಅಧ್ಯಾಪಕರ ಬಗ್ಗೆ, ಶಿಕ್ಷಣ ವ್ಯವಸ್ಥೆಯ ಬಗ್ಗೆ ನಿರ್ಲಕ್ಷ್ಯವೂ, ಸನ್ನಡತೆಯ ಚೆನ್ನಾಗಿ ಓದುವ ವಿದ್ಯಾರ್ಥಿಗೆ ಅಧ್ಯಾಪಕರು ಮತ್ತು ಶಿಕ್ಷಣ ವ್ಯವಸ್ಥೆಯ ಬಗ್ಗೆ ತಿರಸ್ಕಾರದ ಭಾವವೂ ಬರಲು ಅವಕಾಶವಿದೆ. ಮೇಲಾಗಿ ಕಾಟಾಚಾರಕ್ಕಾದರೂ ಅಧ್ಯಾಪಕರು ನೈತಿಕತೆ ಮತ್ತು ಮೌಲ್ಯಗಳ ಬಗ್ಗೆ ಬೋಧನೆ ಮಾಡಲೇಬೇಕಾಗುತ್ತದೆ. ಆವಾಗ, 'ನಿಮ್ಮ ನೈತಿಕತೆ ನಮಗೆ ಗೊತ್ತಿಲ್ವ' ಎಂದು ವಿದ್ಯಾರ್ಥಿಗಳು ಅಂದುಕೊಳ್ಳಲು ಆಗದಷ್ಟರ ಮಟ್ಟಿಗೆ ಅಧ್ಯಾಪಕರ ಸಬಲೀಕರಣವಾಗಬೇಕು. ಅದಕ್ಕೊಂದು ದಾರಿ ಇದೆ. ಆಂತರಿಕ ಅಂಕದ ಪ್ರಮಾಣವನ್ನು 20ರಿಂದ 40ಕ್ಕೆ ಹೆಚ್ಚಿಸಿ, ಮಂಡಳಿ ನಡೆಸುವ ಪರೀಕ್ಷೆಯ ಗರಿಷ್ಠ ಅಂಕವನ್ನು 60ಕ್ಕೆ ಇಳಿಸಬೇಕು. ಆಗ ಅಧ್ಯಾಪಕರು 40ಕ್ಕೆ ಕನಿಷ್ಠ 33 ಅಂಕ ಕೊಡಲು ಆಗುತ್ತದೆ. ಎಲ್ಲರೂ ಉತ್ತೀರ್ಣರಾದ ಹಾಗೆ ಆಯಿತು. ಇನ್ನುಳಿದ 7 ಅಂಕಗಳಲ್ಲಿ ವ್ಯತ್ಯಾಸ ಮಾಡಲು ಆಗುತ್ತದೆ. ಅತ್ಯುತ್ತಮ ಗುಣನಡತೆಯ ವಿದ್ಯಾರ್ಥಿಗೆ 40ಕ್ಕೆ 40 ಕೊಡಬಹುದು. ಸ್ವಲ್ಪ ಸಮಸ್ಯೆ ಸೃಷ್ಟಿಸುವ ವಿದ್ಯಾರ್ಥಿಗೆ 38 ಕೊಡಬಹುದು. 7 ಅಂಕಗಳ ವ್ಯಾಪ್ತಿಗೆ ವಿದ್ಯಾರ್ಥಿಯ ನಿಜವಾದ ಮೌಲ್ಯನಿರ್ಣಯ ಮಾಡುವ ಅಧಿಕಾರ ಅಧ್ಯಾಪಕರಿಗೆ ದೊರೆಯುವುದರಿಂದ ಆ ಮಟ್ಟಿಗೆ ವಿದ್ಯಾರ್ಥಿಗಳ ಮೇಲೆ ನಿಯಂತ್ರಣ ಇರುತ್ತದೆ.

ವಿದ್ಯಾರ್ಥಿಗಳ ಅಂಕಗಳಿಂದಲೇ ಅಧ್ಯಾಪಕರ ದಕ್ಷತೆಯ ಪರಿಶೀಲನೆ ಮಾಡಲು ಮಂಡಳಿ ನಡೆಸುವ 60 ಅಂಕಗಳ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳ ಆಧಾರದಲ್ಲಿ ಅಧ್ಯಾಪಕರ ದಕ್ಷತೆಯನ್ನು ನಿರ್ಧರಿಸಬಹುದು. ಆಗ ಉತ್ತೀರ್ಣತೆಯ ಸಮಸ್ಯೆಯೂ ಇರುವುದಿಲ್ಲ. ಅಧ್ಯಾಪಕರನ್ನು ನಿಯಂತ್ರಿಸಲು, 'ನಿಮ್ಮ ವಿದ್ಯಾರ್ಥಿ ಕಡಿಮೆ ಅಂಕ ಪಡೆದದ್ದೇಕೆ?' ಎಂದು ಕೇಳಲಿಕ್ಕೂ ಅವಕಾಶ ಇರುತ್ತದೆ. ಅಧ್ಯಾಪಕರಿಗೂ ಕನಿಷ್ಠ ನೈತಿಕತೆಯನ್ನು ಪಾಲಿಸಲು ಅವಕಾಶವಿರುತ್ತದೆ. ವಿದ್ಯಾರ್ಥಿಗಳನ್ನು ಸ್ವಲ್ಪ ಭಾವನಾತ್ಮಕ ನಿಯಂತ್ರಣಕ್ಕೆ ಒಳಪಡಿಸಲೂ ಅವಕಾಶವಿರುತ್ತದೆ.



ವಾಚಕರ ವಾಣಿ

ಕಾಯಂ ಶಿಕ್ಷಕರಿಲ್ಲದೆ ಶಿಕ್ಷಣ ಪ್ರಗತಿ ಕುಂಠಿತ

ಸರ್ಕಾರಿ ಶಾಲೆಯಲ್ಲಿ ಉಚಿತವಾಗಿ ಬಿಸಿಯೂಟ, ಸಮವಸ್ತ್ರ, ಪಠ್ಯಪುಸ್ತಕ ನೀಡಿದರೆ ಮಕ್ಕಳ ಪ್ರವೇಶಾತಿ ಅಥವಾ ಹಾಜರಾತಿ ಹೆಚ್ಚಳವಾಗುವುದಿಲ್ಲ. ಈ ಸೌಲಭ್ಯಗಳ ಜೊತೆಗೆ ಕಾಯಂ ಶಿಕ್ಷಕರನ್ನೂ ನೇಮಿಸಬೇಕಿದೆ. ಶಿಕ್ಷಕರಿಗೆ ನೀಡಿರುವ ಆಡಳಿತ ವಿಭಾಗದ ಹಲವು ಯೋಜನೆಗಳ ಕಾರ್ಯಭಾರ ಇಳಿಸಿದಾಗಷ್ಟೇ ಶಾಲೆಗಳ ಸಮಗ್ರ ಅಭಿವೃದ್ಧಿ ಸಾಧ್ಯ. ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಖಾಸಗಿ ಶಾಲೆಗಳೊಂದಿಗೆ ಹೋಲಿಸುವವರು– ಖಾಸಗಿ ಶಾಲೆಗಳಲ್ಲಿ ಶಿಕ್ಷಕರಿಗೆ ಆಡಳಿತ ಮಂಡಳಿಯ ಕಾರ್ಯಭಾರದ ನಿರ್ವಹಣೆಯ ಹೊರೆ ಹೇರಿರುವ ನಿದರ್ಶನ ಇದೆಯೇ? ಶಿಕ್ಷಕರ ಕೊರತೆ ಎದುರಿಸುತ್ತಿರುವ ಅನುದಾನರಹಿತ ಖಾಸಗಿ ಶಾಲೆಗಳಿವೆಯೇ? ಎನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು.

ಆರ್.ಪಿ. ಮಂಜುನಾಥ್, ಬಳ್ಳಾರಿ

ಹುಣಸೆ ಅಭಿವೃದ್ಧಿ: ಯೋಜನೆ ನನೆಗುದಿಗೆ

ಹುಣಸೆ ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಕೆಂಬ ಒತ್ತಾಯ 'ವಾಚಕರ ವಾಣಿ'ಯಲ್ಲಿ ಪ್ರಕಟವಾಗಿದೆ (ಲೇ: ಮಂಜುನಾಥ್ ಅಮಲಗೊಂದಿ). ಹುಬ್ಬಳ್ಳಿಯಲ್ಲಿ ರಾಜ್ಯ ಸಂಬಾರ ಪದಾರ್ಥಗಳ ಅಭಿವೃದ್ಧಿ ಮಂಡಳಿ ಸ್ಥಾಪಿಸಿ ಹತ್ತು ವರ್ಷಗಳಾಗಿವೆ. ಸಂಬಾರ ಬೆಳೆಗಳಲ್ಲಿ ಹುಣಸೆಯೂ ಒಂದಾಗಿದೆ. 2016ರಲ್ಲಿ ನಾನು ಮಂಡಳಿಯ ಅಧಿಕಾರಿಯಾಗಿದ್ದೆ. ಆ ವೇಳೆ ಕೋಲಾರದ ತೋಟಗಾರಿಕೆ ವಿಜ್ಞಾನಗಳ ಮಹಾವಿದ್ಯಾಲಯದಲ್ಲಿ ಹುಣಸೆ ಬೆಳೆ ಕುರಿತಂತೆ ರಾಜ್ಯಮಟ್ಟದ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. 300ಕ್ಕಿಂತಲೂ ಹೆಚ್ಚು ರೈತರು ಭಾಗವಹಿಸಿದ್ದರು. ಬೆಳೆಗಾರರಿಗೆ ಮಂಡಳಿಯಿಂದ ಎಲ್ಲಾ ರೀತಿಯಲ್ಲಿ ಸಹಾಯ ಮಾಡುವ ಬಗ್ಗೆ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಕ್ರಿಯಾಯೋಜನೆ ತಯಾರಿಸಲಾಗಿತ್ತು. ಅದು ಕಾರ್ಯಗತಗೊಳ್ಳಲಿಲ್ಲ. ಸಂಬಾರ ಬೆಳೆಗಳಿಗೆ ನಾಟಿಯಿಂದ ಹಿಡಿದು ಸಂಸ್ಕರಣೆ ಮಾಡುವವರೆಗೂ ತಾಂತ್ರಿಕ ಮಾಹಿತಿ, ಸಹಾಯಧನ ನೀಡುವುದು ಮಂಡಳಿಯ ಜವಾಬ್ದಾರಿ. ಹುಣಸೆ ಬೆಳೆಗಾರರು ಮಂಡಳಿಯನ್ನು ಸಂಪರ್ಕಿಸಬೇಕಿದೆ.

ಸುರೇಶ ವಿ. ಕುಂಬಾರ, ಗದಗ

ಟಿ20 ವಿಶ್ವಕಪ್: ಸಾಂಘಿಕತೆಗೆ ಸಂದ ಜಯ

ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತೀಯ ತಂಡ ಸಾಧಿಸಿದ ಅಮೋಘ ವಿಜಯವು ದೇಶದ ಕ್ರೀಡಾ ಇತಿಹಾಸದಲ್ಲಿನ ಸುವರ್ಣ ಅಧ್ಯಾಯಗಳಲ್ಲಿ ಒಂದಾಗಿದೆ. ಪ್ರತಿಯೊಬ್ಬ ಆಟಗಾರನ ಸಮರ್ಪಣೆ, ಪರಿಶ್ರಮ ಮತ್ತು ದೃಢ ಸಂಕಲ್ಪದಿಂದಾಗಿ ಗೆಲುವು ಸಾಧ್ಯವಾಯಿತು. ತವರು ನೆಲದಲ್ಲಿ ಚುಟುಕು ಕ್ರಿಕೆಟ್‌ನ ವಿಶ್ವಕಪ್ ಮುಡಿಗೇರಿಸಿಕೊಂಡಿದ್ದು ದಾಖಲೆಯಾಗಿದೆ. ನಾಯಕತ್ವದ ದೂರದೃಷ್ಟಿ ಮತ್ತು ಆಟಗಾರರ ಒಗ್ಗಟ್ಟು ಇದಕ್ಕೆ ಕಾರಣ. ಶ್ರಮ, ಶಿಸ್ತು ಮತ್ತು ಸಾಂಘಿಕ ಮನೋಭಾವ ಇದ್ದರೆ ಯಾವ ಗುರಿಯನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯ ತಂಡದ ಯಶಸ್ಸು ಉದಾಹರಣೆಯಾಗಿದೆ.

ಸುದರ್ಶನ ಎಚ್. ಯಡಹಳ್ಳಿ, ಧಾರವಾಡ

ಪ್ರಶ್ನೆಪತ್ರಿಕೆ ವಿತರಣೆ: ತಾರತಮ್ಯ ಸರಿಯೆ?

ರಾಜ್ಯದಲ್ಲಿ ಪ್ರಥಮ ಬಾರಿಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯಿಂದ (ಡಿಎಸ್‌ಇಆರ್‌ಟಿ) ಎಲ್ಲಾ ಸರ್ಕಾರಿ ಶಾಲೆಗಳ 6, 7, 8 ಹಾಗೂ 9ನೇ ತರಗತಿಯ ಸಂಕಲನಾತ್ಮಕ ಪರೀಕ್ಷೆಯ (ಎಸ್‌ಎ–2) ಪ್ರಶ್ನೆಪತ್ರಿಕೆಗಳನ್ನು ಸರ್ಕಾರಿ ಪ್ರೌಢಶಾಲಾ ಪರೀಕ್ಷಾ ಮಂಡಳಿಯ ಶಾಲಾ ಲಾಗಿನ್‌ನಿಂದ ವಿತರಿಸಲು ತೀರ್ಮಾನಿಸಲಾಗಿದೆ. ಈ ಪರೀಕ್ಷೆ ಮೂಲಕ ವಿದ್ಯಾರ್ಥಿಗಳ ವರ್ಷಪೂರ್ತಿ ಕಲಿಕೆಯನ್ನು ಮೌಲ್ಯಮಾಪನ ಮಾಡಲಾಗುತ್ತದೆ. ಆದರೆ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಿಗೆ ಪ್ರಶ್ನೆಪತ್ರಿಕೆ ನೀಡುತ್ತಿಲ್ಲ. ಈ ಶಾಲೆಗಳಲ್ಲಿ ಕಲಿಯುತ್ತಿರುವುದು ಕನ್ನಡಿಗರ ಮಕ್ಕಳಲ್ಲವೆ?

ಸಿದ್ದೇಶ್ ಅಶೋಕ ಚನ್ನಳ್ಳಿ, ಹಿರೇಕೆರೂರು

ಆರ್ಥಿಕ ಶಿಸ್ತು ಮತ್ತು ಸಾಲದ ಹೊಣೆಗಾರಿಕೆ

ಸಾರ್ವಜನಿಕ ಸಾಲ ಎನ್ನುವುದು ಮುಂಗಡಪತ್ರದ ಅವಿಭಾಜ್ಯ ಅಂಗ. ರಾಜ್ಯಗಳು ಹಾಗೂ ಕೇಂದ್ರ ಸರ್ಕಾರ ಸಾಲ ಮಾಡುತ್ತವೆ. ಸಾಲವಿಲ್ಲದ ಮುಂಗಡಪತ್ರವನ್ನು ಯಾರೂ ಮಂಡಿಸಿಲ್ಲ. ರಾಜ್ಯಗಳಿಗೆ ಅವುಗಳ ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲು ಜಿಎಸ್‌ಡಿಪಿಯ ಶೇ 3ರಷ್ಟು ಸಾಲ ಪಡೆಯಲು ಅವಕಾಶವಿದೆ. ಹೀಗಿರುವಾಗ ಗ್ಯಾರಂಟಿ ಯೋಜನೆಯಿಂದಾಗಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಸಾಲ ಪಡೆಯುವ ಪ್ರಮಾಣ ಹೆಚ್ಚುತ್ತಿದೆಯೆಂದು ಅಪಪ್ರಚಾರ ಮಾಡುವುದು ಸರಿಯಲ್ಲ. ಸರ್ಕಾರದ ಸಾಲ ಆರ್ಥಿಕ ಶಿಸ್ತಿನ ಮಿತಿಯಲ್ಲಿದೆ. ಕೇಂದ್ರವು ನಿಗದಿತ ಮಿತಿಗಿಂತಲೂ ಹೆಚ್ಚು ಸಾಲ ಪಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕುವವರು ಯಾರು?

ದೇವಿದಾಸ ಪ್ರಭು, ಭಟ್ಕಳ

ಧರ್ಮದಿಂದ ಸಂಸ್ಕೃತಿ ಉಳಿಯುವುದೆ?

'**ಧರ್ಮ** ಉಳಿದರೆ ಮಾತ್ರ ಸಂಸ್ಕೃತಿ ಉಳಿಯಲು ಸಾಧ್ಯ' ಎಂದು ಬಿಜೆಪಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದ್ದಾರೆ. ಈ ಮಾತು ಕೇಳಿ ಆಶ್ಚರ್ಯವಾಯಿತು. ಈಗ ರಾಜರು ಇಲ್ಲ; ಅವರೇ ಸಂಸದರಾಗಿದ್ದಾರೆ. ಅವರು ಇಂಗ್ಲಿಷ್ ಬಲ್ಲವರು. ಜಗತ್ತಿನಲ್ಲಿ ಸಂಸ್ಕೃತಿ ಹಾಗೂ ಧರ್ಮ ಎಂಬ ಪದಗಳನ್ನು ಹೇಗೆ ಪರಿಭಾವಿಸಲಾಗಿದೆ ಎಂಬುದು ಅವರಿಗೆ ತಿಳಿದಿದೆ. ಭಾರತದ ಸಂದರ್ಭದಲ್ಲಿ ಸಂಸ್ಕೃತಿ ಹಾಗೂ ಧರ್ಮವನ್ನು ಸಂವಾದಿ ಪದಗಳಾಗಿ ಬಳಸುವುದಾದರೆ ಧರ್ಮಕ್ಕಿಂತ ಸಂಸ್ಕೃತಿ ವ್ಯಾಪಕ ಅರ್ಥವುಳ್ಳ ಪದ. ನಂಬಿಕೆ, ಸಂಪ್ರದಾಯ, ಪದ್ಧತಿ, ಆಚಾರ ಇವುಗಳನ್ನು ಒಳಗೊಂಡ ಧರ್ಮವು ಸಂಸ್ಕೃತಿಯ ಒಂದು ಭಾಗವಷ್ಟೇ. ಜೀವನಮಾರ್ಗ ಎಂಬರ್ಥದಲ್ಲಿ ಸಂಸ್ಕೃತಿ ಚಲನಶೀಲವಾದುದು. ಆದರೆ, ಧರ್ಮವು ಸಿದ್ಧಾಂತಗಳು ಹಾಗೂ ಆಧ್ಯಾತ್ಮಿಕ ಸತ್ಯಗಳನ್ನೊಳಗೊಂಡು ಒಂದು ರೀತಿಯಲ್ಲಿ 'ಸ್ಥಿರ'. ಧರ್ಮವನ್ನು ಗೌರವಿಸುವುದು ಸರಿ; ಆದರೆ, ಸಮಾಜ ಮತ್ತು ರಾಷ್ಟ್ರದ ನಿರ್ಮಾಣದಲ್ಲಿ ಅದರ ಪಾತ್ರ ಸೀಮಿತ.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಚುರುಮುರಿ



ಯುದ್ಧಂ ಹರಣಂ

• ಮಣ್ಣೆ ರಾಜು

ತರಕಾರಿ ತಾಯಮ್ಮನ ಜೊತೆ ಸುಮಿ ಜಗಳ ಮಾಡಿಕೊಂಡು ಬಂದಳು.

'ಮನೆ ಬಾಗಿಲಿಗೆ ತಾಜಾ ತರಕಾರಿ ತಂದುಕೊಡುವ ತಾಯಮ್ಮನ ಜೊತೆ ಜಗಳ ಆಡಬೇಡ' ಎಂದು ಸಮಾಧಾನ ಹೇಳಿದ ಶಂಕ್ರಿ.

'ಇನ್ನೇನ್ರಿ ಮತ್ತೆ, ತರಕಾರಿ ಬೆಲೆ ವಿಪರೀತ ಏರಿಸಿದ್ದಾಳೆ. ಯಾಕೆ ರೇಟು ಜಾಸ್ತಿ ಮಾಡಿದ್ದಿ ಅಂತ ಕೇಳಿದರೆ ಕೊಲ್ಲಿ ಯುದ್ಧದ ಎಫೆಕ್ಟ್ ಅಂತಾಳೆ. ಕೊಲ್ಲಿ ಯುದ್ಧಕ್ಕೂ ಕೊತ್ತಂಬರಿ ಸೊಪ್ಪಿಗೂ ಏನ್ರೀ ಸಂಬಂಧ?' ಸುಮಿಗೆ ಸಿಟ್ಟು.

'ತರಕಾರಿ ಬೆಲೆಗೂ ಯುದ್ಧಕ್ಕೂ ಸಂಬಂಧ ಇದೆಯೋ ಇಲ್ವೋ, ತಾಯಮ್ಮನೊಂದಿಗೆ ಉತ್ತಮ ಸಂಬಂಧ ಇಟ್ಕೊ'.

'ಯಾರೋ ಎಲ್ಲೋ ಯುದ್ಧ ಮಾಡಿಕೊಂಡರೆ ತಾಯಮ್ಮ ನಮ್ಮ ತಲೆ ಮೇಲೆ ಬೆಲೆ ಬಾಂಬ್ ಹಾಕೋದು ಸರೀನಾ?'

'ಅಡುಗೆ ಅನಿಲ ಸಿಲಿಂಡರ್ ಬೆಲೆಯೂ ಏರಿಕೆಯಾಗಿದೆ, ಯಾರನ್ನು ಕೇಳೋದು? ಸಿಲಿಂಡರ್ ಸರಬರಾಜಿಲ್ಲ ಎಂದರೆ ಏನು ಮಾಡೋದು?'

'ಸಿಲಿಂಡರ್ ಇಲ್ಲದೆ ಒಲೆ ಹಚ್ಚೋದು ಹೇಗೆ? ಅಡುಗೆ ಮನೆ ಬಂದ್ ಮಾಡ್ತೀನಿ, ಹೋಟೆಲ್‌ನಿಂದ ಊಟ–ತಿಂಡಿ ತಂದುಕೊಡಿ'.

'ಸಿಲಿಂಡರ್ ಸಪ್ಲೈ ಇಲ್ಲ ಎಂದು ಹೋಟೆಲ್‌ನವರೂ ಒಲೆ ಹಚ್ಚದೆ ವ್ಯವಹಾರ ಬಂದ್ ಮಾಡ್ತಿದ್ದಾರೆ. ಎಲ್ಲಾ ಬಂದ್ ಆಗಿಬಿಟ್ಟರೆ ಹೊಟ್ಟೆ ಪಾಡೇನು?' ಶಂಕ್ರಿಗೆ ಆತಂಕ.

'ಇನ್ನೇನು ಮಾಡೋದು, ಯುದ್ಧ ನಿಲ್ಲಿಸಬೇಕು ಇಲ್ಲವೆ, ಸೌದೆ ಒಲೆ ಉರಿಸಿ ಅಡುಗೆ ಮಾಡಿ ಉಣ್ಣಬೇಕು...'

'ಯುದ್ಧ ಎಂಬುದು ಸಿಕ್ಸರ್, ಬೌಂಡರಿ ಬಾರಿಸುವ ಕ್ರಿಕೆಟ್ ಆಟವಲ್ಲ, ಬಾಂಬ್ ಹಾಕಿ ಭಸ್ಮ ಮಾಡುವ ಕೆಟ್ಟಾಟ'.

'ಟ್ರಂಪ್‌ರೇಚರ್' ನಿಯಂತ್ರಣವಾಗದೇ ಯುದ್ಧ ನಿಲ್ಲುವುದಿಲ್ಲ!'

'ಹೌದು. ನೊಬೆಲ್ ಶಾಂತಿ ಪ್ರಶಸ್ತಿ ಸಿಗಲಿಲ್ಲ ಎಂದು ಕೆರಳಿ ಕೆಂಡವಾಗಿರುವ ದುಡ್ಡಣ್ಣ ಟ್ರಂಪ್‌ಗೆ ಗ್ಲೋಬಲ್ ಕ್ರಾಂತಿ ಪ್ರಶಸ್ತಿ ಕೊಟ್ಟಾದರೂ ಶಾಂತಿ ಮಾಡಿ ಯುದ್ಧದ ದಾಳಿ, ಚಾಳಿ ನಿಲ್ಲಿಸಿ ಎಂದು ಕೇಳಿಕೊಳ್ಳಬೇಕು...' ಎಂದು ಶಂಕ್ರಿ ನಿಟ್ಟುಸಿರುಬಿಟ್ಟ.

ಸಂಗತ

ತಲ್ಲಣ ಹುಟ್ಟಿಸಬೇಕಾದ ನೈತಿಕ ಅಧಃಪತನ


ಹಿಂಸೆ–ಕ್ರೌರ್ಯದ ಘಟನೆಗಳು ಹೆಚ್ಚುತ್ತಿರುವುದು ಸಮಾಜದಲ್ಲಿನ ನೈತಿಕತೆ ಕ್ಷೀಣ ಆಗುತ್ತಿರುವ ಸಂಕೇತ. ಇದನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಪರಿಶೀಲಿಸಬೇಕು.

• ನಾ. ದಿವಾಕರ

ಕಳೆದ ಎರಡು ವಾರಗಳ ಅವಧಿಯಲ್ಲಿ ಸಂಭವಿಸಿರುವ ಕೆಲವು ಘಟನೆಗಳು ಭಾರತೀಯ ಸಮಾಜದ ನೈತಿಕ ಅಧಃಪತನ ಮತ್ತು ಮೌಲ್ಯಗಳ ಕುಸಿತಕ್ಕೆ ಕನ್ನಡಿ ಹಿಡಿದಂತಿದ್ದು, ಇವು ಮಾಧ್ಯಮ ವರದಿಗಳಲ್ಲೇ ಅಡಗಿಹೋಗುತ್ತಿವೆ. ಈ ಘಟನೆಗಳು ನಮ್ಮ ಸಾಮಾಜಿಕ ಸಂಕಥನದಲ್ಲಿ ಪ್ರಥಮ ಆದ್ಯತೆ ಪಡೆಯಬೇಕಿತ್ತು ಮತ್ತು ಸಮಾಜದ ಆತ್ಮಸಾಕ್ಷಿಯನ್ನು ಕಲಕಬೇಕಿತ್ತು. ಏಕೆಂದರೆ, ಇಲ್ಲಿ ಮಾನವ ಸಮಾಜವನ್ನು ತಲ್ಲಣಗೊಳಿಸುವ ಒಳಸೂಕ್ಷ್ಮಗಳು ಅಡಗಿವೆ.

ಮೊದಲನೆಯ ಘಟನೆ, ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯಲ್ಲಿ ವರದಿಯಾಗಿದೆ. ಜಿಲ್ಲಾ ಕೇಂದ್ರದಿಂದ 55 ಕಿಲೋಮೀಟರ್ ದೂರದಲ್ಲಿರುವ ಹಳ್ಳಿಯೊಂದರಲ್ಲಿ ತನ್ನ ಹೊಲದಲ್ಲಿ ಕೆಲಸ ಮಾಡುತ್ತಿದ್ದ 90 ವರ್ಷದ ವೃದ್ಧ ಮಹಿಳೆಯ ಮೇಲೆ ನಾಲ್ವರು ಮುಸುಕುಧಾರಿಗಳು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಸರ್ಕಾರ ಎಸ್‌ಐಟಿ ತನಿಖೆ ಆರಂಭಿಸಿದೆ. ಅತ್ಯಾಚಾರಕ್ಕೊಳಗಾಗಿ ಗಾಯಗೊಂಡ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಎರಡನೆಯ ಘಟನೆ, ರಾಜಸ್ಥಾನದಿಂದ ವರದಿಯಾಗಿದೆ. ಉದಯಪುರ ಸಮೀಪದ ಹಳ್ಳಿಯೊಂದರಲ್ಲಿ ಇಟ್ಟಿಗೆ ಬಟ್ಟಿಯಲ್ಲಿ ದುಡಿಮೆ ಮಾಡುತ್ತಿದ್ದ ಉತ್ತರ ಪ್ರದೇಶದ ರಾಜ್ ಜಟಾವ್ ಮತ್ತು ಸೀಮಾ ದಂಪತಿ ತಮಗೆ ಆಶ್ವಾಸನೆ ನೀಡಿದಷ್ಟು ಕೂಲಿ ನೀಡದೆ ಹೋದರೂ ಕೆಲಸ ಮಾಡಿದ್ದಾರೆ. ಈ ನಡುವೆ ಸೀಮಾ ಜನ್ಮ ನೀಡಿದ ಮಗು ನ್ಯುಮೋನಿಯಾ ಸೋಂಕಿನಿಂದ ಮೃತಪಟ್ಟಿದೆ. ದೂರದಲ್ಲಿರುವ ಆಸ್ಪತ್ರೆಗೆ ಕರೆದೊಯ್ದರೆ ಕೂಲಿಕಾರರು ಓಡಿಹೋಗಬಹುದು ಎಂಬ ಶಂಕೆಯಿಂದ ಚಿಕಿತ್ಸೆಗೂ ಅವಕಾಶ ಕೊಡದ ಕಾರಣದಿಂದಾಗಿ ಮಗು ಸಾವನ್ನಪ್ಪಿದೆ. ತದನಂತರ ಮಗುವಿನ ಶವವನ್ನು ತಮ್ಮ ಸ್ವಂತ ಊರಿಗೆ ಕೊಂಡೊಯ್ಯಲೂ ಅನುಮತಿ ಸಿಗದೆ, ಮಾಲೀಕರ ಅಪ್ಪಣೆಯಂತೆ ಬಟ್ಟಿಯ ಸಮೀಪದಲ್ಲೇ ಹೂತುಹಾಕಲಾಗಿದೆ.



ಮೂರನೆಯ ಘಟನೆ, ಕರ್ನಾಟಕದ ಬಳ್ಳಾರಿಯ ಬ್ರೂಸ್ ಪೇಟೆಯ ವಿದ್ಯಾರ್ಥಿಗಳ ವಸತಿನಿಲಯವೊಂದರಲ್ಲಿ ನಡೆದಿದೆ. ಒಂದೇ ಕೊಠಡಿಯಲ್ಲಿದ್ದ ವಿದ್ಯಾರ್ಥಿಗಳ ನಡುವಿನ ಕಲಹ ಒಬ್ಬ ಬಾಲಕನ ಸಾವಿನಲ್ಲಿ ಕೊನೆಗೊಂಡಿದೆ. 9ನೇ ತರಗತಿಯ ವಿದ್ಯಾರ್ಥಿಯೊಬ್ಬ, ಉಳಿದ ಐವರು ಸಹಪಾಠಿಗಳು ಮತ್ತು ವಾರ್ಡನ್ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿದ್ದು, 15 ವರ್ಷದ ಹೇಮಂತ್ ಎಂಬ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಉಳಿದವರಿಗೆ ಗಂಭೀರ ಗಾಯಗಳಾಗಿವೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಈ ಮೂರೂ ಘಟನೆಗಳನ್ನು ಭಿನ್ನ ಆಯಾಮಗಳಲ್ಲಿ ನೋಡಿದಾಗ, ಮಹಿಳಾ ದೌರ್ಜನ್ಯ, ಜಾತಿ ದ್ವೇಷ ಮತ್ತು ತಾರತಮ್ಯ ಹಾಗೂ ಯುವಪೀಳಿಗೆಯಲ್ಲಿ ಹೆಚ್ಚಾಗುತ್ತಿರುವ ಹಿಂಸಾತ್ಮಕ ಮನೋಭಾವ ಪ್ರಧಾನವಾಗಿ ಕಾಣುತ್ತವೆ. ಒಟ್ಟಾರೆಯಾಗಿ ನೋಡಿದಾಗ, ಸಾಮಾಜಿಕ ವ್ಯಾಧಿಯ ಲಕ್ಷಣವಾಗಿ ಕಾಣುತ್ತವೆ. ಈ ಪ್ರಕರಣಗಳನ್ನು ಆಯಾ ಸರ್ಕಾರಗಳು ಕಾನೂನು ವ್ಯವಸ್ಥೆಯ ಲೋಪ ಅಥವಾ ಸಾಮಾಜಿಕ ಅಪರಾಧದ ಹಿನ್ನೆಲೆಯಲ್ಲಿ ಮಾತ್ರ ನೋಡುತ್ತವೆ. ಸಾಮಾಜಿಕ ಸಂಘಟನೆಗಳಿಗೆ ಜಾತಿ–ಧಾರ್ಮಿಕ ಅಸ್ಮಿತೆ ಅಥವಾ ಪ್ರಾದೇಶಿಕ ಅಸ್ಮಿತೆಗಳು ಪ್ರಧಾನವಾಗಿ ಕಾಣುತ್ತವೆ. ಅಂತಿಮವಾಗಿ ಇದು ಮೈಸೂರಿನಲ್ಲಿ ಅತ್ಯಾಚಾರ ಹಾಗೂ ಕೊಲೆಗೀಡಾದ 9 ವರ್ಷದ ಅಲೆಮಾರಿ ಬಾಲಕಿಯ ಘಟನೆಯಂತೆ ವಿಸ್ಮೃತಿಗೆ ಜಾರಿಬಿಡುತ್ತದೆ.

ರಾಜಕೀಯ ಪಕ್ಷಗಳಿಗೆ ಈ ರೀತಿಯ ಘಟನೆಗಳು ಮುಖ್ಯ ಎನಿಸುವುದೇ ಇಲ್ಲ. ಆದರೆ, ವಿಶಾಲ ಸಮಾಜ ಹೀಗೆ ಸಮೀಪದೃಷ್ಟಿಯಿಂದ (ಮಯೋಪಿಕ್ ವ್ಯೂ) ನೋಡುವುದು ಸಾಧ್ಯವಿಲ್ಲ. ಸಮಾಜಶಾಸ್ತ್ರೀಯ ನೆಲೆಯಲ್ಲಿ, ಮನೋವೈಜ್ಞಾನಿಕ ಆಯಾಮದಲ್ಲಿ ಇಂತಹ ಘಟನೆಗಳನ್ನು ವಿಶ್ಲೇಷಿಸಬೇಕಿದೆ. ಇದೇ ರೀತಿಯ ಘಟನೆಗಳು ನಿರಂತರವಾಗಿ ವರದಿಯಾಗುತ್ತಲೇ ಇವೆ. ಅತ್ಯಾಚಾರಕ್ಕೂ, ಕೊಲೆಗಡುಕತನಕ್ಕೂ, ದೌರ್ಜನ್ಯಗಳಿಗೂ ವಯೋಮಿತಿ ಇಲ್ಲದಂತಹ ಒಂದು ವಿಷಮ ಪರಿಸ್ಥಿತಿಯಲ್ಲಿ ಭಾರತೀಯ ಸಮಾಜ ವೇಗದ ಗತಿಯಲ್ಲಿ ಸಾಗುತ್ತಿರುವುದಕ್ಕೆ ಈ ಮೂರು ಘಟನೆಗಳು ಒಂದು ನಿದರ್ಶನವಷ್ಟೆ.

ಇದು ಏಕಾಏಕಿ ಪ್ರಯೋಗಶಾಲೆಯಲ್ಲಿ ಉಗಮಿಸುವ ಲಕ್ಷಣಗಳಲ್ಲ. ಅಥವಾ ಬರೀ ಒಂದು ಸಮಾಜ ಅಥವಾ ಸಮುದಾಯದ ಒಳಗೆ ಹುಟ್ಟಿಕೊಳ್ಳುವ ಅವಲಕ್ಷಣಗಳೂ ಅಲ್ಲ. ನಮ್ಮ ಸಮಾಜ ಎಲ್ಲೋ ಎಡವುತ್ತಿದೆ, ತನ್ನ ಮಾನವೀಯ ಮೌಲ್ಯ ಒತ್ತಟ್ಟಿಗಿರಲಿ, ಮಾನವೀಯ ಸ್ಪರ್ಶವನ್ನೇ ಕಳೆದುಕೊಳ್ಳುತ್ತಿದೆ. ಇದು ಭವಿಷ್ಯದಲ್ಲಿ ಸಾಮಾಜಿಕ ಅಧಃಪತನಕ್ಕೆ ಕಾರಣವಾಗುತ್ತದೆ. ಈ ಅಪಾಯವನ್ನು ನೋಡುವವರಾರು? ಸಾಂಸ್ಥಿಕವಾಗಿ ಅಂತಹ ಒಂದು ಭೂಮಿಕೆಯನ್ನೇ ನಾವು ಸಿದ್ಧಪಡಿಸಿಲ್ಲ. ಆದರೆ, ಸಮಾಜ ಕುರುಡಾಗುವುದು ಸರಿಯಲ್ಲ. ಈ ಮನೋವೈಕಲ್ಯ, ದೌರ್ಜನ್ಯ, ಕ್ರೌರ್ಯಗಳಿಗೆ ಕಾರಣಗಳನ್ನು ಮನೋವೈಜ್ಞಾನಿಕ ಚೌಕಟ್ಟಿನಲ್ಲಿ ಪರಿಶೋಧಿಸಿ, ವಿಶ್ಲೇಷಿಸಿ, ವ್ಯಾಖ್ಯಾನಿಸಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸಬೇಕಿದೆ.


ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂದು ಸಿನಿಕರಾಗದೆ, ಈ ಜವಾಬ್ದಾರಿ ಯಾರದು ಎಂಬ ಆತ್ಮಾವಲೋಕನಕ್ಕೆ ಮುಂದಾಗುವುದು ಅನಿವಾರ್ಯ. ನಾಗರಿಕತೆಯ ಪ್ರತಿನಿಧಿಗಳಾಗಿ ಇದು ನಮ್ಮ ಕರ್ತವ್ಯ.

ಅಮೆರಿಕ ಮತ್ತು ಇಸ್ರೇಲ್ ಮೈತ್ರಿಕೂಟ ಇರಾನ್ ವಿರುದ್ಧ ಆರಂಭಿಸಿರುವ ಯುದ್ಧ ಇಡೀ ಜಗತ್ತನ್ನು ಆತಂಕಕ್ಕೆ ಸಿಲುಕಿಸಿದೆ. ಅದು ಸಹಜ. ಯುದ್ಧ ದೂರದಲ್ಲಿ ನಡೆದರೂ ಅದರ ಬಿಸಿ ನಮಗೂ ತಟ್ಟುತ್ತದೆ. ಆಂತರಿಕ ರಾಜಕೀಯ ಸಂಕಥನಗಳು ದಿಕ್ಕುತಪ್ಪಿರುವುದನ್ನೂ ಯುದ್ಧಕ್ಕೆ ಸಂಬಂಧಿಸಿದಷ್ಟೇ ಎಚ್ಚರ ಹಾಗೂ ಆತಂಕದಿಂದ ಗಮನಿಸಬೇಕು. ನೈತಿಕತೆಯ ಕಟ್ಟಡ ಒಳಗಿಂದೊಳಗೇ ಶಿಥಿಲಗೊಳ್ಳುವುದು ವ್ಯಕ್ತಿ ಹಾಗೂ ಸಮಷ್ಟಿಯ ಆರೋಗ್ಯಕ್ಕೆ ಒಳ್ಳೆಯದಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಯುದ್ಧ ಇಂಧನ ಸಂದಿಗ್ಧ





ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭವಾದಾಗ (ಫೆಬ್ರುವರಿ 28) ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಬಗ್ಗೆ ಮತ್ತು ತೈಲ ಬೆಲೆ ಏರಿಕೆಯಾಗುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಆತಂಕ ಉಂಟಾಗಿತ್ತು. ಆ ಆತಂಕ ಈಗ ನಿಜವಾಗಿದೆ. ಭಾರತದ ಮೇಲೆ ಯುದ್ಧ ಹಲವು ರೀತಿಯ ಪರಿಣಾಮಗಳನ್ನು ಬೀರುತ್ತಿದ್ದು, ಅಡುಗೆ ಮನೆಯವರೆಗೂ ಅದರ ಬಿಸಿ ತಟ್ಟಿದೆ. ಹೋಟೆಲ್ ಉದ್ಯಮದಲ್ಲಿ ಗೊಂದಲದ ಸ್ಥಿತಿ ಏರ್ಪಟ್ಟಿದೆ. ಯುದ್ಧ ಇನ್ನಷ್ಟು ದಿನ ಮುಂದುವರಿದರೆ, ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ

ಪ್ರಜಾವಾಣಿ ವಾರ್ತೆ

ಭಾರತವು ತನ್ನ ತೈಲ ಅಗತ್ಯದ ಶೇ 85ರಷ್ಟಕ್ಕೆ ಆಮದನ್ನೇ ಅವಲಂಬಿಸಿದೆ. ಅಮೆರಿಕ, ಪಶ್ಚಿಮ ಆಫ್ರಿಕಾ, ರಷ್ಯಾ ಮತ್ತು ಲ್ಯಾಟಿನ್ ಅಮೆರಿಕ ಸೇರಿದಂತೆ ಜಗತ್ತಿನ 40 ವಿವಿಧ ದೇಶಗಳಿಂದ ಭಾರತವು ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಅಮೆರಿಕ–ಇಸ್ರೇಲ್ ದೇಶಗಳು ಇರಾನ್ ಮೇಲೆ ಜಂಟಿ ದಾಳಿ ನಡೆಸಿದ ನಂತರ ತೈಲ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿದೆ. ಭಾರತದಲ್ಲಿಯೂ ಗೃಹಬಳಕೆಯ ಅಡುಗೆ ಅನಿಲದ ಬೆಲೆ ಹೆಚ್ಚಾಗಿದೆ. ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಗೆ ಅಡ್ಡಿ ಉಂಟಾಗಿದ್ದು, ಹೋಟೆಲ್‌ಗಳನ್ನು ಬಂದ್ ಮಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ.

ಇರಾನ್‌ನ ಕರಾವಳಿಯ ಭಾಗವಾಗಿರುವ ಹೊರ್ಮುಜ್ ಜಲಸಂಧಿಯ ಮೂಲಕವೇ ಭಾರತದ ಶೇ 40–ಶೇ 50ರಷ್ಟು ತೈಲ ಸಾಗಣೆ ನಡೆಯುತ್ತದೆ; ಜತೆಗೆ, ಶೇ 50–ಶೇ 60ರಷ್ಟು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ಶೇ 80–ಶೇ 85ರಷ್ಟು ಅಡುಗೆ ಅನಿಲ (ಎಲ್‌ಪಿಜಿ) ಕೂಡ ಇದೇ ಮಾರ್ಗದ ಮೂಲಕ ಭಾರತಕ್ಕೆ ತಲುಪುತ್ತಿತ್ತು.



ಹೊರ್ಮುಜ್ ಹೊಡೆತ: ಭಾರತಕ್ಕೆ ಹೊರ್ಮುಜ್ ಜಲಸಂಧಿ ಮೂಲಕ ಕುವೈತ್, ಸೌದಿ ಅರೇಬಿಯಾ, ಇರಾಕ್ ಮತ್ತು ಯುಎಇಗಳಿಂದ ಪ್ರತಿದಿನ 25 ಲಕ್ಷದಿಂದ 27 ಲಕ್ಷ ಬ್ಯಾರಲ್‌ಗಳಷ್ಟು ತೈಲ ಸರಬರಾಗುತ್ತಿತ್ತು. ಈಗ ಜಲಸಂಧಿ ಮೇಲೆ ಇರಾನ್ ಹಿಡಿತ ಸಾಧಿಸಿದೆ. ಕೊಲ್ಲಿ ರಾಷ್ಟ್ರಗಳು ಅಮೆರಿಕದ ಸೇನಾ ನೆಲೆಗಳಿಗೆ ಸ್ಥಳಾವಕಾಶ ಒದಗಿಸಿದ್ದು, ಇರಾನ್ ಅವುಗಳ ಮೇಲೆ ದಾಳಿ ನಡೆಸಿದೆ. ಹೀಗಾಗಿ ಹೊರ್ಮುಜ್ ಮೂಲಕ ಅಮೆರಿಕ ಮತ್ತು ಅರಬ್ ರಾಷ್ಟ್ರಗಳ ತೈಲ ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ. ಅದು ಈಗ ಭಾರತಕ್ಕೆ ಸಂಕಷ್ಟ ತಂದೊಡ್ಡಿದೆ.

ಭಾರತದಲ್ಲಿ ಪ್ರಸ್ತುತ ಕೆಲವು ವಾರಗಳಿಗೆ ಆಗುವಷ್ಟು ಮಾತ್ರ ಎಲ್‌ಪಿಜಿ ದಾಸ್ತಾನು ಇದೆ ಎನ್ನಲಾಗುತ್ತಿದೆ. ಗೃಹಬಳಕೆಯ ಎಲ್‌ಪಿಜಿ ಅನಿಲ ಪೂರೈಕೆ ಯಥಾಸ್ಥಿತಿಯಲ್ಲಿದ್ದರೂ, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಬಹುತೇಕ ಹೋಟೆಲ್‌ಗಳಲ್ಲಿ ಎರಡು ದಿನಗಳಿಗಾಗುವಷ್ಟು ಅಡುಗೆ ಅನಿಲ ಮಾತ್ರ ಲಭ್ಯವಿದ್ದು, ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಹೋಟೆಲ್‌ಗಳನ್ನು ಬಂದ್ ಮಾಡಬೇಕಾಗಬಹುದು ಎಂದು ಹೋಟೆಲ್ ಉದ್ಯಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಇದರಿಂದ ಹೋಟೆಲ್ ಉದ್ಯಮಕ್ಕೆ ಪೆಟ್ಟು ಬೀಳಲಿದೆ. ಜತೆಗೆ, ಊಟಕ್ಕಾಗಿ ಹೋಟೆಲ್‌ಗಳನ್ನೇ ನಂಬಿಕೊಂಡ ವಿದ್ಯಾರ್ಥಿಗಳು, ಉದ್ಯೋಗಿಗಳು ಮತ್ತಿತರರಿಗೆ ತೊಂದರೆಯಾಗಲಿದೆ. ಕೆಲವು ಹೋಟೆಲ್‌ಗಳು ವಿದ್ಯುತ್ ಸ್ಟೌನಂಥ ಪರ್ಯಾಯಗಳ ಮೊರೆ ಹೋಗಿದ್ದು, ಮೆನುವಿನಲ್ಲಿ ಬದಲಾವಣೆ ಮಾಡಿಕೊಂಡಿವೆ.

ಗೃಹಬಳಕೆಗೆ ಆದ್ಯತೆ: ದೇಶದಲ್ಲಿ ಗೃಹಬಳಕೆಯ ಅನಿಲ ಕೊರತೆ ಉಂಟಾಗಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಒಂದು ವರದಿಯ ಪ್ರಕಾರ, ದೇಶದಲ್ಲಿ ಒಟ್ಟು 33 ಕೋಟಿಗೂ ಹೆಚ್ಚು ಎಲ್‌ಪಿಜಿ ಗ್ರಾಹಕರಿದ್ದಾರೆ. ಪ್ರಸ್ತುತ, ಲಭ್ಯವಿರುವ ದಾಸ್ತಾನಿನಲ್ಲಿ ಅಡುಗೆ ಅನಿಲ ಪೂರೈಕೆಗೆ ಮೊದಲ ಪ್ರಾಶಸ್ತ್ಯ ನೀಡಲಾಗಿದೆ. ರಸಗೊಬ್ಬರ ವಲಯಕ್ಕೆ ಎರಡನೆಯ, ಟೀ ಪ್ಲಾಂಟೇಷನ್ಸ್, ಉತ್ಪಾದನಾ ವಲಯ ಮತ್ತು ಉದ್ಯಮ ವಲಯಕ್ಕೆ ಮೂರನೇ ಪ್ರಾಶಸ್ತ್ಯವನ್ನು ನೀಡಲಾಗಿದೆ. ಆದರೆ, ಅಡುಗೆ ಅನಿಲದ ಬೆಲೆಯನ್ನು ಹೆಚ್ಚಳ ಮಾಡಲಾಗಿದೆ. ಜತೆಗೆ, ಅನಿಲ ಪೂರೈಕೆಯ ನಿಯಮಗಳನ್ನು ಬಿಗಿಗೊಳಿಸಲಾಗಿದೆ. ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸುವಂತೆ ತೈಲ ಸಂಸ್ಕರಣಾ ಕಂಪನಿಗಳಿಗೆ ಕೇಂದ್ರವು ಸೂಚಿಸಿದೆ. ಇನ್ನೊಂದೆಡೆ, ಅಮೆರಿಕ, ಅಲ್ಜೀರಿಯಾ, ನಾರ್ವೆ, ಕೆನಡಾದಂತ ಹಲವು ದೇಶಗಳಿಂದ ಎಲ್‌ಪಿಜಿ ಆಮದಿನ ಸಾಧ್ಯತೆಗಳನ್ನು ಭಾರತವು ಪರಿಶೀಲಿಸುತ್ತಿದೆ. ಕೆಲವು ದೇಶಗಳ ಜತೆಗೆ ಒಪ್ಪಂದಗಳನ್ನೂ ಮಾಡಿಕೊಂಡಿದೆ. ಆದರೆ, ವಿವಿಧ ಕಾರಣಗಳಿಂದ ಸರಬರಾಜು ತಡವಾಗುತ್ತಿದೆ ಎಂದು ಅಧಿಕಾರಿಗಳ ಮೂಲವನ್ನು ಉಲ್ಲೇಖಿಸಿ ಕೆಲವು ಮಾಧ್ಯಮಗಳು ವರದಿ ಮಾಡಿವೆ.


ಪ್ರಸ್ತುತ ದೇಶದಲ್ಲಿ ಹಣದುಬ್ಬರ ಶೇ 2.75ರಷ್ಟಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಬ್ಯಾರಲ್‌ಗೆ 10 ಡಾಲರ್ ಹೆಚ್ಚಾದರೂ, ಹಣದುಬ್ಬರ ಶೇ 0.2–ಶೇ 0.25ರಷ್ಟು ಹೆಚ್ಚಾಗುತ್ತದೆ. ಜನರ ಮೇಲೆ ಹೊರೆ ಹೊರಿಸಬಾರದು ಎಂದರೆ, ಇಂಧನದ ಮೇಲಿನ ತೆರಿಗೆ ಇಳಿಸಬೇಕು. ಹಾಗೆ ತೆರಿಗೆ ಇಳಿಸಿದರೆ, ಸರ್ಕಾರದ ಆದಾಯದಲ್ಲಿ ಖೋತಾ ಆಗುತ್ತದೆ. ಯುದ್ಧ ಮುಂದುವರಿದಿದ್ದೇ ಆದರೆ, ಕೇಂದ್ರ ಸರ್ಕಾರ ಇನ್ನಷ್ಟು ಸಂದಿಗ್ಧಕ್ಕೆ ಸಿಲುಕಲಿದೆ.

ರಷ್ಯಾದಿಂದ ತೈಲ: ತಾತ್ಕಾಲಿಕ ಪರಿಹಾರ

ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿದೆ ಎಂದು ಭಾರತದ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಿತ್ತು. ನಂತರ ರಷ್ಯಾದಿಂದ ತೈಲ ಖರೀದಿ ಕಡಿಮೆ ಮಾಡಿದ್ದಾಗಿ ಭಾರತ ಹೇಳಿದೆ ಎಂದು ಅಮೆರಿಕ ಪ್ರತಿಪಾದಿಸಿತ್ತು. ಇದೀಗ ಯುದ್ಧದಿಂದಾಗಿ ಭಾರತಕ್ಕೆ ರಷ್ಯಾ ತೈಲ ಖರೀದಿಸಲು ಒಂದು ತಿಂಗಳ ಮಟ್ಟಿಗೆ ಅನುಮತಿ ನೀಡಿರುವುದಾಗಿ ಅಮೆರಿಕ ಹೇಳಿದೆ. ಈಗಾಗಲೇ ಸಾಗಣೆ ಹಂತದಲ್ಲಿರುವ ರಷ್ಯಾ ತೈಲವನ್ನು ಖರೀದಿಸಲು ಭಾರತಕ್ಕೆ ಅನುಮತಿ ನೀಡಿದ್ದೇವೆ ಎಂದು ಅದು ತಿಳಿಸಿದೆ. ಪ್ರಸ್ತುತ 14.5 ಕೋಟಿ ಬ್ಯಾರಲ್‌ಗಳಷ್ಟು ತೈಲವು ಸಮುದ್ರದಲ್ಲಿರುವ ಹಡಗುಗಳಲ್ಲಿದ್ದು, ಅವುಗಳನ್ನು ಭಾರತದತ್ತ ತಿರುಗಿಸುವ ಸಂಭವ ಇದೆ. ಭಾರತದ ಒಟ್ಟು ತೈಲ ಅಗತ್ಯದಲ್ಲಿ ಶೇ 20ರಷ್ಟನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಆದರೆ, ಇದೊಂದು ತಾತ್ಕಾಲಿಕ ಕ್ರಮವಾಗಿದ್ದು, ಇದು ಭಾರತದ ತೈಲ ಕೊರತೆಯ ಬಿಕ್ಕಟ್ಟನ್ನು ಶಮನ ಮಾಡಲಾರದು ಎನ್ನುವ ವಿಶ್ಲೇಷಣೆ ಇದೆ.

ದೇಶದಲ್ಲಿ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್ ಬಳಕೆ

(ಕೋಟಿ ಟನ್‌ಗಳಲ್ಲಿ)



ಇರಾನ್ ಅತೃಪ್ತಿ

ಅರಬ್ ರಾಷ್ಟ್ರಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಖಂಡಿಸಿದ್ದರು. ಆದರೆ, ಆಯತೊಲ್ಲಾ ಖಮೇನಿ ಅವರ ಸಾವಿನ ಬಗ್ಗೆ ಪ್ರಧಾನಿ ಮೌನವಹಿಸಿದರು. ಕೊನೆಗೆ, ಹಲವು ದಿನಗಳ ನಂತರ ವಿದೇಶಾಂಗ ಕಾರ್ಯದರ್ಶಿ ಇರಾನ್ ರಾಯಭಾರಿ ಕಚೇರಿಯ ಪುಸ್ತಕದಲ್ಲಿ ಸಂತಾಪ ಸಂದೇಶವನ್ನು ದಾಖಲಿಸಿದ್ದರು. ಇರಾನ್ ಮೇಲಿನ ಅಮೆರಿಕ–ಇಸ್ರೇಲ್ ದಾಳಿಯನ್ನು ಭಾರತ ಸ್ಪಷ್ಟವಾಗಿ ಖಂಡಿಸಿಲ್ಲ ಎನ್ನುವ ಅಸಮಾಧಾನವೂ ಇರಾನ್‌ಗೆ ಇದೆ ಎನ್ನಲಾಗುತ್ತಿದೆ.



ಭಾರತದ ಇಂಧನ ಆಮದು, ಬಳಕೆಯ ನೋಟ

- ರಷ್ಯಾ, ಸೌದಿ ಅರೇಬಿಯಾ, ಯುಎಇ, ಇರಾಕ್, ಕತಾರ್ ಸೇರಿದಂತೆ ಮೊದಲು **27** ದೇಶಗಳಿಂದ ಖರೀದಿಸಲಾಗುತ್ತಿತ್ತು, ಈಗ ಈ ಸಂಖ್ಯೆಯನ್ನು **40** ದೇಶಗಳಿಗೆ ಹೆಚ್ಚಿಸಲಾಗಿದೆ
- ಅಂದಾಜಿನ ಪ್ರಕಾರ, ದಿನವೊಂದಕ್ಕೆ **50** ಲಕ್ಷ ಬ್ಯಾರಲ್ ತೈಲವನ್ನು ಬಳಸುತ್ತದೆ
- ಸದ್ಯ ದೇಶದಲ್ಲಿ **4,000** ಕೋಟಿ ಲೀಟರ್‌ಗಳಷ್ಟು ತೈಲ ಲಭ್ಯವಿದೆ
- ತುರ್ತು ಅವಶ್ಯಕತೆಗೆ ಬಳಸಲು ನಿರ್ಮಿಸಲಾಗಿರುವ ತೈಲ ಸಂಗ್ರಹಾಗಾರಗಳಲ್ಲಿ **53.3** ಲಕ್ಷ ಟನ್‌ಗಳಷ್ಟು ತೈಲ ಇದೆ
- ದೇಶದಾದ್ಯಂತ **33** ಕೋಟಿಯಷ್ಟು ಎಲ್‌ಪಿಜಿ (ಅಡುಗೆ ಅನಿಲ) ಬಳಕೆದಾರರಿದ್ದಾರೆ. ವರ್ಷದ ಎಲ್‌ಪಿಜಿ ಬಳಕೆ **3** ಲಕ್ಷ ಟನ್‌ಗಳಷ್ಟಿದೆ
- ದೇಶವು ವಾರ್ಷಿಕವಾಗಿ **5.4** ಕೋಟಿ ಟನ್‌ಗಳಷ್ಟು ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಬಳಸುತ್ತದೆ
- ಅಗತ್ಯವಿರುವ ಎಲ್‌ಎನ್‌ಜಿಯಲ್ಲಿ ಅರ್ಧದಷ್ಟು ದೇಶದಲ್ಲಿ ಉತ್ಪಾದನೆಯಾಗುತ್ತಿದ್ದರೆ, ಉಳಿದ ಅರ್ಧವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ
- ವರ್ಷಕ್ಕೆ ಸರಾಸರಿ **2.5** ಕೋಟಿ ಟನ್‌ಗಳಷ್ಟು ಅನಿಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಎಲ್‌ಎನ್‌ಜಿಯನ್ನು ಅತಿ ಹೆಚ್ಚು ಆಮದು ಮಾಡಿಕೊಳ್ಳುತ್ತಿರುವ ಜಗತ್ತಿನ ನಾಲ್ಕನೇ ರಾಷ್ಟ್ರ ಭಾರತ
- ಕತಾರ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಂಡರೆ, ಅಮೆರಿಕ, ಆಸ್ಟ್ರೇಲಿಯಾ, ರಷ್ಯಾ ಕೂಡ ನೈಸರ್ಗಿಕ ಅನಿಲವನ್ನು ಪೂರೈಸುತ್ತವೆ

ಯುದ್ಧ ಮುಂದುವರಿದರೆ ಏನಾಗುತ್ತದೆ?

- ತೈಲದ ದರ ಏರಬಹುದು
- ಪರಿಣಾಮ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್, ಇತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಾಗಬಹುದು
- ಬೇಡಿಕೆ, ಪೂರೈಕೆಯಲ್ಲಿ ವ್ಯತ್ಯಯವಾಗಿ ಎಲ್‌ಪಿಜಿ, ಡೀಸೆಲ್, ಪೆಟ್ರೋಲ್ ಕೊರತೆ ಉಂಟಾಗಬಹುದು
- ಹಣದುಬ್ಬರ ಜಾಸ್ತಿಯಾಗಿ, ಗ್ರಾಹಕರ ಜೇಬಿಗೆ ಹೊರೆಯಾಗಬಹುದು
- ಅಗತ್ಯ ವಸ್ತುಗಳ ದರ ಜಾಸ್ತಿಯಾಗುವುದರಿಂದ ಜನ ಜೀವನಕ್ಕೆ ತೊಂದರೆಯಾಗಬಹುದು

ಪಶ್ಚಿಮ ಏಷ್ಯಾದೊಂದಿಗೆ ಸಂಬಂಧ

ಪಶ್ಚಿಮ ಏಷ್ಯಾ ಹಲವು ರೀತಿಗಳಿಂದ ಭಾರತಕ್ಕೆ ಮುಖ್ಯವಾಗಿದೆ. ಭಾರತದ ಶೇ 17ರಷ್ಟು ರಫ್ತುಗಳು ಈ ದೇಶಗಳಿಗೆ ಹೋಗುತ್ತವೆ. ಈ ದೇಶಗಳಿಂದ ಶೇ 55ರಷ್ಟು ತೈಲವನ್ನು ಭಾರತ ಆಮದು ಮಾಡಿಕೊಳ್ಳುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಭಾರತದ ಸುಮಾರು ಒಂದು ಕೋಟಿ ಮಂದಿ ಪಶ್ಚಿಮ ಏಷ್ಯಾದ ರಾಷ್ಟ್ರಗಳಲ್ಲಿ ಉದ್ಯೋಗನಿರತರಾಗಿದ್ದಾರೆ. ವಿದೇಶಗಳಲ್ಲಿರುವ ಭಾರತೀಯ ಉದ್ಯೋಗಿಗಳು ತಮ್ಮ ಕುಟುಂಬಗಳಿಗೆ ಸಂದಾಯ ಮಾಡುವ ಒಟ್ಟು ಮೊತ್ತದಲ್ಲಿ ಶೇ 38ರಷ್ಟು ಪಶ್ಚಿಮ ಏಷ್ಯಾದ ರಾಷ್ಟ್ರಗಳಿಂದಲೇ ಬರುತ್ತದೆ. ಈ ದಿಸೆಯಲ್ಲಿ ಭಾರತವು ಅಮೆರಿಕ, ಇರಾನ್ ಮತ್ತು ಕೊಲ್ಲಿ ರಾಷ್ಟ್ರಗಳೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಾಯ್ದುಕೊಳ್ಳಲು ಪ್ರಯಾಸ ಪಡುವಂತಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಅವರದ್ದು ಎನ್ನಲಾದ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಹಿಂದೂ ಮಹಾಸಾಗರದಲ್ಲಿ ಇರಾನ್‌ನ ಯುದ್ಧ ನೌಕೆಯು ಇದ್ದ ಸ್ಥಳದ ಬಗ್ಗೆ ಇಸ್ರೇಲ್‌ಗೆ ಮಾಹಿತಿ ನೀಡುವ ಮೂಲಕ ಭಾರತವು ಇರಾನ್‌ಗೆ ನಂಬಿಕೆ ದ್ರೋಹ ಎಸಗಿದೆ ಎಂಬುದನ್ನು ಸೇನಾ ಮುಖ್ಯಸ್ಥರು ಒಪ್ಪಿಕೊಂಡಿದ್ದಾರೆ' ಎಂದು ಬಳಕೆದಾರರು ತಮ್ಮ ಪೋಸ್ಟ್‌ನಲ್ಲಿ ಪ್ರತಿಪಾದಿಸಿದ್ದಾರೆ. ಆದರೆ, ಇದು ಸುಳ್ಳು ಮಾಹಿತಿ.



ವಿಡಿಯೊವನ್ನು ಗಮನವಿಟ್ಟು ನೋಡಿದಾಗ ಅದರಲ್ಲಿ ಮಾಧ್ಯಮ ಸಂಸ್ಥೆ ಫಸ್ಟ್‌ಪೋಸ್ಟ್‌ನ ಲೋಗೊ ಇರುವುದರ ಜೊತೆಗೆ 'ರೈಸಿನಾ ಡೈಲಾಗ್–2026' ಎಂದು ಬರೆದಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ ಫಸ್ಟ್‌ಪೋಸ್ಟ್‌ನ ಯುಟ್ಯೂಬ್ ಚಾನೆಲ್‌ನಲ್ಲಿ ಮಾರ್ಚ್ 7ರಂದು ಅಪ್‌ಲೋಡ್ ಮಾಡಲಾದ ವಿಡಿಯೊ ಸಿಕ್ಕಿತು. ಅದರಲ್ಲಿ ಸೇನಾ ಮುಖ್ಯಸ್ಥರು ಆಪರೇಷನ್ ಸಿಂಧೂರ, ಪಾಕಿಸ್ತಾನ ಮತ್ತು ಭವಿಷ್ಯದ ಯುದ್ಧಗಳ ಬಗ್ಗೆ ಮಾತನಾಡಿದ್ದರು. 21 ನಿಮಿಷದ ಈ ವಿಡಿಯೊದಲ್ಲಿ ಅವರೆಲ್ಲೂ ಅಮೆರಿಕ–ಇಸ್ರೇಲ್–ಇರಾನ್ ಘರ್ಷಣೆಯ ಬಗ್ಗೆ ಮಾತನಾಡಿರಲಿಲ್ಲ. ಈ ವಿಡಿಯೊದಿಂದ ತುಣುಕೊಂದನ್ನು ತೆಗೆದುಕೊಂಡು ಅದನ್ನು ತಿರುಚಿರುವ ಅನುಮಾನ ಬಂತು. ದೃಢಪಡಿಸುವುದಕ್ಕಾಗಿ ಎಐ ಪತ್ತೆ ಟೂಲ್ 'ಹೈವ್ ಮಾಡರೇಷನ್' ಮೂಲಕ ವಿಡಿಯೊವನ್ನು ಪರಿಶೀಲಿಸಿದಾಗ ಅದರಲ್ಲಿರುವ ಧ್ವನಿ ಎಐ ಮೂಲಕ ಸೃಷ್ಟಿಸಿದ್ದು ಎಂಬುದು ಖಚಿತವಾಯಿತು. ಮಾರ್ಚ್ 9ರಂದು ಪಿಐಬಿ ಕೂಡ ಈ ಬಗ್ಗೆ ಫ್ಯಾಕ್ಟ್ ಚೆಕ್ ಮಾಡಿ ಇದು ಸುಳ್ಳು ಎಂದು ಹೇಳಿತ್ತು ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6340


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಈತ ನೈಪುಣ್ಯವುಳ್ಳವನು (4)
3. ನಿರಂತರ ಎಂದು ಹೇಗಿನ್ನು (4)
5. ಗುಣವನ್ನು ಹೇಳುವುದು (5)
7. ತಲೆ ಇಲ್ಲಿ ಕಾಣುತ್ತಿದೆ (3)
9. ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
11. ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
13. ಈತ ವಿವೇಕಶಾಲಿ (5)
15. ಗೌರವಕ್ಕೆ ಪಾತ್ರನಾದವನು (4)
16. ಅದೇ ತಾನೇ ಅರಳಿದ ಹೂ (4)

ಮೇಲಿಂದ ಕೆಳಕ್ಕೆ

1. ಈತ ದಿಕ್ಕಿಲ್ಲದವನು (4)
2. ಒಣಗಿದ ವಸ್ತು (3)
4. ಅನೆಯ ದಾಡೆ (3)
6. ಕಣದಲ್ಲಿ ಆಗಿರುವ ಮದುವೆ (3)
8. ಕಿರಣ ಇಲ್ಲಿ ಕಾಣುತ್ತಿದೆ (2)
9. ಮರದ ಬಳಿಯಿರುವವ ತೋರಿದ ಹೊಟ್ಟೆಕಿಚ್ಚು (3)
10. ನಕ್ಷತ್ರದಲ್ಲಿ ಉಲ್ಲಾ ಕಾಣುತ್ತಿದೆಯಲ್ಲಾ? (2)
12. ಸ್ವರ್ಗ ಇಲ್ಲಿಯೇ ಇದೆ (4)
13. ಗ್ರಹದ ಮೂಡಿಗೆಯಿದು! (3)
14. ಒಂದೇ ವಿಷಯದಲ್ಲಿ ಅಸಕ್ತನಾಗಿರುವವನು (3)



6339ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾಕ್ರಮಿ 3.ಸುಭಾಷಿತ 5.ನರ್ತನ 6.ತರ 8.ನರಿ 9.ಏಣ 10.ಖಡ್ಗ 12.ವಿರಸ 14.ರಸವಾದ 15.ಪರದಾಟ

ಮೇಲಿಂದ ಕೆಳಕ್ಕೆ: 1.ಪರಿಮಿತ 2.ಮಿಥುನ 3.ಸುಮ್ಮಾನ 4.ತರಣಿ 7.ರಮಣ 8.ನರಳು 9.ಏದಿವಾರ 11.ಹದುಗಾಟ 12.ವಿನೋದ 13.ಸಲ್ಲಾಪ

ಸುಡೊಕು 6724

ಆಡುವುದು ಹೇಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿನಲ್ಲಿ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4			5		7		2
			6		7		8	
		7		3		6		9
	6			1				7
7		9	5		3		1	
	8			9		3		5
	7		3		1			
5		6		2			7	3
	3		9		5			8

6723 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ನುಡಿ ಬೆಳಗು



ವಾಸುದೇವ ನಾಡಿಗ್

ಇದೆ ಅಥವಾ ಇಲ್ಲ

ಹೀಗೊಂದು ಸಂವಾದ ನಡೆಯುತ್ತಿತ್ತು:
**ಚಳಿ ಇದೆಯೇ? ಇದೆ, ಇಲ್ಲ
ಬಿಸಿಲು ಇದೆಯೇ? ಇದೆ, ಇಲ್ಲ
ಕತ್ತಲು ಇದೆಯೇ? ಇಲ್ಲ, ಇದೆ
ನೋವಿದೆಯೇ? ಇಲ್ಲ, ಇದೆ
ಇದೆ ಮತ್ತು ಇಲ್ಲದರ ಮಧ್ಯೆ**

ಇದೆ ಅನ್ನುವುದು, ಇಲ್ಲ ಅನ್ನುವುದು ಕೂಡಾ ಒಂದು ಮನೋಭಾವ ಎಂದು ರೂಪಿಸಲು ಗುರು ಶಿಷ್ಯರ ಮಧ್ಯೆ ನಡೆದ ಈ ಪ್ರಶ್ನೆ ಉತ್ತರ ಸರಣಿಯಲ್ಲಿ ಅನೇಕ ವಿಲೋಮಗಳನ್ನು ಉದಾಹರಿಸಲಾಗುತ್ತದೆ. ಇದೆ ಮತ್ತು ಇಲ್ಲ ಎಂಬ ಎರಡು ಪರಿಭಾಷೆಗಳ ನಡುವೆ ಬಾಳೇ ಸಾರವನ್ನೇ ಆ ಗುರು ರೂಪಿಸಿಬಿಡುತ್ತಾನೆ. ಆಗುವುದು ಮತ್ತು ಆಗದೇ ಇರುವುದು ಕೂಡ ಮತ್ತು ಅದನ್ನು ಸ್ವೀಕರಿಸುವ ಕ್ರಮದ ಬಗ್ಗೆಯೇ ಸಂವಾದ ನಡೆಯುತ್ತದೆ. ಯಾವುದಾದರೂ ಒಂದು ಸಂಗತಿ ಇದೆ ಎಂದರೆ, ಅದು ಇನ್ನೊಂದರ ಗೈರು ಎಂದರ್ಥ.

ಚಳಿ ಇದೆ ಅಂದರೆ, ಅದು ಇದೆ, ಬಿಸಿಲು ಇಲ್ಲ ಎಂದರ್ಥ. ಬಿಸಿಲಿನ ಗೈರು, ಹಾಗಾಗಿ ಚಳಿ ಇದೆ. ಚಳಿ ಈ ಮೊದಲೂ ಇತ್ತು. ಆದರೆ, ಬಿಸಿಲಿನ ಆಗಮನದಿಂದ ಅದು ಇಲ್ಲ ಅಷ್ಟೇ. ಹಾಗಾಗಿ ಅದು ಇದೆ. ಕತ್ತಲು ಕೂಡ ಇದೆ. ಅದು ಬೆಳಕಿನ ಗೈರು ಅಷ್ಟೇ. ಕತ್ತಲು ಇಲ್ಲ. ಯಾಕೆಂದರೆ, ಅಲ್ಲಿ ಬೆಳಕಿನ ಆಗಮನ ಇದೆ. ಇನ್ನು ನೋವು? ಅದು ಇಲ್ಲ ಮತ್ತು ಇದೆ. ಇದೆ ಎಂದರೆ ನಲಿವಿನ ಗೈರು. ಇಲ್ಲ ಎಂದರೆ ಅಲ್ಲಿ ನಲಿವು ಮನೆ ಮಾಡಿದೆ ಎಂದರ್ಥ.

ಇನ್ನು ಹೀಗೇ ನೋಡಿ. ಒಂದು ಇದ್ದರೆ ಇನ್ನೊಂದು ಇಲ್ಲ. ಕತ್ತಲು ಈ ಮೊದಲೂ ಇತ್ತು. ಆದರೆ ಅನುಭವಕ್ಕೆ ಬರಲಿಲ್ಲ. ಬೆಳಕು ಇನ್ನೂ ಇದ್ದಾಗ ಅಲ್ಲಿ ಕತ್ತಲು ಆವರಿಸುತ್ತದೆ. ಭೂಮಿಯ ಚಲನೆಯ ನಿರಂತರ ಸುಗಣಿ ನೋಡಿ... ಅದು ತನ್ನ ತಾನು ಸುತ್ತು ಹಾಕಿದಾಗ ಅಲ್ಲಿ ಬೆಳಕಿದ್ದಾಗ ಇಲ್ಲಿ ಕತ್ತಲು. ಅಲ್ಲಿ ಉದಯ ಇಲ್ಲಿ ಅಸ್ತಮಾನ. ಅಲ್ಲೋ ಕಂಬನಿ ಇನ್ನೆಲ್ಲೋ ಹಬ್ಬ. ಡಿವಿಜಿ ಅವರು ಹೇಳಿದ ಹಾಗೆ ಮದುವೆ ಮಸಣ ಒಂದೊಂದು ಒಂದು ಕಡೆ ಹಾಜರಿರುತ್ತದೆ. ಅಲ್ಲಿ ಮೌನ ಇಲ್ಲಿ ಬಿರುಮಾತು. ಸುಖ ಎಂಬುದು ಇಲ್ಲ ಅಂತ ಅಂದಾಗ ಅದು ಕಾಯುವಿಕೆ ಇಲ್ಲ ಅಂತಲ್ಲ. ದುಃಖದ ಭರಾಟೆಯಲ್ಲಿ ಅದು ತಾತ್ಕಾಲಿಕ ಅನುಪಸ್ಥಿತಿ.

ಇದೇ ಊರಿನ ಜನರಲ್ಲಿ ಮಳೆ ಇರದ ಕಂಗಾಲಾಗಿ ಮುಗಿಲನ್ನು ನೋಡುತ್ತಾ ಕಣ್ಣೀರು ಸುರಿಸುತ್ತಿದ್ದರೆ, ಪುಟ್ಟ ಬಾಲಕನೊಬ್ಬ ಕೊಡೆ ಹಿಡಿದು ಕೂತಿರುತ್ತಾನೆ. ನೆಂಟರ ಮನೆಗೋ ಸ್ನೇಹಿತರ ಮನೆಗೋ ಹೋದಾಗ ಆಫರ್ ಕಪ್ ಚಹಾ ಕೊಟ್ಟಾಗ 'ಆಯ್ಯೋ ಆಫರ್ ಕಪ್?' ಅಂತ ಮೂಗು ಮುರಿಯುವವರು ಮತ್ತು 'ಓಹ್ ಆಫರ್ ಕಪ್' ಎಂದು ಪುಳಕಗೊಳ್ಳುವವರ ಮನಸ್ಥಿತಿ ನೆನಪಾಗುತ್ತದೆ.

ಪಾತ್ರೆ ಅಂಟಿಕೊಂಡ ಒಂದೇ ಒಂದು ಅಗುಳನ್ನು ಮಧ್ಯ ಹೊಟ್ಟೆ ತುಂಬಿದ ಡಾಗರ್ ಎಂದು ತೇಗಿ ತೃಪ್ತಿ ಪಡುವ ಕೃಷ್ಣನ ನೆಲದ ಮನೋಭಾವ ನಮ್ಮನ್ನು ಜೀವಂತ ಇರಿಸಿದ್ದಲ್ಲವ. ಈ ಮೇಲಿನ ಸಂವಾದ ಮುಕ್ತಾಯವಾಗುವ ಬಗೆಯೂ ಬಹಳ ಮಾರ್ಮಿಕ. ಕೆಡುಕು ಇದೆಯೇ? ಇದೆ, ಇಲ್ಲ. ಅದು ಒಳಿತಿನ ತಾತ್ಕಾಲಿಕ ಗೈರು. ಕೆಡುಕು ಕರಗುತ್ತದೆ, ಕಾಯಬೇಕು.

ದಿನ ಭವಿಷ್ಯ

ವಿದ್ವಾಂಶಂಕರ ಸೋಮಯಾಜಿ, ಕಮ್ಮರಡಿ

11 ಮಾರ್ಚ್ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು. ತಿಥಿ: ಫಾಲ್ಗುಣ ಕೃಷ್ಣ ಅಷ್ಟಮಿ ಗ. 28-20, ನಕ್ಷತ್ರ: ಜ್ಯೇಷ್ಠ ಗ. 22-00, ಯೋಗ: ವಜ್ರ ಗ. 9-12, ಕರಣ: ಬಾಲವ ಗ. 15-09 ಕುಂಭ ಮಾಸದ 27 ನೇ ದಿನ. ಮಳೆ ನಕ್ಷತ್ರ: ಪೂರ್ವಾಭಾದ್ರ 2 ನೇ ಪಾದ. ರಾಹುಕಾಲ: ಮಧ್ಯಾಹ್ನ 12-00-01-30, ಸೂರ್ಯೋದಯ: 06-44, ಸೂರ್ಯಾಸ್ತ: 06-37, ಮುಸ್ಲಿಂ ದಿನಾಂಕ: 21 ರಂಜಾನ್, ಅದೃಷ್ಟ ಸಂಖ್ಯೆ: 9, 11.

ಮೇಷ: ಮುಂಜಾನೆಯಿಂದಲೇ ಉತ್ಸಾಹಿಗಳಾಗಿರುತ್ತೀರಿ. ರಕ್ಷಣಾ ವಿಭಾಗದಲ್ಲಿ ಕಾರ್ಯನಿರ್ವಹಿಸುವವರು ಈ ದಿನ ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಉತ್ತಮ.

ವೃಷಭ: ಹೊಸ ಕೆಲಸಕ್ಕೆ ಕೈ ಹಾಕಲಿಚ್ಛಿಸುವ ನೀವು ಮೊದಲು ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಬೇಕಾಗುವ ಎಲ್ಲಾ ಕಾರ್ಯಗಳನ್ನು ಪ್ರಾರಂಭಿಸಿ. ನಿಜವಾದ ಗೆಳೆಯ ಯಾರೆಂದು ಈ ದಿನ ಅರಿತುಕೊಳ್ಳುವಿರಿ.

ಮಿಥುನ: ಹಿರಿಯರ ಸಲಹೆಗಳನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ಮಕ್ಕಳೊಂದಿಗೆ ಸುಖ ಭೋಜನ ನಡೆಯುವುದು. ಆಪಾದನೆಗಳು ಬರುವ ಸಾಧ್ಯತೆಗಳಿವೆ.

ಕರ್ಕಾಟಕ: ಮೇಲಾಧಿಕಾರಿಗಳ ಒತ್ತಾಯದ ಕೆಲಸಗಳಿಗೆ ಸಮರ್ಪಕ ಉತ್ತರ ನೀಡುವಿರಿ. ಸ್ವಂತ ಉದ್ಯೋಗ ನಡೆಸುವವರು ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಗಮನಹರಿಸಿ.

ಸಿಂಹ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ. ವಿದೇಶದಲ್ಲಿ ಉದ್ಯೋಗ ಪಡೆಯುವ ನಿಮ್ಮ ಪ್ರಯತ್ನಕ್ಕೆ ಜಯ ಸಿಗಲಿದೆ.

ಕನ್ಯಾ: ಕೆಲಸ ಕಾರ್ಯಗಳು ವಿಳಂಬಗತಿಯಲ್ಲಿ ಸಾಗಿದರೂ ದಿನಾಂತ್ಯದಲ್ಲಿ ಪೂರ್ಣಗೊಳ್ಳಲಿವೆ. ಸರ್ಕಾರಿ ಉದ್ಯೋಗಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ನಿಮ್ಮ ಪರಿಪೂರ್ಣ ಪ್ರಯತ್ನವನ್ನು ಹಾಕುವುದು ಅಗತ್ಯ.

ತುಲಾ: ಮದುವೆಯ ವಿಷಯದಲ್ಲಿ ಹಿರಿಯರಿಗೆ ನಿಮ್ಮ ನಿರ್ಧಾರವನ್ನು ಸ್ಪಷ್ಟವಾಗಿ ತಿಳಿಸಿ. ದುಷ್ಟ ಸ್ವಗಳ ದುಷ್ಪಲವನ್ನು ಅನುಭವಿಸುತ್ತಿರುವ ನೀವು ಈ ದಿನ ಪಶ್ಚಾತ್ತಾಪದಿಂದ ಸ್ವಲ್ಪ ಮಟ್ಟಿನ ಚೇತರಿಕೆ ಕಾಣುವಿರಿ.

ವೃಶ್ಚಿಕ: ಆಡಚಣೆಯಲ್ಲಿದ್ದ ಮನೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವಿರಿ. ರಾಜಕೀಯ ವರ್ಗದವರಿಗೆ ಹೆಚ್ಚಿನ ಸ್ಥಾನಮಾನ ಸಿಗಲಿದೆ. ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ಈ ದಿನ ತಿಳಿಯುವುದು.

ಧನು: ಸಹೋದರರೊಡನೆ ಪೂರ್ವಜರ ಆಸ್ತಿಯ ವಿಷಯದಲ್ಲಿ ವಿಷಮತೆ ತಲೆದೋರಬಹುದು. ಅಂತರ್ಜಾಲ ಕುರಿತಾಗಿ ಕೆಲಸವನ್ನು ಮಾಡುವವರಿಗೆ ಪದೇ ಪದೇ ತಪ್ಪುಗಳು ಸಂಭವಿಸಬಹುದು. ಸಹೋದರ ಸಹಾಯವನ್ನು ಪಡೆಯುವಿರಿ.

ಮಕರ: ವ್ಯಾಪಾರದ ಅಭಿವೃದ್ಧಿಗೆ ಬೇಕಾದ ಆರ್ಥಿಕ ಬಲದ ಜೊತೆಯಲ್ಲಿ ಕೆಲವು ವ್ಯಾಪಾರದ ಉಪಾಯಗಳನ್ನು ಬಳಸುವುದು ಉತ್ತಮ. ಮಕ್ಕಳ ದಾಂಪತ್ಯದಲ್ಲಿ ಅಸಮಾಧಾನ ಉಂಟಾಗಬಹುದು.


ಕುಂಭ: ಸ್ನೇಹಿತರೊಡನೆ ಕಾರ್ಯಕ್ಕೆ ಪೂಜಾ ಪಾಲನೆ ದೊರೆತು ಸಂತಸ ಹೊಂದುವಿರಿ. ಕಠಿಣ ಪರಿಶ್ರಮದ ಮೂಲಕ ಸಹೋದ್ಯೋಗಿಗಳ ಮನಗೆಲ್ಲಲು ಪ್ರಯತ್ನಿಸಿ. ಸಂಕೋಚರ ಸ್ವಭಾವವನ್ನು ಬಿಡಿ.

ಮೀನ: ಆರಕ್ಷಕ ವರ್ಗದವರಿಗೆ ಅಧಿಕಾರ ಪಡೆಯುವರಿಗೆ ಕಾರ್ಯ ದೊತ್ತಡ ಹೆಚ್ಚಲಿದೆ ಹಾಗೂ ವೃತ್ತಿಯಲ್ಲಿ ನಿಮ್ಮಿಂದ ತಪ್ಪುಗಳು ಸಂಭವಿಸಬಹುದು ಜಾಗರೂಕರಾಗಿರಿ. ದಂತ ವೈದ್ಯರಿಗೆ ಅನುಕೂಲವಾಗಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,028
ಇಂದಿನ ಅಂತ್ಯ: 24,261
ದಿನದ ಕನಿಷ್ಠ: 24,079
233

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹460
12 ಕ್ಕೆ ₹72
ಮೈಸೂರು: 100 ಕ್ಕೆ ₹460

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹556-780
ದ್ವಿತಳಿ (ಬಿ.ವಿ) ₹381-911

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹211.50
ಆರ್‌ಎಸ್‌ಎಸ್-5 ₹205.00
ಗುಡ್ ಲಾಟ್ ₹190.00

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹23,250
ಎಸಿ ₹13,300
ಆರ್‌ಪಿ ₹18,650
ಆರ್‌ಸಿ ₹10,000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1710 (1710)
ಸೋಯಾ (ರಿಫೈನ್ಡ್) ₹1400 (1410)
ಸೂರ್ಯಕಾಂತಿ (ರಿಫೈನ್ಡ್) ₹1670 (1750)
ವಾಮೋಲಿನ್ ₹1420 (1400)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು
ದೊಡ್ಡ ₹1000-1500
ಮಧ್ಯಮ ₹1300-1550
ಸಣ್ಣ ₹500-2000

ಮುಂಬೈ ಧಾರಣೆ (ಶೇಂಗಾ) 10-03-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1720 (1720)
ಒಂದು ವಾರದ ಡೆಲಿವರಿ	1715 (1715)
ಪಾಮ್ ವಾರದ ಡೆಲಿವರಿ	1418 (1398)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1610)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,60,800 (1,57,400)
ಬೆಳ್ಳಿ ಕೆ.ಜಿಗೆ	2,73,000 (2,60,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬ್ಯಾಡಗಿ ಮೆಣಸಿನಕಾಯಿ ರಫ್ತು ಸ್ಥಗಿತ

ಬ್ಯಾಡಗಿ (ಹಾವೇರಿ ಜಿಲ್ಲೆ): ಯುದ್ಧದ ಪರಿಣಾಮ 'ಬ್ಯಾಡಗಿ ಮೆಣಸಿನಕಾಯಿ' ರಫ್ತು ವಹಿವಾಟಿನ ಮೇಲೆ ಪರಿಣಾಮ ಬೀರಿದೆ' ಎಂದು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಾಜಿ ಅಧ್ಯಕ್ಷ ಹಾಗೂ ಉದ್ಯಮಿ ಎಸ್.ಆರ್.ಪಾಟೀಲ ತಿಳಿಸಿದರು.

ಮಂಗಳವಾರ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಕೊಲ್ಲಿ ಹಾಗೂ ಅರಬ್ ರಾಷ್ಟ್ರಗಳಿಗೆ ಬ್ಯಾಡಗಿ ಮೆಣಸಿನ ಕಾಯಿ ರಫ್ತು ಮಾಡಲಾಗುತ್ತಿತ್ತು. ಯುದ್ಧದಿಂದ ಈಗ ವರ್ತಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇದು ಸ್ಥಳೀಯ ಮಾರುಕಟ್ಟೆಯ ಮೇಲೆ ತೀವ್ರ ಪರಿಣಾಮ ಬೀರಲಿದ್ದು, ಬೇಡಿಕೆ ಇಲ್ಲದೆ ದರದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಹೆಚ್ಚಿದೆ' ಎಂದರು.







ದಾಳಿ ನಿಲ್ಲುವವರೆಗೂ ತೈಲ ನೀಡೆವು: ಇರಾನ್

ಕೊಲ್ಲಿ ರಾಷ್ಟ್ರಗಳ ಮೇಲೆ ಮುಂದುವರಿದ ಪ್ರಹಾರ
ಇರಾನ್ ಮೇಲೆ ದಾಳಿ ತೀವ್ರಗೊಳಿಸಿದ ಇಸ್ರೇಲ್

ದುಬೈ/ ಟೆಹರಾನ್ (ಎಪಿ/ ಎಎಫ್‌ಪಿ): 'ಅಮೆರಿಕ- ಇಸ್ರೇಲ್‌ನ ದಾಳಿ ನಿಲ್ಲುವವರೆಗೂ ಕೊಲ್ಲಿ ಪ್ರದೇಶದಿಂದ ಶತ್ರು ರಾಷ್ಟ್ರಗಳು ಮತ್ತು ಅವರ ಪಾಲುದಾರರಿಗೆ ಒಂದೇ ಒಂದು ಲೀಟರ್ ತೈಲವನ್ನೂ ರಫ್ತು ಮಾಡಲು ಅನುಮತಿಸುವುದಿಲ್ಲ' ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಮಂಗಳವಾರ ಘೋಷಿಸಿದೆ.

ಇರಾನ್ ಸೇನೆಯು ಇಸ್ರೇಲ್ ಹಾಗೂ ಕೊಲ್ಲಿ ರಾಷ್ಟ್ರಗಳನ್ನು ಗುರಿಯಾಗಿಸಿ ಮಂಗಳವಾರವೂ ದೊಡ್ಡ ಪ್ರಮಾಣದಲ್ಲಿ ಪ್ರತಿದಾಳಿ ನಡೆಸಿದೆ. ಮತ್ತೊಂದೆಡೆ, ಅಮೆರಿಕ-ಇಸ್ರೇಲ್ ಸೇನೆಗಳು ಇರಾನ್ ಮೇಲೆ ನಿರಂತರ ದಾಳಿ ನಡೆಸಿರುವುದರಿಂದ ಪಶ್ಚಿಮ ಏಷ್ಯಾ ಬಿಕ್ಕಟ್ಟು ದಿನದಿಂದ ದಿನಕ್ಕೆ ವಿಷಮಗೊಳ್ಳುತ್ತಿದೆ.

ಪಶ್ಚಿಮ ಏಷ್ಯಾದ ಆಚೆಗೂ ವಿಸ್ತರಿಸಿರುವ ಯುದ್ಧದಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರಿಕೆಯಾಗುತ್ತಿದ್ದು, ಜಾಗತಿಕ ಅರ್ಥ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಇರಾನ್ ನಡೆಸಿದ ದಾಳಿಯಿಂದಾಗಿ ಬಹರೇನ್ ಮತ್ತು ದುಬೈನಲ್ಲಿ ಮಂಗಳವಾರ ಕ್ಷಿಪಣಿ ದಾಳಿಯ ಎಚ್ಚರಿಕೆ ನೀಡುವ ಸೈರನ್‌ಗಳು ಮೊಳಗಿದವು. ತನ್ನ ಪೂರ್ವ ಭಾಗದಲ್ಲಿರುವ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಇರಾನ್ ಹಾರಿಸಿದ ಎರಡು ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಸೌದಿ ಅರೇಬಿಯಾ ಹೇಳಿದೆ.

ದೇಶದ ಉತ್ತರ ಮತ್ತು ದಕ್ಷಿಣ ಭಾಗಗಳನ್ನು ಗುರಿಯಾಗಿಸಿ ನಡೆಸಿದ ಡ್ರೋನ್ ದಾಳಿಯನ್ನು ವಿಫಲಗೊಳಿಸಲಾಗಿದೆ ಎಂದು ಕುವೈತ್ ಭದ್ರತಾ ಪಡೆಗಳು ತಿಳಿಸಿವೆ.

ಅಬುಧಾಬಿಯ ರುವೈಸ್ ತೈಲ ಸಂಸ್ಕರಣಾ ಘಟಕದ ಮೇಲೆ ಡ್ರೋನ್ ಅಪ್ಪಳಿಸಿ ಬೆಂಕಿ ಕಾಣಿಸಿಕೊಂಡಿದೆ. ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಯುಎಇ ಅಧಿಕಾರಿಗಳು ತಿಳಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಘಟಕದ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.

ಮಂಗಳವಾರ ಬೆಳಿಗ್ಗೆ ಜೆರುಸಲೇಂನಲ್ಲೂ ಸೈರನ್‌ಗಳು ಮೊಳಗಿದವು. ಟೆಲ್ ಅವೀವ್‌ನಲ್ಲಿ ಸ್ಫೋಟದ ಸದ್ದುಗಳು ಕೇಳಿಸಿವೆ. ಹಲವು ಕ್ಷಿಪಣಿಗಳನ್ನು ಇಸ್ರೇಲ್ ವಾಯು ರಕ್ಷಣಾ ವ್ಯವಸ್ಥೆಯು ನಾಶಪಡಿಸಿದೆ.

ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ಕ್ಷಿಪಣಿಗಳು ಹಾಗೂ ಡ್ರೋನ್‌ಗಳನ್ನು ಹಾರಿಸುವುದರ ಜತೆಗೆ, ಇಂಧನ ಮೂಲಸೌಕರ್ಯಗಳನ್ನೂ ಇರಾನ್ ತನ್ನ ಗುರಿಯಾಗಿಸಿಕೊಂಡಿದೆ. ಹೊರ್ಮುಜ್ ಜಲಸಂಧಿ ಮೇಲಿನ ಹಿಡಿತ ಬಿಗಿಗೊಳಿಸಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಇರಾನ್ ಮೇಲಿನ ದಾಳಿ ಮುಂದುವರಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. 'ಇರಾನ್ ಜನರನ್ನು ನಿರಂಕುಶ ಆಡಳಿತದ ಬಿಗಿ ಹಿಡಿತದಿಂದ ಬಿಡುಗಡೆ ಮಾಡುವುದು ನಮ್ಮ ಗುರಿ ಆಗಿದೆ. ಆದರೆ ಅಂತಿಮವಾಗಿ ಇದು ಅವರ (ಇರಾನ್ ಜನರ) ಮೇಲೆ ಅವಲಂಬಿತವಾಗಿದೆ' ಎಂದಿದ್ದಾರೆ.

'ಇದುವರೆಗಿನ ದಾಳಿಯಲ್ಲಿ ಅಲ್ಲಿನ ಆಡಳಿತಕ್ಕೆ ದೊಡ್ಡ ಪ್ರಹಾರ ನೀಡಿದ್ದೇವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ' ಎಂದು ಹೇಳಿದ್ದಾರೆ.

ಇಸ್ರೇಲ್-ಅಮೆರಿಕ ಸೇನೆಗಳು ನಡೆಸಿದ ದಾಳಿಯಲ್ಲಿ ದಕ್ಷಿಣ ಇರಾನ್‌ನ ಕೆರ್ಮನ್ ವಿಮಾನ ನಿಲ್ದಾಣಕ್ಕೆ ಹಾನಿಯಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಅಲ್ಲಿ ನಿಲ್ಲಿಸಿದ್ದ ಕೆಲವು ವಿಮಾನಗಳೂ ನಾಶವಾಗಿವೆ.

'ಇರಾನ್‌ನ ಆರು ಸೇನಾ ನೆಲೆಗಳನ್ನು ಗುರಿಯಾಗಿಸಿ ಯಶಸ್ವಿ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಇಸ್ರೇಲ್ ಸೇನೆ ಸೋಮವಾರ ಹೇಳಿದೆ. ಟೆಹರಾನ್‌ನ ಮೆಹರಾಬಾದ್ ವಿಮಾನ ನಿಲ್ದಾಣದ ಮೇಲೆ ಕಳೆದ ಶುಕ್ರವಾರ ದಾಳಿ ನಡೆದಿತ್ತು.

ಇಸ್ರೇಲ್ ಸೇನೆ ಲೆಬನಾನ್‌ನಲ್ಲಿ ನಡೆಸುತ್ತಿರುವ ಕಾರ್ಯಾಚರಣೆ ಮುಂದುವರಿದಿದೆ. ಹಿಜ್ಬುಲ್ಲಾ ಸಂಘಟನೆಯ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುವ 'ಅಲ್- ಖರ್ದ್ ಅಲ್- ಹಸನ್' ಕಚೇರಿಯನ್ನು ಗುರಿಯಾಗಿಸಿ ಮಂಗಳವಾರ ದಾಳಿ ನಡೆಸಿದೆ.

> **ಸಂಘರ್ಷ ಆರಂಭವಾದ ಬಳಿಕ ಇರಾನ್ ಮೇಲೆ ಅತಿದೊಡ್ಡ ದಾಳಿಯನ್ನು ಮಂಗಳವಾರ ನಡೆಸಿದ್ದೇವೆ. ಟ್ರಂಪ್ ನಿರ್ಧರಿಸುವವರೆಗೂ ಈ ಯುದ್ಧ ಮುಂದುವರಿಯಲಿದೆ**
> **ಪೀಟ್ ಹೆಗ್ಸೆತ್,** ಅಮೆರಿಕದ ರಕ್ಷಣಾ ಕಾರ್ಯದರ್ಶಿ

> **ಟ್ರಂಪ್ ಅವರೇ, ನಿಮ್ಮ ಬೆದರಿಕೆಗಳಿಗೆ ಇರಾನ್ ಮಣಿಯದು. ನಿಮಗಿಂತ ದೊಡ್ಡವರಿಗೂ ಇರಾನ್ ಅನ್ನು ನಾಶಪಡಿಸಲಾಗದು. ನೀವೇ ನಾಶವಾಗಿ ಹೋಗದಂತೆ ಜಾಗರೂಕರಾಗಿರಿ**
> **ಅಲಿ ಲಾರಿಜಾನಿ,** ಇರಾನ್‌ನ ಭದ್ರತಾ ಮಂಡಳಿ ಮುಖ್ಯಸ್ಥ

ದಿನದ ಬೆಳವಣಿಗೆ...

- ಇರಾನ್‌ಗೆ ಮಾನವೀಯ ನೆರವು ಸಾಮಗ್ರಿ ಕಳುಹಿಸಿರುವುದಾಗಿ ಅಜರ್‌ಬೈಜಾನ್ ಹೇಳಿದೆ. ಅಕ್ಕಿ, ಸಕ್ಕರೆ, ಔಷಧ ಸೇರಿದಂತೆ ಅಗತ್ಯ ಸಾಮಗ್ರಿಗಳು ಇದರಲ್ಲಿ ಒಳಗೊಂಡಿವೆ
- ಟರ್ಕಿಯಲ್ಲಿರುವ ತನ್ನ ನೆಲೆಗಳನ್ನು ರಕ್ಷಿಸಲು 'ನ್ಯಾಟೊ' ಹೆಚ್ಚುವರಿ ವಾಯು ರಕ್ಷಣಾ ವ್ಯವಸ್ಥೆಗಳನ್ನು ನಿಯೋಜಿಸುತ್ತಿದೆ ಎಂದು ಟರ್ಕಿ ರಕ್ಷಣಾ ಸಚಿವಾಲಯ ತಿಳಿಸಿದೆ
- ಸಂಘರ್ಷ ಆರಂಭವಾದ ಬಳಿಕ ಇರಾನ್‌ನಲ್ಲಿ 1,230, ಲೆಬನಾನ್‌ನಲ್ಲಿ 397 ಮತ್ತು ಇಸ್ರೇಲ್‌ನಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಅಮೆರಿಕದ ಏಳು ಯೋಧರು ಬಲಿಯಾಗಿದ್ದಾರೆ



ಇಸ್ರೇಲ್ ಸೇನೆ ದಕ್ಷಿಣ ಲೆಬನಾನ್‌ನ ಅಬ್ಬಾಸಿಯಾ ಗ್ರಾಮದ ಮೇಲೆ ಮಂಗಳವಾರ ನಡೆಸಿದ ದಾಳಿಯಲ್ಲಿ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿತ್ತು —ಎಎಫ್‌ಪಿ ಚಿತ್ರ

ಟ್ರಂಪ್- ಪುಟಿನ್ ಮಾತುಕತೆ

ಮಾಸ್ಕೊ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆ ಸೋಮವಾರ ತಡರಾತ್ರಿ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷ ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ಸಂದರ್ಭದಲ್ಲೇ ಈ ಇಬ್ಬರು ನಾಯಕರು ಚರ್ಚಿಸಿದ್ದಾರೆ.

'ಸುಮಾರು ಒಂದು ಗಂಟೆ ನಡೆದ ಮಾತುಕತೆ ವೇಳೆ ಉಭಯ ನಾಯಕರು ಅಮೆರಿಕ-ಇರಾನ್ ಯುದ್ಧ ಹಾಗೂ ರಷ್ಯಾ-ಉಕ್ರೇನ್ ಸಂಘರ್ಷದ ಬಗ್ಗೆ ಚರ್ಚಿಸಿದರು' ಎಂದು ಕ್ರೆಮ್ಲಿನ್‌ನ ವಿದೇಶಾಂಗ ನೀತಿಯ ಸಹಾಯಕ ಯೂರಿ ಉಶಕೊವ್ ತಿಳಿಸಿದರು.

'ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಸಂಬಂಧಿಸಿದಂತೆ ಪುಟಿನ್ ಅವರು ತಮ್ಮ ನಿಲುವನ್ನು ಟ್ರಂಪ್ ಅವರ ಮುಂದಿಟ್ಟರು. ಗಲ್ಫ್ ರಾಷ್ಟ್ರಗಳ ನಾಯಕರು ಮತ್ತು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಕಳೆದ ವಾರ ನಡೆಸಿದ ಮಾತುಕತೆಯ ವಿವರಗಳನ್ನೂ ಟ್ರಂಪ್ ಅವರಿಗೆ ನೀಡಿದರು' ಎಂದು ಹೇಳಿದರು.

ಟ್ರಂಪ್ ತದ್ವಿರುದ್ಧ ಹೇಳಿಕೆ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಯುದ್ಧ ಎಷ್ಟು ದಿನ ಮುಂದುವರಿಯಬಹುದು ಎಂಬ ಬಗ್ಗೆ ತದ್ವಿರುದ್ಧ ಹೇಳಿಕೆ ನೀಡಿದ್ದಾರೆ. ಸೋಮವಾರ ತಡರಾತ್ರಿ ರಿಪಬ್ಲಿಕನ್ ಪಕ್ಷದ ಸಂಸದರ ಜತೆ ಮಾತನಾಡುವಾಗ ಯುದ್ಧವು 'ಶೀಘ್ರ'ದಲ್ಲೇ ಕೊನೆಗೊಳ್ಳಬಹುದು ಎಂದು ಹೇಳಿದ್ದಾರೆ.

ಆದರೆ, ಕೆಲವೇ ಗಂಟೆಗಳ ಬಳಿಕ ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ ಪೋಸ್ಟ್‌ನಲ್ಲಿ, ಇರಾನ್ ಮೇಲಿನ ದಾಳಿಯನ್ನು ಹೆಚ್ಚಿಸಲಾಗುವುದು ಎಂದು ಎಚ್ಚರಿಸಿದ್ದಾರೆ. 'ಹೊರ್ಮುಜ್ ಜಲಸಂಧಿಯನ್ನು ಮುಚ್ಚಲು ಪ್ರಯತ್ನಿಸಿದರೆ ಅಮೆರಿಕವು ಅವರಿಗೆ (ಇರಾನ್) ಈಗ ನೀಡಿದ್ದಕ್ಕಿಂತ 20 ಪಟ್ಟು ಅಧಿಕ ಪೆಟ್ಟು ಕೊಡಲಿದೆ' ಎಂದಿದ್ದಾರೆ.

'ಕದನ ವಿರಾಮ ಬಯಸುತ್ತಿಲ್ಲ'

'ಈ ಸಮಯದಲ್ಲಿ ನಾವು ಖಂಡಿತವಾಗಿಯೂ ಕದನ ವಿರಾಮವನ್ನು ಬಯಸುತ್ತಿಲ್ಲ' ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಹೇಳಿದ್ದಾರೆ. 'ಆಕ್ರಮಣ ನಡೆಸಿದವರಿಗೆ ತಕ್ಕ ಪಾಠ ಕಲಿಯಲು ಅವರ ಮುಖಕ್ಕೆ ಗುದ್ದಬೇಕು ಎಂದು ನಾವು ಬಯಸುತ್ತೇವೆ. ಹಾಗಾದರೆ, ಅವರು ಮತ್ತೆ ಎಂದಿಗೂ ಇರಾನ್ ಮೇಲೆ ದಾಳಿ ಮಾಡುವ ಬಗ್ಗೆ ಯೋಚಿಸುವುದಿಲ್ಲ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎಫ್‌ಡಿಐ ನಿಯಮ ಸಡಿಲಿಸಿದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಚೀನಾ ಸೇರಿದಂತೆ ಭಾರತದೊಂದಿಗೆ ಭೂ ಗಡಿ ಹಂಚಿಕೊಂಡಿರುವ ಎಲ್ಲ ದೇಶಗಳಿಗೆ ಕೇಂದ್ರ ಸರ್ಕಾರ ಮಂಗಳವಾರ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ನಿಯಮಗಳನ್ನು ಸಡಿಲಗೊಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಆರ್ಥಿಕ ಬೆಳವಣಿಗೆ ಹೆಚ್ಚಿಸಲು, ವಿದೇಶಿ ಹೂಡಿಕೆ ಪ್ರಸ್ತಾವಗಳಿಗೆ ವೇಗವಾಗಿ ಅನುಮೋದನೆ ನೀಡಲು 2020ರ ಪತ್ರಿಕಾ ಟಿಪ್ಪಣಿ-3ಕ್ಕೆ ತಿದ್ದುಪಡಿ ತರಲಾಗಿದೆ.

ಈ ತಿದ್ದುಪಡಿ ಅನ್ವಯ, ಯಾವುದೇ ವಿದೇಶಿ ಕಂಪನಿ ಭಾರತದಲ್ಲಿ ಯಾವುದೇ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಮುನ್ನ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಭಾರತದೊಂದಿಗೆ ಭೂ ಗಡಿ ಹಂಚಿಕೊಂಡಿರುವ ಚೀನಾ, ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಗಾನಿಸ್ತಾನದಿಂದ ಹೆಚ್ಚಿನ ಹೂಡಿಕೆ ಆಕರ್ಷಿಸುವ ನಿಟ್ಟಿನಲ್ಲಿ ಎಫ್‌ಡಿಐ ನಿಯಮಗಳನ್ನು ಸಡಿಲಿಸಲಾಗಿದೆ.

ಚೀನಾವು ಭಾರತದಲ್ಲಿ ಎಫ್‌ಡಿಐ ಮೂಲಕ 2000ರ ಏಪ್ರಿಲ್‌ನಿಂದ 2025ರ ಡಿಸೆಂಬರ್‌ವರೆಗೆ ಒಟ್ಟು 2.51 ಬಿಲಿಯನ್ ಡಾಲರ್ (ಅಂದಾಜು ₹23 ಸಾವಿರ ಕೋಟಿ) ಹೂಡಿಕೆ ಮಾಡಿದೆ. ಈ ಅವಧಿಯಲ್ಲಿ ಭಾರತಕ್ಕೆ ಹರಿದುಬಂದ ಒಟ್ಟು ಎಫ್‌ಡಿಐನಲ್ಲಿ ಚೀನಾದ ಪಾಲು ಶೇ 0.32ರಷ್ಟಿದೆ. ಭಾರತದಲ್ಲಿ ವಿದೇಶಿ ನೇರ ಹೂಡಿಕೆ ಮಾಡಿರುವ ದೇಶಗಳ ಪಟ್ಟಿಯಲ್ಲಿ ಚೀನಾ 23ನೇ ಸ್ಥಾನದಲ್ಲಿದೆ.

ಗಾಲ್ವಾನ್ ಕಣಿವೆಯಲ್ಲಿ 2020ರ ಜೂನ್‌ನಲ್ಲಿ ನಡೆದಿದ್ದ ಘರ್ಷಣೆಯ ನಂತರ ಭಾರತ- ಚೀನಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಸಂಬಂಧ ಹಳಸಿತ್ತು. ಭಾರತವು ಟಿಕ್‌ಟಾಕ್, ವಿ-ಚಾಟ್ ಸೇರಿದಂತೆ ಚೀನಾದ 200ಕ್ಕೂ ಹೆಚ್ಚು ಮೊಬೈಲ್ ಅಪ್ಲಿಕೇಷನ್‌ಗಳ ಮೇಲೆ ನಿರ್ಬಂಧ ಹೇರಿತ್ತು. ಬೆನ್ನಲ್ಲೇ, ಚೀನಾದಿಂದ ಭಾರತಕ್ಕೆ ಎಫ್‌ಡಿಐ ಒಳಹರಿವು ಗಣನೀಯವಾಗಿ ಕಡಿಮೆಯಾಗಿತ್ತು.

ಅಧಿಕಾರಿಗಳು, ಉದ್ಯಮಿಗಳ ಸಮಿತಿ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಲಲಿತ ಕೈಗಾರಿಕಾ ಸಂಸ್ಕೃತಿ'ಗೆ ಬಲ ನೀಡುವ ಉದ್ದೇಶದಿಂದ ಹಿರಿಯ ಅಧಿಕಾರಿಗಳು ಮತ್ತು ಉದ್ಯಮಿಗಳನ್ನು ಒಳಗೊಂಡ ಸಮಾಲೋಚನಾ ಸಮಿತಿ ರಚಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಈ ಕ್ರಮದಿಂದಾಗಿ ಕೈಗಾರಿಕಾ ರಂಗಕ್ಕೆ ಸಂಬಂಧಿಸಿದ ಅಗತ್ಯ ಪ್ರಕ್ರಿಯೆಗಳು ತ್ವರಿತವಾಗಿ ಆಗಲಿವೆ ಎಂದು ಅವರು ಹೇಳಿದರು. ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ರಾಜ್ಯ ಘಟಕದ ವಾರ್ಷಿಕ ಸಭೆಯಲ್ಲಿ ಅವರು ಪಾಲ್ಗೊಂಡಿದ್ದರು.

'ಕೈಗಾರಿಕಾ ವಲಯದ ಸಮಸ್ಯೆಗಳಿಗೆ ಕ್ಷಿಪ್ರ ಪರಿಹಾರ ಕಂಡುಕೊಳ್ಳಲು ಕೇರಳದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಉದ್ಯಮಿಗಳು ಇರುವ ವೇದಿಕೆ ಇದೆ. ಅದು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ ಎನ್ನುವ ಸಂಗತಿಯನ್ನು ಸಿಐಐ ಪ್ರತಿನಿಧಿಗಳು ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ನಮ್ಮಲ್ಲೂ ಅಳವಡಿಸಿಕೊಳ್ಳಲಾಗುವುದು' ಎಂದರು.



ಎಂ.ಬಿ. ಪಾಟೀಲ

ರಾಜ್ಯವು ಕೈಗಾರಿಕಾ ಬೆಳವಣಿಗೆಯಲ್ಲಿ ಅಗ್ರಪಂಕ್ತಿಯಲ್ಲಿ ಇರುವಂತೆ ನೋಡಿಕೊಳ್ಳಲು ಬೇಕಾದ ಕ್ರಮಗಳನ್ನು ವಿಳಂಬ ಮಾಡದೆ ಜಾರಿಗೆ ತರಲಾಗುವುದು ಎಂದರು.

'ಕೃತಕ ಬುದ್ಧಿಮತ್ತೆಯು ಕೈಗಾರಿಕೆಗಳ ಕಾರ್ಯ ನಿರ್ವಹಣೆಯನ್ನೇ ಬದಲಾಯಿಸುತ್ತಿದೆ. ಈ ತಂತ್ರಜ್ಞಾನದ ಜವಾಬ್ದಾರಿಯುತ ಅನುಷ್ಠಾನವೂ ಮಹತ್ವದ್ದಾಗಿದೆ' ಎಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಐ ದಕ್ಷಿಣ ವಲಯದ ಅಧ್ಯಕ್ಷ ಹಾಗೂ ಮುಥೂಟ್ ಫಿನ್‌ಕಾರ್ಪ್‌ನ ಅಧ್ಯಕ್ಷ ಥಾಮಸ್ ಜಾನ್ ಮುಥೂಟ್ ಹೇಳಿದರು.

'ಕೃತಕ ಬುದ್ಧಿಮತ್ತೆಯ ಪ್ರಯೋಜನ ಎಲ್ಲರಿಗೂ ಸಮಾನವಾಗಿ ಲಭ್ಯವಾಗುವುದನ್ನು ಖಚಿತಪಡಿಸಲು ದೊಡ್ಡ ಪ್ರಮಾಣದ ಮರು ಕೌಶಲ ತರಬೇತಿ ಕೊಡಿಸಲು ಕ್ರಮ ವಹಿಸಬೇಕು' ಎಂದು ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಅಭಿಪ್ರಾಯಪಟ್ಟರು.

ಸಿಐಐ ಕರ್ನಾಟಕ ಮಂಡಳಿಯ 2026-27ನೇ ಸಾಲಿನ ಪದಾಧಿಕಾರಿಗಳ ಹೆಸರನ್ನು ಈ ಸಭೆಯಲ್ಲಿ ಘೋಷಿಸಲಾಯಿತು. ಬಾಷ್ ಸಮೂಹದ ಭಾರತದ ಅಧ್ಯಕ್ಷ ಮತ್ತು ಬಾಷ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಗುರುಪ್ರಸಾದ್ ಮುದ್ಲಾಪುರ ಅವರು ನೂತನ ಅಧ್ಯಕ್ಷರಾಗಿ, ಶೆವರನ್ ಲ್ಯಾಬೊರೇಟರೀಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಸ್ಯಾಮ್ ಚೆರಿಯನ್ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅಡಿಕೆ ಧಾರಣೆ

ಬೆಳ್ತಂಗಡಿ		ಶಿವಮೊಗ್ಗ			
ಕೋಕ	18000-26500	ಬೆಟ್ಟೆ	50610-64310	ಬಿಳಿಗೋಟು	30200-39599
ಹೊಸತು	27500-46000	ಗೊರಬಲು	19159-39599	ಚಾಲಿ	43008-47699
ಇತರ	24000-38000	ರಾಶಿ	40166-56259	ಕೆಂಪುಗೋಟು	27800-44099
ಪುತ್ತೂರು		ಸರಕು	59800-98496	ರಾಶಿ	50018-54518
ಕೋಕ	20000-35000	**ಸಿದ್ದಾಪುರ**		**ಯಲ್ಲಾಪುರ**	
ಹೊಸತು	26000-46500	ಬಿಳಿಗೋಟು	28699-37989	ಆಪಿ	59000-60606
ಸಾಗರ		ಚಾಲಿ	42099-48099	ಬಿಳಿಗೋಟು	15600-40811
ಬಿಳಿಗೋಟು	24989-33066	ಕೋಕ	23889-35700	ಕೋಕ	10000-35902
ಚಾಲಿ	39199-42899	ಕೆಂಪುಗೋಟು	29199-34799	ಹಳೆಚಾಲಿ	45000-49709
ಕೋಕ	20999-34290	ರಾಶಿ	48699-53819	ಹೊಸಚಾಲಿ	36699-47599
ಕೆಂಪುಗೋಟು	34999-37699	ತಟ್ಟಿಬೆಟ್ಟೆ	38699-48099	ಕೆಂಪುಗೋಟು	16899-39599
ರಾಶಿ	36609-58699	**ಶಿರಸಿ**		ರಾಶಿ	40669-58879
ಸಿಪ್ಪೆಗೋಟು	11786-22200	ಬೆಟ್ಟೆ	40518-51018	ತಟ್ಟಿಬೆಟ್ಟೆ	36969-51799

'ಜಾಲತಾಣಗಳಲ್ಲಿ ಮಾನಹಾನಿ: ನಿಯಂತ್ರಣಕ್ಕೆ ಸಮಿತಿ'

ಮುಂಬೈ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಮಾನಹಾನಿ ಮಾಡುವ ಪ್ರಯತ್ನವನ್ನು ತಡೆಯಲು ಪೊಲೀಸ್ ಮಹಾನಿರ್ದೇಶಕರ (ಡಿಜಿಪಿ) ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಮಂಗಳವಾರ ತಿಳಿಸಿದರು.



ದೇವೇಂದ್ರ ಫಡಣವೀಸ್

ವಿಧಾನಸಭೆಯಲ್ಲಿ ಸೈಬರ್ ಅಪರಾಧದ ಕುರಿತು ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ಸಮಿತಿಯೂ ಸಾಮಾಜಿಕ ಮಾಧ್ಯಮಗಳ ಮೂಲಕ ಮಾನಹಾನಿ ಮಾಡುವವರ ಕುರಿತು ಅಧ್ಯಯನ ಮಾಡುತ್ತದೆ ಮತ್ತು ಅವರ ವಿರುದ್ಧ ಅಗತ್ಯ ಕ್ರಮಗಳನ್ನು ಸೂಚಿಸುತ್ತದೆ' ಎಂದರು.

ಓಪನ್‌ಎಐ ವಿರುದ್ಧ ಮೊಕದ್ದಮೆ

ವ್ಯಾಂಕೋವರ್ (ಎಪಿ): ಕೆನಡಾದ ಶಾಲೆಯಲ್ಲಿ ನಡೆದ ಗುಂಡಿನ ದಾಳಿಯ ಬಗ್ಗೆ ಚಾಟ್‌ಜಿಪಿಟಿಯ ಮಾತೃಸಂಸ್ಥೆ ಓಪನ್‌ಎಐಗೆ ಮೊದಲೇ ತಿಳಿದಿತ್ತು ಎಂದು ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡ ಬಾಲಕಿಯ ಪೋಷಕರು ಸೋಮವಾರ ಆರೋಪಿಸಿದ್ದಾರೆ. ಈ ಬಗ್ಗೆ ಅವರು ಓಪನ್‌ಎಐ ವಿರುದ್ಧ ಬ್ರಿಟಿಷ್ ಕೊಲಂಬಿಯಾದ ಸುಪ್ರೀಂ ಕೋರ್ಟ್‌ನಲ್ಲಿ ಸಿವಿಲ್ ಮೊಕದ್ದಮೆ ದಾಖಲಿಸಿದ್ದಾರೆ.

'ಫೆ. 10ರಂದು ಬ್ರಿಟಿಷ್ ಕೊಲಂಬಿಯಾದ ಟಂಬ್ಲರ್ ರಿಡ್ಜ್‌ನಲ್ಲಿ ಗುಂಡಿನ ದಾಳಿ ನಡೆಸಿದ ಮಹಿಳೆಯ ಚಟುವಟಿಕೆಯನ್ನು ಮೊದಲೇ ಗಮನಿಸಿದ್ದೆವು. ಆದರೆ, ಈ ಬಗ್ಗೆ ಪೊಲೀಸರಿಗೆ ಮುನ್ಸೂಚನೆ ನೀಡದಿರಲು ನಿರ್ಧರಿಸಿದೆವು' ಎಂದು ಓಪನ್‌ಎಐ ಹೇಳಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜೇಂದ್ರ ಕುಮಾರ್, ಬೆಂಗಳೂರು

- **ಪ್ರಶ್ನೆ: ನಾನು ಬೆಂಗಳೂರಿನಲ್ಲಿ ಕುಟುಂಬದೊಂದಿಗೆ ನೆಲಸಿದ್ದೇನೆ. ನನ್ನ ಮಗ ದುಬೈನಲ್ಲಿ ಉದ್ಯೋಗದಲ್ಲಿದ್ದಾನೆ. ನನಗೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಆಸಕ್ತಿ ಇದೆ, ನನ್ನ ಮಗನಿಗೂ ಅದರಲ್ಲಿ ಆಸಕ್ತಿ ಇದೆ. ಕೆಲವು ವರ್ಷಗಳ ಹಿಂದೆ ಗುಜರಾತಿನ ಗಿಫ್ಟ್ ಸಿಟಿಯಲ್ಲಿ ಹೂಡಿಕೆ ಮಾಡಲು ಅವಕಾಶ ಇರುವ 'ಗಿಫ್ಟ್ ನಿಫ್ಟಿ' ಬಗ್ಗೆ ಕೇಳುತ್ತಿದ್ದೆ. ಈ ಹಿನ್ನೆಲೆಯಲ್ಲಿ ನಮಗೆ ಒಂದು ಸ್ಪಷ್ಟತೆ ಬೇಕಾಗಿದೆ. ಭಾರತೀಯ ನಿವಾಸಿಗಳು ಅಥವಾ ವಿದೇಶದಲ್ಲಿ ಕೆಲಸ ಮಾಡುತ್ತಿರುವ ನನ್ನ ಮಗ ಈ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಅವಕಾಶ ಇದೆಯೇ? ಸಾಮಾನ್ಯವಾಗಿ ನಾವು ಬ್ರೋಕರ್ ಮೂಲಕ ಡಿಮ್ಯಾಟ್ ಖಾತೆ ತೆರೆಯುವಂತೆ ಅಲ್ಲಿಯೂ ಖಾತೆ ತೆರೆಯುವ ಅವಕಾಶ ಇದೆಯೇ? ಅಲ್ಲದೆ, ಅಲ್ಲಿ ಹೂಡಿಕೆ ಮಾಡುವಾಗ ವಿಶೇಷವಾಗಿ ಗಮನಿಸಬೇಕಾದ ನಿಯಮಗಳು, ತೆರಿಗೆ ನೀತಿ, ವಿದೇಶಿ ವಿನಿಮಯ ಸಂಬಂಧಿತ ಅಂಶಗಳು ಅಥವಾ ಮುನ್ನೆಚ್ಚರಿಕೆಗಳು ಯಾವುವು ಎಂಬುದರ ಮಾಹಿತಿ ಬೇಕಿತ್ತು. ಭಾರತೀಯ ಷೇರು ಮಾರುಕಟ್ಟೆಯೊಂದಿಗೆ ಹೋಲಿಸಿದರೆ ಗಿಫ್ಟ್ ನಿಫ್ಟಿ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಅಪಾಯದ ಮಟ್ಟ ಎಷ್ಟು ಎಂಬುದರ ಬಗ್ಗೆ ಮಾಹಿತಿ ಬೇಕಿತ್ತು.**

ಉತ್ತರ: ಗಿಫ್ಟ್ ನಿಫ್ಟಿ, ಗುಜರಾತಿನ ಗಿಫ್ಟ್ ಸಿಟಿಯಲ್ಲಿ (ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರ) ವ್ಯವಹರಿಸುವ ಸೂಚ್ಯಂಕ ಆಧಾರಿತ ಡೆರಿವೇಟಿವ್ ವಹಿವಾಟು ವ್ಯವಸ್ಥೆ. ಇಲ್ಲಿ ಜಾಗತಿಕ ಹೂಡಿಕೆದಾರರು ಗಿಫ್ಟ್ ನಿಫ್ಟಿ ಫ್ಯೂಚರ್ಸ್ ವ್ಯವಹಾರ ಮಾಡುತ್ತಾರೆ. ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ ನಿಯಂತ್ರಿಸುತ್ತದೆ. ಇಲ್ಲಿ ಎಲ್ಲ ವ್ಯವಹಾರ ವಿದೇಶಿ ಕರೆನ್ಸಿ (ಡಾಲರ್) ಮೂಲಕವೇ ನಡೆಯುತ್ತದೆ. ನಮ್ಮ ನಿಫ್ಟಿ-50 ಸೂಚ್ಯಂಕ ಇದಕ್ಕೂ ಮೂಲಾಧಾರ. ದಿನದ ಸುಮಾರು 21 ಗಂಟೆ ಈ ಸೂಚ್ಯಂಕ ವ್ಯವಹಾರಕ್ಕೆ ತೆರೆದಿರುತ್ತದೆ.

ಇದರ ಉದ್ದೇಶ ವಿದೇಶಿಯರು, ಅನಿವಾಸಿ ಭಾರತೀಯರು ಅಥವಾ ಇತರ ಸಾಂಸ್ಥಿಕ ಹೂಡಿಕೆದಾರರು ನಮ್ಮ ಮಾರುಕಟ್ಟೆ ಆಧಾರಿತ ಗಿಫ್ಟ್ ನಿಫ್ಟಿ ಸೂಚ್ಯಂಕದಲ್ಲಿ ವ್ಯವಹರಿಸುವುದಾಗಿದೆ. ಇದು ಷೇರು ಮಾರುಕಟ್ಟೆಯಂತೆ ನೇರವಾಗಿ ಷೇರುಗಳನ್ನು ಖರೀದಿ-ಮಾರಾಟ ಮಾಡುವ ವೇದಿಕೆ ಅಲ್ಲ, ಬದಲಾಗಿ ಬಹುಪಾಲು ಡೆರಿವೇಟಿವ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಉತ್ಪನ್ನಗಳ ವ್ಯಾಪಾರ ನಡೆಯುವ ಮಾರುಕಟ್ಟೆ. ಇಲ್ಲಿ ಹೂಡಿಕೆ ಮಾಡಲು ಭಾರತೀಯ ನಿವಾಸಿಗಳಿಗೆ ಇನ್ನೂ ಅವಕಾಶ ನೀಡಿಲ್ಲ. ಹೀಗಾಗಿ, ನೀವು ಭಾರತೀಯ ನಿವಾಸಿಯಾಗಿರುವುದರಿಂದ ಗಿಫ್ಟ್ ನಿಫ್ಟಿಯಲ್ಲಿ ಯಾವುದೇ ಹೂಡಿಕೆಗೆ ಅವಕಾಶ ಇಲ್ಲ. ಆದರೆ ನಿಮ್ಮ ಮಗ ಅನಿವಾಸಿ ಭಾರತೀಯನಾಗಿ ಈ ಸೂಚ್ಯಂಕದಲ್ಲಿ ವ್ಯವಹರಿಸಬಹುದು. ಇಲ್ಲಿನ ಪ್ರಮುಖ ಅಂಶ ಏನೆಂದರೆ, ಬಂದ ಲಾಭಕ್ಕೆ ಯಾವುದೇ ತೆರಿಗೆ ಅಥವಾ ಎಸ್‌ಟಿಟಿ, ಜಿಎಸ್‌ಟಿ ಇತ್ಯಾದಿ ಯಾವುದೂ ಇಲ್ಲ.

ಇನ್ನು ನಿಮ್ಮ ವಿಚಾರದಲ್ಲಿ, ನೀವು ವಿದೇಶಿ ಷೇರುಗಳಲ್ಲಿ ಕಾನೂನುಬದ್ಧವಾಗಿ ಹೂಡಿಕೆ ಮಾಡುವುದು ಸಾಧ್ಯ. ಭಾರತೀಯ ರಿಸರ್ವ್ ಬ್ಯಾಂಕ್‌ನ ಮುಕ್ತ ಪಾವತಿ ಯೋಜನೆಯ ಅಡಿ ಭಾರತೀಯ ನಿವಾಸಿ ವ್ಯಕ್ತಿಯೊಬ್ಬರು ಒಂದು ಹಣಕಾಸು ವರ್ಷದಲ್ಲಿ ಗರಿಷ್ಠ 2,50,000 ಅಮೆರಿಕನ್ ಡಾಲರ್ ಹಣವನ್ನು ವಿದೇಶಗಳಿಗೆ ಕಳುಹಿಸಿ ಹೂಡಿಕೆ ಮಾಡಲು ಅನುಮತಿ ಇದೆ. ಈ ಹೂಡಿಕೆಗಳನ್ನು ವಿದೇಶಿ ಷೇರುಗಳು, ಇಟಿಎಫ್ ಅಥವಾ ಇತರ ಅಂತರರಾಷ್ಟ್ರೀಯ ಹಣಕಾಸು ಆಸ್ತಿಗಳಲ್ಲಿ ತೊಡಗಿಸಬಹುದು.

ರಿಸ್ಕ್ ದೃಷ್ಟಿಯಿಂದ ನೋಡಿದರೆ, ಗಿಫ್ಟ್ ನಿಫ್ಟಿ ಭಾರತದ ಸಾಮಾನ್ಯ ಷೇರು ಮಾರುಕಟ್ಟೆಗಿಂತ ಸ್ವಲ್ಪ ಭಿನ್ನ. ಇದು ಜಾಗತಿಕ ಹೂಡಿಕೆದಾರರ ಪಾಲ್ಗೊಳ್ಳುವಿಕೆಯಿರುವ ಮಾರುಕಟ್ಟೆಯಾಗಿರುವುದರಿಂದ ವಿದೇಶಿ ವಿನಿಮಯ ದರದ ಬದಲಾವಣೆ, ಜಾಗತಿಕ ಮಾರುಕಟ್ಟೆ ಏರಿಳಿತಗಳು ಮತ್ತು ಡೆರಿವೇಟಿವ್ ವ್ಯವಹಾರಗಳ ಸ್ವಭಾವ ಇವುಗಳಿಂದ ಹೆಚ್ಚುವರಿ ಅಸ್ಥಿರತೆ ಕಂಡುಬರುವ ಸಾಧ್ಯತೆ ಇದೆ. ವಿಶೇಷವಾಗಿ ಡೆರಿವೇಟಿವ್ ಉತ್ಪನ್ನಗಳಲ್ಲಿ ಹೂಡಿಕೆ ಮಾಡುವುದರಿಂದ ಲಾಭದ ಸಾಧ್ಯತೆ ಇದ್ದರೂ, ಅಪಾಯದ ಮಟ್ಟವೂ ಹೆಚ್ಚು ಇರುತ್ತದೆ. ಈ ವ್ಯವಹಾರದಲ್ಲಿ ತೊಡಗಲು ಸಾಕಷ್ಟು ಪರಿಣತಿ ಅಗತ್ಯ.

ಕಮಲೇಶ್ ಭಟ್

- **ಪ್ರಶ್ನೆ: ನನ್ನ ತಂದೆಯವರು ತಮ್ಮ ಸ್ವಂತ ಸಂಪಾದನೆಯ ಸ್ಥಿರ ಆಸ್ತಿಯನ್ನು 1995ರಲ್ಲಿ ಉಯಿಲಿನ ಮೂಲಕ ನನ್ನ ಹೆಸರಿಗೆ ವರ್ಗಾಯಿಸಿದರು. ನಂತರ ನಾನು ಆ ಆಸ್ತಿಯನ್ನು ಅಭಿವೃದ್ಧಿಪಡಿಸಲು ಹಣಕಾಸು ಸಂಸ್ಥೆಯಿಂದ ಸಾಲ ಪಡೆದು ಕಟ್ಟಡ ನಿರ್ಮಿಸಿ, ಆ ಸಾಲವನ್ನು ಸಂಪೂರ್ಣವಾಗಿ ತೀರಿಸಿದ್ದೇನೆ. ಈಗ ಇ-ಖಾತಾ ಸೇರಿದಂತೆ ಎಲ್ಲ ದಾಖಲೆಗಳು ನನ್ನ ಹೆಸರಿನಲ್ಲಿವೆ.**

ಈ ಆಸ್ತಿಯನ್ನು ಈಗ ನನ್ನ ಸ್ವಂತ ಸಂಪಾದನೆಯ ಆಸ್ತಿ ಎಂದು ಪರಿಗಣಿಸಬಹುದೇ? ಹಾಗಿದ್ದರೆ, ಈ ಆಸ್ತಿಯನ್ನು ನಾನು ನನ್ನ ಇಚ್ಛೆಯಂತೆ ಸಹೋದರರಿಗೆ ಹಕ್ಕು ನೀಡುವ ಅಥವಾ ಮಾರಾಟ ಮಾಡುವ ಅಧಿಕಾರ ಹೊಂದಿರುವಿನೋ? ಇದಕ್ಕೆ ನನ್ನ ಮಕ್ಕಳ ಅನುಮತಿ ಅಗತ್ಯವಿದೆಯೇ?

ಉತ್ತರ: ನಿಮ್ಮ ತಂದೆಯವರು ತಮ್ಮ ಸ್ವಂತ ಸಂಪಾದನೆಯ ಆಸ್ತಿಯನ್ನು ಉಯಿಲಿನ ಮೂಲಕ ನಿಮ್ಮ ಹೆಸರಿಗೆ ವರ್ಗಾಯಿಸಿದ್ದರೆ ಹಾಗೂ ಅದು ದಾಖಲಾಗಿದ್ದರೆ ಅಂತಹ ಆಸ್ತಿ ನಿಮ್ಮ ಸ್ವಂತ ಆಸ್ತಿ ಎಂದು ಪರಿಗಣಿತವಾಗುತ್ತದೆ. ಉಯಿಲು ಕೂಡ ಕಾನೂನಿನ ಪ್ರಕಾರ ಆಸ್ತಿಯನ್ನು ವರ್ಗಾಯಿಸುವ ಮಾಧ್ಯಮವಾಗಿರುವುದರಿಂದ ಇದು ಮಾನ್ಯ. ನಂತರದ ಹಂತದಲ್ಲಿ ಉಯಿಲಿನ ಮೂಲಕ ಆಸ್ತಿ ನಿಮ್ಮ ಹೆಸರಿಗೆ ಬಂದಿರುವುದರಿಂದ ಅದನ್ನು ನಿಮ್ಮ ಸ್ವಂತ ಆಸ್ತಿಯಾಗಿ ಪರಿಗಣಿಸಲಾಗುತ್ತದೆ ಹಾಗೂ ನಿಮ್ಮ ಇಚ್ಛೆಯಂತೆ ಅದನ್ನು ವರ್ಗಾಯಿಸುವ, ಅಭಿವೃದ್ಧಿಪಡಿಸುವ ಹಕ್ಕು ನಿಮಗಿದೆ. ಈ ವಿಚಾರದಲ್ಲಿ ನಿಮ್ಮ ಅಂತಿಮ ನಿರ್ಧಾರ ಕೈಗೊಳ್ಳುವ ಮೊದಲು ಅನುಭವಿ ವಕೀಲರು ಅಥವಾ ಕಾನೂನು ತಜ್ಞರನ್ನು ಸಂಪರ್ಕಿಸಿ ಸಲಹೆ ಪಡೆಯುವುದು ಉತ್ತಮ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in



ಭಾರತ ಗಡಿಯಲ್ಲಿ ಹೆದ್ದಾರಿ ನಿರ್ಮಾಣಕ್ಕೆ ಚೀನಾ ಸಿದ್ಧತೆ

ಬೀಜಿಂಗ್ (ಪಿಟಿಐ): ಭಾರತದೊಂದಿಗಿನ ಗಡಿಭಾಗದಲ್ಲಿರುವ ಸೂಕ್ಷ್ಮ ಪ್ರದೇಶಗಳಲ್ಲಿನ ರಸ್ತೆ ಸಂಪರ್ಕ ವ್ಯವಸ್ಥೆಯನ್ನು ಮುಂದಿನ ಐದು ವರ್ಷಗಳಲ್ಲಿ ಬಲಪಡಿಸಲು ಚೀನಾ ಯೋಜನೆ ರೂಪಿಸಿದೆ.

ಈ ವರ್ಷ ಆರಂಭಗೊಳ್ಳಲಿರುವ 15ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಕಾರ್ಯಗತಗೊಳಿಸಲು ನಿರ್ಧರಿಸಿದೆ. ಈ ಯೋಜನೆಯಡಿ ಗಡಿಭಾಗದಲ್ಲಿ 394 ಕಿ.ಮೀ. ಉದ್ದದ ಹೆದ್ದಾರಿ ನಿರ್ಮಾಣವಾಗಲಿದೆ ಎಂದು ಪಂಚ ವಾರ್ಷಿಕ ಯೋಜನೆಯ ಕರಡು ವರದಿಯನ್ನು ಉಲ್ಲೇಖಿಸಿ ಚೀನಾ ಮಾಧ್ಯಮವೊಂದು ವರದಿ ಮಾಡಿದೆ.

ಪ್ರಸ್ತುತ ನಡೆಯುತ್ತಿರುವ ಚೀನಾ ರಾಷ್ಟ್ರೀಯ ಸಂಸತ್ತಿನ ಅಧಿವೇಶನದಲ್ಲಿ ಈ ಯೋಜನೆಯನ್ನು ಮಂಡಿಸಲಾಗಿದೆ. 1962ರ ಚೀನಾ–ಭಾರತ ಯುದ್ಧದ ಬಳಿಕ ಸೇನಾ ಉದ್ದೇಶಗಳಿಗಾಗಿ ಅಕ್ಸಾಯ್ ಚೀನಾ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ವಿವಾದಿತ ರಸ್ತೆಗೆ ಸಮನಾಂತರವಾಗಿ ಹೊಸ ಹೆದ್ದಾರಿ ನಿರ್ಮಾಣಗೊಳ್ಳಲಿದೆ.

ಶ್ರೀಲಂಕಾ: ಇಂಧನ ಬೆಲೆ ಏರಿಕೆ

ಕೊಲಂಬೊ (ಪಿಟಿಐ): ಜಾಗತಿಕವಾಗಿ ಕಚ್ಚಾ ತೈಲ ಬೆಲೆ ಏರಿಕೆಯಾಗುತ್ತಿರುವುದರಿಂದ ಇಂಧನ ಸಂಗ್ರಹಣೆ ಮತ್ತು ಹೆಚ್ಚಿನ ಖರೀದಿಯನ್ನು ತಡೆಯುವ ಉದ್ದೇಶದಿಂದ ಶ್ರೀಲಂಕಾ ಸೋಮವಾರ ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ ಚಿಲ್ಲರೆ ಇಂಧನ ಬೆಲೆಯನ್ನು ಶೇ 8ರಷ್ಟು ಹೆಚ್ಚಿಸಿದೆ.

ಪರಿಷ್ಕರಣೆ ಬಳಿಕ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ಬೆಲೆಯು 22 ಶ್ರೀಲಂಕಾ ರೂಪಾಯಿಯಷ್ಟು ಏರಿಕೆ ಆಗಿದೆ ಎಂದು ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ ತಿಳಿಸಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದ ಜಾಗತಿಕ ಕಚ್ಚಾ ತೈಲ ಬೆಲೆ ಬ್ಯಾರಲ್‌ಗೆ 100 ಡಾಲರ್ ದಾಟಿದ ಬಳಿಕ ದರ ಪರಿಷ್ಕರಣೆ ಆಗಿದೆ.

ಕಪ್ಪುಗಟ್ಟಿದ ಇರಾನ್



ಮೆಲ್ಬರ್ನ್/ಟೆಹರಾನ್ (ಎಎಫ್‌ಪಿ/ಪಿಟಿಐ): ಇರಾನ್‌ನ ಹಲವೆಡೆ 'ಕಪ್ಪು ಮಳೆ' ಅಥವಾ 'ಆಮ್ಲ ಮಳೆ' ಸುರಿದಿರುವ ವರದಿಗಳು ಬರುತ್ತಿವೆ. ಇದು ಜನಸಾಮಾನ್ಯರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಜನರು ಮನೆಯಿಂದ ಹೊರಬರದು ಅಥವಾ ಬಂದರೆ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇರಾನ್‌ನ ಟೆಹರಾನ್‌ನಲ್ಲಿನ ನಾಲ್ಕು ತೈಲ ಸಂಗ್ರಹ ಘಟಕಗಳು ಮತ್ತು ಪೆಟ್ರೋಲಿಯಂ ಸಾಗಣೆ ವ್ಯವಸ್ಥೆ ಮೇಲೆ ಮಾರ್ಚ್ 7ರಂದು (ಇರಾನ್ ಕಾಲಮಾನ) ಇಸ್ರೇಲ್ ನಡೆಸಿದ ವಾಯುದಾಳಿಯೇ ಇದಕ್ಕೆ ಕಾರಣ. ತೈಲ ಸಂಗ್ರಹ ಘಟಕಗಳಲ್ಲಿ ಅಂದು ಹೊತ್ತಿಕೊಂಡ ಬೆಂಕಿ ಇಂದೂ ಉರಿಯುತ್ತಿದೆ ಎನ್ನಲಾಗುತ್ತಿದ್ದು, ಇದರಿಂದ ಎದ್ದ ಹೊಗೆ ಜನರ ಶ್ವಾಸಕೋಶವನ್ನು ನಿಧಾನವಾಗಿ ಆವರಿಸಿಕೊಳ್ಳುತ್ತಿದೆ ಎನ್ನುತ್ತಾರೆ ವೈದ್ಯರು.

ರಾಸಾಯನಿಕಗಳ ಮಳೆ



- ಗಂಧಕದ ಡೈಆಕ್ಸೈಡ್
- ಸಾರಜನಕದ ಡೈಆಕ್ಸೈಡ್
- ಹೈಡ್ರೋಕಾರ್ಬನ್
- ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೋಕಾರ್ಬನ್

1 ಕೋಟಿ ಟೆಹರಾನ್‌ನಲ್ಲಿ ವಾಸಿಸುತ್ತಿರುವ ಜನಸಂಖ್ಯೆ

ಕ್ಯಾನ್ಸರ್ ಸಂಕಷ್ಟ

- ರಾಸಾಯನಿಕಗಳು ಸೇರಿಕೊಂಡಿರುವ ವಿಷಕಾರಿ ಗಾಳಿ ಸೇವನೆಯಿಂದ ದೀರ್ಘಾವಧಿಯಲ್ಲಿ ಜನರಲ್ಲಿ ಕ್ಯಾನ್ಸರ್ ಬರುವ ಅಪಾಯ ಅಧಿಕವಾಗಿದೆ. ಜೊತೆಗೆ, ಜನರಲ್ಲಿ ಯೋಚಿಸುವ, ಚರ್ಚಿಸುವ, ನಿರ್ಧಾರ ತೆಗೆದುಕೊಳ್ಳಲು ಅಶಕ್ತರಾಗುವಂಥ ನರಮಂಡಲ ಸಮಸ್ಯೆಗಳು ಉಂಟಾಗುತ್ತದೆ. ಇಂಥ ಕಲುಷಿತ ಗಾಳಿಯು ನೇರವಾಗಿ ರಕ್ತ ಸೇರುತ್ತದೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಉಂಟಾಗುತ್ತವೆ
- ಹೊಗೆ ಉಸಿರಾಟದಿಂದ ಹೆಚ್ಚು ಪರಿಣಾಮ ಅನುಭವಿಸುವವರು ವೃದ್ಧರು ಮತ್ತು ಮಕ್ಕಳು. ಅಸ್ತಮಾ ಅಥವಾ ಇತರೆ ಶ್ವಾಸಕೋಶ ಸಮಸ್ಯೆ ಇರುವವರಿಗೂ ಸಂಕಷ್ಟ. ಗರ್ಭಿಣಿಯರು ಅಪಾಯಕಾರಿ ಗಾಳಿ ಸೇವಿಸುವುದರಿಂದ ಕಡಿಮೆ ತೂಕದ ಮಗು ಜನಿಸುವ ಆತಂಕವಿದೆ. ಚರ್ಮ ರೋಗದ ಭೀತಿಯೂ ಮೂಡಿದೆ
- ವಿಷಕಾರಿ ರಾಸಾಯನಿಕ ವಸ್ತುಗಳು ಗಾಳಿಯನ್ನು ಸೇರಿ ಮಳೆಯಾಗಿ ಹರಿದು ನೀರಿನ ಮೂಲಗಳನ್ನು ಸೇರುತ್ತದೆ; ಇದು ಜನರ ಆರೋಗ್ಯದ ಮೇಲೆ ಗಂಭೀರವಾದ ದೀರ್ಘಾವಧಿ ಪರಿಣಾಮ ಬೀರಲಿದೆ

'ಬೆಳಗಾಗಲೇ ಇಲ್ಲ ಎಂದುಕೊಂಡೆವು'

ದಾಳಿಯ ಮರುದಿನವೇ ಟೆಹರಾನ್ ಸೇರಿ ಇರಾನ್‌ನ ಹಲವೆಡೆ ಮಳೆ ಸುರಿದಿದೆ. ಹೊಗೆಯುಕ್ತ ಗಾಳಿಯ ಜೊತೆ, ಮಳೆ ಸುರಿದಿದೆ. ತೈಲ ಸಂಗ್ರಹ ಘಟಕದ ಹತ್ತಿರದ ಮನೆಗಳ ಅಂಗಳ, ಗೋಡೆಗಳ ಮೇಲೆ ದಪ್ಪ ಮಸಿ ಅಂಟಿಕೊಂಡಿತ್ತು. 'ರಾತ್ರಿ ಮಲಗಿದ್ದು ನೆನಪಿದೆ. ಅಲಾರ್ಮ್ ಕೂಡ ಹೊಡೆಯಿತು. ಆದರೆ, ಹೊರಬಂದು ನೋಡಿದರೆ, ಎಲ್ಲ ಕಪ್ಪು ಕಪ್ಪು. ಒಮ್ಮೆ ಇದೇನಾಯಿತು ಎಂದುಕೊಂಡೆವು. ಬೆಳಕೇ ಆಗಿಲ್ಲ ಎಂದುಕೊಂಡೆವು. ಗಡಿಯಾರ ಕೆಟ್ಟಿದೆಯೇ ಎಂದು ಗಮನಿಸಿದೆವು. ಆದರೆ, ಎಲ್ಲವೂ ಸರಿಯಿತ್ತು. ವಾಯುದಾಳಿಯ ಕಾರಣ ವಾತಾವರಣವೇ ಕಪ್ಪುಗಟ್ಟಿತ್ತು; ನಮ್ಮ ಬದುಕು ಕೂಡ' ಎನ್ನುತ್ತಾರೆ ಟೆಹರಾನ್ ಜನರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_SUPRO_MINI_TRUCK
YOM – 2023
Reg No – KA35D6393
2) - TATA MOTORS LTD.
- TATA LPO 1610VEHCARR
YOM – -
Reg No – KA20AC1827
3) CB_Ashok Leyland Dost GOODS
YOM – -
Reg No – KA13D6611
4) CB_EICHER_PRO_3018_SLP_HSD_BS6_22FT_FBT PICK-UP
YOM – 2024
Reg No – KA22AA5411
5) AL_DOST_GOODS
YOM – 2023
Reg No – KA38A5832
6) CB_TATA_LPK_2823_TIPPER
YOM – 2022
Reg No – KA06AB3444
7) CB_TIPPER_AL_MA1920
YOM – 2022
Reg No – KA51AH9871
8) VOLVO EICHER - CB_EICHER6048
YOM – --
Reg No – KA21C6979
9) CB_TATA_MOTORS_ULTRA_T19_GOODS_FBV
YOM – --
Reg No – KA06AC2239

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 11.03.2026
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2025–26/2224 ದಿ:04.03.2026

ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 Plan ಯೋಜನೆಯಡಿ ವಿಜಯನಗರ ಜಿಲ್ಲೆ ಹೆಚ್.ಬಿಹಳ್ಳಿ ತಾಲ್ಲೂಕಿನ 01 ಕಾಮಗಾರಿಗಾಗಿ ಹಾಗೂ ಹರಪನಹಳ್ಳಿ ತಾಲ್ಲೂಕಿನ 2 ಕಾಮಗಾರಿಗಳಿಗೆ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. 119.49 ಲಕ್ಷ, ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ. 160.07 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 04.03.2026 ರಿಂದ ದಿನಾಂಕ: 20.03.2025 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 23.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: 25.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1109/ಕೆಎಸ್‌ಎಂಸಿಎ/2025–26

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570001, ದೂರವಾಣಿ ಸಂಖ್ಯೆ: +91–0821–2520512(Off), 2520803 (Fax),Email- mmcrimysore@yahoo.com,
website: www.mmcri.karnataka.gov.in

ಸಂಖ್ಯೆ:ಎಂಎಂಸಿ&ಆರ್‌ಐ/ಟೆಂಡರ್/03/2025–26 ದಿನಾಂಕ: 09.03.2023

ಟೆಂಡರ್/ಅಲ್ಪಾವಧಿ ಟೆಂಡರ್ ಅಧಿಸೂಚನೆ

ವಿಷಯ : ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಿಗೆ ಕೆಮಿಕಲ್ಸ್ ಮತ್ತು ಉಪಕರಣಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಿಗೆ ಕೆಮಿಕಲ್ಸ್ ಮತ್ತು ಉಪಕರಣಗಳನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಈ ಕೆಳಕಂಡಂತೆ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೈಬ್‌ಸೈಟ್ http://kppp.karnataka.gov.in ಮೂಲಕ ಪಡೆಯಬಹುದಾಗಿದ್ದು, ಇ.ಎಂ.ಡಿ ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಕ್ರ. ಸಂ	ಅಲ್ಪಾವಧಿ ಮರು ಟೆಂಡರ್	ಟೆಂಡರ್ ಸಲ್ಲಿಸುವ ಪ್ರಾರಂಭಿಕ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ಮೊತ್ತ ರೂ. ಲಕ್ಷಗಳಲ್ಲಿ
1	ಕೆಮಿಕಲ್ಸ್/07/2025–26	10.03.2026	25.03.2026	55.00
2	ಉಪಕರಣ/19–2024–25 ರೇಡಿಯೋಥೆರಪಿ ಉಪಕರಣ	10.03.2026	17.03.2026	20.00
3	ಉಪಕರಣ/61–2024–25 ಚೆಲುವಾಂಬ ಆಸ್ಪತ್ರೆ ಉಪಕರಣ	10.03.2026	17.03.2026	21.00

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಹೊರಡಿಸಲಾಗುವುದಿಲ್ಲ. ಈ ಬಗ್ಗೆ ಯಾವುದೇ ಅಧಿಸೂಚನೆ

ಸಹಿ/– ನಿರ್ದೇಶಕರು ಮತ್ತು ಡೀನ್
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

ವಾಸಾಸಂ/ಮೈಸೂರು/ಶಿರಡಿ ಸಾಯಿ/1815/2025–26

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.
ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052 ದೂ:080–22263479.

ಸಂಖ್ಯೆ: ಬಿಎಂಆರ್‌ಡಿಎ/ಸಿಬ್ಬಂದಿ/59/2025–26 ದಿನಾಂಕ: 09.03.2026

ಟೆಂಡರ್ ಪ್ರಕಟಣೆ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ **ಬಾಹ್ಯ ಆಧಾರದ ಮುಖಾಂತರ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು ಮತ್ತು ಗ್ರೂಪ್–ಡಿ ಹುದ್ದೆಗಳ** ಸೇವೆಯನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, **ದಿನಾಂಕ: 10.03.2026** ರಿಂದ **ದಿನಾಂಕ: 25.03.2026 ರವರೆಗೆ ಅಪರಾಹ್ನ 4.00 ಗಂಟೆಯೊಳಗೆ** ದಾಖಲಿಸಲು ಅವಕಾಶವಿರುತ್ತದೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿ/ವಿವರಗಳನ್ನು ವೆಬ್‌ಸೈಟ್ ವಿಳಾಸ: **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಜಂಟಿ ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ (ಯೋಜನೆ),
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ನಂ. ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ–ಡಿಸಿಡಬ್ಲ್ಯೂ)/2477/2025–26 ದಿನಾಂಕ: 09.03.2026

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ) – 2ನೇ ಕರೆ

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ **ಬೆಂಗಳೂರಿನ ಹೆಮ್ಮಿಗೆಪುರ ವಿ–ವ್ಯಾಲಿಯಲ್ಲಿ 4 ಎಂಎಲ್‌ಡಿ ಐಎಸ್‌ಪಿಎಸ್ ನಿರ್ಮಾಣ ಕಾಮಗಾರಿಗಾಗಿ** ದ್ವಿಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಮೊತ್ತ: **ರೂ. 398.75 ಲಕ್ಷಗಳು.** ಇಎಂಡಿ: **ರೂ. 5.98 ಲಕ್ಷಗಳು.**

ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **09.04.2026**ರ ಸಂಜೆ **4:00** ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: **10.04.2026** ರಂದು ಸಂಜೆ **5:00** ಗಂಟೆಯ ನಂತರ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಯೋಜನೆ)

DIPR/CP/MIA/6130/2025-26

ಭಾರತೀಯ ರಿಸರ್ವ್ ಬ್ಯಾಂಕ್
ಬೆಂಗಳೂರು ಪ್ರಾದೇಶಿಕ ಕಛೇರಿ

ಸಾರ್ವಜನಿಕ ಸೂಚನೆ

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಕಲಂ 35 ಎ ಜೊತೆಗೆ ಓದಲಾದ ಕಲಂ 56 ರ ಅಡಿಯಲ್ಲಿ ನಿರ್ದೇಶನಗಳು - ದಿ ಅಮಾನತ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು - ಅವಧಿಯ ವಿಸ್ತರಣೆ

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಕಲಂ 35 ಎ ಯ ಜೊತೆ ಓದಲಾದ ಕಲಂ 56ರ ಅಡಿಯಲ್ಲಿ, ದಿ ಅಮಾನತ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು- ಈ ಬ್ಯಾಂಕಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳನ್ನು ದಿನಾಂಕ ಜೂನ್ 12, 2024 ರ ನಿರ್ದೇಶನ ಸಂಖ್ಯೆ CO. DOS.SED No. S 1931/12-23-001/2024-25 ರ ಮೂಲಕ ನೀಡಿದ್ದು, ಅದರ ಅವಧಿಯನ್ನು ಆರು ತಿಂಗಳವರೆಗೆ ಅಂದರೆ ಡಿಸೆಂಬರ್ 12, 2024 ರಂದು ವ್ಯವಹಾರದ ಮುಕ್ತಾಯದವರೆಗೆ ನೀಡಲಾಗಿತ್ತು. ಇದನ್ನು ಕೊನೆಯದಾಗಿ ದಿನಾಂಕ ಡಿಸೆಂಬರ್ 3, 2025 ರ ನಿರ್ದೇಶನ ಸಂಖ್ಯೆ. DOR.MON/D-43/12.23.001/2025-26 ರ ಮೂಲಕ ವಿಸ್ತರಿಸಲಾಗಿತ್ತು. ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ, ಈ ನಿರ್ದೇಶನದ ಕಾರ್ಯಾಚರಣೆಯ ಅವಧಿಯನ್ನು ಮಾರ್ಚ್ 12, 2026 ರಂದು ವ್ಯವಹಾರದ ಮುಕ್ತಾಯದ ನಂತರವೂ ಮತ್ತಷ್ಟು ವಿಸ್ತರಿಸುವುದು ಅವಶ್ಯಕ ಎಂದು ಭಾರತೀಯ ರಿಸರ್ವ್ ಬ್ಯಾಂಕಿಗೆ ಮನವರಿಕೆ ಆಗಿದೆ.

2. ಅದರಂತೆ, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಕಲಂ 35 ಎ ಉಪ ಕಲಂ (1) ರ ಜೊತೆಗೆ ಓದಲಾದ ಕಲಂ 56 ರ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಭಾರತೀಯ ರಿಸರ್ವ್ ಬ್ಯಾಂಕ್ ಈ ಮೂಲಕ ನಿರ್ದೇಶನವನ್ನು ಮಾರ್ಚ್ 12, 2026ರ ವ್ಯವಹಾರದ ಮುಕ್ತಾಯದಿಂದ ಜೂನ್ 12, 2026 ರ ವ್ಯವಹಾರದ ಮುಕ್ತಾಯದವರೆಗೆ ಮತ್ತೆ ಮೂರು ತಿಂಗಳ ಅವಧಿಗೆ, ಪರಿಶೀಲನೆಗೆ ಒಳಪಟ್ಟು, ವಿಸ್ತರಿಸಿದೆ,.

3. ಉಲ್ಲೇಖಿತ ನಿರ್ದೇಶನದ ಇತರ ನಿಯಮಗಳು ಮತ್ತು ಷರತ್ತುಗಳು ಬದಲಾಗದೆ ಇರುತ್ತವೆ.

ಬೆಂಗಳೂರು
ದಿನಾಂಕ: ಮಾರ್ಚ್ 11, 2026

ಸಹಿ/-
ಪ್ರಾದೇಶಿಕ ನಿರ್ದೇಶಕರು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

"ಜ್ಞಾನ ಸಂಗಮ",
ಬೆಳಗಾವಿ–590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ/ಎಚ್‌ಕೆ/ಎಮ್‌ಪಿ/ ಎಸ್.ಜಿ/2025–26/ಐ.ಎಫ್.ಟಿ.ನಂ. 147/ 1057, ದಿನಾಂಕ: 09 ಮಾರ್ಚ, 2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ ಪೋರ್ಟಲ್ ಮೂಲಕ) 2ನೇ ಕರೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ನಿಯಮ–2000 ರನ್ವಯ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕೆಲಸಗಳ ಹೆಸರು:– 1) ವಿತಾವಿ ಪ್ರಾದೇಶಿಕ ಕಛೇರಿಗಳಾದ ಬೆಂಗಳೂರು, ಮೈಸೂರು, ಕಲಬುರಗಿ, ವಿಸ್ತರಣಾ ಕೇಂದ್ರ, ಮಂಗಳೂರು, ಎನ್‌ಎಸ್‌ಡಿ., ದಾಂಡೇಲಿ, ಕೌಶಲ್ಯ ಅಭಿವೃದ್ಧಿ ಕೇಂದ್ರ, ತಳಕಲ್, ಚಿಂತಾಮಣಿ, ಗೋಕಾಕ ಮತ್ತು ಸ್ನಾತಕೋತ್ತರ ಕೇಂದ್ರ, ವಿಐಎಟಿ., ಮುದ್ದೇನಹಳ್ಳಿಗೆ ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಒದಗಿಸುವ ಕೆಲಸದ ಮೊತ್ತ **ರೂ.2,91,06,197/–** (ತೆರಿಗೆ ರಹಿತ) 2ನೇ ಕರೆ 2)ವಿತಾವಿ ಪ್ರಾದೇಶಿಕ ಕೇಂದ್ರಗಳಾದ ಬೆಂಗಳೂರು, ಮೈಸೂರು, ಕಲಬುರಗಿ, ವಿಸ್ತರಣಾ ಕೇಂದ್ರ, ಮಂಗಳೂರು, ಸ್ನಾತಕೋತ್ತರ ಕೇಂದ್ರ, ವಿಐಎಟಿ., ಮುದ್ದೇನಹಳ್ಳಿ, ಎನ್‌ಎಸ್‌ಡಿ., ದಾಂಡೇಲಿ, ಕೌಶಲ್ಯ ಅಭಿವೃದ್ಧಿ ಕೇಂದ್ರ, ತಳಕಲ್, ಗೋಕಾಕ, ಚಿಂತಾಮಣಿ ಮತ್ತು ಚೋರನಹಳ್ಳಿಯ ಆವರಣದಲ್ಲಿ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ಹೊರ ಸಂಪನ್ಮೂಲ ಏಜನ್ಸಿಯಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಕೆಲಸದ ಮೊತ್ತ **ರೂ.3,69,54,820/–** (ತೆರಿಗೆ ರಹಿತ) 2ನೇ ಕರೆ 3) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ "ಜ್ಞಾನ ಸಂಗಮ", ಬೆಳಗಾವಿ ಪರೀಕ್ಷಾ ವಿಭಾಗದ ಸ್ಕ್ಯಾನಿಂಗ್ ಸೆಂಟರಗೆ ಹಾಗೂ ವಿತಾವಿಯ ಪ್ರಾದೇಶಿಕ ಕಛೇರಿ ಬೆಂಗಳೂರಿನಲ್ಲಿ ಪರೀಕ್ಷಾ ವಿಭಾಗದ ಸ್ಕ್ಯಾನಿಂಗ್ ಸೆಂಟರಗೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಕೆಲಸ ಮೊತ್ತ **ರೂ. 2,84,93,044/–** (ತೆರಿಗೆ ರಹಿತ) 2ನೇ ಕರೆ. ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ **ದಿನಾಂಕ: 10–03–2026** ರಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ವಾ.ಸಾ.ಇ./ಬೆಳಗಾವಿ/2040/ 2025–26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ತಾಂಶಾ/ಕ್ರೀಯೋ/280/2025–26 ದಿನಾಂಕ: 10.03.2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದ ಮೇಲಾವಣಿ ದುರಸ್ಥಿ ಮತ್ತು ಟವರ್ ದೀಪಗಳ ಸ್ಟಾಂಡ್ ದುರಸ್ಥಿ ಕಾಮಗಾರಿ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕ್ರೀಡಾಂಗಣದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಿದೆ.

ಟೆಂಡರ್ ವಿವರ : 1) ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದ ಮೇಲ್ಛಾವಣಿ ದುರಸ್ಥಿ ಮತ್ತು ಟವರ್ ದೀಪಗಳ ಸ್ಟಾಂಡ್ ದುರಸ್ಥಿ ಕಾಮಗಾರಿ. ಟೆಂಡರ್‌ಗೆ ಇಟ್ಟ ಮೊತ್ತ : ರೂ. 236.69 ಲಕ್ಷಗಳು, ಇಎಂಡಿ ಮೊತ್ತ : ರೂ. 3,55,044/–. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 30.03.2026, ಸಮಯ 16.30 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 01.04.2026 ಸಮಯ 11.00 ಗಂಟೆ, 2) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕ್ರೀಡಾಂಗಣದ ವಿವಿಧ ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗೆ ಇಟ್ಟ ಮೊತ್ತ : ರೂ. 194.80 ಲಕ್ಷಗಳು, ಇಎಂಡಿ ಮೊತ್ತ : ರೂ. 2,92,194/–. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 26.03.2026, ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27.03.2026 ಸಮಯ 16.30 ಗಂಟೆ.

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಸಹಾಯಕ ಕಾರ್ಯಪಾಲಕ ಅಭಿಯಂತರರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

DIPR/CP/6171/NR/2025-26

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಐ.ಎಫ್.ಟಿ.ಸಂಖ್ಯೆ: 42/2025–26 ದಿನಾಂಕ: 06.03.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1,2 &3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.81.00 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.69 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 16–03–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1170/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, 3ನೇ ಮಹಡಿ, ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಕಟ್ಟಡ, ಯಶವಂತಪುರ, ಬೆಂಗಳೂರು–560022. ದೂ. ಸಂಖ್ಯೆ: 080–23570382
ಇ–ಮೇಲ್: jcctdgsto1.bng@ka.gov.in

ಸಂ: ವಾತೆಜಂಆ(ಆ)/ವಿಸ&ಸೇತೆಕ–01/ಎಸ್‌ಟಿಎನ್/ಸಿಆರ್–11/25–26 ದಿನಾಂಕ: 10.03.2026

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು **16 (ಹದಿನಾರು) ತಾಂತ್ರಿಕ ವಿಶ್ಲೇಷಕರು** (**Technical Analysts**)ಗಳ ಸೇವೆಯನ್ನು ಹೆಸರಾಂತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯಲು ಕೆ.ಟಿ.ಪಿ.ಪಿ ಕಾಯ್ದೆ 1999ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 10.03.2026** ರಂದು ಇ–ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ. ಪೂರಕ ದಾಖಲೆಗಳೊಂದಿಗೆ ಅರ್ಜಿ/ಬಿಡ್ಡು ಸಲ್ಲಿಸಲು ಕೊನೆಯ ದಿನಾಂಕ: **17.03.2026** ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ ದೂರವಾಣಿ ಸಂಖ್ಯೆ: **080–23470479** ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https:// kppp.karnataka.gov.in / https://gst.kar.nic.in**

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಬೆಂಗಳೂರು.

ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ,

ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001. ದೂರವಾಣಿ: 080–22032034
ಇ–ಮೇಲ್: us2.rr.rev.dept@gmail.com

ಸಂಖ್ಯೆ: ಕಂಇ 03 ಬಿಆರ್‌ಆರ್ 2026/Call-2 ದಿನಾಂಕ: 07.03.2026

ಇ–ಟೆಂಡರ್ ಪ್ರಕಟಣೆ

ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಈ ಕಛೇರಿಗೆ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ **ದಲಾಯತ್–04, ವಾಹನ ಚಾಲಕರು–01, ಡಾಟಾ ಎಂಟ್ರಿ ಆಪರೇಟರ್–02** ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಸಂಸ್ಥೆಯ ಮುಖಾಂತರ ಪಡೆಯಲು ಇ–ಟೆಂಡರನ್ನು e-Procurement Portal ಮುಖಾಂತರ ಸ್ಪರ್ಧಾತ್ಮಕ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರನ್ನು ಆಸಕ್ತ ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಆಹ್ವಾನಿಸಲಾಗಿರುತ್ತದೆ.

ಆಸಕ್ತ ಸಂಸ್ಥೆಯವರು ಇ–ಟೆಂಡರ್ ವಿವರಗಳನ್ನು https://kppp.karnataka.gov.in ನಲ್ಲಿ ಪಡೆಯಬಹುದು ಹಾಗೂ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ನಲ್ಲಿ ನಿರ್ದೇಶಿಸಿದಂತೆ ಪಾವತಿಸಿ, ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಈ ಕೆಳಗೆ ಸಹಿ ಮಾಡಿರುವ ಸಹಿದಾರರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

01) ಮಾನವ ಸಂಪನ್ಮೂಲ ಸೇವೆಯನ್ನು ಬಳಸುವ ಕಛೇರಿಯ ಹೆಸರು ಮತ್ತು ಇ–ಟೆಂಡರ್ ಸಂಖ್ಯೆ: ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಈ ಕಛೇರಿಗೆ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್–02 ದಲಾಯತ್–04, ವಾಹನ ಚಾಲಕರು–01, ಹುದ್ದೆಗಳ ಸೇವೆಯನ್ನು ಒದಗಿಸುವುದು. https://kppp.karnataka.gov.in

02) ಹೊರಗುತ್ತಿಗೆ ಸೇವಾ ಅವಧಿ: ಗುತ್ತಿಗೆ ಅವಧಿಯು ಆದೇಶ ಹೊರಡಿಸಿದ ದಿನಾಂಕದಿಂದ ಒಂದು (01) ವರ್ಷದ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ ಮತ್ತು ಅವಶ್ಯಕತೆ ಇದ್ದಲ್ಲಿ ಮತ್ತೆ ಮುಂದುವರೆಸುವುದಕ್ಕೆ ಒಳಪಟ್ಟಿರುತ್ತದೆ.

03) ಅರ್ಜಿ ನಮೂನೆ ಶುಲ್ಕ: https://kppp.karnataka.gov.in ನಲ್ಲಿ ನಿರ್ದೇಶಿಸಿದಂತೆ ಪಾವತಿಸಬೇಕು.

04) E.M.D (ಇ.ಎಂ.ಡಿ): ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ಸದರಿ ಮೊತ್ತವನ್ನು https://kppp.karnataka.gov.in ನಲ್ಲಿ ಇ.ಎಂ.ಡಿ ಜಮೆಗೆ ಕ್ರಮ ವಹಿಸುವುದು.

05) ಇ–ಟೆಂಡರ್ ದಸ್ತಾವೇಜುಗಳನ್ನು ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ಪಡೆಯಬಹುದಾದ ದಿನಾಂಕ: **09/03/2026 ರಿಂದ ದಿನಾಂಕ: 17/03/2026 ರವರೆಗೆ.**

06) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಮತ್ತು ವೇಳೆ: **17/03/2026 ರಂದು ಸಂಜೆ 4.00 ಗಂಟೆಯೊಳಗೆ.**

07) ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ತಾಂತ್ರಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **18/03/2026 ರಂದು ಅಪರಾಹ್ನ 04.01 ಗಂಟೆಗೆ.**

08) ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ಆರ್ಥಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **07/04/2026 ರಂದು ಅಪರಾಹ್ನ 12.00 ಗಂಟೆಗೆ.**

ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ–2,
ಕಂದಾಯ ಇಲಾಖೆ (ಪುನರ್ವಸತಿ ಮತ್ತು ಪುನರ್‌ನಿರ್ಮಾಣ),
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ವಾಸಾಸಂಇ/ವಾ.ಪ್ರ/6136/ಎಂಎಎ/25–26

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ತಾಲೂಕು ಪಂಚಾಯತ್ ಗಜೇಂದ್ರಗಡ

ಬಸ್ ಡಿಪೋ ಹತ್ತಿರ, ಗದಗ ರಸ್ತೆ, ಗಜೇಂದ್ರಗಡ–582114
email- eotpgajendragad@gmail.com

ನಂ:ತಾ.ಪಂ./ಗಜೇಂದ್ರಗಡ//ಟೆಂಡರ/2025–26 ದಿನಾಂಕ: 10.03.2026

ಕೆಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ
Standard Bid Document KW-1 [ದ್ವಿ–ಲಕೋಟೆ ಪದ್ಧತಿ]

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಗಜೇಂದ್ರಗಡ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW-1ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಮಂಜೂರಾದ ಕಾಮಗಾರಿಗಳಿಗೆ, ಲೆಕ್ಕ ಶೀರ್ಷಿಕೆ: 2515–00–102–0–62 (059) 2025–26ನೇ ಸಾಲಿನ ತಾಲೂಕ ಪಂಚಾಯತ ಅನಿರ್ಬಂಧಿತ ಅನುದಾನ ಯೋಜನೆಯಡಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಪೂರೈಕೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (**https://kppp.karnataka.gov.in**) ಮುಖಾಂತರ ಭಾಗವಹಿಸಬಹುದು.

Indent Nos: RDPR/2025-26/IND13821

ಸಾಮಾನ್ಯ ಸೂಚನೆಗಳು: 1) ಇ–ಪೋರ್ಟಲ್ ಮೂಲಕ ಮಾಹಿತಿ ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ **ದಿನಾಂಕ: 13/03/2026 ಮಧ್ಯಾಹ್ನ 2.00 ಗಂಟೆಯವರೆಗೆ** 2) ಇ–ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:13/03/2026 ಮಧ್ಯಾಹ್ನ 2.00 ಗಂಟೆಯವರೆಗೆ** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17/03/2026 ಮಧ್ಯಾಹ್ನ 2.00 ಗಂಟೆಗೆ** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 18/03/2026 ಮಧ್ಯಾಹ್ನ 2.30 ಗಂಟೆಗೆ** ಹಾಗೂ ಯಾವುದೇ ಬಿಡ್ ನಿಗದಿತ ದಿನಾಂಕದ ಒಳಗಡೆ ಸಲ್ಲಿಕೆಯಾಗದಿದ್ದಲ್ಲಿ **3** ದಿನಗಳ ಸ್ವಯಂ ಚಾಲಿತವಾಗಿ ದಿನಾಂಕ ವಿಸ್ತರಣೆಯಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಗಜೇಂದ್ರಗಡ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. **ದೂರವಾಣಿ ಸಂಖ್ಯೆಗಳು: 9741808701 & 9611453338 ಟೆಂಡರ್ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:–** ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕ ಪಂಚಾಯತ ಗಜೇಂದ್ರಗಡ

ವಾ.ಸಾ.ಇ/ಗದಗ/701/ದೇಶಪಾಂಡೆಪಬ್ಲಿಸಿಟಿ/2025–26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
CIN : U41000KA2016SGC097260
ನೋ.ಕ:ನಂ.148, ಎಂಬೆಸಿ ಸ್ವೇರ್, ಇನ್‌ಫೆಂಟರಿ ರಸ್ತೆ, ಬೆಂಗಳೂರು–560001.
ದೂರವಾಣಿ:080–22289966 / 22256688 ಫಾಕ್ಸ: 080–22264477
ವೆಬ್‌ಸೈಟ್: https://vjnl.karnataka.gov.in. ಇ–ಮೇಲ್: vjnlfinance@gmail.com

ಸಂ: ವಿಜನಿನಿ/2025–26/SE0156/CALL-2 ದಿನಾಂಕ: 11.03.2026

ಟೆಂಡರ್ ಅಧಿಸೂಚನೆ

ಆರ್ಥಿಕ ವರ್ಷ 2025–26, 2026–27 ಮತ್ತು 2027–28ರ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಕೋಟೇಶನ್‌ಗಳ ಅಹ್ವಾನ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು (VJNL) 2013ರ ಕಂಪನಿ ಕಾಯ್ದೆಯಡಿ ನೋಂದಾಯಿತವಾಗಿದ್ದು, ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಮತ್ತು ಕುಡಿಯುವ ನೀರಿನ ಯೋಜನೆಯನ್ನು ಮತ್ತು ಅವುಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ವಹಿಸಿಕೊಂಡಿರುವ ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯದ ಉದ್ಯಮವಾಗಿದೆ. ಕಂಪನಿಯ ನೋಂದಾಯಿತ ಕಛೇರಿ ಬೆಂಗಳೂರಿನಲ್ಲಿ ಮತ್ತು ಕೇಂದ್ರ ಕಛೇರಿ ಚಿತ್ರದುರ್ಗದಲ್ಲಿದೆ. ಪ್ರಸ್ತುತ ಇದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 24 ಕಛೇರಿಗಳನ್ನು ಹೊಂದಿದೆ.

ಕಂಪನಿಯು 2025–26, 2026–27 ಮತ್ತು 2027–28ನೇ ಹಣಕಾಸು ವರ್ಷಗಳಿಗೆ ನಿಗಮದ ಅಧೀನ ಕಛೇರಿಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಟೆಂಡರ್‌ಗಳನ್ನು ಆಹ್ವಾನಿಸಿದೆ. ಆರ್‌ಎಫ್‌ಕ್ಯು ದಾಖಲೆಗಳಲ್ಲಿ ಸೂಚಿಸಿದಂತೆ ನಿಗದಿತ ಪೂರ್ವ–ಅರ್ಹತೆಯನ್ನು ಹೊಂದಿರುವ ಅರ್ಹ ಚಾರ್ಟರ್ಡ್ ಅಕೌಂಟೆಂಟ್/ಕಾಸ್ಟ್ ಅಕೌಂಟೆಂಟ್‌ಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಎಲ್ಲಾ ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ ಮತ್ತು ಉದ್ದೇಶಿತ ಬಿಡ್‌ದಾರರು RFQ ಸಲ್ಲಿಸುವ ಕಾರ್ಯ ವಿಧಾನದ ಬಗ್ಗೆ ಮತ್ತು ಬಿಡ್ ಡಾಕ್ಯುಮೆಂಟ್ ಅನ್ನು **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ವಿನಂತಿಸಲಾಗಿದೆ. ಇನ್ನು ಮುಂದೆ ವೇಳಾಪಟ್ಟಿಯಲ್ಲಿನ ಯಾವುದೇ ಬದಲಾವಣೆಗಳನ್ನು ಸುದ್ದಿ ದಿನಪತ್ರಿಕೆಗಳ ಮೂಲಕ ಪ್ರಕಟಿಸಲಾಗುವುದಿಲ್ಲ ಮತ್ತು ಹೆಚ್ಚಿನ ಬದಲಾವಣೆಗಳನ್ನು ಇ–ಪೋರ್ಟಲ್/ವಿಜೆಎನ್‌ಎಲ್‌ನ ವೆಬ್‌ಸೈಟ್ ಅಂದರೆ **https://vjnl.karnataka.gov.in** ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುತ್ತದೆ. ವೇಳಾಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ: (1) ಆರ್‌ಎಫ್‌ಕ್ಯು (RFQ) ಡಾಕ್ಯುಮೆಂಟ್ ಅನ್ನು ಅಪ್‌ಲೋಡ್ ಮಾಡುವ **ದಿನಾಂಕ: 11.03.2026.** (2) ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 18.03.2026 ಸಂಜೆ 5.00 ಗಂಟೆವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:20.03.2026 ಬೆಳಿಗ್ಗೆ 11.30 ಗಂಟೆಗೆ** (4) ಹಣಕಾಸು ಬಿಡ್ ತೆರೆಯುವ **ದಿನಾಂಕ: 30.03.2026 ಸಂಜೆ 4.30 ಗಂಟೆಗೆ.**

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ 571428, ಮಂಡ್ಯ ಜಿಲ್ಲೆ.
E-mail:manmuluhtmkt25@gmail.com ದೂರವಾಣಿ: 08232–274571

ಐ.ಎಫ್.ಟಿ ಸಂಖ್ಯೆ: ಮಹಾಒ/ಯು.ಹೆಚ್.ಟಿ/ಸಾಗಾಣಿಕಾ ಟೆಂಡರ್/47ಎ/2025–26 ದಿನಾಂಕ: 07.03.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ ರವರು ಈ ಕೆಳಕಂಡ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಅರ್ಹ ಟೆಂಡರ್‌ದಾರರಿಂದ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರ	ಇ.ಎಂ.ಡಿ ಮೊಬಲಗು
01	ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಮುಖ್ಯ ಡೇರಿ ಗೆಜ್ಜಲಗೆರೆ ಯು. ಹೆಚ್. ಟಿ ಘಟಕದಿಂದ ಕರ್ನಾಟಕ ರಾಜ್ಯ ಮತ್ತು ಹೊರ ರಾಜ್ಯ ಗಳಿಗೆ ವಾರ್ಷಿಕ ಅವಧಿಗೆ ವಿವಿಧ ಮಾದರಿಯ ಗುಡ್ ಲೈಫ್ ಹಾಲನ್ನು ಸಾಗಾಣಿಕೆ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ.	
	ಎ. 10 ಎಂ.ಟಿ. ವಾಹನ (8000ಲೀ.)	60,000/–
	ಬಿ. 16 ಎಂ.ಟಿ. ವಾಹನ (11000 ಲೀ.)	80,000/–
	ಸಿ. 21 ಎಂ.ಟಿ. ವಾಹನ (15000 ಲೀ.)	1,00,000/–
	ಡಿ. 25 ಎಂ.ಟಿ. ವಾಹನ (23000 ಲೀ.)	1,50,000/–
	ಇ. 30 ಎಂ.ಟಿ. ವಾಹನ (25000 ಲೀ.)	2,00,000/–

ಟೆಂಡರ್ ದಾಖಲಾತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ: **https://eproc.karnataka.gov.in/.** ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ.


ಕ್ರ.ಸಂ.	ವಿವರ	ದಿನಾಂಕ & ಸಮಯ
01	ಟೆಂಡರ್ ಪ್ರಾರಂಭವಾಗುವ ದಿನಾಂಕ	12.03.2026 ರಿಂದ 10.04.2026 ರ ಸಂಜೆ 05:00 ಗಂಟೆಗೆ
02	ಟೆಂಡರ್ ಪ್ರೀಬಿಡ್ ಮೀಟಿಂಗ್	25.03.2026 ಬೆಳಿಗ್ಗೆ 11.00 ಗಂಟೆಗೆ
03	ಟೆಂಡರ್ ಅಪ್ ಲೋಡಿಂಗ್ ಮಾಡಲು ಕೊನೆಯ ದಿನಾಂಕ	10.04.2026 ಸಂಜೆ 5.00 ಗಂಟೆಯೊಳಗೆ
04	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	16.04.2026 ಬೆಳಿಗ್ಗೆ 11.00 ಗಂಟೆಗೆ
05	ವಾಣಿಜ್ಯ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಬುಧವಾರ • ಮಾರ್ಚ್ 11, 2026
ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ವರುಣ್ ಧವನ್ ಸಿನಿಮಾ ಮುಂದಕ್ಕೆ


ವರುಣ್ ಧವನ್


ಪೂಜಾ ಹೆಗ್ಡೆ

ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ಮುಂದೂಡಿಕೆಯಾಗಿ ಜೂನ್ 4ರಂದು ತೆರೆಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ವರುಣ್ ಧವನ್, ಪೂಜಾ ಹೆಗ್ಡೆ ಹಾಗೂ ಮೃಣಾಲ್ ಠಾಕೂರ್ ನಟನೆಯ 'ಹೇ ಜವಾನಿ ತೊ ಇಷ್ಕ್ ಹೋನಾ ಹೇ' ಸಿನಿಮಾವನ್ನು ಚಿತ್ರತಂಡ ಮುಂದೂಡಿದೆ.

ಈ ಸಿನಿಮಾ ಜೂನ್ 5ರಂದು ತೆರೆ-ಕಾಣಬೇಕಿತ್ತು. ಇದೀಗ ಜೂನ್ 12ರಂದು ಸಿನಿಮಾ ಬಿಡುಗಡೆ ಮಾಡುವುದಾಗಿ ಚಿತ್ರತಂಡ ತಿಳಿಸಿದೆ.

'ಹಲವು ತಿಂಗಳುಗಳ ಹಿಂದೆಯೇ ನಮ್ಮ ಸಿನಿಮಾದ ಬಿಡುಗಡೆ ದಿನಾಂಕವನ್ನು ಘೋಷಿಸಿದ್ದೆವು. ಇತ್ತೀಚೆಗಿನ ಕೆಲವು ಬದಲಾವಣೆಗಳ ಕಾರಣ ಸಿನಿಮಾವನ್ನು ಮುಂದೂಡುವುದು ಸೂಕ್ತ ಎಂದು ಭಾವಿಸಿದ್ದೇವೆ. ಸಿನಿಮಾ ನಿರ್ಮಾಣ ಮಾಡುವವರು ಅನಗತ್ಯವಾಗಿ ಒಂದೇ ದಿನದಂದು ಪರಸ್ಪರ ಸ್ಪರ್ಧೆ ಮಾಡುವುದರ ಬದಲು ಬೆಂಬಲವಾಗಿ ನಿಲ್ಲುವುದು ಆರೋಗ್ಯಕರ ಚಿತ್ರರಂಗಕ್ಕೆ ಒಳ್ಳೆಯದೆಂದು ಭಾವಿಸಿದ್ದೇವೆ' ಎಂದು ಚಿತ್ರತಂಡ ಹೇಳಿದೆ.

ಈ ಸಿನಿಮಾವನ್ನು ಡೇವಿಡ್ ಧವನ್ ನಿರ್ದೇಶಿಸಿದ್ದು, ರಮೇಶ್ ಟಿ.ನಿರ್ಮಾಣ ಮಾಡಿದ್ದಾರೆ.

ಕೋಟಿಗೊಬ್ಬ ಬೆಳ್ಳಿಹಬ್ಬದಲ್ಲಿ ವಿಷ್ಣು ಸ್ಮರಣೆ

ವಿಷ್ಣುವರ್ಧನ್ ಅಭಿನಯದ 'ಕೋಟಿಗೊಬ್ಬ' ಚಿತ್ರ ಬಿಡುಗಡೆಯಾಗಿ 25 ವರ್ಷಗಳಾಗಿವೆ. ಇದನ್ನು ಸಂಭ್ರಮಿಸಲು ಚಿತ್ರತಂಡ ಇತ್ತೀಚೆಗಷ್ಟೇ ಬೆಳ್ಳಿಹಬ್ಬ ಕಾರ್ಯಕ್ರಮ ಹಮ್ಮಿಕೊಂಡಿತ್ತು. ನಟರಾದ ದೇವರಾಜ್, ಉಪೇಂದ್ರ, ಗಣೇಶ್, ನಟಿ ಪ್ರಿಯಾಂಕಾ ಉಪೇಂದ್ರ ಮುಂತಾದವರು ಕಾರ್ಯಕ್ರಮದಲ್ಲಿ ಭಾಗಿಯಾಗಿ ವಿಷ್ಣುವರ್ಧನ್ ಜತೆಗಿನ ನೆನಪುಗಳನ್ನು ಹಂಚಿಕೊಂಡರು.

'ನಾನು ಯಾವಾಗ ಮನೆಗೆ ಹೋದರೂ, ವಿಷ್ಣು ಅವರು ನನ್ನನ್ನು ತಮ್ಮನ ರೀತಿ ಸ್ವಾಗತಿಸುತ್ತಿದ್ದರು. ಅವರ ಮನೆಯ ತೂಗುಯ್ಯಾಲೆಯಲ್ಲಿ ಕೂರಿಸಿ-ಕೊಳ್ಳುತ್ತಿದ್ದರು. ಅಲ್ಲಿ ಭಾರತಿ ಅವರು ಕೈತುತ್ತು ನೀಡುತ್ತಿದ್ದರು. ಅವರ ಶಿಸ್ತು ಸಂಯಮಗಳನ್ನೇ ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ಮುಂಬೈನಲ್ಲಿ 'ಕೋಟಿಗೊಬ್ಬ' ಚಿತ್ರದ ಚಿತ್ರೀಕರಣಕ್ಕಾಗಿ 30 ದಿನ ಅವರ ಜತೆ ಕಳೆದದ್ದು ಮರೆಯಲಾಗದು' ಎಂದರು ದೇವರಾಜ್.

'ವಿಷ್ಣು ಸರ್ ಅವರನ್ನು ಮಾತಾಡಿಸಬೇಕೆಂದೇ ನಾನು ಅವರ ಮನೆಗೆ ಹೋಗುತ್ತಿದ್ದೆ. ಅಧ್ಯಾತ್ಮ, ದೇವರ ಬಗ್ಗೆ ತುಂಬಾ ಹೇಳುತ್ತಿದ್ದರು. ಅವರಿಂದ ನಾನು ಸ್ಫೂರ್ತಿ ಪಡೆಯುತ್ತಿದ್ದೆ. ನಿಮ್ಮ ಸಿನಿಮಾಗಳು ಬೇರೆಯದೇ ಪ್ರೇಕ್ಷಕರನ್ನು ಹುಟ್ಟು ಹಾಕ್ತಿವೆ ಎಂದು ನನ್ನ ಸಿನಿಮಾಗಳನ್ನು ಅವರು ಮೆಚ್ಚಿಕೊಳ್ಳುತ್ತಿದ್ದರು' ಎಂದು ವಿಷ್ಣುವರ್ಧನ್ ಜತೆಗಿನ ಒಡನಾಟವನ್ನು ಮೆಲುಕು ಹಾಕಿದರು ಉಪೇಂದ್ರ.

'ನಾನು ವಿಷ್ಣು ಸರ್ ದೊಡ್ಡ ಅಭಿಮಾನಿ. ಅವರಂತೆ ನನ್ನ ಕೈಗೂ ಕಡಗ ಹಾಕಿಕೊಂಡಿದ್ದೇನೆ. ಅವರ ಸಿನಿಮಾಗಳನ್ನು ಬ್ಲಾಕ್‌ನಲ್ಲಿ ಟಿಕೆಟ್ ತೆಗೆದುಕೊಂಡು ನೋಡುತ್ತಿದ್ದೆ' ಎಂದರು ಗಣೇಶ್.

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಚಿತ್ರದ ನಿರ್ದೇಶಕ ನಾಗಣ್ಣ, ನಿರ್ಮಾಪಕ ಸೂರಪ್ಪ ಬಾಬು, ಪ್ರಿಯಾಂಕಾ ಉಪೇಂದ್ರ, ಗೀತರಚನೆಕಾರ ಕೆ.ಕಲ್ಯಾಣ್, ನಟ ಗುರುದತ್ ಮುಂತಾದವರು ವಿಷ್ಣುವರ್ಧನ್ ಜತೆಗಿನ ತಮ್ಮ ಒಡನಾಟವನ್ನು ಹಂಚಿಕೊಂಡರು.


ಕಾರ್ಯಕ್ರಮದಲ್ಲಿ ಅತಿಥಿಗಳೊಂದಿಗೆ ಸಿನಿ ತಾರೆಯರು

ಮತ್ತೆ ಸೆಟ್ಟೇರುತ್ತಿದೆ 'ಮುಳ್ಳಿನ ಗುಲಾಬಿ'


ಚಿತ್ರದ ಪೋಸ್ಟರ್

ಅನಂತ ನಾಗ್, ಆರತಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದ 'ಮುಳ್ಳಿನ ಗುಲಾಬಿ' 1982ರಲ್ಲಿ ತೆರೆಕಂಡಿತ್ತು. 44 ವರ್ಷಗಳ ನಂತರ ಅದೇ ಶೀರ್ಷಿಕೆಯ ಚಿತ್ರ ಸೆಟ್ಟೇರಲು ಸಿದ್ಧವಾಗಿದೆ. ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಚಿತ್ರಕ್ಕೆ ಸ್ಮೈಲ್ ಶಿವು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಹೆಣ್ಣೊಬ್ಬಳು ಚಿಕ್ಕ ವಯಸಿನಲ್ಲೇ ಮದುವೆಯಾಗಿ ಗಂಡನ ಮನೆಗೆ ಹೋದಾಗ ಏನೆಲ್ಲ ಆಗುತ್ತದೆ ಎಂಬುದೇ ಕಥೆ. ಆ ಮನೆಯಲ್ಲಿ ಅತ್ತೆ, ಮಾವನ ಕಡೆಯಿಂದ ಏನೆಲ್ಲ ಕಿರುಕುಳ, ಕಷ್ಟಗಳನ್ನು ಅನು-ಭವಿಸುತ್ತಾಳೆ, ಕೊನೆಗೆ ಅದನ್ನೆಲ್ಲ ಎದುರಿಸಿ ಹೇಗೆ ಸಮಾಜದಲ್ಲಿ ಬೆಳೆದು ನಿಲ್ಲುತ್ತಾಳೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ. ಆಶಾ ಗುರುಲಿಂಗಯ್ಯ ಅವರ ಕಾದಂಬರಿಯನ್ನಾಧರಿಸಿದ ಚಿತ್ರವಿದು' ಎಂದರು ನಿರ್ದೇಶಕ.

ಭೂಮಿಕಾ ಸಿನಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಬಿ.ಕೆ.ಶಿವಕುಮಾರ್ ಬಂಡವಾಳ ಹೂಡುತ್ತಿದ್ದಾರೆ. ಆಶಾ ಗುರುಲಿಂಗಯ್ಯ ಪ್ರಮುಖ ಪಾತ್ರದಲ್ಲಿದ್ದಾರೆ. ರವಿ ಸುವರ್ಣ ಛಾಯಾಚಿತ್ರಗ್ರಹಣ, ವಿನು ಮನಸು ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.



4ನೇ ಆವೃತ್ತಿ

ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'-ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಮೇಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಸ್ಪೀಕರ್ ಪದಚ್ಯುತಿಗೆ ಪಟ್ಟು: ಕೋಲಾಹಲ

ಪ್ರಜಾಪ್ರಭುತ್ವದ ಮೇಲಿನ ದಾಳಿಗೆ ಸಮಾನ: ಕಿರಣ್ ರಿಜಿಜು

ನವದೆಹಲಿ (ಪಿಟಿಐ): ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯ ಕುರಿತ ಚರ್ಚೆಯು ಮಂಗಳವಾರ ಲೋಕಸಭೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವಿನ ವಾಕ್ಸಮರಕ್ಕೆ ಕಾರಣವಾಯಿತು.

'ಸರ್ಕಾರದ ಒತ್ತಡಕ್ಕೆ ಮಣಿಯದೆ ಸಂಸತ್ತಿನ ಕಲಾಪಗಳನ್ನು ನ್ಯಾಯಯುತವಾಗಿ ನಡೆಸುವ ಸ್ಪೀಕರ್ ಬೇಕು' ಎಂದು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರೆ, 'ಸ್ಪೀಕರ್ ಓಂ ಬಿರ್ಲಾ ಅವರು ನಿಷ್ಪಕ್ಷಪಾತವಾಗಿ ನಡೆದುಕೊಂಡಿದ್ದಾರೆ. ವಿರೋಧ ಪಕ್ಷಗಳ ಸದಸ್ಯರಿಗೆ ಸದನದಲ್ಲಿ ಅಭಿಪ್ರಾಯ ಮಂಡಿಸಲು ಹೆಚ್ಚಿನ ಅವಕಾಶ ನೀಡಿದ್ದಾರೆ' ಎಂದು ಆಡಳಿತಾರೂಢ ಎನ್‌ಡಿಎ ಅವರನ್ನು ಬಲವಾಗಿ ಸಮರ್ಥಿಸಿಕೊಂಡಿತು.

'ಸ್ಪೀಕರ್ ಬಿರ್ಲಾ ಅವರು ಸಜ್ಜನ. ಆದರೆ, ಸರ್ಕಾರದ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದು ವಿರೋಧ ಪಕ್ಷದ ಸಂಸದರು ದೂರಿದರು.

ಡಿಎಂಕೆ ಮುಖಂಡ ಟಿ.ಆರ್. ಬಾಲು ಅವರು ಬಿರ್ಲಾ ಅವರನ್ನು 'ಸಜ್ಜನ' ಎಂದು ಹೊಗಳಿದರು. ಆದರೆ, ವಿರೋಧ ಪಕ್ಷಗಳ ಸದಸ್ಯರ ವಿರುದ್ಧ ಅವರು ಕೈಗೊಂಡ ಕಠಿಣ ಕ್ರಮಗಳಿಗೆ ವಿಷಾದ ವ್ಯಕ್ತಪಡಿಸಿದರು. ತಮ್ಮ ನಡವಳಿಕೆಯಲ್ಲಿ ಸ್ಪೀಕರ್ ಬದಲಾವಣೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಟಿಡಿಪಿ ಸದಸ್ಯ ಲಾವು ಶ್ರೀಕೃಷ್ಣ ದೇವರಾಯಲು ಕೂಡ ಬಿರ್ಲಾ ಅವರನ್ನು ಹೊಗಳಿದರು. 'ಅವಿಶ್ವಾಸ ನಿರ್ಣಯ ಮಂಡಿಸುತ್ತಿರುವುದು ಯಶಸ್ವಿಯಾಗಲು ಅಲ್ಲ, ಕೆಲವು ಮಹತ್ವದ ಬದಲಾವಣೆ ಆಗಲಿ' ಎಂದು ಅವರು ಹೇಳಿದರು.

ಶಿವಸೇನಾ (ಯುಬಿಟಿ) ಸದಸ್ಯ ಅರವಿಂದ್ ಸಾವಂತ್ ಕೂಡ ಸ್ಪೀಕರ್ ಓಂ ಬಿರ್ಲಾ ಅವರನ್ನು 'ಸಜ್ಜನ' ಎಂದು ಕರೆದರು. ಆದರೆ, ವಿರೋಧ ಪಕ್ಷದ ವಿರುದ್ಧ ಕ್ರಮವಹಿಸಲು ವಹಿಸಲು ಅವರಿಗೆ ಹೆಚ್ಚು ಒತ್ತಡ ಇದೆ' ಎಂದರು.

ಪ್ರಮುಖ ಅಂಶಗಳು

- ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ವಿರೋಧ ಪಕ್ಷದ ಸದಸ್ಯರು ಸ್ಪೀಕರ್ ಪೀಠದ ಎದುರು ನುಗ್ಗಿ ಮತಕಳ್ಳತನದ ವಿರುದ್ಧ ಪ್ರತಿಭಟನೆ ನಡೆಸಿದ್ದರಿಂದ ಲೋಕಸಭೆಯ ಕಲಾಪವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಲಾಯಿತು.
- ಬಿರ್ಲಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಮಂಡಿಸಲು ಕೋರಿ ಕಾಂಗ್ರೆಸ್‌ನ ಮೊಹಮ್ಮದ್ ಜಾವೇದ್ ಅವರು ನೋಟಿಸ್ ಓದಿದರು.
- 'ರಾಹುಲ್ ಅವರನ್ನು ನಗರ ನಕ್ಸಲ್ ಎಂದು ಕರೆದಿರುವ ಕೇಂದ್ರ ಸಚಿವ ಗಿರಿರಾಜ್ ಸಿಂಗ್, ಅವರನ್ನು ಕೊನೆಯ ಮೊಘಲ್ ದೊರೆ ಬಹದ್ದೂರ್ ಶಾ ಜಾಫರ್‌ಗೆ ಹೋಲಿಸಿದ್ದಾರೆ.



ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಲೋಕಸಭೆಯಲ್ಲಿ ಮಂಗಳವಾರ ಮಾತನಾಡಿದರು —ಪಿಟಿಐ ಚಿತ್ರ

'ಪ್ರಜಾಪ್ರಭುತ್ವದ ಮೇಲಿನ ದಾಳಿ'

ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ ಕಾಂಗ್ರೆಸ್ ವಿರುದ್ಧ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಾಗ್ದಾಳಿ ನಡೆಸಿದ್ದಾರೆ.

'ಕಾಂಗ್ರೆಸ್ 2014ರಲ್ಲಿ ಅಧಿಕಾರದಿಂದ ಕೆಳಗೆ ಇಳಿದ ನಂತರ, ಸಾಂವಿಧಾನಿಕ ಸಂಸ್ಥೆಗಳ ಮೇಲೆ ಸತತ ದಾಳಿ ನಡೆಸುವುದನ್ನು ಮುಂದುವರಿಸಿದೆ. ಈ ಬಾರಿ ಸ್ಪೀಕರ್ ಹುದ್ದೆಯನ್ನು ಕೇಂದ್ರೀಕರಿಸಿ ದಾಳಿ ನಡೆಯುತ್ತಿದ್ದು, ಇದು ಪ್ರಜಾಪ್ರಭುತ್ವದ ಮೇಲಿನ ದಾಳಿಗೆ ಸಮಾನ' ಎಂದು ಅವರು ಹೇಳಿದರು.

'ಸ್ಪೀಕರ್ ಸ್ಥಾನದಲ್ಲಿದ್ದುಕೊಂಡು ಓಂ ಬಿರ್ಲಾ ತೆಗೆದುಕೊಂಡ ಕ್ರಮಗಳನ್ನು ರಿಜಿಜು ಬಲವಾಗಿ ಸಮರ್ಥಿಸಿಕೊಂಡರು. ಲೋಕಸಭೆಯಲ್ಲಿ ಸ್ಪೀಕರ್ ತೀರ್ಮಾನವೇ ಅಂತಿಮ ಎಂದು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ರಾಜೀವ್ ಗಾಂಧಿ ಸಹ ಪುನರುಚ್ಚರಿಸುತ್ತಿದ್ದರು' ಎಂದು ರಿಜಿಜು ಹೇಳಿದರು. 'ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದು ಇಷ್ಟವಿಲ್ಲ, ಆದರೆ, ರಾಜಕೀಯ ಒತ್ತಡದಿಂದ ಇದನ್ನು ಬೆಂಬಲಿಸುತ್ತಿದ್ದೇವೆ' ಎಂದು ವಿರೋಧ ಪಕ್ಷಗಳ 50 ಸದಸ್ಯರು ವೈಯಕ್ತಿಕವಾಗಿ ನನಗೆ ತಿಳಿಸಿದ್ದಾರೆ' ಎಂದು ರಿಜಿಜು ಹೇಳಿದರು.

'ರಾಹುಲ್‌ಗಿಂತ ಪ್ರಿಯಾಂಕಾ ಉತ್ತಮರು'

'ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಸದನದ ನಿಯಮಗಳನ್ನು ಕಡೆಗಣಿಸುತ್ತಿದ್ದು, ತಮ್ಮ ನಡವಳಿಕೆಯಲ್ಲಿ ಅಪ್ರಬುದ್ಧತೆ ತೋರುತ್ತಿದ್ದಾರೆ. ರಾಹುಲ್ ಅವರಿಗಿಂತಲೂ ಕಾಂಗ್ರೆಸ್ ಸದಸ್ಯೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಲೋಕಸಭೆಯಲ್ಲಿ ವಿರೋಧ ಪಕ್ಷದ ಉತ್ತಮ ನಾಯಕರಾಗಬಲ್ಲರು' ಎಂದು ರಿಜಿಜು ಅವರು ಹೇಳಿದರು.

'ಸ್ಪೀಕರ್ ಅವರಿಗಿಂತ ನಾವೇ ದೊಡ್ಡವರು ಎಂದು ಕೆಲವರು ಭಾವಿಸಿದ್ದರೆ ಅದಕ್ಕೆ ಯಾವುದೇ ಔಷಧ ಇಲ್ಲ' ಎಂದು ರಾಹುಲ್ ಹೆಸರು ಉಲ್ಲೇಖಿಸದೆ ಟೀಕಿಸಿದರು.

'ಪ್ರಧಾನಿ ವಿರುದ್ಧ ವಿರೋಧ ಪಕ್ಷಗಳು ನಡೆಸುತ್ತಿರುವ ಕೆಸರೆರಚಾಟ ಯಾವುದೇ ಫಲ ನೀಡುವುದಿಲ್ಲ. ಅವರು ಕಮಲದಂತೆ ಪರಿಶುದ್ಧವಾಗಿದ್ದಾರೆ' ಎಂದು ರಿಜಿಜು ಅವರು ಹೇಳಿದರು.

'ಬಂಗಾಳ: ನ್ಯಾಯಯುತ ಚುನಾವಣೆ ಗುರಿ'



ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಧರಣಿಯನ್ನು 5ನೇ ದಿನವೂ ಮುಂದುವರಿಸಿದ್ದಾರೆ. ಹಸಿರು ಬಣ್ಣದ ಕ್ಯಾನ್ವಾಸ್‌ನಲ್ಲಿ ಬಿಳಿ ಬಣ್ಣದಿಂದ 'ಎಸ್‌ಐಆರ್' ಎಂದೂ 'ವ್ಯಾನಿಶ್' (ಅಳಿಸು) ಎಂದು ಬರೆದರು. ಮತದಾರರನ್ನು ಪಟ್ಟಿಯಿಂದ ಅಳಿಸಿ ಹಾಕಿರುವುದನ್ನು ಸಂಕೇತಿಸುವಂತೆ ಬಿಳಿ ಬಣ್ಣವನ್ನು ವೃತ್ತಾಕಾರವಾಗಿ ಬಳಿದರು. ಜ್ಞಾನೇಶ್ ಕುಮಾರ್ ಅವರು ಮಾಧ್ಯಮಗೋಷ್ಠಿ ನಡೆಸುತ್ತಿದ್ದಾಗಲೇ ಮಮತಾ ಅವರು ಈ ಚಿತ್ರ ಬಿಡಿಸಿದರು —ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳದಲ್ಲಿ ನ್ಯಾಯಯುತ ಮತ್ತು ಶಾಂತಿಯುತ ಚುನಾವಣೆ ನಡೆಯುವಂತೆ ಮಾಡುವುದು ನಮ್ಮ ಗುರಿ. ಅರ್ಹ ಮತದಾರರ ಹೆಸರುಗಳನ್ನು ಯಾವುದೇ ಕಾರಣಕ್ಕೂ ಅಳಿಸಿ ಹಾಕುವುದಿಲ್ಲ' ಎಂದು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಿಳಿಸಿದರು.

ಪಶ್ಚಿಮ ಬಂಗಾಳದಲ್ಲಿ ಕೆಲವೇ ತಿಂಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಈ ಕಾರಣದಿಂದ ಜ್ಞಾನೇಶ್ ಕುಮಾರ್ ಅವರು ರಾಜ್ಯಕ್ಕೆ ಮೂರು ದಿನಗಳ ಭೇಟಿ ನೀಡಿ, ಸಿದ್ಧತೆ ಕುರಿತು ಮಾಹಿತಿ ಪಡೆದುಕೊಂಡರು. ರಾಜಕೀಯ ಪಕ್ಷಗಳು, ಚುನಾವಣಾ ಅಧಿಕಾರಿಗಳನ್ನು ಭೇಟಿ ಮಾಡಿದರು. ಭೇಟಿಯ ಕೊನೇ ದಿನವಾದ ಮಂಗಳವಾರ ಸುದ್ದಿಗೋಷ್ಠಿ ನಡೆಸಿ, ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು.

'ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ರಾಜ್ಯದ ಜನರು ಪಾಲ್ಗೊಳ್ಳುತ್ತಾರೆ ಮತ್ತು ಈ ರಾಜ್ಯದ ಜನರು ಶಾಂತಿಪ್ರಿಯರಾಗಿದ್ದಾರೆ. ಮತದಾರರ ಪಟ್ಟಿಯನ್ನು 'ಪವಿತ್ರ'ವಾಗಿಯೇ ಉಳಿಸಲು ನಾವು ಎಸ್‌ಐಆರ್ ನಡೆಸುತ್ತಿದ್ದೇವೆ. ದೇಶದ ಇತರೆಡೆ ಯಾವ ರೀತಿಯಲ್ಲಿ ಈ ಪ್ರಕ್ರಿಯೆಯನ್ನು ನಡೆಸಿದ್ದೇವೆಯೊ ಅದೇ ರೀತಿಯಲ್ಲಿಯೇ ಪಶ್ಚಿಮ ಬಂಗಾಳದಲ್ಲೂ ಪ್ರಕ್ರಿಯೆ ನಡೆಸಲಾಗಿದೆ' ಎಂದರು.

'ಮತದಾರರ ಪಟ್ಟಿಯ ಕುರಿತು ಸಲ್ಲಿಸಿರುವ ಆಕ್ಷೇಪಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ. ಮತದಾರರ ನೋಂದಣಿ ಅಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳ ಮಟ್ಟದಲ್ಲಿ ಪರಿಹಾರ ಕಂಡುಕೊಳ್ಳಲಾಗದ ಹಲವು ಪ್ರಕರಣಗಳಿವೆ. ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇರುವವರ ಹೆಸರುಗಳನ್ನು 'ನ್ಯಾಯಾಲಯದ ವಿಚಾರಣೆ ಹಂತದಲ್ಲಿರುವ' ಎಂಬ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದೇವೆ' ಎಂದರು.

'ಗೋ ಬ್ಯಾಕ್' ಘೋಷಣೆ: ಜ್ಞಾನೇಶ್ ಕುಮಾರ್ ಮಂಗಳವಾರ ದಕ್ಷಿಣೇಶ್ವರ ಕಾಳಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಜನರ ಗುಂಪು ಕಪ್ಪು ಪಟ್ಟಿ ಪ್ರದರ್ಶಿಸಿ 'ಗೋ ಬ್ಯಾಕ್' ಘೋಷಣೆಗಳನ್ನು ಕೂಗಿತು.



- **ಕಾನೂನು ಸುವ್ಯವಸ್ಥೆ ಕಾಪಾಡುವ ಸಿದ್ಧತೆ ನೋಡಿಕೊಂಡು ಎಷ್ಟು ಹಂತಗಳಲ್ಲಿ ಚುನಾವಣೆ ನಡೆಸಬೇಕು ಎಂದು ನಿರ್ಧರಿಸಲಾಗುತ್ತದೆ. ಈ ಬಗ್ಗೆ ದೆಹಲಿಗೆ ತೆರಳಿದ ಬಳಿಕ ಚರ್ಚಿಸಲಾಗುವುದು**
- **ಮತದಾನ ಪ್ರಕ್ರಿಯೆಯು ಪಾರದರ್ಶಕವಾಗಿರಬೇಕು ಎಂಬ ದೃಷ್ಟಿಯಿಂದ ರಾಜ್ಯದ ಎಲ್ಲ ಮತಗಟ್ಟೆಗಳ ವೆಬ್‌ಕಾಸ್ಟಿಂಗ್ ಮಾಡಲಾಗುವುದು**

ಜ್ಞಾನೇಶ್ ಕುಮಾರ್, ಮುಖ್ಯ ಚುನಾವಣಾ ಅಧಿಕಾರಿ

'ಅಗತ್ಯ ನೆರವು ನೀಡಿ'

ಮತದಾರರ ಪಟ್ಟಿಯಿಂದ ಕೈಬಿಡಲಾದ ಹೆಸರುಗಳ ಸಂಬಂಧ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸಲು ತೆರಳಿರುವ ನ್ಯಾಯಾಂಗದ ಅಧಿಕಾರಗಳಿಗೆ ಅಗತ್ಯ ನೆರವು ನೀಡಿ ಎಂದು ಪಶ್ಚಿಮ ಬಂಗಾಳ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚನೆ ನೀಡಿದೆ.

ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಕುರಿತಾಗಿ ಉಲ್ಲೇಖ
ಕ್ಷಮೆಯಾಚಿಸಿದ ಎನ್‌ಸಿಇಆರ್‌ಟಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪ್ರಕಟಿಸಿರುವ 8ನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕದಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಅಧ್ಯಾಯದ ಕುರಿತು ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ, ಎನ್‌ಸಿಇಆರ್‌ಟಿ ಸಾರ್ವಜನಿಕವಾಗಿ ಕ್ಷಮೆಯಾಚಿಸಿದೆ. ಅಲ್ಲದೇ, ಪುಸ್ತಕ ಹಿಂದಕ್ಕೆ ಪಡೆಯುವುದಾಗಿ ತಿಳಿಸಿದೆ.

'ಹೆಚ್ಚಿದ ಭ್ರಷ್ಟಾಚಾರ, ದೊಡ್ಡ ಸಂಖ್ಯೆಯಲ್ಲಿ ಪ್ರಕರಣಗಳ ವಿಚಾರಣೆ ಬಾಕಿ ಹಾಗೂ ನ್ಯಾಯಾಧೀಶರ ಕೊರತೆಯು ಭಾರತದ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳು' ಎಂದು ಇದೇ ಅಧ್ಯಾಯದಲ್ಲಿ ತಿಳಿಸಲಾಗಿತ್ತು.

ಈ ಕುರಿತಂತೆ ಪ್ರಕಟಣೆ ಬಿಡುಗಡೆಗೊಳಿಸಿರುವ ಎನ್‌ಸಿಇಆರ್‌ಟಿ, 'ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿದ್ದ 'ಸಮಾಜದಲ್ಲಿ ನ್ಯಾಯಾಂಗದ ಪಾತ್ರ' ಅಧ್ಯಾಯದ ಕುರಿತಂತೆ ಸಂಸ್ಥೆಯ ನಿರ್ದೇಶಕರು ಹಾಗೂ ಸದಸ್ಯರು ಬೇಷರತ್ ಕ್ಷಮೆಯಾಚಿಸಿದ್ದಾರೆ. ಇಡೀ ಪುಸ್ತಕವನ್ನೇ ಹಿಂದಕ್ಕೆ ಪಡೆಯಲಾಗಿದ್ದು, ಯಾರಿಗೂ ದೊರೆಯುವುದಿಲ್ಲ' ಎಂದು ತಿಳಿಸಿದೆ.

'ಪ್ರಶ್ನೆಪತ್ರಿಕೆ ಭದ್ರತೆಯಲ್ಲಿ ರಾಜಿಯಾಗಿಲ್ಲ'

'ಪ್ರಶ್ನೆಪತ್ರಿಕೆಗಳ ನೈಜತೆ ಮತ್ತು ಸುರಕ್ಷತೆ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಂಡಿಲ್ಲ' ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸ್ಪಷ್ಟಪಡಿಸಿದೆ.

ಮಾರ್ಚ್ 9ರಂದು ನಡೆದ ಸಿಬಿಎಸ್‌ಇ 12ನೇ ತರಗತಿ ಗಣಿತ ಪರೀಕ್ಷೆ ಪ್ರಶ್ನೆಪತ್ರಿಕೆಯಲ್ಲಿ 'ರಿಕ್ ರೋಲ್' ಕ್ಯೂಆರ್ ಕೋಡ್ ಇದ್ದು, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದಾಗ 'ನೆವರ್ ಗಿವ್ ಅಪ್' ಹಾಡಿನ ವಿಡಿಯೊಗೆ ಸಂಪರ್ಕ ಆಗುತ್ತಿರುವುದು ಕಂಡುಬಂದಿದೆ. ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಕಳವಳ ವ್ಯಕ್ತವಾಗಿರುವ ನಡುವೆ ಸಿಬಿಎಸ್‌ಇ ಈ ಹೇಳಿಕೆ ನೀಡಿದೆ.

'ಪ್ರಶ್ನೆ ಪತ್ರಿಕೆಯ ನೈಜತೆ ಪರಿಶೀಲನೆಗಾಗಿ ಕ್ಯೂಆರ್ ಕೋಡ್ ಸೇರಿದಂತೆ ಅನೇಕ ಭದ್ರತಾ ಅಂಶಗಳನ್ನು ಅಳವಡಿಸಲಾಗಿದೆ. ಕೆಲವು ಪ್ರಶ್ನೆಪತ್ರಿಕೆಗಳ ಸೆಟ್‌ನಲ್ಲಿ, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವಾಗ ಯೂಟ್ಯೂಬ್ ವಿಡಿಯೊಗೆ ಲಿಂಕ್ ಆಗಿರುವುದು ಕಂಡುಬಂದಿದೆ' ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕರಾದ ಸಾನ್ಯಂ ಭಾರದ್ವಾಜ್ ಅವರು ಒಪ್ಪಿಕೊಂಡಿದ್ದಾರೆ.

ಗಾರೊ ಹಿಲ್ಸ್ ಹಿಂಸಾಚಾರ: ಇಬ್ಬರು ಬಲಿ

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ಗಾರೊ ಹಿಲ್ಸ್ ಸ್ವಾಯತ್ತ ಜಿಲ್ಲಾ ಮಂಡಳಿ (ಜಿಎಸ್‌ಎಡಿಸಿ) ಚುನಾವಣಾ ನಾಮಪತ್ರ ಸಲ್ಲಿಕೆ ವಿಚಾರವಾಗಿ ಉಂಟಾದ ಹಿಂಸಾಚಾರದ ವೇಳೆ ಪೊಲೀಸರು ಹಾರಿಸಿದ ಗುಂಡಿಗೆ ಇಬ್ಬರು ಮೃತಪಟ್ಟಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಜಿಲ್ಲೆಯಲ್ಲಿ ಕರ್ಫ್ಯೂ ಹೇರಲಾಗಿದ್ದು, ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ಅಮಾನತುಗೊಳಿಸಲಾಗಿದೆ.

'ಮಾರ್ಚ್ 10ರಂದು ಕರ್ಫ್ಯೂ ಹೇರಲಾಗಿದ್ದು, 24 ಗಂಟೆಗಳ ಕಾಲ ಇರಲಿದೆ. ಮೊಬೈಲ್ ಇಂಟರ್‌ನೆಟ್ ಸೇವೆಯನ್ನು 48 ಗಂಟೆಗಳ ಕಾಲ ನಿರ್ಬಂಧಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚುನಾವಣಾ ವಿಚಾರವಾಗಿ ಉಂಟಾದ ಸಂಘರ್ಷದಲ್ಲಿ ಕೆಲವು ದುಷ್ಕರ್ಮಿಗಳು ಛಿಬಿನಾಂಗ್ ಪ್ರದೇಶದಲ್ಲಿ ಸೋಮವಾರ ರಾತ್ರಿ ಹಲವು ಅಂಗಡಿ ಮುಂಗಟ್ಟುಗಳಿಗೆ ಬೆಂಕಿ ಹಚ್ಚಿದ್ದರು. ಈ ವೇಳೆ ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಗಾಳಿಯಲ್ಲಿ ಗುಂಡು ಹಾರಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಇದರ ಬೆನ್ನಲ್ಲೇ, ಕರ್ಫ್ಯೂ ಹೇರಲಾಗಿದೆ.

'ಜನರ ಜೀವಕ್ಕೆ ಅಪಾಯ ಹಾಗೂ ಸಾರ್ವಜನಿಕ ಆಸ್ತಿಗೆ ಹಾನಿ ಉಂಟುಮಾಡುವ ಸಾಧ್ಯತೆಯಿದೆ. ಈ ಕಾರಣದಿಂದ ಸಾರ್ವಜನಿಕ ಶಾಂತಿ ಹಾಗೂ ನೆಮ್ಮದಿ ಕಾಪಾಡುವುದಕ್ಕಾಗಿ ಕರ್ಫ್ಯೂ ಜಾರಿಗೊಳಿಸಲಾಗಿದೆ' ಎಂದು ಜಿಲ್ಲಾ ಮಾಜಿಸ್ಟ್ರೇಟ್ ವಿಭೋರ್ ಅಗರ್‌ವಾಲ್ ತಿಳಿಸಿದ್ದಾರೆ.

ಕ್ಷೇತ್ರ ಮರುವಿಂಗಡಣೆಗೂ ಮುನ್ನ ಜಾರಿ?
ಮಹಿಳಾ ಮೀಸಲಾತಿ: ಕೇಂದ್ರ ಸರ್ಕಾರ ಪರಿಶೀಲನೆ

ನವದೆಹಲಿ (ಪಿಟಿಐ): ಜನಗಣತಿ ನಂತರ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನವೇ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಸಾಧ್ಯತೆಯ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ.

2023ರಲ್ಲಿ ಸಂಸತ್ತು ಅಂಗೀಕರಿಸಿದ್ದ ಮಸೂದೆಗೆ ತಿದ್ದುಪಡಿ ತರಲು ಸರ್ಕಾರ ಚಿಂತನೆ ನಡೆಸುತ್ತಿದೆ. ಆದರೆ, ಈ ಬಗ್ಗೆ ಸಚಿವ ಸಂಪುಟಕ್ಕೆ ಪ್ರಸ್ತಾವ ಸಲ್ಲಿಸಲು ಇನ್ನೂ ಯಾವುದೇ ಸೂಚನೆ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ.

ಲೋಕಸಭೆ, ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿಯನ್ನು ಸಂವಿಧಾನದ ತಿದ್ದುಪಡಿಯ ಮೂಲಕ ತರಲಾಗಿದೆ. ಆದರೆ, ಇದು ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಂಡ ನಂತರವಷ್ಟೇ ಜಾರಿಗೆ ಬರಲಿದೆ.

ಮರುವಿಂಗಡಣೆಗಿಂತ ಮುಂಚಿತವಾಗಿಯೇ ಈ ಕಾನೂನನ್ನು ಜಾರಿಗೆ ತರಬೇಕೆಂಬ ಪ್ರಸ್ತಾವ ಸಲ್ಲಿಸಿದರೆ, ಅದಕ್ಕಾಗಿ ಸಂವಿಧಾನಕ್ಕೆ ಮತ್ತೊಂದು ತಿದ್ದುಪಡಿ ತರುವ ಅಗತ್ಯವಿರುತ್ತದೆ.

ಮಹಿಳಾ ಮೀಸಲಾತಿ ಜಾರಿಗೆ ತರುವ ಸಂಬಂಧ ಮಸೂದೆಯೊಂದನ್ನು ಮಂಡಿಸುವ ಸಾಧ್ಯತೆಯ ಬಗ್ಗೆ ಸರ್ಕಾರವು ವಿರೋಧ ಪಕ್ಷದವರಿಗೆ ಸುಳಿವು ನೀಡಿದೆ ಎಂದು ಮೂಲಗಳು ಹೇಳಿವೆ.

ಡಿಎಂಕೆ ನಾಯಕನಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಚೆನ್ನೈ: ಕರೂರು ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ ಹಾಜರಾಗುವಂತೆ ಆಡಳಿತಾರೂಢ ಡಿಎಂಕೆಯ ಪ್ರಮುಖ ನಾಯಕ ವಿ.ಸೆಂಥಿಲ್ ಬಾಲಾಜಿ ಅವರಿಗೆ ಸಿಬಿಐ ಸಮನ್ಸ್ ನೀಡಿದೆ. ಈ ಪ್ರಕರಣವು ಡಿಎಂಕೆಗೆ ಕಗ್ಗಂಟಾಗಿ ಪರಿಣಮಿಸಿದೆ.

'ನಾನು ವಿಚಾರಣೆಗೆ ಹಾಜರಾಗುತ್ತೇನೆ. ಸೂಕ್ತ ಮಾಹಿತಿಗಳನ್ನು ನೀಡುತ್ತೇನೆ' ಎಂದು ಶಾಸಕ ಸೆಂಥಿಲ್ 'ಎಕ್ಸ್' ಮೂಲಕ ತಿಳಿಸಿದ್ದಾರೆ.

ಸಿಬಿಐ ಮತ್ತು ತಮಿಳುನಾಡು ಪೊಲೀಸರು ದಾಖಲಿಸಿಕೊಂಡಿರುವ ಪ್ರಕರಣದಲ್ಲಿ ಸೆಂಥಿಲ್ ಹೆಸರಿರದೇ ಇದ್ದರೂ ಮಾರ್ಚ್ 17ರಂದು ವಿಚಾರಣೆಗೆ ಕರೆದಿರುವುದು ರಾಜಕೀಯವಾಗಿ ಚರ್ಚೆಗೆ ಗ್ರಾಸವಾಗಿದೆ. ಕಾಲ್ತುಳಿತದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದ ಕೂಡಲೇ ಸೆಂಥಿಲ್ ಅಸ್ಪತ್ರೆಗೆ ಭೇಟಿನೀಡಿರುವುದನ್ನು ಉಲ್ಲೇಖಿಸಿ, 'ಕಾಲ್ತುಳಿತಕ್ಕೆ ಸೆಂಥಿಲ್ ಅವರೇ ಕಾರಣರು' ಎಂದು ನಟ ವಿಜಯ್ ನೇತೃತ್ವದ ಟಿವಿಕೆ ಆರೋಪಿಸಿತ್ತು.

ಅವಾಚ್ಯ ಭಾಷೆ 30 ದಿನ ಜೈಲು ಶಿಕ್ಷೆಗೆ ಶಿಫಾರಸು

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನ ಪರಿಷತ್ ಸಭಾಪತಿ ರಾಮ್ ಶಿಂದೆ ಅವರ ವಿರುದ್ಧ ಅವಾಚ್ಯ ಶಬ್ದ ಬಳಸಿ ನಿಂದಿಸಿದ್ದ ಆರೋಪ ಎದುರಿ-ಸುತ್ತಿರುವ ಎನ್‌ಸಿಪಿ (ಶರದ್ ಪವಾರ್ ಬಣ) ಕಾರ್ಯಕರ್ತನಿಗೆ 30 ದಿನ ಜೈಲು ಶಿಕ್ಷೆ ವಿಧಿಸುವಂತೆ ಹಕ್ಕುಬಾಧ್ಯತಾ ಸಮಿತಿ ಶಿಫಾರಸು ಮಾಡಿದೆ.

ವಿಧಾನಪರಿಷತ್‌ಗೆ ವರದಿ ಸಲ್ಲಿಸಿದ ಸಮಿತಿಯ ಮುಖ್ಯಸ್ಥ ಪ್ರಸಾದ್ ಲಾಡ್ ಅವರು, 'ಘಟನೆಯನ್ನು ಗಂಭೀರ ಅಪರಾಧ ಮತ್ತು ಮೇಲ್ಮನೆಯ ಘನತೆಗೆ ಮಾಡಿದ ಅಪಮಾನ ಎಂಬುದಾಗಿ ಸಮಿತಿ ಪರಿಗಣಿಸಿದೆ' ಎಂದು ತಿಳಿಸಿದರು. ಸಭಾಪತಿ ವಿರುದ್ಧ ಅವಾಚ್ಯ ಪದಗಳನ್ನು ಬಳಸಿರುವ ಸೂರ್ಯಕಾಂತ್ ಮೋರೆ ಅವರಿಗೆ 30 ದಿನ ಜೈಲು ಶಿಕ್ಷೆ ವಿಧಿಸಲು ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು.

ಕೋವಿಡ್: ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ
'ದೋಷರಹಿತ ಪರಿಹಾರ ನೀತಿ ರೂಪಿಸಿ'

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧದ ಲಸಿಕೆಯಿಂದಾದ ಗಂಭೀರ ಪ್ರತಿಕೂಲ ಪರಿಣಾಮಗಳಿಗೆ ಸಂಬಂಧಿಸಿದಂತೆ ದೋಷರಹಿತ ಪರಿಹಾರ ನೀತಿಯೊಂದನ್ನು ರೂಪಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೋಮವಾರ ಸೂಚನೆ ನೀಡಿದೆ.

ಕೋವಿಡ್ ಲಸಿಕೆಯ ಪ್ರತಿಕೂಲ ಪರಿಣಾಮಗಳ ಬಗ್ಗೆ ವೈಜ್ಞಾನಿಕ ಪರಿಶೀಲನೆಗೆ ಸದ್ಯ ಜಾರಿಯಲ್ಲಿರುವ ವ್ಯವಸ್ಥೆಯೇ ಮುಂದುವರಿಯಲಿದೆ. ಇದಕ್ಕಾಗಿ ಪ್ರತ್ಯೇಕ ತಜ್ಞರ ಸಮಿತಿಯನ್ನು ರಚಿಸುವ ಅಗತ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ವಿಕ್ರಂನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಅಭಿಪ್ರಾಯಪಟ್ಟಿತು.

ಕೋವಿಡ್ ಲಸಿಕೆಯು ವ್ಯಕ್ತಿಯ ರೋಗನಿರೋಧಕ ಶಕ್ತಿಯ ಮೇಲೆ ಬೀರಿರುವ ಪ್ರತಿಕೂಲ ಪರಿಣಾಮಗಳ ಬಗ್ಗೆ ವೈಜ್ಞಾನಿಕ ಅಧ್ಯಯನಕ್ಕೆ ಸದ್ಯ ಅಸ್ತಿತ್ವದಲ್ಲಿರುವ ಕಾರ್ಯವಿಧಾನವನ್ನೇ ಮುಂದುವರಿಸಬಹುದು ಎಂದು ನ್ಯಾಯಮೂರ್ತಿ ವಿಕ್ರಂನಾಥ್ ಅವರು ಹೇಳಿದರು.

'ಕೋವಿಡ್ ವಿರುದ್ಧದ ಲಸಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ತಪ್ಪಾಗಿದೆ ಅಥವಾ ಹೊಣೆಗಾರಿಕೆಯ ರೀತಿಯಲ್ಲಿ 'ದೋಷರಹಿತ ಪರಿಹಾರ ನೀತಿ' ರೂಪಿಸಲಾಗುತ್ತಿದೆ ಎಂದು ಕೋರ್ಟ್ ಆದೇಶವನ್ನು ಅರ್ಥೈಸಬಾರದು. ಜತೆಗೆ ಈ ಆದೇಶವು ಕೋವಿಡ್ ಲಸಿಕೆಯ ಪ್ರತಿಕೂಲ ಪರಿಣಾಮಗಳಿಗೆ ಸಂಬಂಧಿಸಿದಂತೆ ಕಾನೂನಡಿ ಲಭ್ಯವಿರುವ ಇತರೆ ಪರಿಹಾರಗಳನ್ನು ಪಡೆಯಲು ತಡೆಹಾಕುವುದಿಲ್ಲ' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಕೋವಿಶೀಲ್ಡ್ ಲಸಿಕೆಯ ಮೊದಲ ಡೋಸ್ ಪಡೆದ ನಂತರ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ. ಲಸಿಕೆ ಹಾಕಿಸಿಕೊಂಡ ನಂತರ ಇವರಿಬ್ಬರಲ್ಲಿ ಗಂಭೀರ ಪ್ರತಿಕೂಲ ಪರಿಣಾಮಗಳು ಕಂಡುಬಂದಿದ್ದೇ ಸಾವಿಗೆ ಕಾರಣ' ಎಂದು ಆರೋಪಿಸಿ ವ್ಯಕ್ತಿಯೊಬ್ಬರು ಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಮುಖ್ಯಾಂಶಗಳು

- ಪ್ರತ್ಯೇಕ ತಜ್ಞರ ಸಮಿತಿಯನ್ನು ರಚಿಸುವ ಅಗತ್ಯವಿಲ್ಲ: ಕೋರ್ಟ್
- ನ್ಯಾಯಮೂರ್ತಿಗಳಾದ ವಿಕ್ರಂನಾಥ್, ಸಂದೀಪ್ ಮೆಹ್ತಾ ಅಭಿಪ್ರಾಯ
- ಲಸಿಕೆ ಪಡೆದ ನಂತರ ಮಹಿಳೆಯರು ಮೃತಪಟ್ಟಿದ್ದ ಪ್ರಕರಣ



ಭಾರತ ತಂಡಕ್ಕೆ ₹131 ಕೋಟಿ ಬಹುಮಾನ

ಬಿಸಿಸಿಐ ಘೋಷಣೆ • ಆಟಗಾರರಿಗೆ ಸಿಂಹಪಾಲು • ನೆರವು ಸಿಬ್ಬಂದಿಗೂ ಹಂಚಿಕೆ

ನವದೆಹಲಿ (ಪಿಟಿಐ): ಐಸಿಸಿ ಟಿ20 ವಿಶ್ವಕಪ್ ಗೆದ್ದ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಮಂಗಳವಾರ ₹131 ಕೋಟಿ ಬಹುಮಾನ ಘೋಷಿಸಿದೆ.

15 ಆಟಗಾರರ ಜೊತೆ ಕೋಚಿಂಗ್ ಸಿಬ್ಬಂದಿ ಮತ್ತು ಇತರ ನೆರವು ಸಿಬ್ಬಂದಿಗೂ ಈ ಬಹುಮಾನ ಮೊತ್ತದಲ್ಲಿ ಪಾಲು ಸಿಗಲಿದೆ. ಆದರೆ ಆಟಗಾರರಿಗೆ ಸಿಂಹಪಾಲು ಸಿಗಲಿದೆ. ನೆರವು ಸಿಬ್ಬಂದಿಗೆ ಶ್ರೇಣಿಗೆ ಅನುಗುಣವಾಗಿ ಬಹುಮಾನ ಮೊತ್ತದ ನಿರ್ಧಾರ ಆಗಲಿದೆ.

2024ರಲ್ಲಿ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ವೆಸ್ಟ್ ಇಂಡೀಸ್‌ನಲ್ಲಿ ಟಿ20 ವಿಶ್ವಕಪ್ ಗೆದ್ದಾಗ ಬಿಸಿಸಿಐ ₹125 ಕೋಟಿ ಬಹುಮಾನ ಘೋಷಿಸಿತ್ತು. ಆ ಮೊತ್ತದಲ್ಲಿ ಆರು ಕೋಟಿ ಹೆಚ್ಚಳವಾಗಿದೆ. ಮೂಲಗಳ ಪ್ರಕಾರ ತಂಡದಲ್ಲಿದ್ದ 15 ಆಟಗಾರರು ತಲಾ ₹6 ಕೋಟಿ ಗಳಿಸಲಿದ್ದಾರೆ. ಉಳಿದ ₹41 ಕೋಟಿ ಮೊತ್ತವನ್ನು ಇತರ ಕೋಚಿಂಗ್ ಸಿಬ್ಬಂದಿಗೆ ಹಂಚಲಾಗುತ್ತದೆ.

'ವಿಶ್ವಕಪ್ ಗೆದ್ದ ಚಾರಿತ್ರಿಕ ಸಾಧನೆಗಾಗಿ ಭಾರತ ತಂಡದ ಆಟಗಾರರು, ನೆರವು ಸಿಬ್ಬಂದಿ, ಆಯ್ಕೆಗಾರರನ್ನು ಮಂಡಳಿಯು ಅಭಿನಂದಿಸುತ್ತದೆ. ಭವಿಷ್ಯದಲ್ಲೂ ಯಶಸ್ಸು ಮುಂದುವರಿಯಲೆಂದು ಅವರಿಗೆ ಹಾರೈಸುತ್ತದೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.

ಭಾನುವಾರ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ತಂಡ 96 ರನ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಪರಾಭವಗೊಳಿಸಿತ್ತು.

ಈ ಗೆಲುವಿನೊಡನೆ ಭಾರತ ಸತತವಾಗಿ ಎರಡು ಬಾರಿ ವಿಶ್ವ ಚಾಂಪಿಯನ್ ಆದ ಮೊದಲ ತಂಡ ಎನಿಸಿತ್ತು. ಮಾತ್ರವಲ್ಲದೇ ಚುಟುಕು ಮಾದರಿಯಲ್ಲಿ ಅತ್ಯಂತ ಯಶಸ್ವಿ ತಂಡವೆಂಬ ತನ್ನ ಸ್ಥಾನವನ್ನು ಗಟ್ಟಿಗೊಳಿಸಿತ್ತು.

ಐಸಿಸಿ
ಪುರುಷರ ಟಿ20 ವಿಶ್ವಕಪ್ 2026

ಅರ್ಷದೀಪ್‌ಗೆ ದಂಡ

ದುಬೈ (ಪಿಟಿಐ): ಟಿ20 ವಿಶ್ವಕಪ್ ಫೈನಲ್ ಪಂದ್ಯದ ವೇಳೆ ನ್ಯೂಜಿಲೆಂಡ್‌ನ ಬ್ಯಾಟರ್ ಡೇರಿಲ್ ಮಿಚೆಲ್ ಅವರತ್ತ ಆಕ್ರಮಣಕಾರಿಯಾಗಿ ಚೆಂಡನ್ನು ಎಸೆದು ಅನುಚಿತವಾಗಿ ವರ್ತಿಸಿದ್ದಕ್ಕೆ ಭಾರತ ತಂಡದ ಎಡಗೈ ವೇಗದ ಬೌಲರ್ ಅರ್ಷದೀಪ್ ಸಿಂಗ್ ಅವರಿಗೆ ಪಂದ್ಯ ಸಂಭಾವನೆಯ ಶೇ 15ರಷ್ಟು ದಂಡ ವಿಧಿಸಲಾಗಿದೆ.

ಇದರ ಜೊತೆಗೆ ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಅಂಕ ಸೇರ್ಪಡೆಗೊಳಿಸಲಾಗಿದೆ. ಇದು 24 ತಿಂಗಳಲ್ಲಿ ಅವರ ಮೊದಲ ಗಂಭೀರ ತಪ್ಪು ಆಗಿದೆ.

ನ್ಯೂಜಿಲೆಂಡ್ ಇನಿಂಗ್ಸ್‌ನ 11ನೇ ಓವರಿನಲ್ಲಿ ತಮ್ಮದೇ ಬೌಲಿಂಗ್‌ನಲ್ಲಿ ಮಿಚೆಲ್ ಹೊಡೆದ ಚೆಂಡನ್ನು ಫೀಲ್ಡ್ ಮಾಡಿದ ಅರ್ಷದೀಪ್ ತಕ್ಷಣ ಅದನ್ನು ಮಿಚೆಲ್ ಅವರತ್ತಲೇ ಎಸೆದಿದ್ದರು. ಅದು ಅವರ ಪ್ಯಾಡ್‌ಗೆ ಬಡಿದಿತ್ತು. ಮಿಚೆಲ್ ಅವರು ನ್ಯೂಜಿಲೆಂಡ್ ತಂಡದ ಉಪನಾಯಕರಾಗಿದ್ದಾರೆ.

ಮ್ಯಾಚ್ ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ಅವರ ತೀರ್ಪನ್ನು ಅರ್ಷದೀಪ್ ಒಪ್ಪಿಕೊಂಡಿದ್ದಾರೆ.



ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಡ್ರೆಸಿಂಗ್ ರೂಂನಲ್ಲಿ ಸಂಭ್ರಮಿಸಿದ ಭಾರತ ತಂಡದ ಆಟಗಾರರು ಮತ್ತು ನೆರವು ಸಿಬ್ಬಂದಿ ಬಿಸಿಸಿಐ ಚಿತ್ರ

ಏಕದಿನ ಪಂದ್ಯಗಳ ಕಡೆಗಷ್ಟೇ ಜಸ್‌ಪ್ರೀತ್ ಬೂಮ್ರಾ ಗಮನ?

ನವದೆಹಲಿ (ಪಿಟಿಐ): ಭಾರತ ತಂಡದ ಮುಂಚೂಣಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು 2027ರ ಏಕದಿನ ವಿಶ್ವಕಪ್‌ಗೆ ಸಜ್ಜಾಗಲು, ಮುಂದಿನ 18 ತಿಂಗಳ ಅವಧಿಯಲ್ಲಿ ದ್ವಿಪಕ್ಷೀಯ ಟಿ20 ಸರಣಿಗಳ ಬದಲು 50 ಓವರುಗಳ ಪಂದ್ಯಗಳನ್ನೇ ಆಡುವ ಸಾಧ್ಯತೆಯಿದೆ.



ಮುಂದಿನ ವಿಶ್ವಕಪ್‌ಗೆ ಮೊದಲು ಭಾರತ ತಂಡವು ಹಲವು ದ್ವಿಪಕ್ಷೀಯ ಸರಣಿಗಳ ಜೊತೆ ಜಪಾನ್‌ನ ಐಚಿ–ನಗೋಯಾದಲ್ಲಿ ನಿಗದಿಯಾಗಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲಿದೆ. ಏಷ್ಯನ್ ಗೇಮ್ಸ್‌ನಲ್ಲಿ ಟಿ20 ಮಾದರಿ ಸೇರ್ಪಡೆ ಮಾಡಲಾಗಿದೆ.

ಭಾರತದ ಕೆಲವು ಅನುಭವಿ ಆಟಗಾರರಂತೆ ಬೂಮ್ರಾ ಸಹ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಆಡಲು ಉತ್ಸುಕರಾಗಿದ್ದಾರೆ. ಆದರೆ 2027ರ ವಿಶ್ವಕಪ್‌ವರೆಗೆ ಅವರು ಏಕದಿನ ಪಂದ್ಯಗಳ ಕಡೆಗಷ್ಟೇ ಗಮನಹರಿಸಲಿದ್ದಾರೆ ಎನ್ನಲಾಗಿದೆ.

ಮುಂದಿನ ಎರಡು ತಿಂಗಳು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ನಡೆಯಲಿದ್ದು, ನಂತರವಷ್ಟೇ ಏಕದಿನ ವಿಶ್ವಕಪ್‌ಗೆ ಭಾರತ ತಂಡದ ಸಿದ್ಧತೆ ಆರಂಭವಾಗಲಿದೆ.

ಐಪಿಎಲ್ ಟೂರ್ನಿ ನಂತರ ರಾಷ್ಟ್ರೀಯ ಆಯ್ಕೆ ಸಮಿತಿ, ಬಿಸಿಸಿಐ ಶ್ರೇಷ್ಠತಾ ಸಮಿತಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ತಂಡದ ಮ್ಯಾನೇಜ್‌ಮೆಂಟ್ ಪ್ರತಿನಿಧಿಗಳಾಗಿ ಗೌತಮ್ ಗಂಭೀರ್ ಮತ್ತು ಶುಭಮನ್ ಗಿಲ್ ಅವರು ಸೇರಿಕೊಂಡು ಮುಂದಿನ ಹಂತದ ನೀಲನಕ್ಷೆ ಸಿದ್ಧಪಡಿಸಲಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಭಾಗವಾಗಿರುವ ಪಂದ್ಯಗಳಲ್ಲಿ 32 ವರ್ಷ ವಯಸ್ಸಿನ ಬೌಲರ್ ಆಡುವುದು ಖಚಿತ. ಆದರೆ ಅವರ ಕಾರ್ಯಭಾರ ಒತ್ತಡ ನಿರ್ವಹಣೆ 2023–2026ರ ರೀತಿಯಲ್ಲಿ ಇರಲಿದೆ ಎಂದು ಗೊತ್ತಾಗಿದೆ. ಆ ಅವಧಿಯಲ್ಲಿ ಅವರು ಒಂದೂ ಏಕದಿನ ಪಂದ್ಯ ಆಡಿರಲಿಲ್ಲ. ಜೊತೆಗೆ ಟೆಸ್ಟ್ ಸರಣಿಯಲ್ಲೂ ಕೆಲವು ಪಂದ್ಯಗಳಲ್ಲಿ ವಿಶ್ರಾಂತಿ ಪಡೆದಿದ್ದರು.

2023ರ ನವೆಂಬರ್ 19ರಂದು ಏಕದಿನ ವಿಶ್ವಕಪ್ ಫೈನಲ್ ಆಡಿದ್ದ ಬೂಮ್ರಾ ನಂತರ 42 ಪಂದ್ಯಗಳನ್ನು ಆಡಿದ್ದಾರೆ. ಇದರಲ್ಲಿ 21 ಟೆಸ್ಟ್ ಪಂದ್ಯಗಳು ಹಾಗೂ ಅಷ್ಟೇ ಸಂಖ್ಯೆಯ ಟಿ20 ಪಂದ್ಯಗಳು ಒಳಗೊಂಡಿವೆ.

ಪ್ರಸ್ತುತ ಏಕದಿನ ತಂಡದಲ್ಲಿ ಬೂಮ್ರಾ ಜೊತೆ ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ ಪ್ರಮುಖ ಬೌಲರ್‌ಗಳಾಗಿದ್ದಾರೆ.

ಐಸಿಸಿ ಟೂರ್ನಿಗಳ ಪ್ರಶಸ್ತಿ ಸುತ್ತಿನಲ್ಲಿ ಪದೇ ಪದೇ ಹಿನ್ನಡೆ

ಕಿವೀಸ್‌ಗೆ 'ಫೈನಲ್ ಒಗಟು'

• ಮಧು ಜವಳಿ

ಬೆಂಗಳೂರು: ಟಿ20 ವಿಶ್ವಕಪ್ ಫೈನಲ್‌ಗೆ ಮೊದಲು ಎಬಿ ಡಿವಿಲಿಯರ್ಸ್ ಅವರ ಯುಟ್ಯೂಬ್ ಶೋ ಒಂದರಲ್ಲಿ, ದಕ್ಷಿಣ ಆಫ್ರಿಕಾ ತಂಡದಲ್ಲಿ ಅವರ ಜೊತೆಗಾರನಾಗಿದ್ದ ಡೇಲ್ ಸ್ಟೇನ್ ಅವರು ನ್ಯೂಜಿಲೆಂಡ್ ತಂಡಕ್ಕೆ ಪ್ರಶಸ್ತಿ ಗೆಲ್ಲುವಂತೆ ಒತ್ತಾಯಿಸುತ್ತಾರೆ. ಕಿವೀಸ್ ಮತ್ತೊಮ್ಮೆ ಫೈನಲ್ ಪಂದ್ಯ ಸೋತರೆ, ಹರಿಣಗಳ ಪಡೆ ದೀರ್ಘ ಕಾಲದಿಂದ ಹೊಂದಿರುವ 'ಚೋಕರ್ಸ್' ಪಟ್ಟವನ್ನು ಆ ತಂಡಕ್ಕೆ ಅಧಿಕೃತವಾಗಿ ಹಸ್ತಾಂತರಿಸುವುದಾಗಿ ತಮಾಷೆಯಾಗಿ ಹೇಳುತ್ತಾರೆ.

ಫೈನಲ್ ಪಂದ್ಯಗಳಲ್ಲಿ ನ್ಯೂಜಿಲೆಂಡ್ ಎಡವಿ ಬೀಳುತ್ತಿರುವುದು ದಕ್ಷಿಣ ಆಫ್ರಿಕಾ ವೇಗಿಗೆ ಬೇಸರ ಮೂಡಿಸಿದೆಯೇ ಎಂದು ಹೇಳುವುದು ಕಷ್ಟ. ಆದರೆ ಕಿವೀಸ್ ಪಡೆ ಐಸಿಸಿ ಟೂರ್ನಿಗಳ ಫೈನಲ್‌ನಲ್ಲಿ ಪದೇಪದೇ ಮುಗ್ಗರಿಸುತ್ತಿದೆ.

2015ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವು ಆಸ್ಟ್ರೇಲಿಯಾ ಎದುರು ಸೋತಿತ್ತು. ಅಲ್ಲಿಂದ ಹಿಡಿದು 2026ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತಕ್ಕೆ ಶರಣಾದ ತನಕದ ಅವಧಿಯಲ್ಲಿ ನ್ಯೂಜಿಲೆಂಡ್ ಆರು ಸಲ ಐಸಿಸಿ ಟೂರ್ನಿಗಳ ಫೈನಲ್ ಆಡಿದೆ.

ಭಾರತ ಈ ಅವಧಿಯಲ್ಲಿ ಏಳು ಫೈನಲ್‌ಗಳೊಡನೆ ಮೊದಲ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ ಐದು ಮತ್ತು ಇಂಗ್ಲೆಂಡ್ ತಂಡ ಮೂರು ಬಾರಿ ಫೈನಲ್ ತಲುಪಿವೆ. ಆದರೆ ಮುಂದೇನಾಯಿತು ಎಂಬುದರಲ್ಲೇ ಇತರ ತಂಡಗಳು, ಆ ತಂಡಕ್ಕಿಂತ ಭಿನ್ನವಾಗಿ ಕಾಣಿಸುತ್ತವೆ. ಭಾರತ ಏಳು ಫೈನಲ್‌ಗಳಲ್ಲಿ ಮೂರನ್ನು ಗೆದ್ದುಕೊಂಡಿದೆ. ಆಸ್ಟ್ರೇಲಿಯಾ ಫೈನಲ್ ತಲುಪಿದ ಐದರಲ್ಲಿ ನಾಲ್ಕು ಬಾರಿ ಪ್ರಶಸ್ತಿ ಗೆದ್ದಿದೆ. ಇಂಗ್ಲೆಂಡ್ ಮೂರು ಫೈನಲ್‌ಗಳಲ್ಲಿ ಎರಡರಲ್ಲಿ ಜಯ ಗಳಿಸಿದೆ. ಆದರೆ, ನ್ಯೂಜಿಲೆಂಡ್ ಆರು ಫೈನಲ್ ಪಂದ್ಯಗಳಲ್ಲಿ ಗೆದ್ದಿರುವುದು ಒಂದನ್ನಷ್ಟೇ. ಅದು 2023ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ (ಭಾರತ ವಿರುದ್ಧ).

ತಂಡದ ಶಕ್ತಿ: ಕೌಶಲದ ವಿಷಯದಲ್ಲಿ ನ್ಯೂಜಿಲೆಂಡ್ ಬೇರಾವುದೇ ತಂಡಕ್ಕಿಂತ ಕಡಿಮೆಯೇನಿಲ್ಲ. ಇತರ ತಂಡಗಳಲ್ಲಿರುವಂತೆ, ನ್ಯೂಜಿಲೆಂಡ್ ತಂಡದಲ್ಲಿ ತಾರಾ ವರ್ಚಸ್ಸು ಹೊಂದಿರುವ ಆಟಗಾರರಿಲ್ಲ. ಆದರೆ ತಂಡ ಸ್ಫೂರ್ತಿ ಮತ್ತು ತಂತ್ರಗಾರಿಕೆಯಲ್ಲಿರುವ ಸ್ಪಷ್ಟತೆ ಆ ತಂಡವನ್ನು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪ್ರಬಲ ತಂಡಗಳಲ್ಲಿ ಒಂದನ್ನಾಗಿ ರೂಪಿಸಿದೆ. ಅವರ ಯೋಜನೆಗಳನ್ನು ಗಮನಿಸಿದರೆ, ಅದು ಪಂದ್ಯಕ್ಕೆ ಮೊದಲು ಸಿದ್ಧತೆಯಲ್ಲಿ ಎಷ್ಟೊಂದು ಎಚ್ಚರಿಕೆ ವಹಿಸುತ್ತದೆ ಎಂಬುದು ವೇದ್ಯವಾಗುತ್ತದೆ.

ತನ್ನ ಇತಿಮಿತಿಗಳ ಅರಿವು ಹೊಂದಿರುವುದು ಕಿವೀಸ್ ಪಡೆಯ ದೊಡ್ಡ ಶಕ್ತಿ. ಆ ತಂಡದಲ್ಲಿ ಜಸ್‌ಪ್ರೀತ್ ಬೂಮ್ರಾ ಅಂಥ ಟ್ರಂಪ್‌ಕಾರ್ಡ್ ಬೌಲರ್ ಇಲ್ಲ. ಎದುರಾಳಿಗಳಲ್ಲಿ ಭೀತಿ ಮೂಡಿಸುವ ಸ್ಪಿನ್ನರ್ ಇಲ್ಲ. ಭಾರತ ತಂಡದಲ್ಲಿರುವಂತೆ 'ಪವರ್ ಪ್ಯಾಕ್ಡ್' ಬ್ಯಾಟರ್‌ಗಳ ಪಡೆಯೂ ಇಲ್ಲ. ಆದರೆ ತನ್ನ ಬಳಿಯಿರುವ ಸಂಪನ್ಮೂಲವನ್ನು ಗರಿಷ್ಠ ಮಟ್ಟಿಗೆ ಹೇಗೆ ಬಳಕೆ ಮಾಡಬೇಕೆಂಬ ಸಾಮರ್ಥ್ಯವನ್ನು ಈ ತಂಡ ಹೊಂದಿದೆ.

ನಾಯಕ ಸ್ಯಾಂಟ್ನರ್ ತಮ್ಮ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸುತ್ತಾರೆ. ಮ್ಯಾಟ್ ಹೆನ್ರಿ ಅಮೋಘ ಎನಿಸದಿದ್ದರೂ ಬೌಲಿಂಗ್‌ನಲ್ಲಿ ನಿಯಂತ್ರಣದೊಡನೆ ಬ್ಯಾಟರ್‌ಗಳನ್ನು ಕಟ್ಟಿಹಾಕುವವರು. ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್ ಅವರು ಸ್ಫೋಟಕ ಆರಂಭ ಒದಗಿಸುವ ಸಾಮರ್ಥ್ಯವಿರುವವರು. ಡೇರಿಲ್ ಮಿಚೆಲ್ ಸದ್ದಿಲ್ಲದೇ ತಂಡವನ್ನು ಗೆಲುವಿನ ದಡದತ್ತ ತಲುಪಿಸಬಲ್ಲ ಆಟಗಾರ. ಇವರೆಲ್ಲರೂ ಒಟ್ಟಾಗಿ ಆಡಿದಲ್ಲಿ ತಂಡ ಪ್ರಬಲವಾಗಿ ಕಾಣಿಸುತ್ತದೆ. ಆದರೆ ತಂಡ ಉತ್ತಮ ಪ್ರದರ್ಶನವನ್ನು ಫೈನಲ್ ತಲುಪುವವರೆಗಿನ ಆಟದಲ್ಲಿ ಮಾತ್ರ ನೀಡುತ್ತಿರುವುದು ತಂಡಕ್ಕೆ ಹಿನ್ನಡೆ ತರುತ್ತಿದೆ.

ಪ್ರಮುಖ ಮೈಲಿಗಲ್ಲುಗಳನ್ನು ತಲುಪಿದ ನಂತರ ಅಥ್ಲೀಟುಗಳು ತಮ್ಮ ಗಮನವನ್ನು 'ರೀಸೆಟ್' ಮಾಡಬೇಕಾಗುತ್ತದೆ ಎನ್ನುತ್ತಾರೆ ಕ್ರೀಡಾ ಮನಶಾಸ್ತ್ರಜ್ಞ ಮೈಕೆಲ್ ಗರ್ವೇಸ್. ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಅಮೆರಿಕದ ತಂಡಗಳ ಜೊತೆ ಮೈಕೆಲ್ ಕಾರ್ಯನಿರ್ವಹಿಸಿದ್ದಾರೆ. 'ಯಶಸ್ಸು ನಮ್ಮನ್ನು ಏಕಾಗ್ರತೆಯಿಂದ ವಿಚಲಿತಗೊಳಿಸಬಹುದು ಅಥವಾ ಜಡತ್ವ ಮೂಡಿಸುವ ಸಾಧ್ಯತೆಯೂ ಇದೆ' ಎನ್ನುತ್ತಾರೆ.

ಐಸಿಸಿ ಟೂರ್ನಿಗಳ ಫೈನಲ್‌ಗಳಲ್ಲಿ ಸೋಲುವ ನ್ಯೂಜಿಲೆಂಡ್ ತಂಡಕ್ಕೂ ಇಂಥ 'ರೀಸೆಟ್' ಅಗತ್ಯವಿದೆ. ಫೈನಲ್ ತಲುಪುವುದು ಸಾಧನೆಯೇ. ಆದರೆ ಅಲ್ಲಿಯವರೆಗೆ ಉಳಿಸಿಕೊಂಡ ಯಶಸ್ಸಿನ ಹಸಿವನ್ನು ಮುಂದುವರಿಸಿಕೊಂಡು ಹೋದರೆ ಮಾತ್ರ ತಂಡ ಅಗ್ರಸ್ಥಾನಕ್ಕೇರಬಹುದು.



ಜಿಮ್ಮಿ ನೀಶಮ್ ಜೊತೆ ನಾಯಕ ಮಿಚೆಲ್ ಸ್ಯಾಂಟ್ನರ್ ಮಾತುಕತೆ ಎಎಫ್‌ಪಿ ಚಿತ್ರ

ಐಸಿಸಿ ಟೂರ್ನಿಗಳ ಫೈನಲ್‌ನಲ್ಲಿ ನ್ಯೂಜಿಲೆಂಡ್ ಸಾಧನೆ (2015ರಿಂದ)

ವರ್ಷ	ಟೂರ್ನಿ	ಫಲಿತಾಂಶ
2026	ಟಿ20 ವಿಶ್ವಕಪ್	ಭಾರತದ ವಿರುದ್ಧ 96 ರನ್ ಸೋಲು
2025	ಚಾಂಪಿಯನ್ಸ್ ಟ್ರೋಫಿ	ಭಾರತ ಎದುರು 4 ವಿಕೆಟ್‌ಗಳಿಂದ ಪರಾಭವ
2021	ಟಿ20 ವಿಶ್ವಕಪ್	ಆಸ್ಟ್ರೇಲಿಯಾ 8 ವಿಕೆಟ್‌ಗಳ ಎದುರು ಸೋಲು
2019-21	ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್	ಭಾರತ ಎದುರು 8 ವಿಕೆಟ್ ಜಯ
2019	ಏಕದಿನ ವಿಶ್ವಕಪ್	ಇಂಗ್ಲೆಂಡ್ ವಿರುದ್ಧ ಸೋಲು (ಸೂಪರ್ ಓವರ್)
2015	ಏಕದಿನ ವಿಶ್ವಕಪ್	ಆಸ್ಟ್ರೇಲಿಯಾ ಎದುರು 7 ವಿಕೆಟ್‌ಗಳ ಸೋಲು

ಸೀಮಿತ ಸಂಪನ್ಮೂಲದ ನ್ಯೂಜಿಲೆಂಡ್

ನ್ಯೂಜಿಲೆಂಡ್‌ನ ಜನಸಂಖ್ಯೆ ಸುಮಾರು 55 ಲಕ್ಷ. ಬೆಂಗಳೂರಿನ ಜನಸಂಖ್ಯೆಗಿಂತ ಬಹಳ ಕಡಿಮೆ. ಕ್ರಿಕೆಟ್ ಅಲ್ಲಿ ಅತಿ ಜನಪ್ರಿಯ ಕ್ರೀಡೆಯೂ ಅಲ್ಲ. ಆದರೂ 11 ವರ್ಷಗಳಿಂದೀಚೆಗೆ ಐಸಿಸಿ ಟೂರ್ನಿಗಳಲ್ಲಿ ಆರು ಸಲ ಫೈನಲ್ ತಲುಪಿರುವುದು ಮೆಚ್ಚುವಂತಹ ಸಾಧನೆಯೇ ಸರಿ. ಅದೂ–ದೈತ್ಯ ತಂಡಗಳಾದ ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್‌ನಂತಹ ತಂಡಗಳ ಎದುರು ಸೆಣಸಾಡಿ. ಈ ದೇಶಗಳಲ್ಲಿ ಹೇರಳ ಪ್ರತಿಭಾ ಸಂಪನ್ಮೂಲಗಳ ಜೊತೆ ಕ್ರಿಕೆಟರ್‌ಗಳಿಗೆ ಆರ್ಥಿಕ ಬಲವೂ ಇದೆ.

'ಭಾರತದಲ್ಲಿರುವ ಪ್ರತಿಭಾನ್ವಿತ ಆಟಗಾರರ ಪ್ರಮಾಣ ಹೇರಳವಾಗಿದೆ. ವಿಶ್ವಕಪ್‌ನಲ್ಲಿ ಅವರು ಪ್ರಾಯಶಃ ಇನ್ನೆರಡು ತಂಡಗಳನ್ನು ಕಣಕ್ಕಿಳಿಸಬಹುದು. ಆದರೆ ಸಣ್ಣ ಜನಸಂಖ್ಯೆಯ ನಮ್ಮ ದೇಶ, ವಿಶ್ವದ ದೊಡ್ಡ ತಂಡಗಳ ಎದುರು ಆಡುವುದು ಅಮೋಘ ಸಾಧನೆಯೇ' ಎಂದು ಕಿವೀಸ್ ಆಲ್‌ರೌಂಡರ್ ಗ್ಲೆನ್ ಫಿಲಿಪ್ಸ್ ಹೇಳಿದ್ದರು.

ಸೆಮಿಫೈನಲ್‌ನತ್ತ ಸಲೀಮಾ ಪಡೆ ಚಿತ್ತ

ಮಹಿಳಾ ಹಾಕಿ ವಿಶ್ವಕಪ್ ಕ್ವಾಲಿಫೈಯರ್ಸ್: ಭಾರತಕ್ಕೆ ಇಂದು ವೇಲ್ಸ್ ಸವಾಲು

ಹೈದರಾಬಾದ್ (ಪಿಟಿಐ): ಭಾರತ ತಂಡವು ಎಫ್‌ಐಎಚ್ ಮಹಿಳಾ ಹಾಕಿ ವಿಶ್ವಕಪ್ ಕ್ವಾಲಿಫೈಯರ್ಸ್ ಟೂರ್ನಿಯ ಬಿ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಬುಧವಾರ ವೇಲ್ಸ್ ತಂಡವನ್ನು ಎದುರಿಸಲಿದೆ.

ಸಲೀಮಾ ಟೇಟೆ ಪಡೆಯು ಈ ಪಂದ್ಯದಲ್ಲಿ ಗೆಲುವು ಅಥವಾ ಡ್ರಾ ಸಾಧಿಸಿದರೆ ಸೆಮಿಫೈನಲ್‌ಗೆ ಪ್ರವೇಶಿಸಲಿದೆ. ಒಂದು ವೇಳೆ ಸೋತರೆ, ಸ್ಕಾಟ್ಲೆಂಡ್– ಉರುಗ್ವೆ ನಡುವಣ ಪಂದ್ಯದ ಫಲಿತಾಂಶಕ್ಕಾಗಿ ಕಾಯಬೇಕಾಗುತ್ತದೆ.

ಎರಡು ಪಂದ್ಯಗಳಿಂದ 4 ಅಂಕ ಸಂಪಾದಿಸಿರುವ ಭಾರತ ವನಿತೆಯರು ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಸ್ಕಾಟ್ಲೆಂಡ್ ತಂಡವೂ ಇಷ್ಟೇ ಅಂಕ ಗಳಿಸಿದರೂ, ಗೋಲು ಗಳಿಕೆಯಲ್ಲಿ ಹಿಂದಿರುವ ಕಾರಣ ಎರಡನೇ ಸ್ಥಾನದಲ್ಲಿದೆ. ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ನಾಲ್ಕರ ಘಟ್ಟ ಪ್ರವೇಶಿಸಲಿವೆ.



ಭಾರತದ ರುತುಜಾ ಡಿ. ಪಿಸಾಳ್ ಎಕ್ಸ್ ಚಿತ್ರ

ಉದಯೋನ್ಮುಖ ಫಾರ್ವರ್ಡ್ ಆಟಗಾರ್ತಿ ಸುನೆಲಿತಾ ಟೊಪ್ಪೊ ಅವರು ಈ ಹಿಂದಿನ ಎರಡೂ ಪಂದ್ಯಗಳಲ್ಲಿ ಗೋಲು ಗಳಿಸಿದ್ದು ಉತ್ತಮ ಲಯದಲ್ಲಿದ್ದಾರೆ. ಲಾಲರೆಮ್‌ಸಿಯಾಮಿ, ನವನೀತ್ ಕೌರ್ ಹಾಗೂ ರುತುಜಾ ಡಿ. ಪಿಸಾಳ್ ಅವರೂ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಗೋಲ್‌ಕೀಪರ್ ಬಿಚೂದೇವಿ ಖಾರಿಬಾಮ್ ಅವರ ಮುಂದಾಳತ್ವದಲ್ಲಿ ರಕ್ಷಣಾ ಪಡೆ ಸ್ಥಿರ ಪ್ರದರ್ಶನ ನೀಡುತ್ತಿದ್ದು, ಆತಿಥೇಯ ತಂಡದ ವಿಶ್ವಾಸ ಹೆಚ್ಚಿಸಿದೆ.

ಭಾರತ ತಂಡವು ವೇಲ್ಸ್ ವಿರುದ್ಧ 5–1ರ ಉತ್ತಮ ದಾಖಲೆ ಹೊಂದಿದೆ. ವೇಲ್ಸ್ ತಂಡವು ಗೆಲುವಿನೊಂದಿಗೆ ಅಭಿಯಾನ ಮುಗಿಸಲು ಕಾತರವಾಗಿದೆ. ಈ ಹಣಾಹಣಿಯಲ್ಲಿ ಮೇಲ್ನೋಟಕ್ಕೆ ಭಾರತವೇ ನೆಚ್ಚಿನ ತಂಡವೆನಿಸಿದರೂ, ವೇಲ್ಸ್ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ.

'ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯುವುದು ಹಾಗೂ ಚಾಂಪಿಯನ್ ಆಗುವುದು ನಮ್ಮ ಗುರಿ. ಅದನ್ನು ಸಾಧಿಸಲು ಇಡೀ ತಂಡ ಒಗ್ಗಟ್ಟಿನಿಂದ ಪ್ರಯತ್ನಿಸುತ್ತಿದೆ' ಎಂದು ಸಲೀಮಾ ಪ್ರತಿಕ್ರಿಯಿಸಿದರು.

ಟೂರ್ನಿಯ ಚಾಂಪಿಯನ್, ರನ್ನರ್ಸ್ ಅಪ್ ಹಾಗೂ ಮೂರನೇ ಸ್ಥಾನ ಪಡೆದ ತಂಡಗಳು ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ಈ ವರ್ಷದ ಆಗಸ್ಟ್‌ನಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆದುಕೊಳ್ಳಲಿವೆ.

ಗುಜರಾತ್ ಟೈಟನ್ಸ್ ಬ್ಯಾಟಿಂಗ್ ಕೋಚ್ ಆಗಿ ಹೇಡನ್

ಅಹಮದಾಬಾದ್ (ಪಿಟಿಐ): ಆಸ್ಟ್ರೇಲಿಯಾದ ದಿಗ್ಗಜ ಕ್ರಿಕೆಟಿಗ ಮ್ಯಾಥ್ಯೂ ಹೇಡನ್ ಅವರು ಗುಜರಾತ್ ಟೈಟನ್ಸ್ ತಂಡದ ಬ್ಯಾಟಿಂಗ್ ಕೋಚ್ ಆಗಿ ಮಂಗಳವಾರ ನೇಮಕಗೊಂಡಿದ್ದಾರೆ.



ಆರಂಭ ಆಟಗಾರನಾಗಿದ್ದ ಹೇಡನ್ ಅವರು ಆಸ್ಟ್ರೇಲಿಯಾ ತಂಡದ ಪರ ಮೂರೂ ಮಾದರಿ ಸೇರಿ 273 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. 15 ಸಾವಿರಕ್ಕೂ ಅಧಿಕ ರನ್ ಗಳಿಸಿದ್ದಾರೆ. ಆಕ್ರಮಣಕಾರಿ ಬ್ಯಾಟರ್ ಆಗಿದ್ದ ಅವರು, ಐಸಿಸಿ ಟೂರ್ನಿಗಳಲ್ಲಿ ಆಸ್ಟ್ರೇಲಿಯಾ ಪ್ರಶಸ್ತಿ ಗೆಲ್ಲುವಲ್ಲಿ ನಿರ್ಣಾಯಕ ಪಾತ್ರವನ್ನೂ ನಿಭಾಯಿಸಿದ್ದಾರೆ.

ಹೇಡನ್ ಅವರು ಈ ಹಿಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿದ್ದರು. ಪಾಕಿಸ್ತಾನ ತಂಡದ ಕೋಚ್ ಆಗಿಯೂ ಅನುಭವ ಹೊಂದಿದ್ದಾರೆ.

ತವರಿಗೆ ಮರಳಲು ಆಟಗಾರರಿಗೆ ಐಸಿಸಿ ವ್ಯವಸ್ಥೆ

ಕೋಲ್ಕತ್ತ (ಪಿಟಿಐ): ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಆಟಗಾರರಿಗೆ ಕೋಲ್ಕತ್ತದಿಂದ ತವರಿಗೆ ಮರಳಲು ಐಸಿಸಿಯು ಮಂಗಳವಾರ ಪ್ರತ್ಯೇಕ ವಿಮಾನಗಳ ವ್ಯವಸ್ಥೆ ಮಾಡಿದೆ. ಈ ಮೊದಲು ಬಾಡಿಗೆ (ಚಾರ್ಟರ್) ವಿಮಾನದಲ್ಲಿ ಮಾಡಿದ ಪ್ರಯಾಣ ವ್ಯವಸ್ಥೆಯಲ್ಲಿ ತಾಂತ್ರಿಕ ಅಡಚಣೆ ಕಂಡುಬಂದ ಕಾರಣ ಪರ್ಯಾಯ ವ್ಯವಸ್ಥೆ ಮಾಡಲಾಯಿತು.

'ಆಟಗಾರರಿಗೆ ಪ್ರತ್ಯೇಕ ವಿಮಾನಗಳಲ್ಲಿ ಪ್ರಯಾಣಕ್ಕೆ ವ್ಯವಸ್ಥೆ ಮಾಡಲಾಗಿದೆ. ಒಂದೇ ತಂಡದ ಎಲ್ಲರಿಗೂ ಒಂದೇ ವಿಮಾನದಲ್ಲಿ ಟಿಕೆಟ್‌ಗಳನ್ನು ಕಾದಿರಿಸಲು ಸಾಧ್ಯವಾಗಿಲ್ಲ.

ಆದರೆ ಐಸಿಸಿಯ ಅವರ ಪ್ರಯಾಣ ವ್ಯವಸ್ಥೆ ನೋಡಿಕೊಂಡಿದೆ. ಐಸಿಸಿ ಅಧ್ಯಕ್ಷ ಜಯ್ ಶಾ ಅವರು ವೈಯಕ್ತಿಕವಾಗಿ ಆಟಗಾರರ ಜೊತೆ ಮಾತನಾಡಿದ್ದಾರೆ. ಸುರಕ್ಷಿತವಾಗಿ ತವರಿಗೆ ತಲುಪಿಸುವುದಾಗಿ ಭರವಸೆ ನೀಡಿದ್ದಾರೆ' ಎಂದು ಮೂಲವೊಂದು ಪಿಟಿಐಗೆ ತಿಳಿಸಿದೆ.

ವೆಸ್ಟ್ ಇಂಡೀಸ್ ತಂಡದ ಡ್ಯಾರೆನ್ ಸಮಿ ಸೋಮವಾರ ರಾತ್ರಿಯೇ ತವರಿಗೆ ಪ್ರಯಾಣ ಬೆಳೆಸಿದ್ದರು.

ಪ್ಯಾರಾ ಬ್ಯಾಡ್ಮಿಂಟನ್: ರಾಜ್ಯಕ್ಕೆ 11 ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶಟ್ಲರ್‌ಗಳು ಹೈದರಾಬಾದ್‌ನಲ್ಲಿ ಮಂಗಳವಾರ ಮುಕ್ತಾಯವಾದ 7ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನ ಸೇರಿ ಒಟ್ಟು 11 ಪದಕಗಳನ್ನು ಗೆದ್ದುಕೊಂಡರು.

ಪಲ್ಲವಿ ಕೆ.ಎಂ. ಅವರು ಮಹಿಳೆಯರ ವೀಲ್‌ಚೇರ್ ಸಿಂಗಲ್ಸ್ ಹಾಗೂ ಡಬಲ್ಸ್‌ನಲ್ಲಿ ಸ್ವರ್ಣ ಜಯಿಸಿದರು. ವೀಲ್‌ಚೇರ್ ಮಿಶ್ರ ಡಬಲ್ಸ್‌ನಲ್ಲಿ ರಜತ ಪದಕ ತಮ್ಮದಾಗಿಸಿಕೊಂಡರು. ಅಮ್ಮು ಮೋಹನ್ ಅವರು ಒಂದು ಬೆಳ್ಳಿ (ವೀಲ್‌ಚೇರ್ ಡಬಲ್ಸ್) ಹಾಗೂ ಎರಡು ಕಂಚು (ವೀಲ್‌ಚೇರ್ ಮಹಿಳಾ ಸಿಂಗಲ್ಸ್ ಮತ್ತು ವೀಲ್‌ಚೇರ್ ಮಿಶ್ರ ಡಬಲ್ಸ್) ಜಯಿಸಿದರು.


ಧಾನೇಶ್ವರಿ ಅವರು ವೀಲ್‌ಚೇರ್ ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ ಮತ್ತು ವೀಲ್‌ಚೇರ್ ಸಿಂಗಲ್ಸ್‌ನಲ್ಲಿ ಕಂಚು ತಮ್ಮದಾಗಿಸಿಕೊಂಡರು. ಜನನಿ ಆರ್. ಹಾಗೂ ಸಿದ್ಧಮ್ಮ ಸಾಹುಕಾರ್ ತಲಾ ಒಂದು ರಜತ ಗೆದ್ದರೆ, ಜಮ್ಶಿದ್ ಎಂ.ಇ. ಹಾಗೂ ಮಂಜುನಾಥ್ ಸಿ. ಅವರು ತಲಾ ಒಂದು ಕಂಚಿನ ಪದಕ ಗೆದ್ದರು.


ಪದಕದೊಂದಿಗೆ ಕರ್ನಾಟಕದ ಪ್ಯಾರಾ ಶಟ್ಲರ್‌ಗಳು

ಸಂಕ್ಷಿಪ್ತ ಸುದ್ದಿ

ರ‍್ಯಾಂಕಿಂಗ್: ಸ್ಮೃತಿ ಅಗ್ರಸ್ಥಾನ ಅಬಾಧಿತ

ದುಬೈ (ಪಿಟಿಐ): ಭಾರತದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಅವರು ಮಂಗಳವಾರ ಬಿಡುಗಡೆಯಾದ ಮಹಿಳಾ ಏಕದಿನ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ.



ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯನ್ನು 0-3 ಅಂತರದಿಂದ ಭಾರತ ಸೋತ ನಂತರ ಈ ರ‍್ಯಾಂಕಿಂಗ್ ಪ್ರಕಟವಾಗಿದೆ. ಮಂದಾನ (790 ರೇಟಿಂಗ್ ಪಾಯಿಂಟ್ಸ್) ನಾಯಕಿ ಹರ್ಮನ್‌ಪ್ರೀತ್ ಕೌರ್ (652) (8ನೇ) ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ಜೆಮಿಮಾ ರಾಡ್ರಿಗಸ್ (635) ಒಂದು ಸ್ಥಾನದ ಹಿಂಬಡ್ತಿಯೊಂದಿಗೆ 12ನೇ ಸ್ಥಾನದಲ್ಲಿದ್ದಾರೆ.

ಪಿಎಸ್‌ಐ ಅಭಿಷೇಕ್‌ಗೆ ಚಿನ್ನದ ಪದಕ

ಬೆಂಗಳೂರು: ನಗರದ ಸಬ್ ಇನ್‌ಸ್ಪೆಕ್ಟರ್ ಅಭಿಷೇಕ್ ಎನ್. ಶೆಟ್ಟಿ ಅವರು ಅಖಿಲ ಭಾರತ ಪೊಲೀಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದರು.



10 ಸ್ಪರ್ಧೆಗಳಲ್ಲಿ 6709 ಅಂಕಗಳನ್ನು ಗಳಿಸುವ ಮೂಲಕ ಅವರು ಸ್ವರ್ಣ ಪದಕ ಗೆದ್ದರು. ಇದರೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕಕ್ಕೆ ಮೊದಲ ಚಿನ್ನ ಗೆದ್ದ ಹೆಗ್ಗಳಿಕೆಗೆ ಪಾತ್ರವಾದರು.

ಅಭಿಷೇಕ್ ಅವರಿಗೆ ತೀವ್ರ ಪೈಪೋಟಿ ನೀಡಿದ ಪಂಜಾಬ್‌ನ ನವಜೋರ್ ಸಿಂಗ್ ಬೆಳ್ಳಿ ಪದಕ ಗೆದ್ದರು.

ಇಂಡಿಯನ್ ವೆಲ್ಸ್: ಅಲ್ಕರಾಜ್ ಗೆಲುವಿನ ಓಟ

ಇಂಡಿಯನ್ ವೆಲ್ಸ್ (ಅಮೆರಿಕ, ಎಎಫ್‌ಪಿ): ಹಾಲಿ ಋತುವಿನಲ್ಲಿ ಅಜೇಯ ಓಟ ಮುಂದುವರಿಸಿರುವ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಮಂಗಳವಾರ ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಸುತ್ತಿಗೆ ಲಗ್ಗೆ ಹಾಕಿದರು.


ಅಲ್ಕರಾಜ್

ಸ್ಪೇನ್‌ನ ತಾರೆ ಪುರುಷರ ಸಿಂಗಲ್ಸ್ ಮೂರನೇ ಸುತ್ತಿನ ಪಂದ್ಯದಲ್ಲಿ ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 6-7 (6/8), 6-3, 6-2ರಿಂದ ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್ ಅವರನ್ನು ಮಣಿಸಿದರು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಅಲ್ಕರಾಜ್ ಅವರು 13ನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್ (ನಾರ್ವೆ) ಅವರನ್ನು ಎದುರಿಸಲಿದ್ದಾರೆ.

22 ವರ್ಷದ ಅಲ್ಕರಾಜ್ ಅವರು ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಗೆಲುವಿನೊಂದಿಗೆ ನಾಲ್ಕೂ ಗ್ರ್ಯಾನ್‌ಸ್ಲಾಮ್ ಗೆದ್ದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ನಂತರ ಕತಾರ್ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಂಡ ಅವರು ಇಂಡಿಯನ್ ವೆಲ್ಸ್‌ನಲ್ಲಿ ಗೆಲುವಿನ ಅಭಿಯಾನ ಮುಂದುವರಿಸಿದರು. ಪ್ರಸಕ್ತ ವರ್ಷದಲ್ಲಿ ಸತತ 14 ಪಂದ್ಯಗಳನ್ನು ಗೆದ್ದಿದ್ದಾರೆ.

ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರೂ ಮೂರು ಸೆಟ್‌ಗಳ ಪ್ರಯಾಸದ ಗೆಲುವು ದಾಖಲಿಸಿದರು. ಮೂರನೇ ಶ್ರೇಯಾಂಕದ ಅವರು 6-4, 1-6, 6-4ರಿಂದ 72ನೇ ಕ್ರಮಾಂಕದ ಅಲೆಕ್ಸಾಂಡರ್ ಕೊವಾಸೆವಿಕ್ ಅವರನ್ನು ಸೋಲಿಸಿದರು. ಅಮೆರಿಕದ ಆಟಗಾರ ಎರಡನೇ ಸೆಟ್‌ನಲ್ಲಿ ಮೇಲುಗೈ ಮೂಲಕ ಜೊಕೊವಿಚ್ ಅವರನ್ನು ಒತ್ತಡಕ್ಕೆ ಸಿಲುಕಿಸಿದ್ದರು.

ಇಂಡಿಯನ್ ವೆಲ್ಸ್‌ನಲ್ಲಿ ಐದು ಬಾರಿ ಪ್ರಶಸ್ತಿ ಗೆದ್ದಿರುವ ಜೊಕೊವಿಕ್ ಅವರು ರೋಜರ್ ಫೆಡರರ್ ಅವರೊಂದಿಗೆ ದಾಖಲೆಯನ್ನು ಹಂಚಿಕೊಂಡಿದ್ದಾರೆ. ಆದರೆ, 2017ರ ನಂತರ ಮೊದಲ ಬಾರಿಗೆ ನಾಲ್ಕನೇ ಸುತ್ತು ತಲುಪಿದ್ದಾರೆ.

ಬ್ರಿಟನ್‌ನ ಕ್ಯಾಮರೂನ್ ನಾರ್ರಿ 6-4, 6-4 ಸೆಟ್‌ಗಳಿಂದ ಆರನೇ ಶ್ರೇಯಾಂಕದ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೋರ್ ಅವರಿಗೆ ಆಘಾತ ನೀಡಿದರು. ಅಮೆರಿಕದ ಅಲೆಕ್ಸ್ ಮೈಕೆಲ್ಸನ್ 6-4, 7-6 (8/6) ರಿಂದ ಏಳನೇ ಶ್ರೇಯಾಂಕದ ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಸೋಲಿಸಿದರು. ಆಸ್ಟ್ರೇಲಿಯಾದ ಕ್ವಾಲಿಫೈಯರ್ ಆಟಗಾರ ರಿಂಕಿ ಹಿಜಿಕಾಟಾ 6-7 (3/7), 7-6 (7/3), 6-3ರಿಂದ 10ನೇ ಶ್ರೇಯಾಂಕದ ಅಲೆಕ್ಸಾಂಡರ್ ಬಬ್ಲಿಕ್ (ಕಜಾಕಸ್ತಾನ) ಅವರನ್ನು ಹಿಮ್ಮೆಟ್ಟಿಸಿದರು.

ಎಎಫ್‌ಸಿ ಮಹಿಳಾ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿ: 1–3ರಿಂದ ತೈವಾನ್ ವಿರುದ್ಧ ಸೋಲು

ಗುಂಪು ಹಂತದಲ್ಲೇ ನಿರ್ಗಮಿಸಿದ ಭಾರತ

ಸಿಡ್ನಿ (ಪಿಟಿಐ): 'ಮಾಡು, ಇಲ್ಲವೇ ಮಡಿ' ಪಂದ್ಯದಲ್ಲಿ ಮಂಗಳವಾರ 1–3ರಿಂದ ತೈವಾನ್ ವಿರುದ್ಧ ಪರಾಭವಗೊಂಡ ಭಾರತ ತಂಡವು ಎಎಫ್‌ಸಿ ಮಹಿಳಾ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಿಂದ ಗುಂಪು ಹಂತದಲ್ಲೇ ನಿರ್ಗಮಿಸಬೇಕಾಯಿತು.

ಭಾರತ ತಂಡವು ಪಂದ್ಯದ ಬಹುತೇಕ ಅವಧಿಯಲ್ಲಿ ಹಿಡಿತ ಸಾಧಿಸಿತ್ತು. ಹಲವು ಬಾರಿ ಗೋಲು ಗಳಿಸುವ ಅವಕಾಶಗಳನ್ನೂ ಸೃಷ್ಟಿಸಿತು. ಆದರೆ, ಸಿಕ್ಕ ಅವಕಾಶಗಳನ್ನು ಗೋಲನ್ನಾಗಿ ಪರಿವರ್ತಿಸುವ ಚಾಣಾಕ್ಷತೆಯ ಕೊರತೆಯು ತಂಡಕ್ಕೆ ಹೊಡೆತ ನೀಡಿತು.

ಈ ಪಂದ್ಯದಲ್ಲಿ ಕನಿಷ್ಠ 2 ಗೋಲುಗಳ ಅಂತರದಲ್ಲಿ ಭಾರತ ಗೆಲುವು ಸಾಧಿಸಿದ್ದರೆ, ಮುಂದಿನ ಸುತ್ತಿಗೆ ಅವಕಾಶ ಸಿಗುತ್ತಿತ್ತು.

ಮನಿಷಾ ಕಲ್ಯಾಣ್ (39ನೇ ನಿಮಿಷ) ಭಾರತ ತಂಡದ ಪರ ಏಕೈಕ ಗೋಲು ದಾಖಲಿಸಿದರು. ತೈವಾನ್ ತಂಡದ ವೈ.ಎಚ್.ಸು (12ನೇ ನಿ.), ವೈ.ವೈ.ಹ್ಸು (45 + 9ನೇ ನಿ.) ಹಾಗೂ ಯು–ಚಿನ್ ಚೆನ್ (77ನೇ ನಿ.) ತಲಾ ಒಂದು ಗೋಲು ಹೊಡೆದರು.



ಪಂದ್ಯದ ವೇಳೆ ಗಾಯಗೊಂಡ ಭಾರತದ ವಿಕೆಟ್ ಕೀಪರ್ ಪಂಥೊಯಿ ಚಾನು ಎಲಾಂಗ್‌ಬಾಮ್ ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು ಪಿಟಿಐ ಚಿತ್ರ

ನಾಯಕಿ ಸ್ವೀಟಿ ದೇವಿಗೆ ಗಾಯ

ಪಂದ್ಯದ 83ನೇ ನಿಮಿಷದಲ್ಲಿ, ಎದುರಾಳಿ ತಂಡದ ಗೋಲು ಯತ್ನವನ್ನು ತಡೆಯಲು ಹೋದ ಭಾರತ ತಂಡದ ನಾಯಕಿ ಸ್ವೀಟಿ ದೇವಿ ಎನ್‌ಗಂಗ್‌ಬಾಮ್ ಹಾಗೂ ಗೋಲ್‌ಕೀಪರ್ ಪಂಥೊಯಿ ಚಾನು ಎಲಾಂಗ್‌ಬಾಮ್ ಪರಸ್ಪರ ಡಿಕ್ಕಿಯಾಗಿ ಗಂಭೀರ ಗಾಯಗೊಂಡರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಭಾರತ ತಂಡವು ಇದೇ ಮೊದಲ ಬಾರಿಗೆ ಈ ಪ್ರತಿಷ್ಠಿತ ಟೂರ್ನಿಯಲ್ಲಿ ಕಣಕ್ಕಿಳಿಯುವ ಅರ್ಹತೆ ಪಡೆದಿತ್ತು.

ಇನ್ನೊಂದು ಪಂದ್ಯದಲ್ಲಿ ಜಪಾನ್ ತಂಡವು 4–0ಯಿಂದ ವಿಯೆಟ್ನಾಂ ತಂಡವನ್ನು ಸೋಲಿಸಿತು.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE FOR UNITS OR SECURITIES.
NOT FOR PUBLICATION, RELEASE OR DISTRIBUTION, DIRECTLY OR INDIRECTLY OUTSIDE INDIA.

RAAJMARG InvIT
An InvIT sponsored by NHAI

RAAJMARG INFRA INVESTMENT TRUST

The Trust has been registered in the Republic of India as an irrevocable trust set up under the Indian Trusts Act, 1882, on November 24, 2025, and registered as an infrastructure investment trust under the Securities and Exchange Board of India (Infrastructure Investment Trusts) Regulations, 2014, on December 22, 2025, having registration number IN/InvIT/25-26/0034.

Principal Place of Business: G - 5 & 6, Sector 10, Dwarka, New Delhi – 110 075; **Telephone:** +91 11 2507 4100/200 - 3211; **Compliance Officer:** Gunjan Rajpal; **E-mail:** compliance@riimpl.in; **Website:** www.raajmarginfratrust.in

SPONSOR	INVESTMENT MANAGER	TRUSTEE
भा रा रा प्रा NHAI		IDBI trustee IDBI Trusteeship Services Ltd
NATIONAL HIGHWAYS AUTHORITY OF INDIA	RAAJMARG INFRA INVESTMENT MANAGERS PRIVATE LIMITED	IDBI TRUSTEESHIP SERVICES LIMITED

INITIAL PUBLIC OFFERING OF UP TO [●] UNITS OF RAAJMARG INFRA INVESTMENT TRUST ("TRUST") FOR CASH AT A PRICE OF ₹ [●] PER UNIT TOGETHER WITH SPONSOR CONTRIBUTION AGGREGATING UP TO ₹ 60,000.00 MILLION ("ISSUE"). THE ISSUE IS AN INITIAL PUBLIC OFFER IN RELIANCE UPON REGULATION 14(4) OF THE SECURITIES AND EXCHANGE BOARD OF INDIA (INFRASTRUCTURE INVESTMENT TRUSTS) REGULATIONS, 2014, AS AMENDED ("INVIT REGULATIONS").

Price Band: ₹99 to ₹100 per Unit

Bidders (other than Anchor Investors and Strategic Investors) can make Bids for a minimum of 150 Units and in multiples of 150 Units thereof

Minimum Bid Size for Bidders other than Anchor Investors and Strategic Investors - ₹14,850

RISKS TO INVESTORS:

- The Trust is a newly settled trust with no operating history and limited historical financial information and, as a result, investors may not be able to assess its prospects on the basis of past records and the financial information disclosed in the Offer Document.
- The Project SPV has not executed the concession for InvIT Assets with the concessioning authority.
- The Trust must maintain certain investment ratios, which may present additional risks to the Trust.
- The ability of the Trust to make or maintain consistency in distributions to Unitholders depends on the financial performance of the Project SPV and their profitability.

Credit Ratings: (i) (a) Provisional CARE AAA; Stable from CARE Ratings Limited for the proposed bank loan facilities aggregating to ₹40,000.00 million to be availed by the Trust; and (b) Provisional CARE AAA; Stable, from CARE Ratings Limited as issuer rating. and
(ii) (a) Provisional Ind AAA/Stable from India Ratings & Research Private Limited for the proposed bank loan facilities aggregating to ₹40,000.00 million to be availed by the Trust; and (b) Provisional Ind AAA/Stable as issuer rating from India Ratings & Research Private Limited.

BID ISSUE/PROGRAM	BID/ISSUE OPENS TODAY	BID/ISSUE CLOSES ON FRIDAY, MARCH 13, 2026*

**The Investment Manager may in consultation with the Book Running Lead Managers, consider closing the Bid/ Issue Period for QIBs one Working Day prior to the Bid/ Issue Closing Date, in accordance with the InvIT Regulations.*

ASBA# **Simple, Safe, Smart way of Application!!!** #Applications Supported by Blocked Amount ("ASBA") is a better way of applying to Issues by simply blocking the fund in the bank account. For further details, check section on ASBA. **Mandatory in public issues. No cheque will be accepted.**

UPI UNIFIED PAYMENTS INTERFACE **UPI-Now available in ASBA for Individual Non-Institutional Investor applying in public issues where the application amount is up to ₹ 500,000, applying through Registered Brokers, Syndicate, CDPs & RTAs. Individual Non-Institutional Investors also have the option to submit the application directly to the ASBA Bank (SCSBs) or to use the facility of linked online trading, demat and bank account. Investors are required to ensure that the bank account used for bidding is linked to their PAN. Bidders must ensure that their PAN is linked with Aadhaar and are in compliance with CBDT notification dated February 13, 2020 and press release dated June 25, 2021.**

ASBA has to be availed by all the investors except Anchor Investors and Strategic Investors. UPI may be availed by Individual Non-Institutional Investors with an application size of up to ₹ 500,000 in the Non-Institutional Category. For details on the ASBA and UPI process, please refer to the details given in the Bid Cum Application Form and abridged prospectus and also please refer to the section *"Issue Information"* on page 271 of the Offer Document. The Bid Cum Application Form and the Abridged Prospectus can be downloaded from the websites of BSE Limited ("BSE") and National Stock Exchange of India Limited ("NSE", and together with BSE, the "Stock Exchanges") and can be obtained from the list of banks that is displayed on the website of SEBI at www.sebi.gov.in/sebiweb/other/OtherAction.do?doRecognisedFpi=yes&intmId=35 and https://www.sebi.gov.in/sebiweb/other/OtherAction.do?doRecognisedFpi=yes &intmId=43, respectively as updated from time to time. For the list of UPI apps and banks live on IPO, please refer to the link: www.sebi.gov.in. UPI Bidders Bidding using the UPI Mechanism may apply through the SCSBs and mobile applications whose names appear on the website of SEBI, as updated from time to time. ICICI Bank Limited and HDFC Bank Limited have been appointed as the Sponsor Banks for the Issue, in accordance with the requirements of SEBI circular dated November 1, 2018 as amended. For Issue related queries, please contact the Book Running Lead Managers ("BRLMs") on their respective email IDs as mentioned below. For UPI related queries, investors can contact NPCI at the toll free number: 18001201740 and mail Id: ipo.upi@npci.org.in.

In case of any revision to the Price Band, the Bid/Issue Period will be extended by at least one Working Day, subject to the total Bid/Issue Period not exceeding 30 days, provided that there shall not be more than two revisions to the Price Band during the Bid/Issue Period. Any revision to the Price Band and the revised Bid/Issue Period, if applicable, will be widely disseminated by notification to the Stock Exchanges during the Bid/Issue Period and by indicating the change on the websites of the Trust, the Sponsor, the Investment Manager, Book Running Lead Managers, Syndicate Members, SCSBs and Stock Exchanges.

In case of force majeure, banking strike or similar circumstances, the Bid/ Issue Period may, for reasons to be recorded in writing, be extended by a minimum period of three Working Days, subject to the total Bid/ Issue Period not exceeding 30 days.

This Issue is being made through the Book Building Process and in compliance with the InvIT Regulations and the SEBI InvIT Master Circular, wherein not more than 75.00% of the Net Issue (excluding the Strategic Investor Portion) shall be available for allocation on a proportionate basis to Institutional Investors, provided that the Investment Manager may, in consultation with the Book Running Lead Managers, allocate up to 60.00% of the Institutional Investor Portion to Anchor Investors on a discretionary basis in accordance with the InvIT Regulations and the SEBI InvIT Master Circular. Further, not less than 25.00% of the Net Issue (excluding the Strategic Investor Portion) shall be available for allocation on a proportionate basis to Non-Institutional Investors, in accordance with the InvIT Regulations and the SEBI InvIT Master Circlar, subject to valid Bids being received at or above the Issue Price. The Issue will also include participation by Strategic Investors, wherein not less than 5.00% of the Net Issue and not more than 25.00% of the Net Issue shall be allocated to the Strategic Investors in accordance with the InvIT Regulations and the SEBI InvIT Master Circular. All Bidders, other than Anchor Investors and Strategic Investors, are required to utilise the Application Supported by Blocked Amount (**"ASBA"**) process by providing details of their respective ASBA accounts and UPI ID (in case of individual Non-Institutional Investors using the UPI Mechanism Bidding with a Bid Amount of ₹ 0.50 million or less), in which case the corresponding Bid Amounts will be blocked by the Self Certified Syndicate Banks (**"SCSBs"**) or under the UPI Mechanism, as applicable, to participate in this Issue. Anchor Investors are not permitted to participate in the Anchor Investor Portion of the Issue through the ASBA process. For details, please see the section entitled *"Issue Information"* on page 271 of the Offer Document.

Bidders/Applicants should ensure that DP ID, PAN and the Client ID and UPI ID (for UPI Bidders bidding through UPI Mechanism) are correctly filled in the Bid cum Application Form. The DP ID, PAN and Client ID provided in the Bid cum Application Form should match with the DP ID, PAN, Client ID and UPI ID available (for UPI Bidders bidding through the UPI Mechanism) in the Depository database, otherwise, the Bid cum Application Form is liable to be rejected. Bidders/Applicants should ensure that the beneficiary account provided in the Bid cum Application Form is active. Bidders/Applicants should note that on the basis of the PAN, DP ID, Client ID and UPI ID (for UPI Bidders bidding through the UPI mechanism) as provided in the Bid cum Application Form, the Bidder/Applicant may be deemed to have authorized the Depositories to provide to the Registrar to the Issue, any requested Demographic Details of the Bidder/Applicant as available on the records of the depositories. These Demographic Details may be used, among other things, for giving Allotment Advice or unblocking of ASBA Account or for other correspondence(s) related to the Issue. Bidders/Applicants are advised to update any changes to their Demographic Details as available in the records of the Depository Participant to ensure accuracy of records. Any delay resulting from failure to update the Demographic Details would be at the Bidders/Applicants' sole risk.

LISTING: The Units to be offered pursuant to the Offer Document are proposed to be listed on the National Stock Exchange of India Limited (the **"NSE"**) and BSE Limited (the **"BSE"**, together with NSE, the **"Stock Exchanges"**). In-principle approval for listing of the Units has been received from BSE and NSE pursuant to letters, each dated February 13, 2026. For the purposes of the Issue, NSE is the Designated Stock Exchange. The Investment Manager shall apply to the Stock Exchanges for the final listing and trading approval, after the Allotment and the credit of the Units to the demat accounts of the Allottees.

DISCLAIMER CLAUSE OF SECURITIES AND EXCHANGE BOARD OF INDIA ("SEBI"): It is to be distinctly understood that submission of Offer Document to SEBI should not in any way be deemed or construed that the same has been cleared or approved by SEBI. SEBI does not take any responsibility either for the financial soundness of any scheme or the project for which the Issue is proposed to be made or for the correctness of the statements made or opinions expressed in the Offer Document.

DISCLAIMER CLAUSE OF NSE (the Designated Stock Exchange): It is to be distinctly understood that the permission given by NSE should not in any way be deemed or construed that the Offer Document has been cleared or approved by NSE nor does it certify the correctness or completeness of any of the contents of the Offer Document. The investors are advised to refer to the Offer Document for the full text of the Disclaimer clause of NSE.

DISCLAIMER CLAUSE OF BSE: It is to be distinctly understood that the permission given by BSE should not in any way be deemed or construed that the Offer Document has been cleared or approved by BSE nor does it certify the correctness or completeness of any of the contents of the Offer Document. The investors are advised to refer to the Offer Document for the full text of the Disclaimer clause of the BSE.

GENERAL RISKS: Investments in Units involve a degree of risk and Bidders should not invest any funds in this Issue unless they can afford to take the risk of losing their entire investment. For taking an investment decision, Bidders must rely on their own examination of the Trust, the Units and this Issue. Bidders are advised to carefully read the section entitled ***"Risk Factors"*** on page 42 of the Offer Document before making an investment decision relating to this Issue. Each Bidder is advised to consult its own advisors in respect of the consequences of an investment in the Units being issued pursuant to this Issue. The Offer Document has been prepared by the Trust solely for providing information in connection with this Issue. The Securities and Exchange Board of India (**"SEBI"**) and the Stock Exchanges assume no responsibility for or guarantee the correctness or accuracy or adequacy of any statements made, opinions expressed or reports contained herein. Admission of the Units to be issued pursuant to this Issue for trading on the Stock exchanges should not be taken as an indication of the merits of the Trust or of the Units.

BOOK RUNNING LEAD MANAGERS				REGISTRAR TO THE ISSUE
SBICAPS Complete Investment Banking Solutions	AXIS CAPITAL	ICICI Securities	motilal oswal Investment Banking	KFINTECH EXPERIENCE TRANSFORMATION
SBI CAPITAL MARKETS LIMITED 1501, 15th Floor, A & B Wing, Parinee Crescenzo Building, G Block, Bandra Kurla Complex, Bandra (East), Mumbai 400 051, Maharashtra, India **Tel:** +91 22 4196 8300; **E-mail:** raajmarg.ipo@sbicaps.com **Investor grievance e-mail:** investor.relations@sbicaps.com **Contact person:** Sanjay Sethia **Website:** www.sbicaps.com **SEBI registration number:** INM000003531	**AXIS CAPITAL LIMITED** 1st Floor, Axis House, Pandurang Budhkar Marg, Worli Mumbai 400 025, Maharashtra, India **Tel:** +91 22 4325 2183 **E-mail:** raajmarg.ipo@axiscap.in **Investor grievance e-mail:** compliants@axiscap.com **Contact person:** Harish Patel/ Mayuri Arya **Website:** www.axiscapital.co.in **SEBI registration number:** INM000012029	**ICICI SECURITIES LIMITED** ICICI Venture House, Appasaheb Marathe Marg, Prabhadevi, Mumbai 400 025, Maharashtra, India **Tel:** +91 22 6807 7100 **E-mail:** raajmarg.ipo@icicisecurities.com **Investor grievance e-mail:** customercare@icicisecurities.com **Contact person:** Shri Subramanyam / Sumit Singh **Website:** www.icicisecurities.com **SEBI registration number:** INM000011179	**MOTILAL OSWAL INVESTMENT ADVISORS LIMITED** Motilal Oswal Tower, Rahimtullah Sayani Road, Opposite Parel ST Depot, Prabhadevi, Mumbai – 400 025, Maharashtra, India **Telephone:** +91 22 7193 4380 **E-mail:** riit.ipo@motilaloswal.com **Investor grievance e-mail:** moiaplredressal@motilaloswal.com **Contact person:** Shashank Pisat/Sankita Ajinkya **Website:** www.motilaloswalgroup.com **SEBI registration number:** INM000011005	**KFIN TECHNOLOGIES LIMITED** Selenium, Tower B, Plot No-31 and 32, Financial District, Nanakramguda, Serilingampally, Hyderabad, Rangareddy - 500 032, Telangana, India **Tel.:** +91 1800 309 4001 / +91 40 6716 2222 **E-mail:** riimpl.invit@kfintech.com **Investor grievance e-mail:** einward.ris@kfintech.com **Website:** www.kfintech.com **Contact person:** M. Murali Krishna **SEBI registration number:** INR000000221

CONTACT PERSON AND COMPLIANCE OFFICER

Gunjan Rajpal, G - 5 & 6, Sector 10, Dwarka, New Delhi – 110 075; **Telephone:** +91 11 2507 4100/200 - 3211; **E-mail:** compliance@riimpl.in

Bidders can contact the Compliance Officer or the Registrar to the Issue in case of any pre-Issue or post-Issue related problems such as non-receipt of Allotment Advice/ letter of Allotment, non-credit of Allotted Units in the respective beneficiary account, non-receipt of refund orders and non-receipt of funds by electronic mode.

AVAILABILITY OF THE OFFER DOCUMENT: Investors are advised to refer to the Offer Document and the ***"Risk Factors"*** beginning on page 42 of the Offer Document before applying in the Issue. A copy of the Offer Document is made available on the website of SEBI at www.sebi.gov.in and is available on the websites of the Book Running Lead Managers, i.e., www.sbicaps.com and www.axiscapital.co.in, www.icicisecurities.com, www. motilaloswalgroup.com, the website of the InvIT at www.raajmarginfratrust.in and the websites of the Stock Exchanges, for BSE at www.bseindia.com and for NSE at www.nseindia.com.

AVAILABILITY OF BID CUM APPLICATION FORMS: Bid-cum-Application Forms can be obtained from the principal place of business of Raajmarg Infra Investment Trust, **Telephone:** +91 11 2507 4100/200 - 3211 at the offices of the Book Running Lead Managers: **SBI CAPITAL MARKETS LIMITED, Tel:** +91 22 4196 8300, **AXIS CAPITAL LIMITED, Tel:** +91 22 4325 2183, **ICICI SECURITIES LIMITED, Tel:** +91 22 6807 7100 and **MOTILAL OSWAL INVESTMENT ADVISORS LIMITED, Telephone:** +91 22 7193 4380 and Syndicate Member: Motilal Oswal Financial Services Limited and SBICAP Securities Limited and at the select locations of the Sub-syndicate Members, SCSBs, Registered Brokers, RTAs and CDPs participating in the Issue. Bid-cum-Application Forms will also be available on the websites of the Stock Exchanges and the Designated Branches of SCSBs, the list of which is available at websites of the Stock Exchanges and SEBI.

Sub-syndicate Members: Alankit Imaginations Limited, Almondz Global Securities Limited, Anand Rathi Share & Stock Brokers Limited, Anand Share Consultancy, ANS Pvt Limited, Asit C. Mehta Investment Interrmediates Limited, Axis Securities Limited, Centrum Broking Limited, Dalal & Broacha Stock Broking Pvt. Limited, Eureka Stock & Share Broking Services Ltd., G Raj & Co. (Consultants) Limited, HDFC Securities Limited, IIFL Capital Services Limited, Innovate Securities Pvt Limited, Jhaveri Securities, JM Financial Services Limited, Kalpataru Multiplier Limited, Kantilal Chhaganlal Securities Pvt.Ltd., Keynote Capitals Limited, KJMC Capital Market Services Limited, Kotak Securities Limited, Lakshmishree Investment & Securities Pvt Limited, LKP Securities Limited, Marwadi Shares & Finance, Nirmal Bang Securities Pvt Limited, Nuvama Wealth and Investment Limited (Edelweiss Broking Limited), Patel Wealth Advisors Pvt Limited, Prabhudas Lilladher Pvt Ltd., Pravin Ratilal Share and Stock Brokers Ltd., RR Equity Brokers Pvt. Ltd., Sharekhan Limited, SMC Global Securities Limited, SS Corporate Securities Limited, Tanna Financial Services, TradeBulls Securites (P) Limited, Upstox Securities Private Limited, Yes Securities (India) Limited

APPLICATIONS SUPPORTED BY BLOCKED AMOUNT (ASBA): Investors other than Anchor Investors and Strategic Investors, have to apply through the ASBA process. For details on the ASBA process, please refer to the details given in the ASBA Form and abridged offer document and also please refer to the section ***"Issue Information"*** beginning on page 271 of the Offer Document. ASBA Forms can also be downloaded from the websites of the Stock Exchanges. ASBA form can be obtained from the list of banks that is available on the website of SEBI at www.sebi.gov.in. ASBA Form can be obtained from Members of the Syndicate, SCSBs, Registered Brokers, RTAs and CDPs, the list of which is available on the website of SEBI.

ESCROW COLLECTION BANK, REFUND BANK AND SPONSOR BANK: ICICI Bank Limited

PUBLIC ISSUE ACCOUNT BANK AND SPONSOR BANK: HDFC Bank Limited

SPONSOR CONTRIBUTION BANK: Yes Bank Limited

UPI: UPI Bidders can also Bid through UPI Mechanism.

All capitalized terms used herein and not specifically defined shall have the same meaning as ascribed to them in the Offer Document.

For **Raajmarg Infra Investment Trust**
on behalf of the Board of Directors
Sd/-
Gunjan Rajpal
Compliance Officer

Place: New Delhi
Date: March 10, 2026

RAAJMARG INFRA INVESTMENT TRUST is proposing, subject to receipt of requisite approvals, market conditions and other considerations, to make an initial public offer of its Units and has filed the Offer Document dated February 28, 2026 with SEBI and the Stock Exchanges. The Offer Document is made available on the website of the SEBI at www.sebi.gov.in as well as on the website of the Book Running Lead Managers i.e., SBI Capital Markets Limited at www.sbicaps.com, Axis Capital Limited at www.axiscapital.co.in, ICICI Securities Limited at www.icicisecurities.com and Motilal Oswal Investment Advisors Limited at www. motilaloswalgroup.com, the website of the NSE at www. nseindia.com and the website of the BSE at www.bseindia.com and the website of the Trust at www.raajmarginfratrust.in. Any potential investor should note that investment in Units involves a high degree of risk and for details relating to such risks, please see the section titled ***"Risk Factors"*** beginning on page 42 of the Offer Document. Potential investors should not rely on the Draft Offer Document for making any investment decision.

The Units have not been and will not be registered under the United States Securities Act of 1933, as amended (the "Securities Act") and may not be offered or sold within the United States except pursuant to an exemption from, or in a transaction not subject to, the registration requirements of the Securities Act and applicable U.S. state securities laws. Accordingly, the Units are only being offered and sold outside the United States in "offshore transactions" as defined in and in reliance on Regulation S under the Securities Act ("Regulation S") and the applicable law of the jurisdictions where such offers and sales are made.

Adfactors